ಶನಿವಾರ, ಜನವರಿ 3, 2026 | ₹ 7.00
prajavani.net prajavani
www.prajavani.net
ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವೇಷ–ಭೂಷಣ

ಚೆನ್ನೈನಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 'ಮೋಹಿನಿಯಾಟ್ಟಂ' ಪ್ರದರ್ಶನಕ್ಕೆ ಸಿದ್ಧರಾಗಿದ್ದ ಯುವತಿಯರು

ವೀನಸ್‌ಗೆ ವೈಲ್ಡ್‌ಕಾರ್ಡ್

ಅಮೆರಿಕದ ವೀನಸ್ ವಿಲಿಯಮ್ಸ್ ಅವರು ಇದೇ 18ರಂದು ಆರಂಭವಾಗಲಿರುವ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ

ಗುಂಡಿನ ಮೊರೆತ: ನಿಲ್ಲದ ಮಾತಿನ ಇರಿತ

ಬ್ಯಾನರ್ ಕಟ್ಟುವ ಸಂಬಂಧ ಆರಂಭವಾದ ಜಗಳ, ಘರ್ಷಣೆ ಹಾಗೂ ಗುಂಡಿನ ಮೊರೆತ ಬೆಳವಣಿಗೆಗೆ ಸಾಕ್ಷಿಯಾದ ಬಳ್ಳಾರಿಯಲ್ಲಿ ಶುಕ್ರವಾರ ಮಾತಿನ ಕಿಡಿಗಳು ಸಿಡಿದವು. ಶಾಸಕರಾದ ಕಾಂಗ್ರೆಸ್‌ನ ಭರತ್ ರೆಡ್ಡಿ ಅವರ ವಿರುದ್ಧ ಬಿಜೆಪಿಯ ಜನಾರ್ದನ ರೆಡ್ಡಿ, ಶ್ರೀರಾಮುಲು ಅವರು ವಾಗ್ದಾಳಿ ನಡೆಸಿದರು

'ನನ್ನಿಂದ ತಪ್ಪಾಗಿದ್ದರೆ ಕ್ಷಮಿಸಿ'

ಬಳ್ಳಾರಿ: 'ನಗರದಲ್ಲಿ ನನ್ನಿಂದ ಏನಾದರೂ ಶಾಂತಿಗೆ ಭಂಗವಾಗಿದ್ದರೆ ಸಾರ್ವಜನಿಕರ ಕ್ಷಮೆಯಾಚಿಸುವೆ' ಎಂದು ಬಳ್ಳಾರಿ ನಗರ ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು..

'ಯಾರಿಂದಲೇ ಘಟನೆ ನಡೆದಿರಲಿ. ತನಿಖೆ ಬಳಿಕ ನಿಜ ಸಂಗತಿ ಬಯಲಾಗಲಿದೆ. ನಿನ್ನೆ ನಡೆದ ಬೆಳವಣಿಗೆಯಲ್ಲಿ ನನ್ನಿಂದ ಜನರಿಗೆ ತೊಂದರೆಯಾಗಿದ್ದರೆ ಕ್ಷಮೆಯಾಚಿಸುತ್ತೇನೆ. ಇದೊಂದು ಆಕಸ್ಮಿಕ ಘಟನೆ. ಶಾಸಕನಾಗಿ ನಾನು ಜನರ ಕ್ಷಮೆ ಕೇಳುವೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶಾಸಕ ನಾಗೇಂದ್ರ ಮಾತನಾಡಿ, 'ಬಳ್ಳಾರಿಯಲ್ಲಿ ಶನಿವಾರ ನಡೆಯಬೇಕಿದ್ದ ಮಹರ್ಷಿ ವಾಲ್ಮೀಕಿ ಪ್ರತಿಮೆ ಅನಾವರಣ ಕಾರ್ಯಕ್ರಮ ತಾತ್ಕಾಲಿಕ ಮುಂದೂಡುವ ವಿಷಯಕ್ಕೆ ಶಾಸಕ ಭರತ್ ರೆಡ್ಡಿ ಅವರ ಮನವೊಲಿಸುವಂತೆ ಮುಖ್ಯಮಂತ್ರಿ ಸೂಚಿಸಿ, ಬಳ್ಳಾರಿಗೆ ನನ್ನನ್ನು ಕಳಿಸಿ ಕೊಟ್ಟಿದ್ದಾರೆ. ಹೀಗಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಸೂಚನೆಯಂತೆ ಕಾರ್ಯಕ್ರಮ ಮುಂದೂಡಿಕೆಯಾಗಿದೆ' ಎಂದು ತಿಳಿಸಿದರು.

ವೇಗ ಹೆಚ್ಚಿದರೆ ಅಪಘಾತ –ಶ್ರೀರಾಮುಲು

ಶ್ರೀರಾಮುಲು

ಬಳ್ಳಾರಿ: 'ಶಾಸಕ ಭರತ್ ರೆಡ್ಡಿ ಭಾರೀ ವೇಗದಲ್ಲಿದ್ದಾರೆ. ವೇಗ ಹೆಚ್ಚಾದರೆ ಅಪಘಾತವಾಗುವ ಸಾಧ್ಯತೆ ಹೆಚ್ಚು' ಎಂದು ಮಾಜಿ ಸಚಿವ ಶ್ರೀರಾಮುಲು ಇಲ್ಲಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಶಾಸಕರಿಗೆ ರಾಜಕೀಯವಾಗಿ ಉಜ್ವಲ ಭವಿಷ್ಯವಿದೆ. ವೇಗ ತಗ್ಗಿಸಬೇಕು. ಗೂಂಡಾಗಿರಿಗೆ ನಾವು ಹೆದರುವವರಲ್ಲ' ಎಂದರು. 'ಶಾಸಕ ಜನಾರ್ದನ ರೆಡ್ಡಿ ಸೇರಿ ಪಕ್ಷದ ಯಾವುದೇ ಮುಖಂಡ ಅಥವಾ ಕಾರ್ಯಕರ್ತನಿಗೆ ತೊಂದರೆಯಾದರೂ ನಾನಿರುತ್ತೇನೆ. ಘಟನೆ ಬಗ್ಗೆ ಹೈಕೋರ್ಟ್ ನ್ಯಾಯಾಮೂರ್ತಿಗಳಿಂದ ಅಥವಾ ಸಿಬಿಐನಿಂದ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

'ಜನಾರ್ದನ ರೆಡ್ಡಿ ಅವರ ಮನೆ ಸುಟ್ಟು ಹಾಕುತ್ತೇನೆ ಎಂದು ಶಾಸಕ ಭರತ್ ರೆಡ್ಡಿ ಹೇಳುತ್ತಿರುವುದನ್ನು ಮಾಧ್ಯಮಗಳಲ್ಲಿ ನೋಡಿದೆ. ಇದರಿಂದ ಮುಂಚಿತವಾಗಿ ಯೋಜನೆ ರೂಪಿಸಿದ್ದಾರೆ ಎಂಬುದು ಗೊತ್ತಾಗುತ್ತದೆ' ಎಂದು ಆರೋಪಿಸಿದರು. 'ಗಲಭೆಗೆ ಕಾರಣನಾದ ಶಾಸಕ ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿಗೆ ಏನೂ ಆಗಿಲ್ಲ. ಅದು ಬೋಗಸ್ ಬ್ಯಾಂಡೇಜ್' ಎಂದು ವ್ಯಂಗ್ಯವಾಡಿದರು.

ದಂಧೆಯಲ್ಲಿ ತೊಡಗಿರುವ ಶಾಸಕ: ಜನಾರ್ದನ ರೆಡ್ಡಿ

ಬಳ್ಳಾರಿ: 'ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಸ್ವತಃ ದಂಧೆಯಲ್ಲಿ ತೊಡಗಿದ್ದಾನೆ. ಹೀಗಾಗಿ ಕಾಂಗ್ರೆಸ್ ಪಕ್ಷ ಇಲ್ಲಿ ಜನರ ಪ್ರೀತಿ ಕಳೆದುಕೊಂಡಿದೆ. ಅದನ್ನು ಮರೆ ಮಾಚಲು ಇಷ್ಟೆಲ್ಲ ಮಾಡಲಾಗಿದೆ' ಎಂದು ಶಾಸಕ ಜನಾರ್ದನ ರೆಡ್ಡಿ ಆರೋಪಿಸಿದರು.

ಇಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭರತ್ ರೆಡ್ಡಿ ಮಟ್ಕಾ ದಂಧೆ ನಡೆಸುತ್ತಿದ್ದಾನೆ. ಲಂಚ, ಮರಳು ಅಕ್ರಮ, ವರ್ಗಾವಣೆ ದಂಧೆ ಜಿಲ್ಲೆಯಲ್ಲಿ ಹೆಚ್ಚಾಗಿದೆ' ಎಂದು ನೇರವಾಗ್ದಾಳಿ ನಡೆಸಿದರು.

'ಕಾಂಗ್ರೆಸ್ ಪಕ್ಷ ಜಿಲ್ಲೆಯಲ್ಲಿ ಜನರ ಪ್ರೀತಿ ಕಳೆದುಕೊಳ್ಳುತ್ತಿದೆ. ಹೀಗಾಗಿ, ಬ್ಯಾನರ್ ವಿಚಾರ ಇಟ್ಟುಕೊಂಡು ಇಷ್ಟು ದೊಡ್ಡಮಟ್ಟದ ಗಲಾಟೆ ನಡೆಸಲಾಗಿದೆ' ಎಂದು ಏಕವಚನದಲ್ಲಿ ಹರಿಹಾಯ್ದರು.

'ಜೀವ ರಕ್ಷಣೆ, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಪೊಲೀಸರಿಗೆ ದೂರು ದಾಖಲಿಸಲು ನಿರ್ಧರಿಸಲಾಗಿದೆ' ಎಂದು ಅವರು ತಿಳಿಸಿದರು.

ಗಾಳಿಯಲ್ಲಿ ಗುಂಡು ಹಾರಿಸಿದಾಗ ಯಡವಟ್ಟು: ಮುಖ್ಯಮಂತ್ರಿ

ಸಿದ್ದರಾಮಯ್ಯ

ಬೆಂಗಳೂರು: ಬಳ್ಳಾರಿಯಲ್ಲಿ ನಡೆದ ಘರ್ಷಣೆಯ ವೇಳೆ ಸತೀಶ್ ರೆಡ್ಡಿ ಅವರು ಗಾಳಿಯಲ್ಲಿ ಗುಂಡು ಹಾರಿಸಲು ಹೋಗಿ ರಾಜಶೇಖರ ಅವರಿಗೆ ತಗುಲಿರುವ ಸಾಧ್ಯತೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಶಾಸಕ ಜನಾರ್ದನ ರೆಡ್ಡಿ ಅವರ ನಿವಾಸದ ಸಮೀಪ ನಡೆದ ಗುಂಪು ಘರ್ಷಣೆಯ ಕುರಿತು ಸಮಗ್ರ ತನಿಖೆ ನಡೆಸಿ, ವರದಿ ನೀಡಲು ಸೂಚಿಸಿದ್ದೇನೆ. ಘಟನೆ ವೇಳೆ ಬಳಸಲಾದ ಗನ್ ಯಾರಿಗೆ ಸೇರಿದ್ದು ಎಂಬ ಬಗ್ಗೆಯೂ ತನಿಖೆ ನಡೆಸಲು ಸೂಚಿಸಲಾಗಿದೆ' ಎಂದರು.

ಕ್ಷುಲ್ಲಕ ಕಾರಣಕ್ಕೆ ಗಲಾಟೆ: ಬ್ಯಾನರ್ ಹಾಕುವ ವಿಚಾರಕ್ಕೆ ಗಲಾಟೆ ನಡೆದಿದೆ. ಘಟನೆ ಕುರಿತು ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಜತೆ ಮಾತನಾಡಿ ಮಾಹಿತಿ ತೆಗೆದುಕೊಳ್ಳಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ನ್ಯಾಯಾಂಗ ತನಿಖೆಗೆ ಬಿಜೆಪಿ ಒತ್ತಾಯ

ಬೆಂಗಳೂರು: ಬಳ್ಳಾರಿಯಲ್ಲಿ ಗಲಾಟೆ ಮತ್ತು ಗುಂಡೇಟಿನಿಂದ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸರ್ಕಾರವನ್ನು ಒತ್ತಾಯಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ ಆಂಧ್ರ ಪ್ರದೇಶ ಸ್ವರೂಪ ರಕ್ತ ಚರಿತ್ರೆ ಆರಂಭವಾಗಿದೆ. ಕಾಂಗ್ರೆಸ್ ಕಾರ್ಯಕರ್ತರು ಬೇಕೆಂದಲೇ ಜನಾರ್ದನ ರೆಡ್ಡಿ ಅವರ ಮನೆಯ ಆವರಣದಲ್ಲಿ ಫ್ಲೆಕ್ಸ್‌ಗಳನ್ನು ಹಾಕಿದ್ದಾರೆ. ಈ ಬಗ್ಗೆ ಜನಾರ್ದನ ರೆಡ್ಡಿ ದೂರು ನೀಡಿದ್ದು, ಪೊಲೀಸರು ಬಂದು ಫ್ಲೆಕ್ಸ್ ತೆರವು ಮಾಡಿದ್ದಾರೆ' ಎಂದರು.

'ಇದನ್ನೇ ನೆಪ ಮಾಡಿಕೊಂಡು ಶಾಸಕ ನಾರಾ ಭರತ್ ರೆಡ್ಡಿ ಅವರ ಬೆಂಬಲಿಗರು ಜನಾರ್ದನ ರೆಡ್ಡಿ ಅವರ ಮನೆಗೆ ನುಗ್ಗಿ ದಾಂದಲೆ ನಡೆಸಿದ್ದಾರೆ. ತಪ್ಪಿತಸ್ಥ ಭರತ್ ರೆಡ್ಡಿ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲಿಗೆ ಪೊಲೀಸರು, ಜನಾರ್ದನ ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ತಪ್ಪಿತಸ್ಥರನ್ನು ಪತ್ತೆ ಮಾಡಿ, ಶಿಕ್ಷೆ ನೀಡುವ ಸಲುವಾಗಿ ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು' ಎಂದು ಆಗ್ರಹಿಸಿದರು.

ಆರ್. ಅಶೋಕ

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ರಾಜ್ಯದಲ್ಲಿ ಹೊಸ ವರ್ಷವು ರಕ್ತಸಿಕ್ತ ಅಧ್ಯಾಯದೊಂದಿಗೆ ಆರಂಭವಾಗಿದೆ. ಅದಕ್ಕೆ ಕಾರಣರಾದವರ ಪರವಾಗಿ ಸರ್ಕಾರ ನಿಂತಿದೆ. ಶಾಸಕ ಭರತ್ ರೆಡ್ಡಿ ಮತ್ತು ಬೆಂಬಲಿಗರನ್ನು ಬಂಧಿಸುವ ಬದಲಿಗೆ, ಜನಾರ್ದನ ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಿದ್ದು ಏಕೆ' ಎಂದು ಪ್ರಶ್ನಿಸಿದರು.

'ಭರತ್ ರೆಡ್ಡಿ ಬಂಧಿಸಿ'

'ಬಳ್ಳಾರಿ ಗಲಾಟೆ ನಡೆಯಲು ಮತ್ತು ಗುಂಡೇಟಿನಿಂದ ವ್ಯಕ್ತಿಯೊಬ್ಬರು ಮೃತಪಡಲು ಶಾಸಕ ಭರತ್ ರೆಡ್ಡಿಯೇ ಕಾರಣ. ಅವರನ್ನು ಕೂಡಲೇ ಬಂಧಿಸಬೇಕು. ಶಾಸಕ ಜನಾರ್ದನ ರೆಡ್ಡಿ ಅವರನ್ನು ಕೊಲ್ಲುವ ಉದ್ದೇಶದಿಂದಲೇ ಭರತ್ ರೆಡ್ಡಿ ಅವರು ಸಂಚು ರೂಪಿಸಿದ್ದಾರೆ. ಸಂಚಿನ ಭಾಗವಾಗಿ ಗಲಾಟೆ ಆರಂಭಿಸಿ, ತಮ್ಮ ಗನ್‌ಮ್ಯಾನ್ ಮೂಲಕ ಗುಂಡು ಹಾರಿಸಿದ್ದಾರೆ. ಭರತ್ ರೆಡ್ಡಿ ಅವರನ್ನು ಕೂಡಲೇ ಬಂಧಿಸಿ' ಎಂದು ಆರ್.ಅಶೋಕ ಅವರು ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರಿಗೆ ಮನವಿ ಸಲ್ಲಿಸಿದ್ದಾರೆ.

'ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಅವರ ಜೀವಕ್ಕೆ ಅಪಾಯವಿದೆ. ಅವರಿಗೆ ಭದ್ರತೆ ಒದಗಿಸಬೇಕು. ಈ ಗಲಾಟೆಗೆ ಕಾರಣವಾಗಿರುವ ಭರತ್‌ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಬೇಕು ಮತ್ತು ಜನಾರ್ದನ ರೆಡ್ಡಿ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿದ್ದಾರೆ.

ಯಾರು ಏನೆಂದರು?

ಅವನು (ಜನಾರ್ದನ ರೆಡ್ಡಿ) ನೀಚ, ರಾಕ್ಷಸ. ಜೀವನದಲ್ಲಿ ನಿಜ ಹೇಳಿದವನಲ್ಲ. ಅದಕ್ಕಾಗಿಯೇ ಬೀದಿಗೆ ಬಂದು ಇಷ್ಟು ಗಲಾಟೆ ಮಾಡಿದ್ದಾನೆ. ಅವನಿಗೆ ಅಂತ್ಯ ಹಾಡಿಯೇ ಹಾಡುತ್ತೇವೆ. ಅವನಿಗೆ ಶಿಕ್ಷೆ ಆಗುವುದು ನಿಜ

ನಾರಾ ಭರತ್ ರೆಡ್ಡಿ, ಶಾಸಕ

ಭಾಷಣ ಮಸೂದೆ ಜಾರಿಗೆ ತರಲು ಹೊರಟಿರುವ ಮುಖ್ಯಮಂತ್ರಿ, ಗೃಹ ಸಚಿವರು ತಮ್ಮ ಪಕ್ಷದ ಶಾಸಕರ ಮಾತುಗಳನ್ನು ಆಲಿಸಿದಲ್ಲಿ ದ್ವೇಷ ಭಾಷಣ ಕಾಯ್ದೆಯ ಮೊದಲ ಅಪರಾಧಿಯೇ ತಮ್ಮ ಪಕ್ಷದ ಶಾಸಕರಾಗುತ್ತಾರೆ.

ಬಿ.ವೈ.ವಿಜಯೇಂದ್ರ, ರಾಜ್ಯ ಬಿಜೆಪಿ ಅಧ್ಯಕ್ಷ

ಜನಾರ್ದನ ರೆಡ್ಡಿ ಮನೆಯನ್ನು ನುಚ್ಚುನೂರು, ಪುಡಿ ಪುಡಿ, ಭಸ್ಮ ಮಾಡುತ್ತೇನೆ, ಮುಗಿಸಿ ಬಿಡುತ್ತೇನೆ ಎನ್ನುವ ಧಾಟಿಯಲ್ಲಿ ಶಾಸಕ ಭರತ್ ರೆಡ್ಡಿ ಮಾತನಾಡಿದ್ದಾರೆ. ಇದು ಪ್ರಚೋದನೆಯಲ್ಲದೆ ಮತ್ತಿನ್ನೇನು? ದ್ವೇಷ

'ನಮ್ಮ ಸಿಬ್ಬಂದಿ ಬಂದೂಕು ಪ್ರಯೋಗಿಸಿಲ್ಲ. ಮೃತನ ದೇಹದಲ್ಲಿ ಸಿಕ್ಕ ಗುಂಡು ಮತ್ತು ವಶಕ್ಕೆ ಪಡೆದಿರುವ ಬಂದೂಕುಗಳನ್ನು ಹೋಲಿಕೆ ಮಾಡಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತೇವೆ

ಹಿತೇಂದ್ರ ಆರ್., ಎಡಿಜಿಪಿ

'ವರದಿ ನಂತರ ಕ್ರಮ'

ಜಿ.ಪರಮೇಶ್ವರ

ತುಮಕೂರು: 'ಬಳ್ಳಾರಿ ಗಲಭೆಗೆ ಸಂಬಂಧಿಸಿದಂತೆ ವರದಿ ಕೇಳಿದ್ದೇನೆ. ವರದಿ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಸತೀಶ್‌ರೆಡ್ಡಿ ಎಂಬುವರ ಗನ್‌ಮ್ಯಾನ್ ಗುಂಡು ಹಾರಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆಯೂ ತನಿಖೆ ನಡೆಯಲಿದೆ. ಗಲಾಟೆ ಸಂಬಂಧ ಶಾಸಕ ಜನಾರ್ದನ ರೆಡ್ಡಿ ಸೇರಿ 11 ಜನರ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದು ಮಾಹಿತಿ ನೀಡಿದರು.

'ವಾಲ್ಮೀಕಿ ಪುತ್ಥಳಿ ಅನಾವರಣ, ಬ್ಯಾನರ್ ಅಳವಡಿಸುವ ವಿಚಾರದಲ್ಲಿ ರಾಜಕೀಯ ಮಾಡಿದ್ದು ಸರಿಯಲ್ಲ. ಇದನ್ನು ನಾವು ಸಹಿಸುವುದಿಲ್ಲ. ಜನಾರ್ದನ ರೆಡ್ಡಿ ಕಡೆಯವರು ಪೋಸ್ಟರ್ ಕಿತ್ತು ದಾಂದಲೆ ಮಾಡಿರುವುದಾಗಿ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಬೆಂಬಲಿಗರು ಗಲಾಟೆ ಮಾಡಿದ್ದಾರೆ. ಈ ಸಮಯದಲ್ಲಿ ಫೈರಿಂಗ್ ನಡೆದಿದೆ. ಈ ಕೃತ್ಯವನ್ನು ಯಾರು ನಡೆಸಿದ್ದಾರೆ ಎಂಬ ಬಗ್ಗೆ ತನಿಖೆ ನಡೆಸಲು ಸೂಚಿಸಿದ್ದೇನೆ' ಎಂದರು.

ಸುದ್ದಿ 2 ನಿಮಿಷ

ಸಿಬಿಐಗೆ ಒಪ್ಪಿಸಲಿ: ಬೊಮ್ಮಾಯಿ

ಬೆಂಗಳೂರು: 'ಬಳ್ಳಾರಿಯಲ್ಲಿ ನಡೆದ ಗಲಾಟೆಯ ತನಿಖೆಯನ್ನು ಸಿಬಿಐ ನಡೆಸಬೇಕು. ಇಲ್ಲವೇ ಹೈಕೋರ್ಟ್ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಯಬೇಕು ಎಂದು ಒತ್ತಾಯಿಸಿ ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಬಳ್ಳಾರಿಯಲ್ಲಿ ನಡೆದ ಕೃತ್ಯವು ರಾಜಕೀಯ ದ್ವೇಷದಿಂದ ಕೂಡಿದೆ. ಶಾಸಕ ಜನಾರ್ದನ ರೆಡ್ಡಿ ಮನೆಯ ಎದುರು ಕಾಂಗ್ರೆಸ್ ಪುಂಡರು ಗಲಾಟೆ ನಡೆಸಿರುವುದು ಮತ್ತು ಕಾಂಗ್ರೆಸ್ ಶಾಸಕನ ಗನ್‌ಮ್ಯಾನ್ ಗುಂಡು ಹಾರಿಸಿರುವುದು ವಿಡಿಯೊದಲ್ಲಿ ಸ್ಪಷ್ಟವಾಗಿದೆ. ರಾಜ್ಯ ಸರ್ಕಾರವು ಎಸ್‌ಐಟಿ ರಚಿಸಬೇಕು ಎಂದು ಕೆಲವು ಕೇಳುತ್ತಿದ್ದಾರೆ. ಎಸ್‌ಐಟಿಯಿಂದ ನಿಷ್ಪಕ್ಷಪಾತ ತನಿಖೆ ನಿರೀಕ್ಷಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

ವಾಲ್ಮೀಕಿ ಪ್ರತಿಮೆ ಅನಾವರಣ ತಾತ್ಕಾಲಿಕ ಮುಂದೂಡಿಕೆ

ಬಳ್ಳಾರಿ: ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ರೆಡ್ಡಿ ಹತ್ಯೆ ಹಿನ್ನೆಲೆಯಲ್ಲಿ ಬಳ್ಳಾರಿ ನಗರದ ಕಾನೂನು ಮತ್ತು ಸುವ್ಯವಸ್ಥೆ ಹಿತದೃಷ್ಟಿಯಿಂದ ಶನಿವಾರ ನಡೆಯಬೇಕಿದ್ದ ಮಹರ್ಷಿ ವಾಲ್ಮೀಕಿ ಪ್ರತಿಮೆಯ ಅನಾವರಣ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

ಈ ಕುರಿತು ಶಾಸಕ ನಾರಾ ಭರತ್ ರೆಡ್ಡಿ ಅವರ ಕಚೇರಿಯಿಂದ ಪ್ರಕಟಣೆ ಬಿಡುಗಡೆ ಮಾಡಲಾಗಿದೆ.

ಉದ್ವಿಗ್ನ ಪರಿಸ್ಥಿತಿಯಲ್ಲಿ ವಾಲ್ಮೀಕಿ ಪ್ರತಿಮೆಯನ್ನು ಅನಾವರಣ ಮಾಡುವ ಕಾರ್ಯಕ್ರಮ ಆಯೋಜಿಸಿದರೆ ಭಾರಿ ಅನಾಹುತಕ್ಕೆ ಕಾರಣವಾಗಲಿದೆ ಎಂದು ಜಿಲ್ಲೆಯಿಂದ ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಿತ್ತು. ಹೀಗಾಗಿ, ಪ್ರತಿಮೆ ಅನಾವರಣ ಮಾಡಬಾರದು ಎಂದು ಸರ್ಕಾರ ಸೂಚಿಸಿದೆ ಎಂದು ಗೊತ್ತಾಗಿದೆ.

ಆದರೆ, ಶುಕ್ರವಾರ ಬೆಳಿಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಶಾಸಕ ನಾರಾ ಭರತ್ ರೆಡ್ಡಿ, 'ಕಾಂಗ್ರೆಸ್ ಕಾರ್ಯಕರ್ತನ ಸಾವಿನಿಂದ ನಾವು ದುಃಖದಲ್ಲಿದ್ದೇವೆ. ಅದರೂ, ಶನಿವಾರ ಬಳ್ಳಾರಿ ನಗರದಲ್ಲಿ ಅಜ್ಜ (ವಾಲ್ಮೀಕಿ) ಪ್ರತಿಮೆ ಅನಾವರಣ ಮಾಡುತ್ತೇವೆ' ಎಂದಿದ್ದರು.

ಕಾಂಗ್ರೆಸ್ ಸತ್ಯಶೋಧನಾ ಸಮಿತಿ

ಬೆಂಗಳೂರು: ಬಳ್ಳಾರಿ ಗಲಾಟೆ ಕುರಿತಾಗಿ ಸ್ಥಳೀಯ ಪರಿಸ್ಥಿತಿಯನ್ನು ಅವಲೋಕಿಸಲು ಕಾಂಗ್ರೆಸ್ ಸತ್ಯಶೋಧನಾ ಸಮಿತಿಯನ್ನು ರಚಿಸಿದೆ. ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಚ್.ಎಂ.ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆದೇಶ ಹೊರಡಿಸಿದ್ದಾರೆ. ಮಾಜಿ ಸಂಸದ ಜಯಪ್ರಕಾಶ ಹೆಗ್ಡೆ, ಶಾಸಕ ಟಿ.ರಘುಮೂರ್ತಿ, ಸಂಸದ ಕುಮಾರ್ ನಾಯಕ್, ವಿಧಾನ ಪರಿಷತ್ ಸದಸ್ಯರಾದ ಜಕ್ಕಪ್ಪನವರ್ ಮತ್ತು ಬಸನಗೌಡ ಬಾದರ್ಲಿ ಅವರು ಸಮಿತಿಯಲ್ಲಿದ್ದಾರೆ.

ಚಿಟಿಕೆ ಸುದ್ದಿ

'ನಮ್ಮ ನೋವು ಅವರಿಗೂ ಆಗಬೇಕು'

ಬಳ್ಳಾರಿ: 'ನಮ್ಮ ನೋವು ಅವರಿಗೂ ಆಗಬೇಕು. ನಮಗೆ ಆಗಿರುವ ಅನ್ಯಾಯಕ್ಕೆ ನ್ಯಾಯ ಸಿಗಬೇಕು' ಎಂದು ಮೃತ ರಾಜಶೇಖರ್ ಅವರ ತಾಯಿ ತುಳಸಿ ಇಲ್ಲಿ ಹೇಳಿದರು.

'ನನ್ನ ಮಗ ಮತ್ತು ನಾನು ನಮ್ಮ ಪಾಡಿಗೆ ಇದ್ದೆವು. ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದೆವು. ರಾಜಶೇಖರ ಶಾಸಕ ಭರತ್ ರೆಡ್ಡಿ ಹಿಂದೆ ಓಡಾಡಿಕೊಂಡಿದ್ದ, ನಮ್ಮ ಮನೆಯವರು ಬಿಜೆಪಿಯಲ್ಲಿ ಇದ್ದರು. ಈಗ ನೋಡಿದರೆ ಹೀಗೆ ಆಗಿದೆ. ಮಗನ ಕಳೆದುಕೊಂಡು ತೀವ್ರ ನೋವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಬಾದಾಮಿ ಬನಶಂಕರಿದೇವಿ ಜಾತ್ರೆ ಇಂದಿನಿಂದ

ಬಾದಾಮಿ (ಬಾಗಲಕೋಟೆ ಜಿಲ್ಲೆ): ಉತ್ತರ ಕರ್ನಾಟಕದ ಧಾರ್ಮಿಕ ಪುಣ್ಯ ಕ್ಷೇತ್ರ ಆದಿಶಕ್ತಿ ಬನಶಂಕರಿದೇವಿ ರಥೋತ್ಸವವು ಬನದ ಹುಣ್ಣಿಮೆಯ ದಿನ ಜನವರಿ 3 ರಂದು ಸಂಜೆ 5ಕ್ಕೆ ನಡೆಯಲಿದೆ.

'ಇದು ಒಂದು ತಿಂಗಳು ನಡೆಯುವ ಜಾತ್ರೆ. ರಾಜ್ಯದ ವಿವಿಧ ಜಿಲ್ಲೆಗಳಿಂದ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಗೋವಾ ರಾಜ್ಯಗಳಿಂದಲೂ ಅಪಾರ ಸಂಖ್ಯೆಯಲ್ಲಿ ಭಕ್ತರು ಬರುವರು.

9 ದಿನಗಳಾದರೂ ಒಂದು ಗೇಟ್ ಅಳವಡಿಕೆ ಇಲ್ಲ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ 18ನೇ ಗೇಟ್‌ನಲ್ಲಿ ಹೊಸ ಕ್ರೆಸ್ಟ್‌ಗೇಟ್ ಅಳವಡಿಕೆ ಕಾರ್ಯ ಆರಂಭವಾಗಿ ಒಂಬತ್ತು ದಿನಗಳಾದರೂ ಅದು ಅಂತಿಮ ಹಂತಕ್ಕೆ ಬಂದಿಲ್ಲ.

ಡಿ. 24ರಂದು ಪ್ರಕ್ರಿಯೆ ಆರಂಭವಾಗಿತ್ತು. 31ರಂದು ತುಂಗಭದ್ರಾ ಮಂಡಳಿ ಅಧ್ಯಕ್ಷ ಎಸ್.ಎನ್.ಪಾಂಡೆ ಭೇಟಿ ನೀಡಿ ಪರಿಶೀಲಿಸಿದ್ದರು. ಗೇಟ್ ತಜ್ಞ ಕನ್ನಯ್ಯನಾಯ್ಡು ಶೀಘ್ರವೇ ಇಲ್ಲಿಗೆ ಭೇಟಿ ನೀಡುವ ಸಾಧ್ಯತೆ ಇದೆ.

'ಶನಿವಾರ ಸಂಜೆಯೊಳಗೆ 18ನೇ ಗೇಟ್‌ನ ಅಳವಡಿಕೆ ಬಹುತೇಕ ಪೂರ್ಣಗೊಳ್ಳಬಹುದು. ಬಳಿಕ 27ನೇ ಗೇಟ್ ಅಳವಡಿಕೆ ಕಾರ್ಯ ಆರಂಭವಾಗಲಿದೆ' ಎಂದು ಮೂಲಗಳು ತಿಳಿಸಿವೆ.

ಮರ್ಯಾದೆಗೇಡು ಹತ್ಯೆಗೆ 'ಪ್ರಾಯಶ್ಚಿತ್ತ'

ಮಾನ್ಯಾ ಹತ್ಯೆ ಆರೋಪಿಗಳಿಗೆ ಗರಿಷ್ಠ ಶಿಕ್ಷೆಗೆ ವಿವಿಧ ಸಂಘಟನೆಗಳ ಸಭೆ ಆಗ್ರಹ

ಪ್ರಜಾವಾಣಿ ವಾರ್ತೆ

ಗದಗ: ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರದಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಖಂಡಿಸಿ ಹಾಗೂ ಹತ್ಯೆಯ ಹೊಣೆಗಾರಿಕೆ ಹೊತ್ತು ನಗರದ ಗಾಂಧಿ ವೃತ್ತದಲ್ಲಿ ಶುಕ್ರವಾರ ಪ್ರಾಯಶ್ಚಿತ್ತ ದಿನ ಆಚರಿಸಲಾಯಿತು.

ಜಾಗತಿಕ ಲಿಂಗಾಯತ ಮಹಾಸಭಾ, ಬಸವ ದಳ, ಲಿಂಗಾಯತ ಪ್ರಗತಿಶೀಲ ಸಂಘ, ದಲಿತ ಸಂಘಟನೆ ಮತ್ತು ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

'ಮರ್ಯಾದೆ ಹೆಸರಿನಲ್ಲಿ ಮನುಷ್ಯರ ಕೊಲೆ ಮಾಡುವುದು ಅತ್ಯಂತ ಅಮಾನವೀಯ. ಇಂತಹ ಘಟನೆಗಳನ್ನು ತಡೆಯಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು' ಎಂಬ ಆಗ್ರಹ ಸಭೆಯಲ್ಲಿ ವ್ಯಕ್ತವಾಯಿತು.

'ಮಾನ್ಯಾ ಪಾಟೀಲ ಕೊಲೆ ಪ್ರಕರಣದ ಆರೋಪಿಗಳಿಗೆ ಮತ್ತು ಪ್ರಚೋದನೆ ನೀಡಿದವರಿಗೆ ಗರಿಷ್ಠ ಶಿಕ್ಷೆ ವಿಧಿಸಬೇಕು, ಮರ್ಯಾದೆಗೇಡು ಹತ್ಯೆಗಳ ಪ್ರಾಬಲ್ಯ ತೊಡೆದು ಹಾಕಲು ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಫಲಕಗಳ ಅಳವಡಿಸಬೇಕು. ಜಾತೀಯತೆ ಮೀರಿ ನಿಲ್ಲುವ, ಬದುಕಲು ಪ್ರೇರೇಪಿಸುವ ಸಾಮರಸ್ಯದ ಪಠ್ಯಗಳನ್ನು ಶಾಲಾ ಪಠ್ಯಕ್ರಮದಲ್ಲಿ ಸೇರಿಸಬೇಕು' ಎಂದು ಸಭೆಯು ಆಗ್ರಹಪಡಿಸಿತು.

'ಅಂತರ್ಜಾತಿ–ಅಂತರಧರ್ಮೀಯ ವಿವಾಹಿತರಿಗೆ ಸಾಮಾಜಿಕ ಭದ್ರತೆ ನೀಡಬೇಕು. ಸಂಗಾತಿ ಆಯ್ಕೆಯ ಹಕ್ಕು ವೈಯಕ್ತಿಕವಾಗಿದ್ದು ಮೂರನೆಯವರು ಅವಕಾಶ ಇಲ್ಲ. ಹೀಗಾಗಿ ಈ ವಿಷಯದಲ್ಲಿ ಬೆದರಿಕೆ, ಬಹಿಷ್ಕಾರದಂತಹ ಕ್ರಿಯೆಗಳ ಮೂಲಕ ಪ್ರಚೋದಿಸುವವರ ಮೇಲೆ ಕಾನೂನು ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿ ವಿವಿಧ ಸಂಘಟನೆಗಳವರು ಗದಗ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಯವರಿಗೆ ಮನವಿಪತ್ರ ಸಲ್ಲಿಸಲಾಯಿತು.

ಪ್ರಾಯಶ್ಚಿತ ದಿನದ ಕಾರ್ಯಕ್ರಮದಲ್ಲಿ ತೋಂಟದ ಸಿದ್ಧರಾಮ ಸ್ವಾಮೀಜಿ, ಬೈರನಹಟ್ಟಿಯ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಸ್ವಾಮೀಜಿ, ಮಾಜಿ ಶಾಸಕ ಡಿ.ಆರ್. ಪಾಟೀಲ, ಸಾಹಿತಿ ಬಸವರಾಜ ಸೂಳಿಭಾವಿ, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ಕೆ.ಎಸ್.ಚೆಟ್ಟಿ, ಕಾರ್ಯದರ್ಶಿ ಶೇಖಣ್ಣ ಕವಳಿಕಾಯಿ ಇದ್ದರು.

ದಲಿತ ಸಂಘಟನೆಗಳ ಯುವಕರು ಕ್ರಾಂತಿ ಗೀತೆ ಹಾಡಿ, ಮರ್ಯಾದೆಗೇಡು ಹತ್ಯೆ ಖಂಡಿಸಿದರು. ಶುಕ್ರವಾರ ರಾತ್ರಿ ದಲಿತ ಸಂಘಟನೆಗಳಿಂದ ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ಮೊಂಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಗದಗ ನಗರದ ಗಾಂಧಿ ವೃತ್ತದಲ್ಲಿ ನಡೆದ ಪ್ರಾಯಶ್ಚಿತ್ತ ದಿನ ಆಚರಣೆಯಲ್ಲಿ ಮಾಜಿ ಶಾಸಕ ಡಿ.ಆರ್.ಪಾಟೀಲ ಮಾತನಾಡಿದರು

ಈಡಿಗ ಸಮುದಾಯದ ನಾರಿ ಶಕ್ತಿ ಸಮ್ಮೇಳನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಯ ಈಡಿಗ ಸಮುದಾಯದ ಎಲ್ಲ ಪಂಗಡದ ಮಹಿಳೆಯರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ ಮಹಿಳಾ ಶಕ್ತಿ ಪ್ರದರ್ಶಿಸುವ ಉದ್ದೇಶದಿಂದ ಇದೇ 4ರಂದು ನಿಮ್ಹಾನ್ಸ್‌ನ ಕನ್ವೆನ್ಷನ್ ಸೆಂಟರ್‌ನಲ್ಲಿ ನಾರಿ ಶಕ್ತಿ ರಾಷ್ಟ್ರೀಯ ಸಮ್ಮೇಳನ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಆರ್ಯ ಈಡಿಗ ಮಹಿಳಾ ಸಂಘದ ಸಂಸ್ಥಾಪಕ ಅಧ್ಯಕ್ಷೆ ನಳಿನಾಕ್ಷಿ ಸಣ್ಣಪ್ಪ, ಅಧ್ಯಕ್ಷೆ ಅಮಿತ ಆನಂದ್ ಹಾಗೂ ಪ್ರಧಾನ ಕಾರ್ಯದರ್ಶಿ ಉಮಾ ಶ್ರೀನಿವಾಸ್ ಈ ಕುರಿತ ವಿವರ ನೀಡಿದರು.

'ಸಮುದಾಯದ ಪರವಾಗಿ ಸರ್ಕಾರಿ ಇಲಾಖೆಗಳು, ಮಂಡಳಿಗಳು ಮತ್ತು ರಾಜಕೀಯ ಕ್ಷೇತ್ರದಲ್ಲಿ ಸಮರ್ಪಕ ಪ್ರಾತಿನಿಧ್ಯ ಪಡೆಯಲು, ಏಕತೆ ಮತ್ತು ಶಕ್ತಿ ಪ್ರದರ್ಶನದ ಮೂಲಕ ಸಕಾರಾತ್ಮಕ ಬದಲಾವಣೆಗೆ ಮಾರ್ಗ ಸೃಷ್ಟಿಸುವುದು ಸಮಾವೇಶದ ಆಶಯವಾಗಿದೆ' ಎಂದು ತಿಳಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಮುದಾಯದ 30 ಮಂದಿ ಸಾಧಕರನ್ನು ಸನ್ಮಾನಿಸಿ, ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. '26 ಪಂಗಡಗಳ ಏಕತೆ–ನಮ್ಮ ಶಕ್ತಿ' ಕುರಿತು ಚರ್ಚೆ–ಸಂವಾದ, ವಿವಿಧ ಸ್ಪರ್ಧೆಗಳು ಮತ್ತು ಕಲಾ ಪ್ರದರ್ಶನಗಳು ಕಾರ್ಯಕ್ರಮದಲ್ಲಿ ಇರಲಿವೆ.

'ರಾಷ್ಟ್ರ ಮಟ್ಟದ ಈ ಸಮ್ಮೇಳನವು ಸಮುದಾಯದ ಮಹಿಳಾ ಸಬಲೀಕರಣದ ಮೂಲಕ ಮುಂದಿನ ದಿಕ್ಕು ಮತ್ತು ಹಾದಿಯನ್ನು ನಿರ್ಧರಿಸುವ ಮಹತ್ವದ ವೇದಿಕೆಯಾಗಲಿದೆ. ಹೆಣ್ಣುಮಕ್ಕಳಿಗೆ ಶಿಕ್ಷಣ, ವಿದ್ಯಾರ್ಥಿವೇತನ ಮತ್ತು ವಿದ್ಯಾರ್ಥಿ ನಿಲಯ ಸೌಲಭ್ಯ ಕಲ್ಪಿಸುವುದು, ಬಡ ಮತ್ತು ನಿರಾಶ್ರಿತ ಮಹಿಳೆಯರ ಪುನರ್ವಸತಿಗೆ ಸಹಕಾರ ನೀಡುವುದು, ವೃತ್ತಿಪರ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳಿಗೆ ಉತ್ತೇಜನ ನೀಡುವುದು ನಮ್ಮ ಉದ್ದೇಶವಾಗಿದೆ' ಎಂದರು.

'ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಸಮಾವೇಶ ಉದ್ಘಾಟಿಸಲಿದ್ದು, ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಮಧು ಬಂಗಾರಪ್ಪ, ಸಂಸದ ಕೋಟ ಶ್ರೀನಿವಾಸ ಪೂಜಾರಿ , ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಬೇಳೂರು ಗೋಪಾಲಕೃಷ್ಣ, ಶಾಸಕರಾದ ಎಚ್.ಆರ್. ಗವಿಯಪ್ಪ, ಉಮಾನಾಥ್ ಕೋಟ್ಯಾನ್, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ. ಸೋಲೂರಿನ ನಾರಾಯಣಗುರು ಮಹಾಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ, ನಿಟ್ಟೂರು ನಾರಾಯಣ ಗುರು ಮಹಾಸಂಸ್ಥಾನದ ಅಧ್ಯಕ್ಷ ರೇಣುಕಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ದಲಿತ ಸಾಹಿತ್ಯ, ಚಳವಳಿ-50' ಅಧ್ಯಯನ ಶಿಬಿರದಲ್ಲಿ ಎಚ್. ಗೋವಿಂದಯ್ಯ

ಒಡಕಿನ ಸಾಗರಕ್ಕೆ ಸಾವಿರಾರು ಬಣಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬ ಆಶಯ ಹೋಗಿದ್ದು, ಒಡಕಿನ ಸಾಗರಕ್ಕೆ ಸಾವಿರಾರು ಬಣಗಳು ಎಂಬಂತಾಗಿದೆ. ಇಂದು ಇಲ್ಲವಾಗಿರುವ ದಲಿತ ಚಳವಳಿಯನ್ನು ಪುನರುಜ್ಜೀವನಗೊಳಿಸಬೇಕಿದೆ' ಎಂದು ಹೋರಾಟಗಾರ, ಕವಿ ಎಚ್. ಗೋವಿಂದಯ್ಯ ಹೇಳಿದರು.

'ದಲಿತ ಸಾಹಿತ್ಯ ಮತ್ತು ಚಳವಳಿ–50' ಕುರಿತು ಮೂರು ದಿನಗಳ ರಾಜ್ಯಮಟ್ಟದ ಅಧ್ಯಯನ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶುಕ್ರವಾರ ದಿಕ್ಸೂಚಿ ಭಾಷಣ ಮಾಡಿದರು.

ಕುವೆಂಪು ಅವರ ಸಾಹಿತ್ಯ ವೈಚಾರಿಕತೆ, ಡಿ.ಆರ್. ನಾಗರಾಜ್ ಅವರ ಸಾಂಸ್ಕೃತಿಕ ವೈಚಾರಿಕತೆ, ರಾಮ ಮನೋಹರ ಲೋಹಿಯಾ ಅವರ ಸಾಂಸ್ಕೃತಿಕ ತಾತ್ವಿಕತೆಯನ್ನು ಇಟ್ಟುಕೊಂಡು ದಲಿತ ಚಳವಳಿಯ ಸುವರ್ಣ ಕಾಲದ ಸಾಂಸ್ಕೃತಿಕ ತಾತ್ವಿಕತೆಯನ್ನು ಪುನರ್‌ಸ್ಥಾಪಿಸಬೇಕು ಎಂದು ಸಲಹೆ ನೀಡಿದರು.

ದಲಿತ ಚಳವಳಿಯಲ್ಲಿ 1985ಲ್ಲಿ ಒಡಕು ಸೃಷ್ಟಿಯಾಯಿತು. ಕೆಲವು ನಾಯಕರು ಜನ ಸಾಮಾನ್ಯರ ದೇಸಿ ಸಾಂಸ್ಕೃತಿಕ ಪರಿಭಾಷೆಯನ್ನು ಅರ್ಥ ಮಾಡಿಕೊಳ್ಳದ ಅವಿವೇಕದಿಂದಾಗಿ ಚಳವಳಿ ಅವನತಿಯತ್ತ ಸಾಗಲು ಶುರುವಾಯಿತು. ಇದಕ್ಕೆ ಅಸ್ಪೃಶ್ಯರ ಎಡ, ಬಲ ಜಾತಿಯ ಆಯಾಮವೂ ಸಿಕ್ಕಿ ಪತನವು ವೇಗ ಪಡೆದುಕೊಂಡಿತ್ತು ಎಂದು ವಿಶ್ಲೇಷಿಸಿದರು.

ನವಬ್ರಾಹ್ಮಣವಾದದ ವಿಷದ ಜಾಲವು ಕಟ್ಟ ಕಡೆಯ ಅಸ್ಪೃಶ್ಯ ಸಮುದಾಯಗಳ ನಡುವೆಯೂ ಇಳಿಯುತ್ತಿದೆ. ಇದು ಬ್ರಾಹ್ಮಣಶಾಹಿಗಳಿಗೆ ಸಂತೋಷವನ್ನು ಉಂಟು ಮಾಡಿದೆ. ವಿಷಕಾರಿ ಜಾಲದಿಂದ ಸಮುದಾಯಗಳನ್ನು ಹೊರತರಬೇಕಿದೆ. ಅದಕ್ಕಾಗಿ ದಲಿತ ಚಳವಳಿಯನ್ನು ಪುನರುಜ್ಜೀವನಗೊಳ್ಳಬೇಕಿದೆ. ಅದಕ್ಕೆ ಈ ಅಧ್ಯಯನ ಶಿಬಿರ ನಾಂದಿಯಾಗಲಿ ಎಂದು ಹಾರೈಸಿದರು.

ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಉದ್ಘಾಟಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ. ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ಚಂದ್ರಕಾಂತ್ ಕರಿಗಾರ್, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಡಿ. ಡೊಮಿನಿಕ್, ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್., ಸಹ ಸಂಚಾಲಕರಾದ ಸುಬ್ಬು ಹೊಲೆಯಾರ್, ದು. ಸರಸ್ವತಿ ಉಪಸ್ಥಿತರಿದ್ದರು.

'ದಲಿತ ಸಾಹಿತ್ಯ ಮತ್ತು ಚಳವಳಿ–50' ಮೂರು ದಿನಗಳ ರಾಜ್ಯಮಟ್ಟದ ಅಧ್ಯಯನ ಶಿಬಿರವನ್ನು ಎಲ್.ಎನ್. ಮುಕುಂದರಾಜ್ ತಮಟೆ ಬಾರಿಸುವ ಮೂಲಕ ಉದ್ಘಾಟಿಸಿದರು. ಕೋಟಿಗಾನಹಳ್ಳಿ ರಾಮಯ್ಯ, ಎಚ್. ಗೋವಿಂದಯ್ಯ, ಕುಲಪತಿ ಎಸ್.ಎಂ. ಜಯಕರ, ಚಂದ್ರಕಾಂತ್ ಕರಿಗಾರ್ ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ

ವಿಕಲಾಂಗ ಸಹಬಾಳ್ವೆ: ದೇವನೂರ

ಭಾರತದಲ್ಲಿ ಜಾತಿಭೇದದ ಕಾರಣಕ್ಕಾಗಿ ಸಹಬಾಳ್ವೆ ಸಹಜವಾಗಿಲ್ಲ. ತಾರತಮ್ಯವೇ ಸಹಜವಾಗಿದೆ. ಇದು ವಿಕಲಾಂಗ ಸಹಬಾಳ್ವೆ ಎಂದು ಸಾಹಿತಿ ದೇವನೂರ ಮಹಾದೇವ ತಿಳಿಸಿದ್ದಾರೆ.

ಲಿಖಿತ ಭಾಷಣ ನೀಡಿರುವ ಅವರು, 'ಒಂದು ಗ್ರಾಮದಲ್ಲಿ ಬೇರೆ ಬೇರೆ ಜಾತಿಯವರು ಭೌತಿಕವಾಗಿ ಕೂಗಳತೆ ದೂರದಲ್ಲಿ ವಾಸಿಸುತ್ತಿದ್ದರೂ ಸಹಜ ಒಡನಾಟ ಇಲ್ಲದೇ ಮಾನಸಿಕವಾಗಿ ಮೈಲು ದೂರ ಇರುತ್ತಾರೆ. ಮೂಲ ನಿವಾಸಿಗಳಿಗೆ ಬಾಯಿ ಇಲ್ಲವಾಗಿದ್ದು, ಅವರನ್ನು ಮನುಷ್ಯರು ಎಂದು ನೋಡದೇ ಅಸ್ತ್ರ ಎಂಬಂತೆ ಬಳಸಿಕೊಳ್ಳುತ್ತಿದ್ದಾರೆ' ಎಂದು ಹೇಳಿದ್ದಾರೆ.

ಅಲೆಮಾರಿಗಳು ಅಲೆಯುತ್ತಲೇ ಇದ್ದಾರೆ. ಕ್ರಿಶ್ಚಿಯನ್ನರು, ಮುಸ್ಲಿಮರು ರಾಜಕಾರಣ ಹಾಗೂ ಆಡಳಿತದ ಭಾಗವಹಿಸುವಿಕೆಯಲ್ಲಿ ಕಾಣಿಸದಿರುವಂತೆ ವ್ಯವಸ್ಥಿತವಾಗಿ ಸಂಚು ರೂಪಿಸಲಾಗುತ್ತಿದೆ. ಕೋಮುವಾದಿ ಪಕ್ಷದ ಆಳ್ವಿಕೆಯಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಕಥಾನಕ ಮೀರಬೇಕಿದೆ'

'ದಲಿತ ಚಳವಳಿಯ ಬಗ್ಗೆ ಇಲ್ಲಿಯವರೆಗೆ ಬಂದಿರುವ ಕಥಾನಕಗಳು ತಪ್ಪು ಸಂದೇಶವನ್ನು, ಬರಹಗಳು ತಪ್ಪು ಮಾಹಿತಿಗಳನ್ನು ಹೊಂದಿವೆ. ಈ ದೋಷಗಳನ್ನು ಸರಿಪಡಿಸಲು ಒಂದು ವಿಶ್ವವಿದ್ಯಾಲಯವೇ ಕೆಲಸ ಮಾಡಬೇಕಾಗಬಹುದು' ಎಂದು ಶಿಬಿರದ ಸಂಚಾಲಕರಾದ ಕವಿ ಕೋಟಿಗಾನಹಳ್ಳಿ ರಾಮಯ್ಯ ಹೇಳಿದರು.

'ತಪ್ಪು ಕಥಾನಕಗಳನ್ನು ಮೀರಿ ಸತ್ಯ ತಿಳಿದರೆ ಮಾತ್ರ ದಲಿತ ಚಳವಳಿಯನ್ನು ಮುಂದಿನ ಪೀಳಿಗೆಗೆ ದಾಟಿಸಲು ಸಾಧ್ಯ. ಕಾಣೆಯಾಗಿರುವ ಸಣ್ಣ ಸಣ್ಣ ಜರಿಗಳನ್ನು ಮತ್ತೆ ಕಟ್ಟಿಕೊಡುವ ಮೂಲಕ ಈ ಕೆಲಸ ಮಾಡಬೇಕು' ಎಂದರು.

ಜವಳಿ ಪಾರ್ಕ್: ₹390 ಕೋಟಿ ಬಿಡುಗಡೆಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಕಲಬುರಗಿಯಲ್ಲಿ ಸಮಗ್ರ ಜವಳಿ ಪಾರ್ಕ್ ನಿರ್ಮಾಣ ಮಾಡಲಾಗುತ್ತಿದ್ದು, ಮೂಲ ಸೌಕರ್ಯ ಕಲ್ಪಿಸಲು ₹390.26 ಕೋಟಿ ಬಿಡುಗಡೆಗೆ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ಮಹಾಲಕ್ಷ್ಮಿಪುರ ಬಡಾವಣೆಯ ರಾಣಿ ಅಬ್ಬಕ್ಕ ಮೈದಾನದಲ್ಲಿ ಆಯೋಜಿಸಿರುವ 15 ದಿನಗಳ ರಾಷ್ಟ್ರೀಯ ಕೈಮಗ್ಗ ಮೇಳವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜವಳಿ ಪಾರ್ಕ್‌ಗೆ 180 ಮೆಗಾವಾಟ್ ವಿದ್ಯುತ್ ಪೂರೈಕೆಗೆ ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಈ ಯೋಜನೆಗೆ ನಂದಿಕೂರು ಗ್ರಾಮದ ಎಸ್‌ಟಿಪಿಯಿಂದ 12.09 ಎಂಎಲ್‌ಡಿ ನೀರು ಪೂರೈಕೆ ಮಾಡಲು ಸಮೀಕ್ಷೆ ಕೈಗೊಂಡಿದ್ದು, ಪೈಪ್‌ಲೈನ್ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಕೈಮಗ್ಗ ಉತ್ತೇಜನಕ್ಕೆ ಪೂರಕವಾದ ಅಂಶಗಳನ್ನು ನೂತನ ಜವಳಿ ನೀತಿಯಲ್ಲಿ ಸೇರ್ಪಡೆ ಮಾಡಲಾಗುವುದು. ಹೊಸತನ ಅಳವಡಿಸಿಕೊಂಡರೆ ಮಾತ್ರ ಕೈಮಗ್ಗ ಉದ್ಯಮಕ್ಕೆ ಭವಿಷ್ಯ ಇದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಗೋಪಾಲಯ್ಯ ಅವರು, 'ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ನೇಕಾರರ ಸಂಖ್ಯೆ ಅಧಿಕ ಪ್ರಮಾಣದಲ್ಲಿದ್ದು, ಶಾಸಕನಾಗಿ ಕೈಮಗ್ಗ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡುತ್ತೇನೆ' ಎಂದು ಹೇಳಿದರು.

ರಾಜ್ಯ ಸಹಕಾರ ಕೈ ಮಗ್ಗ ನೇಕಾರರ ಮಹಾಮಂಡಳ (ಕಾವೇರಿ ಹ್ಯಾಂಡ್‌ಲೂಮ್) ಅಧ್ಯಕ್ಷ ಬಿ.ಜೆ. ಗಣೇಶ್ ಮಾತನಾಡಿ, ಕಾವೇರಿ ಹ್ಯಾಂಡ್‌ಲೂಮ್ಸ್ ಅಂದಾಜು ಹತ್ತು ಕೋಟಿ ರೂಪಾಯಿ ನಷ್ಟದಲ್ಲಿದ್ದು, ಪುನಶ್ಚೇತನಕ್ಕೆ ಸರ್ಕಾರದಿಂದ ₹25 ಕೋಟಿ ನೆರವು ಕೊಡಿಸಬೇಕು. ಕೆಎಚ್‌ಡಿಸಿ ಮಾದರಿಯಲ್ಲಿ 4 ಎಚ್ ಸೌಲಭ್ಯ ನೀಡಬೇಕು ಎಂದು ಜವಳಿ ಸಚಿವರಿಗೆ ಮನವಿ ಮಾಡಿದರು.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಜವಳಿ ಅಭಿವೃದ್ಧಿ ಆಯುಕ್ತೆ ಕೆ. ಜ್ಯೋತಿ, ಕೆಎಸ್‌ಟಿಐಡಿಸಿ ಅಧ್ಯಕ್ಷ ಚೇತನ್, ಉಪಾಧ್ಯಕ್ಷ ಬಾಲಾಜಿ ಉಪಸ್ಥಿತರಿದ್ದರು.

84 ಮಳಿಗೆಗಳಲ್ಲಿ ಮಾರಾಟ

ವಿವಿಧ ರಾಜ್ಯಗಳ ಕೈಮಗ್ಗ ಸಂಘ ಸಂಸ್ಥೆಗಳು ಉತ್ಪಾದಿಸಿರುವ ಪಾರಂಪರಿಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ 85 ಮಳಿಗೆಗಳನ್ನು ತೆರೆಯಲಾಗಿದೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತೆಲಂಗಾಣ, ಬಿಹಾರ, ಮಹಾರಾಷ್ಟ್ರ, ರಾಜಸ್ಥಾನ, ಜಮ್ಮು ಮತ್ತು ಕಾಶ್ಮೀರ, ಉತ್ತರಾಖಂಡ, ಮಧ್ಯಪ್ರದೇಶ ಸೇರಿ ಹಲವು ರಾಜ್ಯಗಳ ವೈವಿಧ್ಯಮಯ ಕೈಮಗ್ಗ ಉತ್ಪನ್ನಗಳು ಪ್ರದರ್ಶನದಲ್ಲಿವೆ.

f prajavani.net prajavani | ಶನಿವಾರ, ಜನವರಿ 3, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 3 | ಪುಟ 20 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ತನಿಷ್ಕಾ ಶುಭಾರಂಭ
ಕರ್ನಾಟಕದ ಟೇಬಲ್ ಟೆನಿಸ್ ಆಟಗಾರ್ತಿ ತನಿಷ್ಕಾ ಕಾಲಭೈರವ ಅವರು ವಡೋದರದಲ್ಲಿ ಶುಕ್ರವಾರ ಆರಂಭವಾದ ಯುಟಿಟಿ ಯೂತ್ ಕಂಟೆಂಡರ್‌ನಲ್ಲಿ ಶುಭಾರಂಭ ಮಾಡಿದರು

ಸೆನ್ಸೆಕ್ಸ್ 85,762 | ನಿಫ್ಟಿ 26,328 | $/₹ 90.20 | ಚಿನ್ನ (Std. 10g) ₹1,40,250 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,52,100 (ಬೆಂಗಳೂರು)

ಬಿದ್ದಿದ್ದು ಭರತ್ ಕಡೆಯವರ ಗುಂಡು

ಬಳ್ಳಾರಿ ಘರ್ಷಣೆ: ಮರಣೋತ್ತರ ಪರೀಕ್ಷೆ ವೇಳೆ ದೇಹದಲ್ಲಿ ಗುಂಡಿನ ವಾಡ್೯ ಪತ್ತೆ

● ಹರಿಶಂಕರ್ ಆರ್.

ಬಳ್ಳಾರಿ: 'ನಗರದಲ್ಲಿ ಗುರುವಾರ ರಾತ್ರಿ ಸಂಭವಿಸಿದ ಘರ್ಷಣೆಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ (28) ಅವರ ದೇಹದಲ್ಲಿ ಪತ್ತೆಯಾದ ಗುಂಡು, ಬಳ್ಳಾರಿ ನಗರದ ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಕಡೆಯ ಖಾಸಗಿ ಅಂಗರಕ್ಷಕರದ್ದೇ' ಎಂದು ಪೊಲೀಸ್ ಇಲಾಖೆ ನಿಕಟ ಮೂಲಗಳಿಂದ ಖಚಿತವಾಗಿದೆ.

ರಾಜಶೇಖರ ಅವರ ಶವದ ಮರಣೋತ್ತರ ಪರೀಕ್ಷೆ ಬಳ್ಳಾರಿಯ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ (ಬಿಎಂಸಿಆರ್– ವಿಮ್ಸ್) ನಡೆಯಿತು. 'ದೇಹದಲ್ಲಿ '12 ಎಂಎಂ–ಸಿಂಗಲ್‌ಬೋರ್'ನ ಗುಂಡಿನ 'ವಾಡ್೯' ಪತ್ತೆಯಾಗಿದೆ. ಅದು ಶಾಸಕ ನಾರಾ ಭರತ್ ರೆಡ್ಡಿ ಅವರ ಕಡೆಯವರ ಬಂದೂಕಿನ ಗುಂಡಿನ ಜೊತೆ ಹೊಂದಾಣಿಕೆ ಆಗುತ್ತಿದೆ' ಎಂದು ಮರಣೋತ್ತರ ಪರೀಕ್ಷೆ ಕುರಿತು ಮಾಹಿತಿಯುಳ್ಳ ಅಧಿಕಾರಿಯೊಬ್ಬರು ತಿಳಿಸಿದರು.

▶ 6

ಎಸ್‌ಪಿ ಪವನ್ ಅಮಾನತು

ಬೆಂಗಳೂರು: ಗುರುವಾರವಷ್ಟೇ (ಜ.1) ಅಧಿಕಾರ ಸ್ವೀಕರಿಸಿದ್ದ ಬಳ್ಳಾರಿ ಎಸ್‌ಪಿ ಪವನ್ ನೆಜ್ಜೂರ್ ಅವರನ್ನು, ಕರ್ತವ್ಯ ಲೋಪದ ಆರೋಪದ ಮೇಲೆ ಶುಕ್ರವಾರ ಅಮಾನತು ಮಾಡಲಾಗಿದೆ.

ಬುಧವಾರ ರಾತ್ರಿಯಷ್ಟೇ ಐಪಿಎಸ್ ಅಧಿಕಾರಿಗಳ ವರ್ಗಾವಣೆ ಆದೇಶ ಹೊರ ಬಿದ್ದಿತ್ತು. ನೆಜ್ಜೂರ್ ಅವರು ಗುರುವಾರ ಅಧಿಕಾರ ಸ್ವೀಕರಿಸಿದ್ದರು. ಅದೇ ದಿನ ಕಾಂಗ್ರೆಸ್, ಬಿಜೆಪಿ ನಾಯಕರ ಬೆಂಬಲಿಗರ ಮಧ್ಯೆ ಘರ್ಷಣೆ ನಡೆದಿತ್ತು. ಈ ಬಗ್ಗೆ ವರದಿ ನೀಡುವಂತೆ ಬಳ್ಳಾರಿ ವಲಯದ ಡಿಐಜಿಪಿ ವರ್ತಿಕಾ ಕಟಿಯಾರ್ ಅವರಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಸೂಚಿಸಿದ್ದರು.

▶ 6

ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ಅವರ ಅಂತ್ಯಕ್ರಿಯೆಯಲ್ಲಿ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಪಾಲ್ಗೊಂಡಿದ್ದರು

ಬಳ್ಳಾರಿ: ಸದ್ಯಕ್ಕೆ 'ಶಾಂತ'

ಹೊಸ ವರ್ಷದ ಮೊದಲ ದಿನವೇ ಎರಡು ಘರ್ಷಣೆ ಕಂಡ ಬಳ್ಳಾರಿ ನಗರ ಸದ್ಯ ಶಾಂತ ಸ್ಥಿತಿಗೆ ಮರಳುತ್ತಿದೆ. ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನಡುವೆ ದ್ವೇಷಮಯ ವಾತಾವರಣ ಇದೆ. ನಗರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ನಗರದ ಪ್ರಮುಖ ರಸ್ತೆ, ವೃತ್ತಗಳಲ್ಲಿ ಮೀಸಲು ಪೊಲೀಸ್ ಪಡೆ ನಿಯೋಜನೆ ಮಾಡಲಾಗಿದೆ.

ಪರಿಸ್ಥಿತಿ ನಿಭಾಯಿಸಲೆಂದೇ ಎಡಿಜಿಪಿ ಹಿತೇಂದ್ರ, ಐಜಿಪಿ ರವಿಕಾಂತೇಗೌಡ ನಗರದಲ್ಲಿ ಬೀಡು ಬಿಟ್ಟಿದ್ದಾರೆ. ಬಳ್ಳಾರಿ ಪೊಲೀಸ್ ವಲಯದ ವಿಜಯನಗರ, ಕೊಪ್ಪಳ, ರಾಯಚೂರಿನಿಂದ ಸಿಬ್ಬಂದಿಯನ್ನು ಕರೆಸಿಕೊಳ್ಳಲಾಗಿದೆ.

4 ಎಫ್‌ಐಆರ್: ರೆಡ್ಡಿ ಎ1

ಬಳ್ಳಾರಿಯಲ್ಲಿ ನಡೆದ ಘರ್ಷಣೆ ಮತ್ತು ರಾಜಶೇಖರ ಸಾವಿಗೆ ಸಂಬಂಧಿಸಿದಂತೆ ನಗರದ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಒಟ್ಟು ನಾಲ್ಕು ಪ್ರಕರಣಗಳು ದಾಖಲಾಗಿವೆ.

ಪ್ರತ್ಯೇಕ ದೂರು ಆಧರಿಸಿ ಮೂರು (01/2026, 02/2026, 03/2026) ಎಫ್‌ಐಆರ್ ಮತ್ತು ಬಳ್ಳಾರಿ ನಗರ ಡಿವೈಎಸ್‌ಪಿ ಚಂದ್ರಕಾಂತ ನಂದಾ ರೆಡ್ಡಿ ಅವರ ದೂರು ಆಧರಿಸಿ ಒಂದು ಸ್ವಯಂ ಪ್ರೇರಿತ ಪ್ರಕರಣವನ್ನು (04/2026) ಪೊಲೀಸರು ದಾಖಲಿಸಿಕೊಂಡಿದ್ದಾರೆ.

ರಾಜಶೇಖರನ ಕೊಲೆ, ಜಾತಿ ನಿಂದನೆ, ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿ ಮೇಲಿನ ಹಲ್ಲೆಗೆ ಸಂಬಂಧಿಸಿದಂತೆ ನೀಡಲಾದ ದೂರು ಆಧರಿಸಿ ಎಫ್‌ಐಆರ್ ದಾಖಲು ಆಗಿದೆ.

▶ 6

ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದಿಂದ ನಿರ್ಮಾಣ, ನಿರ್ವಹಣೆ

ಅಂಗಾಂಗ ಕಸಿ: ಉಚಿತ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹು ಅಂಗಾಗಗಳ ಕಸಿ ಮಾಡುವ ಸಾವಿರ ಹಾಸಿಗೆ ಸಾಮರ್ಥ್ಯದ ಉಚಿತ ಚಿಕಿತ್ಸೆ ನೀಡುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ₹1,000 ಕೋಟಿ ವೆಚ್ಚದಲ್ಲಿ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನವು ಬೆಂಗಳೂರಿನಲ್ಲಿ ನಿರ್ಮಿಸಲಿದೆ.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಸಂಪುಟ ಸಭೆ ಬಳಿಕ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು. ಉಚಿತ ಸೇವೆ ನೀಡುವ ದೇಶದ ಅತಿ ದೊಡ್ಡದತ್ತಿ ಆಸ್ಪತ್ರೆ ಇದಾಗಲಿದೆ ಎಂದೂ ಅವರು ಹೇಳಿದರು.

'ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟರಾಲಜಿ ವತಿಯಿಂದ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ ಈ ಆಸ್ಪತ್ರೆಯನ್ನು ನಡೆಸಲಿದೆ. ಇದಕ್ಕೆ ನಿಮ್ಹಾನ್ಸ್ ಪಕ್ಕದಲ್ಲಿರುವ ರಾಜೀವ್‌ಗಾಂಧಿ ಎದೆರೋಗಗಳ ಆಸ್ಪತ್ರೆ ಆವರಣದಲ್ಲಿರುವ 10 ಎಕರೆ ಜಮೀನನ್ನು 99 ವರ್ಷಗಳಿಗೆ ಲೀಸ್ ಆಧಾರದಲ್ಲಿ ನೀಡಲಾಗುವುದು. ಈ ಆಸ್ಪತ್ರೆ ನಿರ್ಮಾಣಕ್ಕೆ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ ₹1,000 ಕೋಟಿ ಹೂಡಿಕೆ ಮಾಡಲಿದೆ. ಆಸ್ಪತ್ರೆಯ ನಿರ್ವಹಣೆಗೆ ಪ್ರತಿಷ್ಠಾನವು ಪ್ರತಿ ವರ್ಷ ₹350 ಕೋಟಿ ವೆಚ್ಚ ಮಾಡಲಿದೆ' ಎಂದು ಹೇಳಿದರು.

▶ 10

113 ಶಾಲೆಗೆ ₹685.57 ಕೋಟಿ ನಿಧಿ

113 ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಉನ್ನತೀಕರಿಸುವ ಯೋಜನೆಗೆ ಇನ್ಫೊಸಿಸ್ ಫೌಂಡೇಶನ್ ₹685.57 ಕೋಟಿ ಒದಗಿಸಲಿದೆ.

ಇನ್ಫೊಸಿಸ್ ತನ್ನ 'ಸಾಮಾಜಿಕ ಹೊಣೆಗಾರಿಕೆ ನಿಧಿ'ಯಡಿ ಈ ಸಂಪನ್ಮೂಲ ನೀಡಲಿದೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ 16 ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 97 ಸರ್ಕಾರಿ ಶಾಲೆಗಳನ್ನು ಉನ್ನತೀಕರಿಸಲಾಗುತ್ತಿದೆ. ಈ ಯೋಜನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿನ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಸಮುದಾಯ ಮತ್ತು ಸಾಮಾಜಿಕ ಹೊಣೆಗಾರಿಕೆ ನಿಧಿ ಬಳಸಿಕೊಳ್ಳಲು ರೂಪಿಸಿದ ಸಿಎಸ್‌ಆರ್ ನೀತಿಗೆ ಸಂಪುಟ ಸಭೆ ಅನುಮೋದನೆ ನೀಡಿದೆ.

ಸಿಎಸ್‌ಆರ್ ನಿಧಿ ಬಳಕೆ ಹಾಗೂ ವೆಬ್‌ಪೋರ್ಟಲ್ ಮತ್ತು ಮೊಬೈಲ್ ಅಪ್ಲಿಕೇಶನ್ ಮೂಲಕ ದಾನಿಗಳಿಂದ ನೆರವು ಪಡೆಯಲು ಹೊಸ ನೀತಿ ಅನುವು ಮಾಡಿಕೊಟ್ಟಿದೆ. ಗುಣಮಟ್ಟದ ಶಿಕ್ಷಣ ಸುಧಾರಣೆಗಾಗಿ ಏಕ ಗವಾಕ್ಷಿ ವ್ಯವಸ್ಥೆಯ ಮೂಲಕ ಬದ್ಧ ಪಾಲುದಾರರ ಗುಂಪನ್ನು ರಚಿಸಬಹುದಾಗಿದೆ. ಸರ್ಕಾರಿ ಶಾಲೆಗಳು ಮತ್ತು ಶಾಲಾ ವಿದ್ಯಾರ್ಥಿಗಳ ಸಬಲೀಕರಣಕ್ಕೆ ಹೊಸ ನೀತಿ ನೆರವಾಗಲಿದೆ.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ರಚನೆಯನ್ನು ಉನ್ನತೀಕರಿಸಿ, ಉತ್ಕೃಷ್ಟ ಸಂಸ್ಥೆಯಾಗಿಸಲು ₹36.90 ಕೋಟಿ ಅನುದಾನ ಬಿಡುಗಡೆ ಮಾಡಲು ಸಂಪುಟ ಸಭೆ ಸಮ್ಮತಿಸಿದೆ.

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ₹35.32 ಕೋಟಿ ಮೊತ್ತದ 41,685 ಪೀಠೋಪಕರಣ ಖರೀದಿಸಲು ಆಡಳಿತ್ಮಕ ಅನುಮೋದನೆ ನೀಡಲಾಗಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಏಪ್ರಿಲ್ 23, 24ಕ್ಕೆ ಸಿಇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಏಪ್ರಿಲ್ 23 ಮತ್ತು 24ರಂದು ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಕೆಸಿಇಟಿ) ನಡೆಸಲಿದ್ದು, ಜನವರಿ 17ರಿಂದ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಅವರು ಶುಕ್ರವಾರ, ಸಿಇಟಿ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) 2026ರಲ್ಲಿ ನಡೆಸಲಿರುವ ಎಲ್ಲ ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದರು.

'ಈ ಬಾರಿಯೂ ಒಟಿಪಿ ಆಧಾರಿತ ಅರ್ಜಿ ಸಲ್ಲಿಕೆ ವ್ಯವಸ್ಥೆ ಇರಲಿದೆ. ನೋಂದಣಿ ಮತ್ತು ಲಾಗಿನ್ ನಂತರ ಅಭ್ಯರ್ಥಿಗಳು ಅರ್ಜಿ ವಿವರಗಳ ಜತೆಗೆ ಒಟಿಪಿ ಸಲ್ಲಿಸುವುದು ಕಡ್ಡಾಯ. ಇಲ್ಲವೆ, ಅಭ್ಯರ್ಥಿಯೇ ನೈಜ ಸಮಯದಲ್ಲಿ ತಮ್ಮ ಚಿತ್ರವನ್ನು ಸಲ್ಲಿಸಬೇಕಾಗುತ್ತದೆ. ಪರೀಕ್ಷಾ ಅಕ್ರಮಗಳನ್ನು ತಪ್ಪಿಸಲು ಈ ವ್ಯವಸ್ಥೆಯನ್ನು ಮುಂದುವರಿಸಲಾಗುತ್ತಿದೆ' ಎಂದು ಕೆಇಎ ಮೂಲಗಳು ತಿಳಿಸಿವೆ.

ಸಿಇಟಿ ದಿಕ್ಸೂಚಿ: ಸಿಇಟಿಗೆ ನೋಂದಣಿ, ಅರ್ಜಿ ಸಲ್ಲಿಕೆ, ಅರ್ಜಿ ತಿದ್ದುಪಡಿ ಮೊದಲಾದ ಪ್ರಕ್ರಿಯೆಗಳನ್ನು ಅಭ್ಯರ್ಥಿಗಳು ಹೇಗೆ ನಿರ್ವಹಿಸಬೇಕು ಎಂಬುದನ್ನು ವಿವರಿಸುವ 'ಸಿಇಟಿ ದಿಕ್ಸೂಚಿ'ಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಬಿಡುಗಡೆ ಮಾಡಿದೆ.

ದಿಕ್ಸೂಚಿಯನ್ನು ಸಚಿವ ಎಂ.ಸಿ.ಸುಧಾಕರ್ ಅವರು ಬಿಡುಗಡೆ ಮಾಡಿದರು.

▶ 10

ದಶಕದಲ್ಲಿ ಮುಗಿಸಿದ್ದು 1.26 ಲಕ್ಷ ಮನೆ

● ಮಂಜುನಾಥ ಹೆಬ್ಬಾರ್

ನವದೆಹಲಿ: ನಗರ ಪ್ರದೇಶದಲ್ಲಿ ಮನೆ ಇಲ್ಲದವರಿಗೆ ವಸತಿ ಒದಗಿಸುವ ಪ್ರಧಾನಮಂತ್ರಿ ಆವಾಸ್ ಯೋಜನೆಯು ಕರ್ನಾಟಕದಲ್ಲಿ ತೆವಳುತ್ತಾ ಸಾಗಿದೆ. ರಾಜ್ಯಕ್ಕೆ ಮಂಜೂರಾಗಿರುವ 2.74 ಲಕ್ಷ ಎಎಚ್‌ಪಿ ಮನೆಗಳ ಪೈಕಿ ಈವರೆಗೆ 1.26 ಲಕ್ಷ ಮನೆಗಳಷ್ಟೇ ಪೂರ್ಣಗೊಂಡಿವೆ.

ನಗರದ ಅರ್ಹ ಫಲಾನುಭವಿಗಳಿಗೆ ವಸತಿ ಕಲ್ಪಿಸುವ ಉದ್ದೇಶದಿಂದ ಈ ಯೋಜನೆಗೆ 2015ರ ಜೂನ್‌ನಲ್ಲಿ ಚಾಲನೆ ನೀಡಿತ್ತು. ಮೊದಲ ಹಂತದ ಯೋಜನೆ 2022ರಲ್ಲಿ ಮುಕ್ತಾಯ ಗೊಳ್ಳಬೇಕಿತ್ತು. ಯೋಜನೆಯಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸದ ಕಾರಣ ಯೋಜನೆಯನ್ನು 2025ರ ಡಿಸೆಂಬರ್ ಅಂತ್ಯದ ವರೆಗೆ ವಿಸ್ತರಿಸಲಾಗಿತ್ತು. ರಾಜ್ಯದಲ್ಲಿ ಮೊದಲ ಹಂತದ ಯೋಜನೆಯನ್ನು 2026ರ ಡಿಸೆಂಬರ್ ಅಂತ್ಯದ ವರೆಗೆ ವಿಸ್ತರಿಸಬೇಕು ಎಂದು ರಾಜ್ಯ ವಸತಿ ಇಲಾಖೆಯು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯಕ್ಕೆ ಪತ್ರ ಬರೆದು ಮನವಿ ಮಾಡಿತ್ತು. ಇದಕ್ಕೆ ಸಚಿವಾಲಯ ಸಮ್ಮತಿ ಸೂಚಿಸಿಲ್ಲ.

▶ 6

ಕೇಂದ್ರದ ಪಾಲು ಹೆಚ್ಚಿಸಿ: ರಾಜ್ಯ ಒತ್ತಾಯ

ಕೋವಿಡ್ ಲಾಕ್‌ಡೌನ್, ಭೂಮಿ ಹಂಚಿಕೆಯಲ್ಲಿ ವಿಳಂಬ, ಭೂ ವಿವಾದ, ನ್ಯಾಯಾಲಯಗಳಲ್ಲಿ ಪ್ರಕರಣ ಮತ್ತಿತರ ಕಾರಣಗಳಿಂದಾಗಿ ಎಎಚ್‌ಪಿ ಮನೆಗಳ ನಿರ್ಮಾಣ ವಿಳಂಬವಾಗಿದೆ ಎಂಬುದು ರಾಜ್ಯ ವಸತಿ ಇಲಾಖೆಯ ವಾದ.

ಜತೆಗೆ, ಆರ್ಥಿಕ ದುರ್ಬಲ ವರ್ಗಗಳ ಫಲಾನುಭವಿಗಳು ತಮ್ಮ ಪಾಲನ್ನು ಪಾವತಿಸಲು ತೊಂದರೆ ಅನುಭವಿಸಿದರು. ಬಡ ಫಲಾನುಭವಿಗಳಿಗೆ ಸಾಲ ನೀಡಲು ಬ್ಯಾಂಕ್‌ಗಳು ಹಿಂಜರಿಯುತ್ತಿವೆ. ಇದರಿಂದ ಸಹ ಸಮಸ್ಯೆ ಆಗಿದೆ ಎಂದು ಇಲಾಖೆ ಹೇಳಿಕೊಂಡಿದೆ.

ಪ್ರತಿ ಮನೆ ನಿರ್ಮಾಣಕ್ಕೆ ₹7 ಲಕ್ಷ ವೆಚ್ಚ ಆಗಲಿದೆ. ಕೇಂದ್ರ ಸರ್ಕಾರ ಪ್ರತಿ ಮನೆಗೆ ₹1.50 ಲಕ್ಷ ಕೊಡುತ್ತಿದೆ. ಈ ಮೊತ್ತ ಏನೇನೂ ಸಾಲದು. ಎರಡನೇ ಹಂತದ ಯೋಜನೆಯಲ್ಲಿ ಈ ಮೊತ್ತವನ್ನು ₹2 ಲಕ್ಷಕ್ಕೆ ಏರಿಸಬೇಕು ಎಂದು ವಸತಿ ಇಲಾಖೆಯು ವಸತಿ ಸಚಿವಾಲಯಕ್ಕೆ ಪತ್ರ ಬರೆದು ಒತ್ತಾಯಿಸಿದೆ.

indriya.com

ADITYA BIRLA JEWELLERY

ಕನಸಿನಂತಹ ವಧು, ಕನಸಲ್ಲಿ ಕಂಡ ಹಾಗೆ

INDRIYA
ADITYA BIRLA | JEWELLERY
✦ BRIDAL COLLECTION ✦

ಸ್ಪೆಷಲ್ ವೆಡ್ಡಿಂಗ್ ಆಫರ್ಸ್

ಎಲ್ಲಾ ಆಭರಣಗಳ ಮೇಲೆ 30% ವರೆಗೆ ರಿಯಾಯಿತಿ*^# (ಪ್ರತಿ ಗ್ರಾಂ ಚಿನ್ನದಲ್ಲಿ ₹950 ವರೆಗೆ ಉಳಿತಾಯ ಮಾಡಿ)

0% ಯಾವುದೇ ಕ್ಯಾರೆಟ್‌ನ ಹಳೆಯ ಚಿನ್ನದ ಮೇಲೆ ಕಡಿತ*

ಡಬಲ್ ಗೋಲ್ಡ್ ರೇಟ್ ಪ್ರೊಟೆಕ್ಷನ್
20% ಮುಂಗಡ ಪಾವತಿಸಿ ನಿಮ್ಮ ಗೋಲ್ಡ್ ದರ ಫಿಕ್ಸ್ ಮಾಡಿ ಬೆಲೆ ಏರಿದರೆ ಫಿಕ್ಸ್ ಮಾಡಿದ ದರ ಪಾವತಿಸಿ. ಬೆಲೆ ಇಳಿದರೆ ಕಡಿಮೆ ದರ ಪಾವತಿಸಿ

ಸ್ಟೋರ್: ಸಂಪಿಗೆ ರೋಡ್, ಮಲ್ಲೇಶ್ವರಂ ✦ ಫೀನಿಕ್ಸ್ ಮಾಲ್ ಆಫ್ ಏಷ್ಯಾ, ಹೆಬ್ಬಾಳ, ಬೆಂಗಳೂರು

ಆಗ್ರಾ ✦ ಅಹ್ಮದಾಬಾದ್ ✦ ಬೆಂಗಳೂರು ✦ ಭುವನೇಶ್ವರ್ ✦ ಚಂಡಿಗಢ್ ✦ ಛತ್ರಪತಿ ಸಂಭಾಜಿ ನಗರ್ ದೆಹಲಿ ✦ ಕಟಕ್ ✦ ಎನ್ ಸಿ ಆರ್ ✦ ಗಯಾ ಜಿ ✦ ಹೈದರಾಬಾದ್
ಇಂದೋರ್ ✦ ಜೈಪುರ್ ✦ ಜಮ್ಮು ✦ ಜೋಧ್ ಪುರ್ ✦ ಕಾನ್ಪುರ್ ✦ ಕೋಲ್ಕತ್ತಾ ✦ ಲಕ್ನೋ ✦ ಮಂಗಳೂರು ✦ ಮುಂಬಯಿ ✦ ಪಾಟ್ನಾ ✦ ಪ್ರಯಾಗ್‌ರಾಜ್ ✦ ಪುಣೆ ✦ ಸೂರತ್ ✦ ವಿಜಯವಾಡ

O&M 6595

ಶ್ರೀ ಯಲ್ಲಮ್ಮದೇವಿ ಹಾಗೂ ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ ದೇವಾಲಯ

ಹೆನ್ನಾಗರ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು-562 106

ಶ್ರೀ ಯಲ್ಲಮ್ಮ ದೇವಿ ಬ್ರಹ್ಮ ರಥೋತ್ಸವ

ದಿನಾಂಕ 03-01-2026 ಶನಿವಾರದಂದು 11.45ಕ್ಕೆ

ಶ್ರೀ ಮೈಲಾರಲಿಂಗಸ್ವಾಮಿ

ಶ್ರೀ ಗದ್ದಿಗೆ ಜ್ಯೋತಿಲಿಂಗಸ್ವಾಮಿಗಳು



ಶಿವಾನಂದ ಶಿವಾಚಾರ್ಯ ಸ್ವಾಮೀಜಿ
ಗುಮ್ಮಳಾಪುರ ಸಂಸ್ಥಾನ ಮಠ



ಶ್ರೀ ರಾಮಲಿಂಗಾ ರೆಡ್ಡಿ
ಸಾರಿಗೆ ಮತ್ತು ಮುಜರಾಯಿ ಸಚಿವರು
ಕರ್ನಾಟಕ ಸರ್ಕಾರ



ಶ್ರೀ ಡಿ.ಕೆ ಸುರೇಶ್
ಅಧ್ಯಕ್ಷರು, ಬಮೂಲ್
ಮಾಜಿ ಸಂಸದರು, ಬೆಂಗಳೂರು ಗ್ರಾಮಾಂತರ

ಶ್ರೀ ಬಿ. ಶಿವಣ್ಣ, ಶಾಸಕರು
ಆನೇಕಲ್ ವಿಧಾನ ಸಭಾಕ್ಷೇತ್ರ

ಶ್ರೀ ರಾಮೋಜಿ ಗೌಡ
ವಿಧಾನ ಪರಿಷತ್ ಸದಸ್ಯರು



ಶ್ರೀ ಆರ್. ಕೆ. ರಮೇಶ್
ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರು, ಬಮೂಲ್

ಶ್ರೀ ಎಂ. ಬಾಬು ರೆಡ್ಡಿ
ಅಧ್ಯಕ್ಷರು, ಟಿಎಪಿಸಿಎಂಎಸ್, ಆನೇಕಲ್

ಶ್ರೀ ಹೆಚ್.ಜೆ. ಪ್ರಸನ್ನ ಕುಮಾರ್
ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು

ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ ಹೆನ್ನಾಗರ, ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀ ಯಲ್ಲಮ್ಮ ದೇವಿ ಬ್ರಹ್ಮರಥೋತ್ಸವ ಮತ್ತು ಶ್ರೀ ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ 225ನೇ ಶಿವ ಗಣರಾಧನೆಯನ್ನು ಶ್ರೀ ಯಲ್ಲಮ್ಮ ದೇವಿ ಮತ್ತು ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ ಸೇವಾ ಟ್ರಸ್ಟ್ ಮತ್ತು ವಂಶಸ್ಥರು ಹಾಗೂ ಭಕ್ತರು ಏರ್ಪಡಿಸಿದ್ದು ಭಕ್ತಾದಿಗಳು ಸಕಾಲಕ್ಕೆ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿ.

ಶ್ರೀ ಯಲ್ಲಮ್ಮ ದೇವಿ ದೇವಾಲಯದ ಮುಂಬದಿ ನೋಟ

ಮುಖ್ಯ ಅತಿಥಿಗಳು :

ಶ್ರೀ ರಾಮಲಿಂಗಾರೆಡ್ಡಿ,
ಮುಜರಾಯಿ ಮತ್ತು ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಡಿ.ಕೆ.ಸುರೇಶ್,
ಅಧ್ಯಕ್ಷರು, ಬಮೂಲ್, ಮಾಜಿ ಸಂಸದರು, ಬೆಂಗಳೂರು ಗ್ರಾಮಾಂತರ
ಶ್ರೀ ಡಾ.ಸಿ.ಎನ್.ಮಂಜುನಾಥ್, ಸಂಸದರು, ಬೆಂಗಳೂರು ಗ್ರಾಮಾಂತರ
ಶ್ರೀ ಬಿ.ಶಿವಣ್ಣ, ಶಾಸಕರು, ಆನೇಕಲ್
ಶ್ರೀ ಎಂ.ಕೃಷ್ಣಪ್ಪ, ಶಾಸಕರು, ಬೆಂಗಳೂರು ದಕ್ಷಿಣ
ಶ್ರೀ ಕುಪೇಂದ್ರ ರೆಡ್ಡಿ, ಮಾಜಿ ರಾಜ್ಯಸಭಾ ಸದಸ್ಯರು

ಶ್ರೀ ಸತೀಶ್ ರೆಡ್ಡಿ, ಶಾಸಕರು, ಬೊಮ್ಮನಹಳ್ಳಿ
ಶ್ರೀ ಗೋಪಿನಾಥ ರೆಡ್ಡಿ, ವಿಧಾನ ಪರಿಷತ್ ಸದಸ್ಯರು
ಶ್ರೀ ರಾಮೋಜಿ ಗೌಡ, ವಿಧಾನ ಪರಿಷತ್ ಸದಸ್ಯರು
ಶ್ರೀ ಬಿ.ಟಿ. ದಯಾನಂದ ರೆಡ್ಡಿ, ವಿಧಾನ ಪರಿಷತ್ ಮಾಜಿ ಸದಸ್ಯರು
ಶ್ರೀ ನಂದೀಶ್ ರೆಡ್ಡಿ, ಮಾಜಿ ಶಾಸಕರು
ಶ್ರೀ ಬಿ.ಟಿ. ನಾಗರಾಜ ರೆಡ್ಡಿ, ಮಹೇಂದ್ರ ಹೋಮ್ಸ್ ಬೊಮ್ಮಸಂದ್ರ
ಶ್ರೀ ಗಿರಿರಾಜ್ ಲಡ್ಡ, ಎಂಸಿಐ ಮಾಲೀಕರು, ಜಿಗಣಿ

225ನೇ ವಾರ್ಷಿಕೋತ್ಸವದ ಪೂಜಾ ಕಾರ್ಯಕ್ರಮ:

01-01-2026ನೇ ಗುರುವಾರ ಧ್ವಜಾರೋಹಣ, ರುದ್ರಪಾರಾಯಣ ಹೋಮ, ಗಣಪತಿ ಹೋಮ,
02-01-2026ನೇ ಶುಕ್ರವಾರ ದಿನೇಶ್ ಗುರೂಜಿ ಅವರ ನೇತೃತ್ವದಲ್ಲಿ ಚಂಡಿಕಾ ಯಾಗ, ಲಲಿತಾ ಸಹಸ್ರನಾಮ ಪಾರಾಯಣ
03-01-2026ನೇ ಶನಿವಾರ ಬನದ ಹುಣ್ಣಿಮೆಯ ಪ್ರಯುಕ್ತ ಮಧ್ಯಾಹ್ನ 11.45ಕ್ಕೆ ಬ್ರಹ್ಮರಥೋತ್ಸವ
06-01-2026ನೇ ಮಂಗಳವಾರ ಶ್ರೀ ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ 225 ಶಿವಗಣರಾಧನೆ. ಮಧ್ಯಾಹ್ನ 12ಕ್ಕೆ ಪ್ರಸಾದ ವಿನಿಯೋಗ ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ ವಂಶಸ್ಥರು, ದೇವಾಲಯ ಟ್ರಸ್ಟ್, ಆರ್.ಕೆ ಗ್ರೂಪ್ ಮಾಲೀಕರು ಲೇಟ್. ಕೃಷ್ಣಾರೆಡ್ಡಿ ಕಾಚನಾಯಕನಹಳ್ಳಿ, ಶ್ರೀಮತಿ ಮುನಿರತ್ನ. ಜಿ. ಮುನಿರಾಜು ರವರು ಮಾಜಿ ಅಧ್ಯಕ್ಷರು ಮತ್ತು ಹಾಲಿ ಸದಸ್ಯರು ಹೆನ್ನಾಗರ ಗ್ರಾಮ ಪಂಚಾಯಿತಿ, ಎಚ್. ಸಿ. ಮುನಿಯಪ್ಪ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಹೆನ್ನಾಗರ.

ರಾತ್ರಿ ಎಂಟಕ್ಕೆ ಯಲ್ಲಮ್ಮ ದೇವಿಯ ಮುತ್ತಿನ ಪಲ್ಲಕ್ಕಿ ಉತ್ಸವ. & ಇತಿಹಾಸ ಪ್ರಸಿದ್ಧ ದನಗಳ ಜಾತ್ರೆಯನ್ನು ಶನಿವಾರ ಆಯೋಜಿಸಲಾಗಿದೆ.

ಶ್ರೀ ಯಲ್ಲಮ್ಮ ದೇವಿ ದೇವಾಲಯದ ಒಳ ಮುಂಬದಿ ನೋಟ

ಶ್ರೀ ಯಲ್ಲಮ್ಮದೇವಿ ಮತ್ತು ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು

ಶ್ರೀ ಯಲ್ಲಮ್ಮದೇವಿ ದೇವಸ್ಥಾನದ ಮ್ಯಾನೇಜ್ ಮೆಂಟ್ ಕಮಿಟಿ
ಶ್ರೀ ಜಿ. ಸುರೇಶ್ ರವರು : ಅಧ್ಯಕ್ಷರು, ಬೆಳ್ಳಂಡೂರು
ಶ್ರೀ ಎಂ. ಮಹೇಶ್ ರೆಡ್ಡಿ ರವರು : ಉಪಾಧ್ಯಕ್ಷರು
ಶ್ರೀ ಎಲ್. ಬಸವರಾಜಯ್ಯ ರವರು : ಪ್ರಧಾನ ಕಾರ್ಯದರ್ಶಿ
ಶ್ರೀ ಆರ್.ಕೆ. ಕೇಶವರೆಡ್ಡಿರವರು : ಜಂಟಿ ಕಾರ್ಯದರ್ಶಿ
ಶ್ರೀ ರಮೇಶ್. ಎನ್ ರವರು : ಖಜಾಂಚಿ
ಶ್ರೀ ಸಿದ್ದೇಶ್. ಜೆ ರವರು : ಜಂಟಿ ಖಜಾಂಚಿ
ಶ್ರೀ ಜೆ. ಶೇಶಚಲಪತಿ ರವರು : ಲೆಕ್ಕ ಪರಿಶೋಧಕರು
ಶ್ರೀ ಎಸ್.ಎಂ. ಮಂಜುನಾಥ ರವರು : ಕಾನೂನು ಸಲಹೆಗಾರರು

ಶ್ರೀ ಯಲ್ಲಮ್ಮದೇವಿ ದೇವಸ್ಥಾನದ ಸಾಂಸ್ಕೃತಿಕ ಸೇವಾ ಟ್ರಸ್ಟ್
ಶ್ರೀ ನಾಗರಾಜು ರವರು (ಟವರ್) : ಸಾಂಸ್ಕೃತಿಕ ಸಮಿತಿ ಅಧ್ಯಕ್ಷರು
ಶ್ರೀ ಪ್ರಭಾಕರ ರೆಡ್ಡಿ (ಪ್ರಕಾಶ್ ರೆಡ್ಡಿ) ರವರು : ಸದಸ್ಯರು
ಶ್ರೀ ಮುನಿರಾಜು ಜಿ ರವರು : ಸದಸ್ಯರು
ಶ್ರೀ ಸುರೇಶ್. ಹೆಚ್.ಜೆ ರವರು (ಲವಕುಶ) : ಸದಸ್ಯರು
ಶ್ರೀ ಹಾ.ವೇ. ವೆಂಕಟೇಶ್, ರವರು : ಸದಸ್ಯರು
ಶ್ರೀ ಲಕ್ಷ್ಮಯ್ಯ. ಆರ್ ರವರು : ಸದಸ್ಯರು
ಶ್ರೀ ವೆಂಕಟಸ್ವಾಮಿ ರೆಡ್ಡಿ ರವರು : ಸದಸ್ಯರು ಚಂದಾಪುರ
ಶ್ರೀ ಮಧುಸೂಧನ್ ರವರು : ಸದಸ್ಯರು ದೊಡ್ಡಹಾಗಡೆ

ಶ್ರೀ ಯಲ್ಲಮ್ಮದೇವಿ ದೇವಸ್ಥಾನದ ದಾಸೋಹ ಸೇವಾ ಟ್ರಸ್ಟ್
ಶ್ರೀ ಬಿ.ಎಸ್. ಶ್ರೀನಿವಾಸ್ ರೆಡ್ಡಿ ರವರು : ಅಧ್ಯಕ್ಷರು
ಶ್ರೀ ಬಿ.ಎಸ್. ಉಮಾಶಂಕರ್ ರವರು : ಸದಸ್ಯರು
ಶ್ರೀ ವಿಜಯ ರೆಡ್ಡಿ. ಎನ್ ರವರು : ಸದಸ್ಯರು
ಶ್ರೀ ಧರ್ಮವೀರ್. ಎಂ ರವರು : ಸದಸ್ಯರು
ಶ್ರೀ ಮರಿಲಿಂಗಪ್ಪ, ಹೆಚ್.ವಿ ರವರು : ಸದಸ್ಯರು

ಶ್ರೀ ಯಲ್ಲಮ್ಮದೇವಿ ದೇವಸ್ಥಾನದ ಪೂಜಾ ಸೇವಾ ಟ್ರಸ್ಟ್
ಶ್ರೀ ಸತೀಶ್ ರೆಡ್ಡಿ ವೈ.ಎಸ್ ರವರು : ಅಧ್ಯಕ್ಷರು
ಶ್ರೀ ಎಂ. ರಾಮರೆಡ್ಡಿ ರವರು : ಸದಸ್ಯರು
ಶ್ರೀ ಜೆ. ನಾಗೇಶ್ವರಪ್ಪ ರವರು : ಸದಸ್ಯರು
ಶ್ರೀ ನಾಗೇಶ್ ಜೋತಯ್ಯ ರವರು : ಸದಸ್ಯರು
ಶ್ರೀ ಸೋಮಶೇಖರ್ ರೆಡ್ಡಿ ರವರು : ಸದಸ್ಯರು
ಶ್ರೀ ಶ್ಯಾಮ್‌ಕುಮಾರ್. ಎಂ ರವರು : ಸದಸ್ಯರು
ಶ್ರೀ ಪ್ರಸಾದ್. ಎಂ ರವರು : ಸದಸ್ಯರು
ಶ್ರೀ ಕಾರ್ತೀಕ್. ಎಸ್ ರವರು : ಸದಸ್ಯರು
ಶ್ರೀ ಹೆಚ್.ಆರ್. ಮಧುಸೂಧನ ರೆಡ್ಡಿ ರವರು : ಸದಸ್ಯರು
ಶ್ರೀ ವಿ.ಕೆ. ವೇಣುಗೋಪಾಲ ರವರು : ಸದಸ್ಯರು

ಶುಭ ಕೋರುವವರು



ಶ್ರೀ ಜಿ. ಸುರೇಶ್, ಅಧ್ಯಕ್ಷರು
ಶ್ರೀ ಯಲ್ಲಮ್ಮ ದೇವಿ ದೇವಸ್ಥಾನ
ಅಭಿವೃದ್ಧಿ ಸಮಿತಿ

ಶ್ರೀ ಎಂ. ಮಹೇಶ್ ರೆಡ್ಡಿ
ಉಪಾಧ್ಯಕ್ಷರು

ಶ್ರೀ ಎಲ್. ಬಸವರಾಜಯ್ಯ
ಪ್ರಧಾನ ಕಾರ್ಯದರ್ಶಿ



ಶ್ರೀ ರಮೇಶ್ ಎನ್
ಖಜಾಂಚಿ

ಸರ್ವರಿಗೂ ಆದರದ ಸುಸ್ವಾಗತ

ಶ್ರೀ ಆರ್.ಕೆ. ಕೇಶವರೆಡ್ಡಿ



ಶ್ರೀ ಜಿ. ಮುನಿರಾಜು

ಅಧ್ಯಕ್ಷರು ಮತ್ತು ಸದಸ್ಯರು, ಪ್ರಚಾರ ಸಮಿತಿ
ಶ್ರೀ ಯಲ್ಲಮ್ಮ ದೇವಿ ಮತ್ತು ಶ್ರೀ ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ ಸೇವಾ ಟ್ರಸ್ಟ್ (ರಿ)

ಶ್ರೀ ಯಲ್ಲಮ್ಮ ದೇವಿ ಮತ್ತು ಶ್ರೀ ಗದ್ದಿಗೆ ಜ್ಯೋತಿಲಿಂಗ ಸ್ವಾಮಿಗಳ ಸೇವಾ ಟ್ರಸ್ಟ್ (ರಿ)

ಪ್ರೋತ್ಸಾಹ: ಹೆನ್ನಾಗರ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಹಾಲಿ ಸದಸ್ಯರು, ಮಾಜಿ ಅಧ್ಯಕ್ಷರುಗಳು ಮತ್ತು ಹೆನ್ನಾಗರ ಸುತ್ತಮುತ್ತ ಗ್ರಾಮಗಳ ಗ್ರಾಮಸ್ಥರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ
prajavani.net | prajavani
ಶನಿವಾರ, ಜನವರಿ 3, 2026 | ಬೆಂಗಳೂರು | ₹ 7.00
www.prajavani.net

ಚಳಿ... ಚಾದರ
ಕೊರೆಯುವ ಚಳಿಯಿಂದ ಮಗನನ್ನು ರಕ್ಷಿಸಲು ಚಾದರ ಹರಡಿದ ತಾಯಿಯು ನವ ದೆಹಲಿಯ ಏಮ್ಸ್ ಆಸ್ಪತ್ರೆ ಬಳಿ ನಿಂತಿದ್ದರು

ಖ್ವಾಜಾ ನಿವೃತ್ತಿ
ಆಸ್ಟ್ರೇಲಿಯಾದ ಬ್ಯಾಟರ್ ಉಸ್ಮಾನ್ ಖ್ವಾಜಾ ಅವರು ಸಿಡ್ನಿಯಲ್ಲಿ ನಡೆಯುವ ಆ್ಯಷಸ್ ಸರಣಿಯ ಐದನೇ ಪಂದ್ಯದ ಬಳಿಕ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿ ಪಡೆಯುವುದಾಗಿ ಘೋಷಿಸಿದ್ದಾರೆ

ಬಿಬಿಸಿ ಯೋಜನೆ ರದ್ದತಿಗೆ ಪಟ್ಟು

ಸಾವಿರಕ್ಕೂ ಅಧಿಕ ಆಕ್ಷೇಪಣೆ ಸಲ್ಲಿಕೆ: ರೈತರ ಕಾನೂನು ಹೋರಾಟ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ- 1, ಬಿಬಿಸಿ) ಯೋಜನೆಗೆ ಸರ್ಕಾರ ರೂಪಿಸಿರುವ ಪರಿಹಾರ ವಿರೋಧಿಸಿ ಸಾವಿರಕ್ಕೂ ಅಧಿಕ ಮಂದಿ ಆಕ್ಷೇಪಣೆ ಸಲ್ಲಿಸಿರುವುದರ ಜತೆಗೆ ಕಾನೂನು ಹೋರಾಟವನ್ನೂ ಮುಂದುವರಿಸಿದ್ದಾರೆ.

‘2013ರ ಭೂಸ್ವಾಧೀನ ಕಾಯ್ದೆ ಪ್ರಕಾರ ಪರಿಹಾರ ನೀಡಬೇಕು, ಇಲ್ಲವಾದರೆ ಯೋಜನೆಯನ್ನು ರದ್ದು-ಗೊಳಿಸಬೇಕು’ ಎಂದು ಭೂ ಮಾಲೀಕರು ಬಿಗಿಪಟ್ಟು ಹಿಡಿದಿದ್ದಾರೆ.

ಯೋಜನೆಗೆ 2,418 ಎಕರೆ ಭೂಮಿಯನ್ನು ಸ್ವಾಧೀನಪಡಿಸಿ-ಕೊಳ್ಳಲಾಗುತ್ತಿದೆ. ಸುಮಾರು ಐದು ಸಾವಿರ ಕುಟುಂಬಗಳು ಭೂಮಿ ಕಳೆದುಕೊಳ್ಳಲಿದ್ದು, ಕೆಲ ಕುಟುಂಬಗಳು ಪೂರ್ಣ ಅಥವಾ ಭಾಗಶಃ ಭೂಮಿ ಕಳೆದುಕೊಳ್ಳುವ ಸಾಧ್ಯತೆ ಇದೆ. ಈ ಪೈಕಿ ಸಾವಿರಕ್ಕೂ ಹೆಚ್ಚು ರೈತರು ಯೋಜನೆ ವಿರೋಧಿಸಿ ಆಕ್ಷೇಪಣೆ ಸಲ್ಲಿಸಿದ್ದಾರೆ.

ಬಿಬಿಸಿ ಯೋಜನೆಗೆ 2007ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಈವರೆಗೂ ಯೋಜನೆ ಅನುಷ್ಠಾನಗೊಂಡಿಲ್ಲ. ಹಳೆಯ ಪೆರಿಫೆರಲ್ ರಿಂಗ್ ರಸ್ತೆ ಯೋಜನೆಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಬಿಡಿಎ ಕಾಯ್ದೆ-1894ರ ಸೆಕ್ಷನ್ 27ರ ಪ್ರಕಾರ ಐದು ವರ್ಷಗಳ ಅವಧಿ ಮುಗಿದಿರುವ ಕಾರಣ ಪಿಆರ್‌ಆರ್ ಭಾಗ -1 ಯೋಜನೆಯನ್ನು ರದ್ದುಗೊಳಿಸಿ, ಎಲ್ಲ ಭೂ ಮಾಲೀಕರಿಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಬೇಕು. ಇಲ್ಲವಾದರೆ ಬಿಡಿಎ ಕಾಯ್ದೆಯನ್ನು ತಕ್ಷಣ ತಿದ್ದುಪಡಿ ಮಾಡಿ, ಕೇಂದ್ರ ಸರ್ಕಾರದ 2013ರ ಭೂ ಸ್ವಾಧೀನ ಕಾಯ್ದೆ ಪ್ರಕಾರ ಪರಿಹಾರ ನೀಡಿ, ರಸ್ತೆ ನಿರ್ಮಿಸುವಂತೆ ರೈತರು ಒತ್ತಾಯಿಸಿದ್ದಾರೆ.

ಬಿಡಿಎ ಮೇಲೆ ಆರ್ಥಿಕ ಹೊರೆ ಕಡಿಮೆ ಮಾಡಲು ಈ ಯೋಜನೆಯಲ್ಲಿ ಭೂಮಿ ಕಳೆದುಕೊಳ್ಳುವ ರೈತರಿಗೆ ನಾಲ್ಕು ರೀತಿಯಲ್ಲಿ ಪರಿಹಾರ ನೀಡಲು ಸರ್ಕಾರ ನಿರ್ಧರಿಸಿದೆ.

7A

ಆರ್ಥಿಕ ನೆರವು ನೀಡದಂತೆ ಮನವಿ

ಬಿಬಿಸಿ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನಕ್ಕೆ ಬಿಡಿಎ ತಯಾರಿ ನಡೆಸಿರುವ ನಡುವೆಯೇ ಹಣಕಾಸು ನೆರವು ತಡೆ ಹಿಡಿಯುವಂತೆ ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘವು ವಸತಿ ಮತ್ತು ನಗರಾಭಿವೃದ್ಧಿ ನಿಗಮ (ಹುಡ್ಕೊ)ಕ್ಕೆ ಮನವಿ ಮಾಡಿದೆ.

ಯೋಜನೆಯಲ್ಲಿರುವ ಕಾನೂನು, ಆರ್ಥಿಕ ಮತ್ತು ಕಾರ್ಯಾಚರಣೆಯ ಲೋಪದೋಷಗಳು, ಅಪಾಯಗಳ ಬಗ್ಗೆ ತಿಳಿಸುವ ಮೂಲಕ ಯೋಜನೆಗೆ ಹಣಕಾಸು ನೆರವು ನೀಡುವುದನ್ನು ತಡೆಹಿಡಿಯುವಂತೆ ಒತ್ತಾಯಿಸಿ ಪತ್ರ ಬರೆಯಲಾಗಿದೆ.

ಮೊದಲ ಹಂತದಲ್ಲಿ 350 ಎಕರೆ ಸ್ವಾಧೀನಕ್ಕೆ ನೋಟಿಸ್ ನೀಡಲು ಸಿದ್ಧತೆ ನಡೆಸಿದೆ. ಭೂ ಮಾಲೀಕರ ಹಿತಾಸಕ್ತಿ ಕಡೆಗಣಿಸಿ, ಪ್ರಕರಣ ನ್ಯಾಯಾಲಯದ-ಲ್ಲಿದ್ದರೂ ಸ್ವಾಧೀನಕ್ಕೆ ಮುಂದಾದ ಬೆನ್ನಲ್ಲೆ ಬಾಧಿತ ಭೂ ಮಾಲೀಕರು, ರೈತರು, ನಿವೇಶನದಾರರು, ಯೋಜನೆಗೆ ಹಣಕಾಸು ನೆರವು ಒದಗಿಸುತ್ತಿರುವ ಹುಡ್ಕೊ ಮೊರೆಹೋಗಿದೆ.

ಈ ಯೋಜನೆಯು 2007ರ ಅಂತಿಮ ಅಧಿಸೂಚನೆಯ ಆಧಾರದ ಮೇಲೆ ಮೂಲ ಸ್ವಾಧೀನ ಯೋಜನೆ ಕಾನೂನುಬದ್ಧವಾಗಿ (ಬಿಡಿಎ ಕಾಯ್ದೆ-1976ರ ಸೆಕ್ಷನ್ 27ರ ಅಡಿ) ಮುಕ್ತಾಯಗೊಂಡಿದೆ. ಪಿಆರ್‌ಆರ್ ಭೂಮಿಗಳಿಗೆ ಮಾರ್ಗದರ್ಶಿ ಮೌಲ್ಯವನ್ನು 2016ರಲ್ಲಿ ಕೃತಕವಾಗಿ ಶೇಕಡ 50ಕ್ಕಿಂತ ಹೆಚ್ಚು ಕಡಿಮೆ ಮಾಡಲಾಗಿದೆ. ಎಲ್‌ಎಆರ್‌ಆರ್ ಕಾಯ್ದೆ-2013ರಡಿ ಪರಿಹಾರಕ್ಕಾಗಿ ಒತ್ತಾಯಿಸಲಾಗಿದೆ. ಯೋಜನೆಯ ಅಂದಾಜು ವೆಚ್ಚ ₹27 ಸಾವಿರ ಕೋಟಿಗೂ ಅಧಿಕವಾಗಲಿದ್ದು, ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಸಾಧ್ಯವಾಗುವುದಿಲ್ಲ ಎಂದು ಪತ್ರದಲ್ಲಿ ವಿವರಿಸಲಾಗಿದೆ.

‘ಬಿಬಿಸಿ ಕಾನೂನುಬದ್ಧವಾಗಿ ಮುಕ್ತಾಯಗೊಂಡ ಯೋಜನೆಯಾಗಿದೆ. ಸೂಕ್ತ ಪರಿಹಾರ ಸೂತ್ರಗಳನ್ನು ನೀಡದ ಬಿಡಿಎ, ಭೂಮಾಲೀಕರ, ನಿವೇಶನದಾರರ ಭವಿಷ್ಯ, ಹಿತಾಸಕ್ತಿ ಕಡೆಗಣಿಸಿ ಭೂಸ್ವಾಧೀನಕ್ಕೆ ನಿರ್ಧರಿಸಿತ್ತು. ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಯಾವ ಕಾರಣಕ್ಕೆ ಆರ್ಥಿಕ ನೆರವು ನೀಡಬಾರದು ಎಂಬುದನ್ನು ಹುಡ್ಕೊಗೆ ಬರೆದ ಪತ್ರದಲ್ಲಿ ವಿವರಿಸಲಾಗಿದೆ’ ಎಂದು ಸಂಘದ ಅಧ್ಯಕ್ಷ ಶ್ರೀನಿವಾಸ್ ಹೇಳಿದ್ದಾರೆ.

ಭೂಸ್ವಾಧೀನಕ್ಕೆ ಸಚಿವ ಸಂಪುಟ ಅನುಮೋದನೆ

ಬೆಂಗಳೂರು: ಬಿಡಿಎ ನಿರ್ಮಿಸಲಿರುವ ‘ಬೆಂಗಳೂರು ಬ್ಯುಸಿನೆಸ್ ಕಾರಿಡಾರ್’ (ಬಿಬಿಸಿ) ಯೋಜನೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, 2025ರ ಅಕ್ಟೋಬರ್ 17ರಂದು ಹೊರಡಿಸಿದ್ದ ಆದೇಶದಂತೆ ಭೂ ಮಾಲೀಕರಿಗೆ ಪರಿಹಾರ ನೀಡಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಬಿಬಿಸಿ ಯೋಜನೆಗೆ ಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ, ಭೂಸ್ವಾಧೀನ ಕಾಯ್ದೆ-1894ರಡಿ ಐ-ತೀರ್ಪು ರಚಿಸಿ 948 ಎಕರೆ 14.5 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಒಪ್ಪಂದದಂತೆ, ಯಾವುದೇ ವ್ಯಾಜ್ಯಗಳಿಲ್ಲದೆ ಜಮೀನನ್ನು ಬಿಡಿಎಗೆ ಹಸ್ತಾಂತರಿಸುವ ಮಾಲೀಕರಿಗೆ ಅಕ್ಟೋಬರ್ ಆದೇಶದಂತೆ ನಾಲ್ಕು ಆಯ್ಕೆಗಳನ್ನು ನೀಡಿ ಪರಿಹಾರ ಪಾವತಿಸಲು ಸಚಿವ ಸಂಪುಟದಲ್ಲಿ ಸಮ್ಮತಿಸಲಾಗಿದೆ.

7A

ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ಚಿತ್ರ:

ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಕಾಮಗಾರಿಗಾಗಿ ಮುಚ್ಚಲಾಗಿದ್ದ ಕಾಮರಾಜ್ ರಸ್ತೆ ಶುಕ್ರವಾರ ಪೂರ್ಣ ಪ್ರಮಾಣದಲ್ಲಿ ಸಂಚಾರಕ್ಕೆ ಮುಕ್ತವಾಗಿದ್ದು, ವಾಹನಗಳು ಸಂಚರಿಸಿದವು

ವಿವರ 7A

3ನೇ ದೊಡ್ಡ ಉದ್ಯಾನಕ್ಕೆ ಸಮ್ಮತಿ

ಯಲಹಂಕದಲ್ಲಿ ನಿರ್ಮಾಣವಾಗಲಿದೆ ‘ಬಸವಣ್ಣ ಉದ್ಯಾನ’

ಪ್ರಜಾವಾಣಿ ವಾರ್ತೆ

ಯಲಹಂಕದಲ್ಲಿ ಅರಣ್ಯ ಇಲಾಖೆ ನಿರ್ಮಿಸಲಿರುವ ವಿಶ್ವಗುರು ಬಸವಣ್ಣ ಜೈವಿಕ ಉದ್ಯಾನದ ಮಾದರಿ

ಬೆಂಗಳೂರು: ಬಸವಣ್ಣನವರ ಹೆಸರಿನಲ್ಲಿ ಯಲಹಂಕದಲ್ಲಿ ಉದ್ಯಾನ ನಿರ್ಮಾಣ ಮಾಡಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಲಾಲ್‌ಬಾಗ್, ಕಬ್ಬನ್ ಪಾರ್ಕ್ ನಂತರದ ಮೂರನೇ ಅತಿದೊಡ್ಡ ಉದ್ಯಾನ ಇದಾಗಲಿದೆ.

ಯಲಹಂಕದಲ್ಲಿ ಅರಣ್ಯ ಇಲಾಖೆಗೆ ಸೇರಿದ 153 ಎಕರೆ ಪ್ರದೇಶದಲ್ಲಿ ‘ವಿಶ್ವಗುರು ಬಸವಣ್ಣ ಜೀವವೈವಿಧ್ಯ ಉದ್ಯಾನ’ ನಿರ್ಮಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ಸುದ್ದಿಗಾರರಿಗೆ ತಿಳಿಸಿದರು.

‘ಬೆಂಗಳೂರು ನಗರಕ್ಕೆ ಅತ್ಯಗತ್ಯ-ವಾದ ಶ್ವಾಸತಾಣ ಮತ್ತು ಮನೋಲ್ಲಾಸ ಕೇಂದ್ರವಾಗಿ ಅಭಿವೃದ್ಧಿಪಡಿಸಲು ₹50 ಕೋಟಿ ಮಂಜೂರು ಮಾಡಲಾಗಿದೆ. ಇದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎಲ್ಲ ಸಂಪುಟ ಸಹೋದ್ಯೋ-ಗಿಗಳಿಗೆ ಧನ್ಯವಾದ ಸಲ್ಲಿಸಲಾಯಿತು’ ಎಂದರು.

‘265 ವರ್ಷಗಳ ಹಿಂದೆ 1760ರಲ್ಲಿ 240 ಎಕರೆ ಪ್ರದೇಶದಲ್ಲಿ ಲಾಲ್‌ಬಾಗ್ ನಿರ್ಮಾಣವಾಗಿತ್ತು. 155 ವರ್ಷಗಳ ಹಿಂದೆ 1870ರಲ್ಲಿ 197 ಎಕರೆ ಪ್ರದೇಶದಲ್ಲಿ ಕಬ್ಬನ್ ಪಾರ್ಕ್ ನಿರ್ಮಾಣವಾಗಿದೆ. ಕಬ್ಬನ್ ಪಾರ್ಕ್ ನಿರ್ಮಾಣವಾದ 155 ವರ್ಷಗಳಲ್ಲಿ ನಗರದಲ್ಲಿ ಹಲವು ಸಣ್ಣ ಉದ್ಯಾನಗಳು ನಿರ್ಮಾಣವಾಗಿವೆ. ಆದರೆ ಇಷ್ಟು ದೊಡ್ಡ ಪ್ರದೇಶದಲ್ಲಿ ಯಾವ ಉದ್ಯಾನವೂ ಇಲ್ಲ. ಹೀಗಾಗಿ, ನಗರದ ಮೂರನೇ ಅತಿದೊಡ್ಡ ಜೀವವೈವಿಧ್ಯ ಉದ್ಯಾನವಾಗಿ ಜನರಿಗೆ ಸಮರ್ಪಿಸಲಾಗುತ್ತದೆ’ ಎಂದರು.

ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಬಳಿಯ ಮಾದಪ್ಪನಹಳ್ಳಿಯಲ್ಲಿ 153 ಎಕರೆ ಪ್ರದೇಶದಲ್ಲಿ ‘ವಿಶ್ವಗುರು ಬಸವಣ್ಣ ಜೀವವೈವಿಧ್ಯ ಉದ್ಯಾನ’ ಅಭಿವೃದ್ಧಿಯಾಗಲಿದೆ. ಈ ಹಿಂದೆ ಈ ಪ್ರದೇಶದಲ್ಲಿ, ಅರಣ್ಯ ಇಲಾಖೆ ನೆಡುತೋಪು ಬೆಳೆಸಲು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೆ ನೀಡಿತ್ತು. ಆ ಜಾಗವನ್ನು ಮರಳಿ ಇಲಾಖೆಗೆ ಪಡೆದುಕೊಂಡಿದ್ದು, ಇಲ್ಲಿರುವ ನೀಲಗಿರಿ ಮರಗಳನ್ನು ಹಂತ ಹಂತವಾಗಿ ತೆಗೆದು, ನಂದಿ, ಹೊನ್ನೆ, ಬಿಲ್ವ, ಮಹಾಬಿಲ್ವ ಮೊದಲಾದ ನೂರಾರು ಪ್ರಭೇದದ ಸಸಿಗಳನ್ನು ನೆಟ್ಟು ಬೆಳೆಸಲಾಗುವುದು. ಹೀಗೆ ಬೆಳೆಸುವ ಎಲ್ಲ ಮರಗಳ ಬಳಿ ವೃಕ್ಷದ ಹೆಸರು, ಪ್ರಭೇದ ಇತ್ಯಾದಿ ವಿವರದ ಫಲಕ ಹಾಕುವ ಮೂಲಕ ಮುಂದಿನ ಪೀಳಿಗೆ ಕನಿಷ್ಠ 50 ಮರಗಳನ್ನು ಗುರುತಿಸುವಂತೆ ಅರಿವು ಮೂಡಿಸಲು ತೀರ್ಮಾನಿಸಲಾಗಿದೆ ಎಂದರು.

ದಿವ್ಯೌಷಧೀಯ ಸಸ್ಯವನ, ಪಕ್ಷಿ ಲೋಕ, ವೃಕ್ಷೋದ್ಯಾನ ಹಾಗೂ ಇಂಟರ್ ಪ್ರಿಟೇಷನ್ ಸೆಂಟರ್ ನಿರ್ಮಾಣ ಮಾಡಲು ಚಿಂತಿಸಲಾಗಿದೆ. ಈ ಉದ್ಯಾನ ಬಿಡಿಎ ನಿರ್ಮಿಸಿರುವ ಶಿವರಾಮಕಾರಂತ ಬಡಾವಣೆಗೆ ಅತ್ಯಂತ ಸಮೀಪದಲ್ಲಿದೆ ಎಂದು ಹೇಳಿದರು.

ಎಎಸ್‌ಐ, ವೈದ್ಯನ ವಿರುದ್ಧ 2ನೇ ದೋಷಾರೋಪ ಪಟ್ಟಿ

ಪ್ರಜಾವಾಣಿ ವಾರ್ತೆ

ನಾಗರಾಜ್

ಚಾನ್ ಪಾಷಾ

ಅನಿಸಾ ಫಾತಿಮಾ

ಬೆಂಗಳೂರು: ಲಷ್ಕರ್-ಎ-ತಯಬಾ ಭಯೋತ್ಪಾದನೆ ಸಂಘಟನೆ ಜತೆಗೆ ಸೇರಿಕೊಂಡು ಕಾರಾಗೃಹದಲ್ಲಿರುವ ಕೈದಿಗಳನ್ನು ಭಯೋತ್ಪಾದನಾ ಚಟುವಟಿಕೆಗಳಿಗೆ ಪ್ರೇರೇಪಿಸುತ್ತಿದ್ದ ಹಾಗೂ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದ ಪ್ರಕರಣದಲ್ಲಿ ಬಂಧಿತ ಮೂವರು ಆರೋಪಿಗಳ ವಿರುದ್ಧ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ದಳದ ಅಧಿಕಾರಿಗಳು, ಇಲ್ಲಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಗುರುವಾರ ಎರಡನೇ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಪರಪ್ಪನ ಅಗ್ರಹಾರ ಜೈಲಿನ ವೈದ್ಯ ನಾಗರಾಜ್, ಎಎಸ್‌ಐ ಚಾನ್ ಪಾಷಾ ಮತ್ತು ತಲೆಮರೆಸಿಕೊಂಡಿರುವ ಶಂಕಿತ ಉಗ್ರ ಜುನೈದ್ ಅಹಮದ್ ತಾಯಿ ಅನಿಸಾ ಫಾತಿಮಾ ಅವರನ್ನು ಕೆಲವು ತಿಂಗಳ ಹಿಂದೆ ಎನ್‌ಐಎ ಬಂಧಿಸಿತ್ತು. ಮೂವರ ವಿರುದ್ಧ ಸ್ಫೋಟಕ ವಸ್ತುಗಳ ತಡೆ ಕಾಯ್ದೆ, ಭ್ರಷ್ಟಾಚಾರ ತಡೆ ಕಾಯ್ದೆ ಮತ್ತು ಕರ್ನಾಟಕ ಕಾರಾಗೃಹ ಕಾಯ್ದೆ ಅಡಿ ಪ್ರಕರಣ ದಾಖಲಾಗಿತ್ತು.

ನಾಸೀರ್ ತಪ್ಪಿಸಿಕೊಳ್ಳಲು ಸಂಚು: 2008ರ ಬೆಂಗಳೂರು ಸರಣಿ ಸ್ಫೋಟ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಟಿ.ನಾಸೀರ್‌ನನ್ನು ಜೈಲಿನಿಂದ ನ್ಯಾಯಾಲಯಕ್ಕೆ ಹೋಗುವ ದಾರಿಯಲ್ಲಿ ತಪ್ಪಿಸಿಕೊಳ್ಳಲು ಅನುಕೂಲ ಆಗುವಂತೆ ಬಂಧಿತರು ಸಂಚು ರೂಪಿಸಿದ್ದರು ಎಂಬುದು ತನಿಖೆ ವೇಳೆ ಪತ್ತೆಯಾಗಿದೆ.

7B

ವಿದೇಶದಲ್ಲಿ ಸೂತ್ರಧಾರ

2023ರ ಅಕ್ಟೋಬರ್‌ನಲ್ಲಿ ಸಿಸಿಬಿ ಪೊಲೀಸರು 7 ಮಂದಿ ಉಗ್ರರನ್ನು ಬಂಧಿಸಿದ್ದರು. ತನಿಖೆ ಮುಂದುವರಿಸಿದ್ದಾಗ ಆರ್‌ಟಿ ನಗರದಲ್ಲಿದ್ದ ಉಗ್ರನೊಬ್ಬನ ಮನೆಯಲ್ಲಿ ಜೀವಂತ ಗ್ರೆನೇಡ್, ಶಸ್ತ್ರಾಸ್ತ್ರಗಳು, ವಾಕಿ ಟಾಕಿಗಳು, ಡಿಜಿಟಲ್ ಸಾಧನಗಳು ಸೇರಿದಂತೆ ಇತರೆ ಸ್ಫೋಟಕ ವಸ್ತುಗಳು ಪತ್ತೆ ಆಗಿದ್ದವು. ತನಿಖೆ ನಡೆಸಿದಾಗ ಪ್ರಕರಣದ ಸೂತ್ರಧಾರ ಜುನೈದ್ ಅಹಮದ್ ದುಬೈನಲ್ಲಿ ತಲೆಮರೆಸಿ-ಕೊಂಡಿದ್ದಾನೆ ಎಂಬುದು ಪತ್ತೆಯಾಗಿತ್ತು. ಈ ಸಂಬಂಧ ಆರ್.ಟಿ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಪ್ರಕರಣವನ್ನು ಎನ್‌ಐಎಗೆ ವಹಿಸಲಾಗಿತ್ತು. ನಂತರ, ಪರಾರಿಯಾಗಿದ್ದ ಜುನೈದ್ ಅಹಮದ್ ಸೇರಿ 9 ಆರೋಪಿಗಳ ವಿರುದ್ಧ ಈ ಹಿಂದೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಜುನೈದ್ ಅಹಮದ್ ತಾಯಿ ಅನಿಸಾ ಫಾತಿಮಾ ಅವರನ್ನು ಕೆಲವು ತಿಂಗಳ ಹಿಂದೆ ಬಂಧಿಸಲಾಗಿತ್ತು.





ಸೂರ್ಯೋದಯ: 6:42 ಸೂರ್ಯಾಸ್ತ : 6:05 | ಚಂದ್ರೋದಯ: ಸಂ. 5:30 ಚಂದ್ರಾಸ್ತ: ಬೆ. 5:30 | ಶುಕ್ರವಾರದ ಉಷ್ಣಾಂಶ : ಗರಿಷ್ಠ 27° ಕನಿಷ್ಠ 19°

ಶನಿವಾರದ ಉಷ್ಣಾಂಶ 28° ಗರಿಷ್ಠ | 18° ಕನಿಷ್ಠ | ಭಾನುವಾರ 28° : 15° | ಸೋಮವಾರ 28° : 15° | ಮಂಗಳವಾರ 28° : 15°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ

ನಗರದಲ್ಲಿ ಇಂದು

'ದಲಿತ ಸಾಹಿತ್ಯ ಮತ್ತು ಚಳವಳಿ-50' ಮೂರು ದಿನಗಳ ರಾಜ್ಯಮಟ್ಟದ ಅಧ್ಯಯನ ಶಿಬಿರ: ವಿವಿಧ ಗೋಷ್ಠಿಗಳು, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ವೆಂಕಟಗಿರಿಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 9.30ರಿಂದ

ಶಿವರಾಜ ವಿ. ಪಾಟೀಲ ಅವರ ಆತ್ಮಕಥನ 'ಚಕ್ಕಡಿಯಿಂದ ತಕ್ಕಡಿಯವರೆಗೆ' ಪುಸ್ತಕ ಬಿಡುಗಡೆ: ಕೆ.ಎನ್. ಫಣೀಂದ್ರ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಕೃತಿಯ ಲೇಖಕ: ಕೆ.ಎಲ್. ವಿಶ್ವನಾಥ್ ಶರ್ಮ, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30


ಶಿವರಾಜ ಪಾಟೀಲ

ರಾಷ್ಟ್ರೀಯ ಸಂಗೀತ ಮತ್ತು ನೃತ್ಯೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ: ವಿ. ವಿಭಾ ರವೀಂದ್ರ, ವಿ.ಪಲ್ಲವಿ, ಭರತನಾಟ್ಯ: ದಿಶಾ, ಸುಕನ್ಯ ರಾಘವ್, ಸುಪ್ರಿಯಾ ಅಶ್ವಿನ್, ಪೂರ್ಣಾ ಪವಾರ್, ಗೌರಿ ನೃತ್ಯಾಲಯ, ಶ್ರುತಿಲಯ ಸ್ಕೂಲ್ ಆಫ್ ಡಾನ್ಸ್, ಪವಿತ್ರ ದಂಟು, ರಕ್ಷಾ ಕಾರ್ತಿಕ್, ಆಯೋಜನೆ: ಸಂಗೀತ ಸಂಭ್ರಮ, ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 9.30

ಸಕಲವಾರ ಸಮುದಾಯ ಮಾನಸಿಕ ಆರೋಗ್ಯ ಕೇಂದ್ರದ ಸುವರ್ಣ ಮಹೋತ್ಸವ: ಅತಿಥಿಗಳು: ಶಾಲಿನಿ ರಜನೀಶ್, ಭಿಕ್ಕು ಆನಂದ ಥೇರ, ಅಧ್ಯಕ್ಷತೆ: ಡಾ. ಪ್ರತಿಮಾ ಮೂರ್ತಿ, ಆಯೋಜನೆ ಹಾಗೂ ಸ್ಥಳ: ನಿಮ್ಹಾನ್ಸ್ ದಕ್ಷಿಣ ಕ್ಯಾಂಪಸ್, ಸಕಲವಾರ, ಬೆಳಿಗ್ಗೆ 10

ಕರ್ನಾಟಕ ರಾಜ್ಯೋತ್ಸವ ಹಾಗೂ ಹೊಸ ವರ್ಷದ ಸಂಭ್ರಮ: ಜನಪದ–ಕನ್ನಡ ಗೀತೆ ಗುಂಪು ನೃತ್ಯ ಸ್ಪರ್ಧೆ: ಉದ್ಘಾಟನೆ: ಕೆ.ವಿ. ಶರತ್‌ಚಂದ್ರ, ಅಧ್ಯಕ್ಷತೆ: ಸಿ.ಎಸ್. ಷಡಾಕ್ಷರಿ, ಅತಿಥಿ: ಸುದರ್ಶನ ಚನ್ನಂಗಿಹಳ್ಳಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನದ ಅಂಗವಾಗಿ ಶಿಕ್ಷಕಿಯರ ದಿನಾಚರಣೆ: ಅಧ್ಯಕ್ಷತೆ: ರಮೇಶ್ ಬಿ., ಅತಿಥಿಗಳು: ಗಾಯತ್ರಿ ಎನ್., ಶಿಲ್ಪಶ್ರೀ, ಆಯೇಷಾ ಫರ್ಜಾನಾ, ಚೈತ್ರಾ ಟಿ.ಎಂ., ಜಲಜಾ ಕೆ.ಆರ್., ಆಯೋಜನೆ ಹಾಗೂ ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 11.30

ಪುರಂದರದಾಸರ ಮತ್ತು ತ್ಯಾಗರಾಜರ ಆರಾಧನೆ ಹಾಗೂ 52ನೇ ವಾರ್ಷಿಕೋತ್ಸವ: ಉದ್ಘಾಟನೆ: ಯಾದಳಂ ಮಧುಸೂದನ್ ಶ್ರೇಷ್ಠಿ, ಅಧ್ಯಕ್ಷತೆ: ಎಂ.ಕೃಷ್ಣಪ್ಪ, ಅತಿಥಿಗಳು: ರೇವತಿ ಕಾಮತ್, ಎಸ್.ಡಿ. ಶಿಭುಲಾಲ್, ಕೆ. ಪ್ರಕಾಶ್ ರೆಡ್ಡಿ, ಆಯೋಜನೆ: ಪುರಂದರ ತ್ಯಾಗರಾಜ ದೇವಾಲಯ ಸಂಗೀತಸೇವಾ ಮಂಡಳಿ, ಸ್ಥಳ: ಭವಾನಿಶಂಕರ ದೇವಸ್ಥಾನ, ವಸಂತಪುರ, ಸಂಜೆ 5

ಅಯ್ಯಪ್ಪ ಸ್ವಾಮಿ ಪೂಜಾ ಮಹೋತ್ಸವದ ಪ್ರಯುಕ್ತ ಜಾಥಾ: ಆಯೋಜನೆ ಹಾಗೂ ಸ್ಥಳ: ಜ್ಞಾನಾಕ್ಷಿ ಭುವನೇಶ್ವರಿ ದೇವಸ್ಥಾನ ಸೇವಾ ಚಾರಿಟೇಬಲ್ ಟ್ರಸ್ಟ್, ಐಪಿಡಿ ಸಾಲಪ್ಪ ಬಡಾವಣೆ, ವಿ.ಎಸ್.ಗಾರ್ಡನ್, ಜೆ.ಜೆ. ಆರ್.ನಗರ, ಸಂಜೆ 5

ರಾಷ್ಟ್ರಕವಿ ಕುವೆಂಪು ಅವರ 121ನೇ ಜನ್ಮದಿನಾಚರಣೆ: ಆಶೀರ್ವಚನ: ನಿರ್ಮಲಾನಂದನಾಥ ಸ್ವಾಮೀಜಿ, ಉಪಸ್ಥಿತಿ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಎಂ.ಕೃಷ್ಣಪ್ಪ, ಅಧ್ಯಕ್ಷತೆ: ಗೋಪಾಲಸ್ವಾಮಿ ಸಿ.ಆರ್., ಉಪನ್ಯಾಸ: ಕರೀಗೌಡ ಬೀಚನಹಳ್ಳಿ, ಆಯೋಜನೆ: ವಿಶ್ವಮಾನವ ಬಳಗ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, (ಸಂಜೆ 4ರಿಂದ ಸಾಂಸ್ಕೃತಿಕ ಕಾರ್ಯಕ್ರಮ), ಸಭಾ ಕಾರ್ಯಕ್ರಮ ಸಂಜೆ 6

'ಪಂಚಾಚಾರ್ಯಶ್ರೀ' ಪ್ರಶಸ್ತಿ ಪ್ರದಾನ ಹಾಗೂ ಗ್ರಂಥ ಬಿಡುಗಡೆ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ನೇತೃತ್ವ: ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಉಪಸ್ಥಿತಿ: ಚನ್ನಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಬಿ.ವೈ. ರಾಘವೇಂದ್ರ, ಪ್ರಶಸ್ತಿ ಪುರಸ್ಕೃತರು: ಗುರುಸಿದ್ಧ ಮಣಿಕಂಠ ಶಿವಾಚಾರ್ಯ ದಹಿವಡ್ಕರ್ ಮಹಾರಾಜ್, ಕಮಲಸ್ವಾಮಿ ದಹಿವಡ್ಕರ್, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6

227ನೇ ಹುಣ್ಣಿಮೆ ಹಾಡು: ರಾಘವೇಂದ್ರ ಬೀಜಾಡಿ ತಂಡದಿಂದ 'ಭಾವ ಸುರಭಿ' ಸಂಗೀತ ಸಂಜೆ, ಕೀಬೋರ್ಡ್: ರಮೇಶ್ ಟಿ.ಎಸ್., ತಬಲಾ: ಶ್ರೀನಿವಾಸ್ ಕಾಖಂಡಕಿ, ರಿದಂ ಪ್ಯಾಡ್: ರಮೇಶ್, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

'ಕೃಷ್ಣಾರ್ಪಣಂ' ನಾಟ್ಯ ಸಂಭ್ರಮ: ಉದ್ಘಾಟನೆ: ಗೀತಾ ರಾಮಾನುಜಮ್, ಅಧ್ಯಕ್ಷತೆ: ಸುಧೀಂದ್ರ ರಾವ್, ಅತಿಥಿಗಳು: ಎಂ.ಜಿ. ಮಂಜುನಾಥ್, ಮಾಲಿನಿ ಎನ್., ಆಯೋಜನೆ: ನಾಟ್ಯ ಸನ್ನಿಧಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 4

ಮಾರ್ಗಶೀರ್ಷೋತ್ಸವ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ: ವೆಂಕಟೇಶ್ ಕುಮಾರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಜರಗನಹಳ್ಳಿ ಸಿದ್ದಮ್ಮ ಮತ್ತು ನಂಜುಂಡಪ್ಪ ಶರಣ ದತ್ತಿ ಪ್ರಶಸ್ತಿ ಪ್ರದಾನ: ಸುನಂದಮ್ಮ, ಅಧ್ಯಕ್ಷತೆ: ಸಿ. ಸೋಮಶೇಖರ, ಪ್ರಶಸ್ತಿ ಪುರಸ್ಕೃತರು: ಪ್ರಕಾಶ ಗಿರಿಮಲ್ಲನವರ, ಮಂಜುಳಾ ಪರಮೇಶ, 'ಸಿ.ವತ್ಸಲ ಮತ್ತು ಎಂ. ನಂಜುಂಡಯ್ಯ ಶರಣ ದತ್ತಿ ಪ್ರಶಸ್ತಿ' ಪ್ರದಾನ: ವ.ಚ. ಚನ್ನೇಗೌಡ, ಪ್ರಶಸ್ತಿ ಪುರಸ್ಕೃತರು: ಬಂಡ್ಲಹಳ್ಳಿ ವಿಜಯಕುಮಾರ, ಉಪಸ್ಥಿತಿ: ಚಂದ್ರಶೇಖರ ಉಷಾಲ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಶಿವರಾತ್ರೀಶ್ವರ ವೃತ್ತ, ಜಯನಗರ 8ನೇ ವಿಭಾಗ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಜಿಆರ್‌ಟಿ ಜ್ಯುವೆಲ್ಲರಿಯಿಂದ 'ಸ್ವರ್ಣ ಸಂಕ್ರಾಂತಿ' ಕೊಡುಗೆಗಳು

ಸಂಕ್ರಾಂತಿಯ ಸುಗ್ಗಿ ಸಂಭ್ರಮಕ್ಕೆ ವಿಶೇಷ ಆಫರ್‌ಗಳೊಂದಿಗೆ ಗ್ರಾಹಕರಿಗೆ ಜಿಆರ್‌ಟಿ ಜ್ಯುವೆಲ್ಲರಿಯ ಗಿಫ್ಟ್

ಬೆಂಗಳೂರು: ದಕ್ಷಿಣ ಭಾರತದ ಪ್ರಖ್ಯಾತ ಆಭರಣ ಸಂಸ್ಥೆಯಾದ ಜಿಆರ್‌ಟಿ ಜ್ಯುವೆಲರ್ಸ್ ಸಂಕ್ರಾಂತಿ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಲು ತನ್ನ ನೂತನ 'ಸ್ವರ್ಣ ಸಂಕ್ರಾಂತಿ' ಅಭಿಯಾನ ಆರಂಭಿಸಿದೆ. ಹಬ್ಬದ ಪ್ರಯುಕ್ತ ಅಭಿಯಾನದಡಿ ಆಕರ್ಷಕ ರಿಯಾಯಿತಿಗಳನ್ನು ಘೋಷಿಸಿದೆ. ಆರು ದಶಕಗಳ ಭವ್ಯ ಇತಿಹಾಸ ಹೊಂದಿರುವ ಈ ಜಿಆರ್‌ಟಿ ಜ್ಯುವೆಲ್ಲರಿ ಸುಗ್ಗಿಯ ಹಬ್ಬದ ಪ್ರಯುಕ್ತ ಗ್ರಾಹಕರಿಗೆ ವಿಶೇಷ ಕೊಡುಗೆಗಳನ್ನು ಘೋಷಿಸುತ್ತಿದೆ. ಆ ಮೂಲಕ ಹಬ್ಬದ ಸಂಭ್ರಮಕ್ಕೆ ಹೊಸ ಮೆರುಗು ನೀಡುತ್ತಿದೆ.

ಆಭರಣಗಳ ಮೇಲೆ ಭರ್ಜರಿ ರಿಯಾಯಿತಿ: ಹಬ್ಬದ ಈ ಸಂದರ್ಭದಲ್ಲಿ ಗ್ರಾಹಕರಿಗೆ ವಿವಿಧ ಶ್ರೇಣಿಯ ಆಭರಣಗಳ ಮೇಲೆ ಆಕರ್ಷಕ ಆಫರ್‌ಗಳನ್ನು ನೀಡುತ್ತಿದೆ. ಚಿನ್ನದ ಆಭರಣಗಳಿಗೆ ವೇಸ್ಟೇಜ್ (ವಿಎ) ಮೇಲೆ ಶೇ. 20ರಷ್ಟು ರಿಯಾಯಿತಿ ಘೋಷಿಸಿದೆ. ವಜ್ರ ಮತ್ತು ಅನ್-ಕಟ್ ವಜ್ರದ ಆಭರಣಗಳ ಮೌಲ್ಯದ ಮೇಲೆ ಶೇ.25ರಷ್ಟು ರಿಯಾಯಿತಿ(ಸಾಲಿಟೇರ್ ಹೊರತುಪಡಿಸಿ) ನೀಡಲಾಗುತ್ತಿದೆ. ಬೆಳ್ಳಿಯ ಸಾಮಗ್ರಿಗಳ ವೇಸ್ಟೇಜ್ (ವಿಎ) ಮೇಲೆ ಶೇ.25ರಷ್ಟು ರಿಯಾಯಿತಿ, ಆಭರಣಗಳ ಎಂಆರ್‌ಪಿ ಮೇಲೆ ಶೇ.10ರಷ್ಟು ರಿಯಾಯಿತಿ, ಪ್ಲಾಟಿನಂ ಆಭರಣಗಳ ಮೇಕಿಂಗ್ ಚಾರ್ಜ್ ಹಾಗೂ ವೇಸ್ಟೇಜ್ (ವಿಎ) ಮೇಲೆ ಶೇ.30ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಈ ರಿಯಾಯಿತಿ ಕೊಡುಗೆಗಳು ಸಂಕ್ರಾಂತಿ ಹಬ್ಬದ ಅಂಗವಾಗಿ ನೀಡಲಾಗುತ್ತಿದ್ದು, ಗ್ರಾಹಕರು ಇದರ ಲಾಭ ಪಡೆದುಕೊಳ್ಳಬಹುದು.

ಸಂಪ್ರದಾಯ ಮತ್ತು ಆಧುನಿಕತೆಯ ಸಂಗಮ: 1964ರಲ್ಲಿ ಸ್ಥಾಪನೆಯಾದ ಜಿಆರ್‌ಟಿ ಜ್ಯುವೆಲರ್ಸ್ ಪ್ರಸ್ತುತ ದಕ್ಷಿಣ ಭಾರತದಾದ್ಯಂತ 65 ಮತ್ತು ಸಿಂಗಾಪುರದಲ್ಲಿ ಒಂದು ಸೇರಿದಂತೆ ಒಟ್ಟು 66 ಶೋರೂಮ್‌ಗಳನ್ನು ಹೊಂದಿದೆ. ನಂಬಿಕೆ ಮತ್ತು ಕರಕುಶಲತೆಗೆ ಹೆಸರಾಗಿರುವ ಈ ಸಂಸ್ಥೆಯು ಚಿನ್ನ, ವಜ್ರ, ಪ್ಲಾಟಿನಂ ಮತ್ತು ಅಮೂಲ್ಯ ರತ್ನಗಳ ಅದ್ಭುತ ಸಂಗ್ರಹವನ್ನು ಒಳಗೊಂಡಿದೆ. ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ 'ಸ್ವರ್ಣ ಸಂಕ್ರಾಂತಿ' ಹೆಸರಿನಲ್ಲಿ ನಡೆಯುತ್ತಿರುವ ಈ ಅಭಿಯಾನವು ತಮಿಳುನಾಡಿನಲ್ಲಿ 'ಪೊನ್ ಪೊಂಗಲ್' ಹಾಗೂ ಸಿಂಗಾಪುರದಲ್ಲಿ 'ಗೋಲ್ಡನ್ ಫೆಸ್ಟಿವಲ್' ಎಂಬ ಹೆಸರಿನಲ್ಲಿ ಆಚರಿಸಲ್ಪಡುತ್ತಿದೆ. ಹೊಸ ವರ್ಷದ ಆರಂಭದಲ್ಲಿ ನಿಮ್ಮ ನೆಚ್ಚಿನ ಆಭರಣಗಳನ್ನು ಖರೀದಿಸಿ ಸಂಕ್ರಾಂತಿಯ ಸಮೃದ್ಧಿಯನ್ನು ಆಚರಿಸಲು ಜಿಆರ್‌ಟಿ ಜ್ಯುವೆಲರ್ಸ್ ಉತ್ತಮ ಅವಕಾಶ ಕಲ್ಪಿಸಿದೆ.

ಹಬ್ಬದ ಸೀಸನ್‌ನ ಸೊಬಗು!

ಹೊಸ ವರ್ಷದ ಆರಂಭದ ಖುಷಿಯಲ್ಲಿರುವ ಗ್ರಾಹಕರಿಗೆ ಸುಗ್ಗಿಯ ಸೊಬಗಿನ ಸ್ವರೂಪದಲ್ಲಿ ಜಿಆರ್‌ಟಿ ತನ್ನ ಕೊಡುಗೆಗಳನ್ನು ಉಡುಗೊರೆಯನ್ನಾಗಿ ನೀಡುತ್ತಿದೆ. 'ಸ್ವರ್ಣ ಸಂಭ್ರಮ' ಅಭಿಯಾನದಲ್ಲಿ ವಿವಿಧ ಸ್ವರೂಪದ ಆಭರಣಗಳಿಗೆ ಪ್ರತ್ಯೇಕ ಕೊಡುಗೆಗಳನ್ನು, ರಿಯಾಯಿತಿಗಳನ್ನು ನೀಡುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದೆ. ವಿಶೇಷವಾಗಿ ಜಿಆರ್‌ಟಿ ದಶಕಗಳಿಂದಲೂ ಆಭರಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದು, ಗ್ರಾಹಕರ ನಿರೀಕ್ಷೆಗೆ ತಕ್ಕಂತೆ ಸೇವೆ ನೀಡುತ್ತ ತನ್ನ ವಿಶ್ವಾಸಾರ್ಹತೆಯನ್ನು ಬಲಪಡಿಸಿಕೊಳ್ಳುತ್ತಿದೆ. ಜತೆಗೆ, ಕಾಲಕ್ಕೆ ತಕ್ಕಂತೆ ಗ್ರಾಹಕರ ಬೇಡಿಕೆಗಳಿಗೆ ಅನುಗುಣವಾಗಿ ವಿಭಿನ್ನ ಸ್ವರೂಪದ ವಿನ್ಯಾಸಗಳನ್ನು ಅತ್ಯಂತ ದೃಢವಾಗಿ ನೀಡುವಲ್ಲಿ ಯಶಸ್ವಿಯಾಗಿದೆ. ಈಗ, ಸ್ವರ್ಣ ಸಂಕ್ರಾಂತಿ ಅಭಿಯಾನದ ಮೂಲಕ ತನ್ನ ಗ್ರಾಹಕರಿಗೆ ವಿಶೇಷ ರಿಯಾಯಿತಿಗಳನ್ನು ನೀಡುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದೆ. ರಾಜ್ಯದಲ್ಲಿ ಆಚರಿಸಲ್ಪಡುತ್ತಿರುವ 'ಸ್ವರ್ಣ ಸಂಭ್ರಮ' ಅಭಿಯಾನದಡಿ ಸೀಮಿತ ಅವಧಿಗೆ ಕೊಡುಗೆಗಳಿರಲಿದ್ದು, ಗ್ರಾಹಕರು ಇದರ ಪ್ರಯೋಜನ ಪಡೆದುಕೊಳ್ಳಬಹುದು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

Kia Seltos
Badass. Forever.

Bigger in stance, longer in profile, and stronger in presence, the all-new Kia Seltos has arrived with a reinvigorated sense of authority. The new design strikes harder, the Trinity Panoramic Display amplifies the cabin, Ventilated Seats bring comfort, and ADAS Level 2 equips you with unmatched confidence. A complete transformation that carries forward the one thing that never changed: its unmistakable badass attitude. Experience the all-new Kia Seltos today!

Commanding Presence Advanced, with attitude

Command-Centric Trinity Panoramic Display

Over-the-Air (OTA) Software Updates with Kia Remote Diagnostics#

Dual Pane Panoramic Sunroof


Iconic R18 - 46.20 cm (18") Sporty Crystal Cut Alloy Wheels with Neon Brake Calipers

ADAS Level 2 with 21 Autonomous Features##

Front, Rear and Side Parking Sensors

Robust 24 Hi-Safety Package
STANDARD ACROSS ALL VARIANTS

Front Dual Airbags | Front Seat Side Airbags | Side Curtain Airbags | Highline Tyre Pressure Monitor | ABS (Anti-lock Brake System) | BAS (Brake Assist System) | ESC (Electronic Stability Control) | VSM (Vehicle Stability Management) | HAC (Hill-start Assist Control) | ESS (Emergency Stop Signal) | Child Lock | All Wheel Disc Brakes | Rear Parking Sensors x4 | Speed Sensing Auto Door Lock | Impact Sensing Auto Door Unlock | Front & Rear All-Seat 3-Point Seat Belts with Reminder | ISOFIX (Rear Anchors) | Front Passenger Airbag On/ Off Switch | Front Passenger Airbag On/ Off Indicator | Rear Occupant Alert | DBC (Downhill Brake Control) | Rollover Sensor | Auto Light Control & Headlamp Escort Function | Rear View Camera with Dynamic Guidelines

Kia Service
Connected • Adaptive • Responsive • Engage

3 Years Unlimited km Warranty | Extended Warranty* Up to 7 Years | My Convenience Plus* Best-in-class Cost of Ownership | Scratch Care Program* | IoT Based Smart Services* | 24x7 | 3 Years Nationwide RSA*

Book now | **Call** 1800 108 5000 | 093195 91407 | **Visit** www.kia.com | Kia Seltos | Look for "Kia India" @

FOR INFORMATION CONTACT: BENGALURU: TAAPASI KIA, KALYAN NAGAR, PH: 8095537777, KORAMANGALA, PH: 9071177333, **VST KIA,** PALACE CROSS, PH: 9606988123, YESHWANTHPUR, PH: 9606988124, **ADVAITH KIA,** LALBAGH ROAD, PH: 9611006006, BANASHANKARI, PH: 6364871022, MAGADI ROAD, PH: 6364871023, BASAVESHWARA NAGAR, PH: 6364871024, **EPITOME KIA,** AVALAHALLI, PH: 7022317666, WHITEFIELD, PH: 9606970216, YELAHANKA, PH: 7406343339, VARTHUR: PH: 9844240044, **JSP KIA,** HOSUR ROAD, PH: 9986644472, BELLANDUR, PH: 9513918131, SARJAPUR, PH: 8095553636, **NAARA KIA,** J.P NAGAR, PH: 7406528200, KANAKAPURA ROAD, PH: 9071010099, **PPS KIA,** MYSORE ROAD, PH: 6309990010, **BELGAUM: MIRACULUM KIA,** PH: 9090979761, **BAGALKOT: MIRACULUM KIA,** PH: 9090979761, **BELLARY: ATHENA KIA,** PH: 6364922832, **BIJAPUR: KUMAR KIA,** PH: 7022253887, **DAVANGERE: JANSI KIA,** PH: 9538018155, **GULBARGA: KUMAR KIA,** PH: 7022253884, **HASSAN: AADARSH KIA,** PH: 9606034050, **HUBLI: NAGSHANTI KIA,** AMARGOL, PH: 9148432469, GOKUL ROAD, PH: 8088752342, **KOLAR: EPITOME KIA,** PH: 8951903224, **RAICHUR: KUMAR KIA,** PH: 8123854311, **MANGALORE: ADVAITH KIA,** PH: 6364871025, **ARM KIA,** PH: 9606013152, **MANDYA: AADARSH KIA,** PH: 9606034070, **MYSORE: AADARSH KIA,** HUNSUR ROAD, PH: 9606034060, JLB ROAD, PH: 9606996680, **SHIMOGA: JANSI KIA,** PH: 9538416666, **TUMKUR: PPS KIA,** PH: 6303622210, **UDUPI: ARM KIA,** PH: 9606055296, **CHIKAMANGALUR: JANSI KIA,** PH: 9538416666, **CHITRADURGA: JANSI KIA,** PH: 9538416666, **KUSHALNAGAR: ARM KIA,** PH: 9606055314, **PUTTUR: ARM KIA,** PH: 9606048739, **SIRSI: NAGSHANTI KIA,** PH: 8088758724

*Terms & Conditions Apply. Ex-showroom price all India. The product & feature images shown in this ad is for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown in this ad. The specifications and features may vary depending on models/ variants. Segment is defined as Mid SUV whose length lies between 4 220 - 4 460 mm and width between 1 760 - 1 830 mm. #Kia Connect 2.0 comes with 3 years free subscription. Kia Connect 2.0 functionality is dependent on mobile network strength. ##Advanced Driver Assistance System (ADAS) is not a substitute for human eye and driver vigilance. It is an assistance feature that enhances driving experience and safety. Effectiveness of ADAS may vary based on actual situation and all objects around vehicle may not be detected. The driver shall remain responsible for safe, vigilant, and attentive driving. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, Kia Connect 2.0 features and other details of any model as mentioned in this ad to discontinue any model without prior notice. For more details visit your local Kia dealership. Kia India Pvt. Ltd. urges you to follow traffic rules, these are meant to keep you safe on roads. We do not endorse vandalism or illegal activities related to road safety. Safety is a top priority, and we urge responsible behavior regarding traffic regulations and road safety.

INNOCEAN-001/26

ಕೇಳಲೇಬೇಕು ನೀವು ಇವರ ನುಡಿಮುತ್ತು

ಘನವಾದ ಸಂದೇಶಗಳಿಂದ ಜನಮನದಲ್ಲಿ ಸಂಚಲನ ಮೂಡಿಸಿದ ಬಹಳಷ್ಟು ಮಹಿಳೆಯರನ್ನು ದೇಶ ಕಂಡಿದೆ. ನಮ್ಮ ಬದುಕಿನಲ್ಲಿ ಸಕಾರಾತ್ಮಕ ನಿಲುವಿನ ಮಹತ್ವವನ್ನು ಎತ್ತಿ ಹಿಡಿಯಬಲ್ಲ ಅಂತಹ ಅನುಭವಜನ್ಯ ಮಾತುಗಳಿಗೆ, ಭಾಷಣಗಳಿಗೆ ಹೆಸರಾದ ಕೆಲವು ಮಹಿಳೆಯರ ಮಾಹಿತಿ ಇಲ್ಲಿದೆ. ಯೂಟ್ಯೂಬ್‌ನಲ್ಲಿ ಲಭ್ಯವಿರುವ ಇಂತಹವರ ಭಾಷಣಗಳ ಕೇಳುವಿಕೆಯು ಹೊಸ ವರ್ಷವನ್ನು ಆಹ್ಲಾದದಿಂದ ಎದುರುಗೊಳ್ಳಲು ನಮ್ಮ ಹೆಣ್ಣುಮಕ್ಕಳಿಗೆ ನವಚೈತನ್ಯ ನೀಡಲಿ ಎಂಬ ಆಶಯ 'ಭೂಮಿಕಾ'ದು.

ಸೋನಾಲಿ ಬೇಂದ್ರೆ

ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಬಹಳ ಮುಖ್ಯ. ಏಕೆಂದರೆ ಅದು ಸ್ವಂತ ಆಯ್ಕೆಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಅವರಿಗೆ ನೀಡುತ್ತದೆ

ಪ್ರೀತಿಗಾಗಿ, ಪ್ರೀತಿಯಿಂದ

ಉತ್ತಮ ಜೀವನಶೈಲಿಯಿಂದ ಫಿಟ್‌ನೆಸ್ ಕಾಯ್ದುಕೊಂಡು ನಳನಳಿಸುತ್ತಿದ್ದ ಚಿತ್ರನಟಿ ಸೋನಾಲಿ ಬೇಂದ್ರೆಗೆ ತನ್ನನ್ನು ಕ್ಯಾನ್ಸರ್ ಆವರಿಸಿಕೊಂಡಿರುವುದು ತಿಳಿದಾಗ ಜಂಘಾಬಲವೇ ಉಡುಗಿಹೋಗಿತ್ತು. ಆ ಸುದ್ದಿ ರೆಕ್ಕೆಪುಕ್ಕ ಕಟ್ಟಿಕೊಂಡು ಜನರ ಬಾಯಿಗೆ ಆಹಾರವಾಗದಂತೆ ಖುದ್ದು ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಜಾಹೀರು ಮಾಡಿ, ಚಿಕಿತ್ಸೆಗಾಗಿ ನ್ಯೂಯಾರ್ಕ್‌ನ ವಿಮಾನವೇರಿದ್ದರು ಅವರು. ಬರಬಹುದಾದ ಕಹಿ ಪ್ರತಿಕ್ರಿಯೆಗಳನ್ನು ಊಹಿಸಿಕೊಂಡು, ಆನ್‌ಲೈನ್ ಪ್ರಪಂಚದಿಂದಲೇ ದೂರ ಉಳಿಯಲು ನಿರ್ಧರಿಸಿದ್ದ ಸೋನಾಲಿಗೆ ಅಚ್ಚರಿಯೊಂದು ಕಾದಿತ್ತು. ತಾನೆಂದೂ ಎಣಿಸದಂತಹ ಪ್ರೋತ್ಸಾಹ, ಸಾಂತ್ವನ, ಕಾಳಜಿಯ ಮಹಾಪೂರವನ್ನೇ ಹರಿಸಿದ್ದರು ಅವರ ಅಭಿಮಾನಿಗಳು. ತನ್ನಂತೆಯೇ ಕ್ಯಾನ್ಸರ್ ಎಂಬ 'ಖಳನಾಯಕ'ನಿಗೆ ಔತಣವಾಗಿದ್ದ ಎಷ್ಟೋ ಮಂದಿಯ ನೋವು, ಮಾನಸಿಕ ತುಮುಲಗಳಲ್ಲಿ ತನ್ನನ್ನೇ ಕಂಡ ಸೋನಾಲಿಗೆ ಈ ಕಾಯಿಲೆ ಹೊಸ ಪ್ರಪಂಚವನ್ನೇ ತೆರೆದಿತ್ತು. ಅದನ್ನು ಜಯಿಸಲು ಬೇಕಾಗಿರುವುದು ಔಷಧಿಗಳ ಮದ್ದಷ್ಟೇ ಅಲ್ಲ, ಅದಕ್ಕಿಂತಲೂ ಮಿಗಿಲಾಗಿ ಆತ್ಮಸ್ಥೈರ್ಯ, ಭರವಸೆ, ಜೀವನೋತ್ಸಾಹ ಚಿಗುರಿಸಬಲ್ಲ ಜೀವಗಳ ನಂಟಿನ ಮದ್ದು ಎಂಬುದು ಮನವರಿಕೆಯಾಯಿತು.

'ಬದುಕಿನ ಬೆಲೆ ಅರಿಯಲು, ವರ್ತಮಾನದಲ್ಲಿ ಬದುಕಲು ಇದು ನಿಮಗೆ ದೊರೆತಿರುವ ಅವಕಾಶ ಎಂದೇ ತಿಳಿಯಿರಿ' ಎಂಬ ಸಕಾರಾತ್ಮಕ ದೃಷ್ಟಿಕೋನದ ಅವರ ಮಾತುಗಳು ಎಷ್ಟೋ ಕ್ಯಾನ್ಸರ್‌ಪೀಡಿತರ ಬಾಳಲ್ಲಿ ಭರವಸೆಯ ಬೆಳಕು ಮೂಡಿಸಿವೆ. 'ಆರಂಭಿಕ ಹಂತದಲ್ಲೇ ಪರೀಕ್ಷಿಸಿಕೊಳ್ಳಿ, ಶೀಘ್ರ ಗುಣಮುಖರಾಗಿ' ಎಂದು ಸಿಕ್ಕ ಸಿಕ್ಕ ವೇದಿಕೆಗಳಲ್ಲೆಲ್ಲ ಹೇಳುತ್ತಾ ಬಂದ ಅವರ ಮಾತಿನಿಂದ, ಕ್ಯಾನ್ಸರ್ ಪರೀಕ್ಷೆ ಮಾಡಿಸಿಕೊಳ್ಳುವವರ ಸಂಖ್ಯೆಯೇ ದಿಢೀರ್ ಏರಿಕೆಯಾಗಿದೆ. ಅವರ ಮಾತನ್ನು ಜನ ಎಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆ ಎಂಬುದಕ್ಕೆ ಕನ್ನಡಿ ಹಿಡಿದಿದೆ. 'ಪ್ರೀತ್ಸೇ ಪ್ರೀತ್ಸೇ, ಕಣ್ಣುಮುಚ್ಚಿ ನನ್ನ ಪ್ರೀತ್ಸೇ' ಎಂದು 'ಪ್ರೀತ್ಸೆ' ಕನ್ನಡ ಚಲನಚಿತ್ರದಲ್ಲಿ ಉಪೇಂದ್ರ ಅವರಿಂದ ಪ್ರೀತಿಗಾಗಿ ಕಾಡಿ, ಬೇಡಿಸಿಕೊಂಡಿದ್ದ ಸೋನಾಲಿ, ಈಗ 'ನಿಮ್ಮನ್ನು ನೀವು ಪ್ರೀತಿಸಿ' ಎನ್ನುತ್ತಾ ಸ್ಫೂರ್ತಿದಾಯಕ ಭಾಷಣಗಳ ಮೂಲಕ ಜನರ ಪ್ರೀತಿ ಗಳಿಸುತ್ತಿದ್ದಾರೆ.

ಸರೋಜಿನಿ ನಾಯ್ಡು

ಪುರುಷರೇ, ಮಹಿಳೆಯರ ಬಗೆಗಿನ ಸಂಕುಚಿತ ಮನೋಭಾವದಿಂದ ಮೊದಲು ಹೊರಬನ್ನಿ

ಕೇಳುಗರ ಎದೆಯಲ್ಲಿ ಕಾವು

ಸರೋಜಿನಿ ನಾಯ್ಡು 'ಭಾರತದ ಕೋಗಿಲೆ' ಎಂಬುದು ಎಲ್ಲರಿಗೂ ಗೊತ್ತು. ಆದರೆ ಹೆಚ್ಚಿನವರಿಗೆ ತಿಳಿದಿಲ್ಲದ ಸಂಗತಿಯೆಂದರೆ, ಅವರ ಜನ್ಮದಿನವಾದ ಫೆಬ್ರುವರಿ 13 ಅನ್ನು 'ರಾಷ್ಟ್ರೀಯ ಮಹಿಳಾ ದಿನ'ವನ್ನಾಗಿ ಆಚರಿಸುವುದು ಮತ್ತು ಭಾರತ ಸರ್ಕಾರ 50 ವರ್ಷಗಳ ಹಿಂದೆಯೇ ಈ ಸಂಬಂಧ ಘೋಷಣೆ ಹೊರಡಿಸಿರುವುದು!

ಅಸಾಧಾರಣ ಭಾಷಣಗಳ ಮೂಲಕ ಸ್ವಾತಂತ್ರ್ಯ ಹೋರಾಟಗಾರರಲ್ಲಿ, ವಿಶೇಷವಾಗಿ ಮಹಿಳೆಯರಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹತ್ತಿಸಿದವರು ಸರೋಜಿನಿ. ತಮ್ಮ ದಿಟ್ಟ ಉಪನ್ಯಾಸಗಳು, ಕವಿತೆಗಳ ಮೂಲಕ ಮಹಿಳಾ ಸಬಲೀಕರಣಕ್ಕೆ, ಮಹಿಳಾ ಶಿಕ್ಷಣಕ್ಕೆ ಅಪೂರ್ವವಾದ ಕೊಡುಗೆ ನೀಡಿದವರು. ಅದರಲ್ಲೂ ಮಹಿಳೆಯರ ಹಕ್ಕುಗಳು, ಹಿಂದೂ–ಮುಸ್ಲಿಂ ಸೌಹಾರ್ದ ಹಾಗೂ ಭಾರತದ ಸಂವಿಧಾನದ ಮಹತ್ವವನ್ನು ಎತ್ತಿ ಹಿಡಿಯುವ ಅವರ ಭಾಷಣಗಳು ಇಂದಿಗೂ ಕೇಳುಗರ ಎದೆಯಲ್ಲಿ ಕಾವು ಕಟ್ಟಿಸುತ್ತವೆ. ಬ್ರಿಟಿಷರ ಎದುರು ರಾಜಕೀಯ ಹಕ್ಕುಗಳಿಗಾಗಿ ಬೇಡಿಕೆ ಇರಿಸುತ್ತಿದ್ದ ಭಾರತದ ಪುರುಷ ವಲಯಕ್ಕೆ, 'ಒಂಟಿ ಕಾಲಿನಲ್ಲಿ ನಡೆಯಬಹುದು, ಆದರೆ ಆ ನಡಿಗೆ ಅತ್ಯಂತ ನಿಧಾನವಾಗಿರುತ್ತದೆ, ಒಂಟಿ ಕಣ್ಣಿನವರು ನೋಡಬಹುದು, ಆದರೆ ಒಂದು ಬದಿಯನ್ನು ಮಾತ್ರ, ಅಂತೆಯೇ ಒಂಟಿ ಚಕ್ರದ ರಥ ಸರಿಯಾಗಿ ಚಲಿಸಲಾರದು' ಎಂಬಂತಹ ವಸ್ತುನಿಷ್ಠ ಭಾಷಣಗಳ ಮೂಲಕ ಮಹಿಳೆಯರ ರಾಜಕೀಯ ಹಕ್ಕುಗಳ ಪರವಾಗಿ ಆ ಕಾಲದಲ್ಲೇ ಬೇಡಿಕೆ ಮಂಡಿಸಿದ್ದರು.

'ರಾಮಾಯಣ, ಮಹಾಭಾರತ ಓದಿ, ಯುದ್ಧಗಳಲ್ಲಿ ಗಂಡನೊಟ್ಟಿಗೆ ಕೈಜೋಡಿಸಿದ ನಮ್ಮ ಮಹಿಳೆಯರ ಯಶೋಗಾಥೆಗಳನ್ನು ಅರಿಯಿರಿ. ಇದರಿಂದ, ಮಹಾನ್ ಭಾರತವು ಹಿಂದಿನಿಂದಲೂ ಹೆಣ್ಣುಮಕ್ಕಳಿಗೆ ಎಷ್ಟು ಮಹತ್ವ ಕೊಡುತ್ತಾ ಬಂದಿದೆ ಎಂಬುದು ನಿಮಗೆ ತಿಳಿಯುತ್ತದೆ' ಎನ್ನುತ್ತಾ, ಪುರುಷರಲ್ಲಿ ಲಿಂಗ ಸಮಾನತೆಯ ಅರಿವು ಮೂಡಿಸಲು ಪ್ರಯತ್ನಿಸಿದರು. ದೇಶದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ಕೊಟ್ಟಿದ್ದರ ಹಿಂದೆ ಅವರ ಆಗ್ರಹಪೂರ್ವಕ ಭಾಷಣಗಳ ಕೊಡುಗೆಯೂ ಬಹಳಷ್ಟಿದೆ. ಇಂಪಾದ ಕಂಠದಲ್ಲಿ ಸರೋಜಿನಿ ಅವರು ಮಾಡಿರುವ ಮಹತ್ವದ ಭಾಷಣಗಳ ವಿಡಿಯೊ ತುಣುಕುಗಳು ಗಮನಾರ್ಹವಾಗಿವೆ.

ಕಿರಣ್ ಬೇಡಿ

ಮದುವೆಯಾಗಿ ಮಕ್ಕಳನ್ನು ಹಡೆಯುವುದಕ್ಕಷ್ಟೇ ಮಹಿಳೆಯರು ಜನಿಸಿಲ್ಲ. ಮೊದಲು ಅವರು ಸ್ವಾವಲಂಬಿಗಳಾಗಬೇಕು, ನಂತರ ತಮ್ಮ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ನಿರ್ಧರಿಸಬೇಕು

ಖಡಕ್ ಮಾತು ಕಳಕಳಿಯ ಸಂದೇಶ

ಆ ದೊಡ್ಡ ಜೈಲಿನ ಕಂಬಿಗಳ ಹಿಂದೆ ನಿಂತು ಅಚ್ಚರಿಯಿಂದ ತನ್ನನ್ನೇ ದಿಟ್ಟಿಸುತ್ತಿದ್ದ ಉಗ್ರರು, ಅತ್ಯಾಚಾರಿಗಳು, ದರೋಡೆಕೋರರೊಂದಿಗೆ ಏನು ಮಾತನಾಡಬೇಕೆಂದೇ ಒಂದು ಕ್ಷಣ ಆಕೆಗೆ ತೋಚಲಿಲ್ಲ. ಹೊರಗೆ ಒಬ್ಬ ಪೊಲೀಸ್ ಅಧಿಕಾರಿಯಾಗಿ ಅವರಲ್ಲಿನ ಎಷ್ಟೋ ಮಂದಿಯನ್ನು ಸ್ವತಃ ಜೈಲಿಗೆ ಅಟ್ಟಿದ್ದ ಆಕೆ, ದೇಶದ ಮೊದಲ ಮಹಿಳಾ ಐಪಿಎಸ್ ಅಧಿಕಾರಿ ಕಿರಣ್ ಬೇಡಿ. ಯಾವ ರಾಜಕಾರಣಿಗಳು, ಪ್ರಭಾವಿಗಳಿಗೂ ಕ್ಯಾರೇ ಎನ್ನದೆ, ತಪ್ಪೆಸಗಿದ ಎಲ್ಲರಿಗೂ ಹೆಡೆಮುರಿ ಕಟ್ಟುತ್ತಿದ್ದ 'ತಪ್ಪಿಗೆ' ಉನ್ನತ ಪೊಲೀಸ್ ಅಧಿಕಾರಿಗಳ್ಯಾರೂ ಒಲ್ಲದ ಜೈಲು ನಿರ್ವಹಣೆಯ ಹುದ್ದೆಗೆ ಆಕೆಯನ್ನು ತಂದೊಗೆದಿತ್ತು ದೆಹಲಿಯ ಆಡಳಿತ ವ್ಯವಸ್ಥೆ.

'ನೀವು ಪ್ರಾರ್ಥನೆ ಮಾಡುವಿರಾ?' ಎಂದು ತಕ್ಷಣಕ್ಕೆ ತೋಚಿದ ಪ್ರಶ್ನೆ ಕೇಳಿದಾಗ, ತಿಹಾರ್ ಜೈಲಿನ ಆ ಕೈದಿಗಳಿಂದ ಯಾವ ಉತ್ತರವೂ ಬರಲಿಲ್ಲ. 'ಪ್ರಾರ್ಥನೆ ಮಾಡಬಯಸುವಿರಾ?' ಎಂದಾಗ ಮಾತ್ರ 'ಹೌದು' ಎಂಬ ಒಕ್ಕೊರಲ ದನಿ, ಬಿಗಿ ಬಂದೋಬಸ್ತ್‌ನ ಆ ಕಟ್ಟಡದಲ್ಲಿ ಪ್ರತಿಧ್ವನಿಸಿತ್ತು. 'ಸರಿ, ಹಾಗಾದರೆ ಬನ್ನಿ, ಎಲ್ಲರೂ ಪ್ರಾರ್ಥಿಸೋಣ' ಎಂದು ಅವರೊಟ್ಟಿಗೆ, ಅವರಿಗಾಗಿ ಪ್ರಾರ್ಥಿಸಿದ ಬೇಡಿಗೆ, ಮುಂದೆಂದೂ ಮಾತಿನ ಕೊರತೆ ಕಾಡಲಿಲ್ಲ. ಹೆಣ್ಣುಮಕ್ಕಳಿಗೆ ಶಿಕ್ಷಣ ಮರೀಚಿಕೆಯಾಗಿದ್ದ 50–60ರ ದಶಕದಲ್ಲಿ ಮನೆಯ ಹಿರಿಯರನ್ನು ಎದುರು ಹಾಕಿಕೊಂಡು ತನ್ನ ನಾಲ್ವರು ಹೆಣ್ಣುಮಕ್ಕಳನ್ನು ಅಪ್ಪ ಶಾಲೆಗೆ ಕಳಿಸಿದ್ದು, ಐಪಿಎಸ್ ತರಬೇತಿಗೆ ನಿಯೋಜನೆಗೊಂಡಿದ್ದ 80 ಮಂದಿಯ ತಂಡದಲ್ಲಿ ಏಕೈಕ ಹೆಣ್ಣುಮಗಳಾಗಿದ್ದುದು, ತನ್ನ ಖಡಕ್ ನಿಲುವಿನಿಂದ ಜನಪ್ರತಿನಿಧಿಗಳೊಟ್ಟಿಗೆ ಉಂಟಾಗುತ್ತಿದ್ದ ಇನ್ನಿಲ್ಲದ ವಾದ ವಿವಾದಗಳು, ಅದರ ಫಲವಾಗಿ ಪದೇಪದೇ ಆಗುತ್ತಿದ್ದ ವರ್ಗಾವಣೆಗಳು, ಅನಾರೋಗ್ಯದಿಂದ ಬಳಲುತ್ತಿದ್ದ ಪುಟ್ಟ ಮಗಳು ಹಾಗೂ ವೃದ್ಧ ತಂದೆತಾಯಿ ಅದರಿಂದ ಅನುಭವಿಸಬೇಕಾಗಿ ಬಂದ ಸಂಕಷ್ಟಗಳು, ಸಂಚಾರ ಪೊಲೀಸ್ ಅಧಿಕಾರಿಯಾಗಿ, ನಿಯಮ ಉಲ್ಲಂಘಿಸಿದ ಪ್ರಧಾನಿ ಕಾರ್ಯಾಲಯದ ಕಾರಿಗೂ ವಿನಾಯಿತಿ ನೀಡದೆ ದಂಡದ ರಸೀತಿ ಕೊಡುವ ಮೂಲಕ ರಾಜಕಾರಣಿಗಳಿಗೆ ಸಂಘರ್ಷದ ರಣವೀಳ್ಯ ನೀಡಿದ್ದು, ಕಳ್ಳತನದ ಆರೋಪ ಹೊತ್ತ ವಕೀಲನಿಗೆ ಕೈಕೋಳ ತೊಡಿಸಿದ್ದೇ ನೆಪವಾಗಿ ದೆಹಲಿಯ ಇಡೀ ವಕೀಲ ವೃಂದವನ್ನು ಎದುರು ಹಾಕಿಕೊಂಡಿದ್ದು... ಇಷ್ಟೆಲ್ಲಾ ಮಹತ್ತಾದ ಅನುಭವಗಳ ಮೂಸೆಯಿಂದ ಹೊರಬರುವ ಅವರ ಮಾತುಗಳನ್ನು ತನ್ಮಯರಾಗಿ ಕೇಳುವ ದೊಡ್ಡ ಅಭಿಮಾನಿ ಪಡೆಯೇ ಇದೆ. 'ಮುಟ್ಟಿನ ರಜೆ ಎಲ್ಲ ಹೆಣ್ಣುಮಕ್ಕಳಿಗೂ ಅಗತ್ಯವಿಲ್ಲ, ಆದರೆ ಅಗತ್ಯ ಇದ್ದವರು ಪಡೆಯಲು ಅವಕಾಶವಂತೂ 'ಇದ್ದೇ ಇರಬೇಕು' ಎಂದು ಹೆಣ್ಣುಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸುತ್ತಲೇ ಅವುಗಳ ದುರ್ಬಳಕೆಯೂ ಆಗಬಾರದು ಎನ್ನುವಂತಹ ಕಳಕಳಿಯ ಸಂದೇಶಗಳನ್ನೂ ಕೊಡುವ, ನಾನಾ ವೇದಿಕೆಗಳಲ್ಲಿನ ಅವರ ಭಾಷಣಗಳು ಯೂಟ್ಯೂಬ್‌ನಲ್ಲಿ ತೆರೆದುಕೊಳ್ಳುತ್ತವೆ.

ಜಾಗತಿಕ ಮನ್ನಣೆ ಗಳಿಸಿದವರು

- ಓಪ್ರಾ ವಿನ್‌ಫ್ರೇ
- ಮಲಾಲಾ ಯೂಸುಫ್ ಝೈ
- ಮಿಷೆಲ್ ಒಬಾಮ
- ಕಿರಣ್ ಮಜುಂದಾರ್ ಷಾ
- ಕಸಾಂಡ್ರ ವರ್ದಿ
- ಆ್ಯಮಿ ಪರ್ಡಿ
- ಬ್ರಹ್ಮಕುಮಾರಿ ಶಿವಾನಿ
- ಮೆಲ್ ರಾಬಿನ್ಸ್
- ಪ್ರಿಯಾಂಕಾ ಚೋಪ್ರಾ
- ವ್ಯಾಲೊರಿ ಬರ್ಟನ್
- ಬ್ರೆನೆ ಬ್ರೌನ್
- ಲೀಸಾ ನಿಕೋಲ್ಸ್
- ರೇಚಲ್ ಹಾಲಿಸ್
- ಮಾಯಾ ಏಂಜೆಲೊ
- ಆ್ಯಮಿ ಕಡಿ

ಮಾತಿನ ಮಂಟಪ ಕಟ್ಟಿದವರು

ಇಂದಿರಾ ಗಾಂಧಿ: ಅತ್ಯಂತ ಪ್ರಮುಖ ರಾಜಕೀಯ ನಾಯಕರಲ್ಲಿ ಒಬ್ಬರಾದ ಇಂದಿರಾ ಗಾಂಧಿ, ಲೆಕ್ಕವಿಲ್ಲದಷ್ಟು ರಾಜಕೀಯ ಭಾಷಣಗಳನ್ನು ಮಾಡಿದ್ದಾರೆ. ಅವುಗಳಲ್ಲಿ, ರಾಷ್ಟ್ರೀಯ ಏಕತೆ, ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ನ್ಯಾಯದ ಪರವಾದ ಅವರ ಭಾಷಣಗಳು ಸ್ಮರಣಾರ್ಹವಾಗಿವೆ.

ಇಂದ್ರಾ ನೂಯಿ: ಪೆಪ್ಸಿಕೊದ ಮಾಜಿ ಸಿಇಒ ಇಂದ್ರಾ ನೂಯಿ, ನಾಯಕತ್ವ, ಲಿಂಗ ಸಮಾನತೆ, ಕಾರ್ಯಸ್ಥಳದಲ್ಲಿ ಮಹಿಳೆಯರು ಎದುರಿಸುವ ಸವಾಲುಗಳಿಗೆ ವಸ್ತುನಿಷ್ಠ ಪರಿಹಾರ ಒದಗಿಸುವ ಅರ್ಥಪೂರ್ಣವಾದ ಭಾಷಣಗಳಿಗೆ ಹೆಸರಾಗಿದ್ದಾರೆ.

ಸುಧಾ ಮೂರ್ತಿ: ಸರಳತೆ, ಪ್ರಾಮಾಣಿಕತೆ ಮತ್ತು ಸಹನಶೀಲತೆಯ ಪರವಾಗಿ ಶೈಕ್ಷಣಿಕ ಸಂಸ್ಥೆಗಳು, ಕಾರ್ಪೊರೇಟ್ ಸಂಸ್ಥೆಗಳ ಕಾರ್ಯಕ್ರಮಗಳು, ಸಾಹಿತ್ಯ ಉತ್ಸವಗಳಲ್ಲಿ ಮಾಡಿರುವ ಸುಧಾ ಮೂರ್ತಿ ಅವರ ಭಾಷಣಗಳು ಜನಪ್ರಿಯತೆ ಗಳಿಸಿವೆ.

ಅರುಣಿಮಾ ಸಿನ್ಹಾ: ಅವಘಡದಲ್ಲಿ ಕಾಲು ಕಳೆದುಕೊಂಡರೂ ಅದನ್ನು ಸವಾಲಾಗಿ ಸ್ವೀಕರಿಸಿ ಮೌಂಟ್ ಎವರೆಸ್ಟ್ ಏರಿದವರು ಅರುಣಿಮಾ. ಮನೋಸ್ಥೈರ್ಯವಿದ್ದರೆ ಅಡೆತಡೆಗಳನ್ನೇ ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುವುದು ಹೇಗೆ ಎಂಬುದನ್ನು ಅರಿಯಬಯಸುವವರು ಅವರ ಭಾಷಣಗಳನ್ನು ಕೇಳಿಯೇ ತೀರಬೇಕು.

ಲಕ್ಷ್ಮಿ ಅಗರವಾಲ್: ಕೃತಕತೆಯ ಸೋಂಕಿಲ್ಲದ ಲಕ್ಷ್ಮಿ ಅವರ ಭಾವನಾತ್ಮಕ ಭಾಷಣಗಳು ಸಮಾಜಕ್ಕೆ ಪ್ರಬಲ ಸಂದೇಶಗಳನ್ನು ನೀಡುತ್ತವೆ. ತನ್ನ ದೇಹದ ಬಗ್ಗೆ ಸಕಾರಾತ್ಮಕ ಭಾವನೆ ಹೊಂದುವುದು, ಸ್ವಯಂ ಸಬಲೀಕರಣದ ಬಗೆಗಿನ ಅವರ ಸಲಹೆಗಳು ಆ್ಯಸಿಡ್ ದಾಳಿಯ ಸಂತ್ರಸ್ತರಿಗೆ ವರದಾನವಾಗಿವೆ. ಮಾತ್ರವಲ್ಲದೆ, ಆ್ಯಸಿಡ್ ಮಾರಾಟಕ್ಕೆ ನಿಯಂತ್ರಣ ಹೇರಬೇಕೆಂದು ಬಲವಾಗಿ ಪ್ರತಿಪಾದಿಸಿರುವ ಭಾಷಣಗಳು, ಈ ಆ್ಯಸಿಡ್ ಸಂತ್ರಸ್ತೆಗೆ ಅಂತರರಾಷ್ಟ್ರೀಯ ಮನ್ನಣೆಯನ್ನು ತಂದುಕೊಟ್ಟಿವೆ.

ತೇಜಸ್ವಿನಿ ಮನೋಜ್ಞ: ಭಾರತದ ನವಪೀಳಿಗೆಯ ಆತ್ಮವಿಶ್ವಾಸದ ಪ್ರತೀಕದಂತಿರುವ ತೇಜಸ್ವಿನಿ, ಸೌಂದರ್ಯ ಮತ್ತು ಬುದ್ಧಿವಂತಿಕೆ ಮೇಳೈಸಿದವರು. ವೃತ್ತಿಯಲ್ಲಿ ವೈದ್ಯೆ, ಪ್ರವೃತ್ತಿಯಲ್ಲಿ ಮಾಡೆಲ್ ಆಗಿರುವ ಈ ಸುಂದರಿ, ಆತ್ಮಸ್ಥೈರ್ಯ, ಸ್ವಯಂ ಶಿಸ್ತು, ಸಮಯ ನಿರ್ವಹಣೆಯ ಬಗ್ಗೆ ಮಾಡುವ ಭಾಷಣಗಳು ಯುವಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ.

ಏನಿವರ ಬ್ಯೂಟಿ ಸೀಕ್ರೆಟ್?

ನಿಶಾ ರವಿಕೃಷ್ಣನ್, ಕಿರುತೆರೆ ನಟಿ

ನಾನು ಸಲೂನ್ ಹಾಗೂ ಬ್ಯೂಟಿ ಪಾರ್ಲರ್‌ಗಳಿಂದ ಬಹಳ ದೂರ. ಚರ್ಮ ಮತ್ತು ಕೂದಲಿನ ಆರೈಕೆಗೆ ಯಾವುದೇ ರೀತಿಯ ಸಪ್ಲಿಮೆಂಟ್‌ಗಳನ್ನು ಸೇವಿಸುವುದಿಲ್ಲ. ಇವುಗಳ ಆರೈಕೆಯಲ್ಲಿ ನಾವು ಸೇವಿಸುವ ಸತ್ವಯುತ ಆಹಾರ ಪ್ರಮುಖ ಪಾತ್ರ ವಹಿಸುತ್ತದೆ. ಹಾಗಾಗಿ, ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ 'ಟ್ರಿಪಲ್ ಎಬಿಸಿ' ಜ್ಯೂಸ್ ಕುಡಿಯುತ್ತೇನೆ. ಇದು ನೆಲ್ಲಿಕಾಯಿ, ಆ್ಯಪಲ್, ಬೀಟ್ರೂಟ್ ಮತ್ತು ಕ್ಯಾರೆಟ್ ಅನ್ನು ಸೇರಿಸಿ ಮಾಡಿದ ಜ್ಯೂಸ್ ಆಗಿರುತ್ತದೆ. ಇದರಲ್ಲಿ ದಾಳಿಂಬೆಯನ್ನೂ ಸೇರಿಸಿಕೊಳ್ಳಬಹುದು. ನಿತ್ಯ ಇದರ ಸೇವನೆಯಿಂದ ಉತ್ತಮ ಫಲಿತಾಂಶ ಸಿಕ್ಕಿದೆ. ದೇಹಕ್ಕೆ ಅಗತ್ಯವಿರುವ ಎಲ್ಲ ಪೋಷಕಾಂಶಗಳು ಈ ಜ್ಯೂಸ್‌ನಲ್ಲಿಯೇ ಇರುವುದರಿಂದ ಸಪ್ಲಿಮೆಂಟ್ಸ್‌ನ ಅಗತ್ಯ ಬರುವುದಿಲ್ಲ. ಇನ್ನು ಚರ್ಮದ ಆರೋಗ್ಯಕ್ಕೆ ಆಗಾಗ್ಗೆ ಹೊಕ್ಕುಳಿಗೆ ಹರಳೆಣ್ಣೆ, ಕೊಬ್ಬರಿ ಎಣ್ಣೆ ಅಥವಾ ಬಾದಾಮಿ ಎಣ್ಣೆಯನ್ನು ಹಚ್ಚುತ್ತೇನೆ.

ಸಕ್ಕರೆಯ ಸೇವನೆಯನ್ನು ಸಂಪೂರ್ಣವಾಗಿ ತೊರೆದಿದ್ದೇನೆ. ಇದರಿಂದ ದೇಹದ ತೂಕ ಇಳಿಯುವುದಲ್ಲದೆ, ಮೊಡವೆಗಳು ಹತ್ತಿರವೂ ಸುಳಿಯುವುದಿಲ್ಲ. ಹಾಗೆಂದ ಮಾತ್ರಕ್ಕೆ ಸಿಹಿಯನ್ನು ತಿನ್ನಬೇಕೆಂಬ ಬಯಕೆ ಇಲ್ಲವೆಂದಲ್ಲ. ಆಗಾಗ ಅಂತಹ ಬಯಕೆ ಉಂಟಾದಾಗ ಬಾಳೆಹಣ್ಣು ಅಥವಾ ಡಾರ್ಕ್ ಚಾಕೊಲೇಟ್ ತಿನ್ನುತ್ತೇನೆ.

ವಜ್ರಾಸನದಲ್ಲಿ ಕುಳಿತು ಹತ್ತು ನಿಮಿಷ ಧ್ಯಾನ ಮಾಡುತ್ತೇನೆ. ಎಲ್ಲ ಬಗೆಯ ಸ್ಟ್ರೆಚ್ ವರ್ಕ್‌ಔಟ್ ಮಾಡುತ್ತೇನೆ. ವಜ್ರಾಸನವು ಜೀರ್ಣಕ್ರಿಯೆಯನ್ನು ಉತ್ತಮ ಪಡಿಸುವುದಲ್ಲದೆ, ಚರ್ಮ ಹೊಳಪಿನಿಂದ ಕೂಡಿರಲು ನೆರವಾಗುತ್ತದೆ. ಬಿಡುವಿರದ ಶೂಟಿಂಗ್ ಇರುವುದರಿಂದ ಕೂದಲಿನ ಆರೈಕೆಗೆ ಸಮಯ ಸಿಗದು. ಮನೆಯಲ್ಲಿ ರೋಸ್ಮರಿ ಕುದಿಸಿ, ಅದರಿಂದ ಬಂದ ರಸವನ್ನು ಕೊಬ್ಬರಿ ಎಣ್ಣೆ ಜತೆ ಮಿಶ್ರ ಮಾಡಿಟ್ಟುಕೊಳ್ಳುತ್ತೇನೆ. ಇದನ್ನು ರಾತ್ರಿ ವೇಳೆ ಹಚ್ಚುತ್ತೇನೆ. ಚಳಿಗಾಲವಾದ್ದರಿಂದ ಎಳನೀರು ಕುಡಿಯುತ್ತಿಲ್ಲ. ಇಲ್ಲವಾದರೆ ನಿತ್ಯ ಒಂದು ಎಳನೀರು ಜತೆಗೆ ಚೆನ್ನಾಗಿ ನೀರು ಕುಡಿಯುತ್ತೇನೆ. ಮಾನಸಿಕ ಒತ್ತಡವಿದ್ದರೂ ಚರ್ಮ ಕಳೆಗುಂದುತ್ತದೆ. ಮನಸ್ಸು ಪ್ರಫುಲ್ಲವಾಗಿದ್ದರೆ, ನಾವು ನಗುನಗುತ್ತಾ ಇದ್ದರೆ, ಸಕಾರಾತ್ಮಕ ಧೋರಣೆಯನ್ನು ಹೊಂದಿದರೆ ಅದೇ ನಿಜವಾದ ಸೌಂದರ್ಯ.

ಚುಮುಚುಮು ಚಳಿಯಲಿ ಸಂಗ್ಟಿ ಜತೆಯಲಿ...

• ಪೂರ್ಣಿಮಾ ಎಲ್. ಬಸವರಾಜ್

'ಆರೋಗ್ಯದ ಗುಟ್ಟು ಅಡುಗೆ ಮನೆಯಲ್ಲಿ...'
ಅಜ್ಜಿ ಆಗಾಗ ಹೇಳುತ್ತಿದ್ದ ಈ ಮಾತು ಎಷ್ಟು ಅರ್ಥಪೂರ್ಣವಾಗಿತ್ತೆಂದರೆ, ಆಗಿನ ಕಾಲದಲ್ಲಿ ಏನೇ ಅಡುಗೆ ಮಾಡಿದರೂ ಅದರಲ್ಲಿ ಪೌಷ್ಟಿಕಾಂಶ ಹೇರಳವಾಗಿ ಇರುತ್ತಿತ್ತು. ಹವಾಗುಣಕ್ಕೆ ತಕ್ಕಂತೆ ಪಾಕಗಳೂ ಸಿದ್ಧವಾಗುತ್ತಿದ್ದವು. ಬಿಸಿಲಿನ ಸಮಯದಲ್ಲಿ ದೇಹಕ್ಕೆ ತಂಪು ನೀಡುವ ಖಾದ್ಯಗಳು ತಯಾರಾದರೆ, ಚಳಿಗಾಲದ ವೇಳೆ ಉಷ್ಣಕಾರಕ ಪಾಕಗಳು ಪಾತ್ರೆಗಳಲ್ಲಿ ಹಬೆಯಾಡುತ್ತಿದ್ದವು.

ರಾಸಾಯನಿಕಮುಕ್ತ ಆಹಾರದಲ್ಲಿ ಅಂದಿನ ಜನರ ಆರೋಗ್ಯದ ಗುಟ್ಟೂ ಅಡಗಿತ್ತು. ಕಾಲದ ಓಘದಲ್ಲಿ ಆಗಿನ ಖಾದ್ಯಗಳು ಮೆಲ್ಲನೆ ತೆರೆಮರೆಗೆ ಸರಿಯುತ್ತಿವೆ. ಅದೆಷ್ಟೋ ಖಾದ್ಯಗಳು ಹೇಳಹೆಸರಿಲ್ಲದಂತೆ ಆಗಿಹೋಗುತ್ತಿವೆ. ಬೆಳಗಿನ ಆರಂಭ ಈಗೆಲ್ಲ ಟೀ, ಕಾಫಿಯಿಂದ ಶುರುವಾದರೆ, ಆಗೆಲ್ಲ ಪೌಷ್ಟಿಕಾಂಶಭರಿತ ಪೇಯಗಳು ಉದರದ ದಾಹವನ್ನು ತಣಿಸುತ್ತಿದ್ದವು. ಬೇಸಿಗೆ ಕಾಲಕ್ಕೆ ಸಬ್ಬಕ್ಕಿ ಗಂಜಿ ಹಾಜರಿ ಹಾಕಿದರೆ, ಚಳಿಗಾಲಕ್ಕೆ ಹುರುಳಿಕಾಳಿನಲ್ಲಿ ತಯಾರಿಸಿದ ಗಂಜಿ ಅಥವಾ ಪೇಯಗಳು ಜೊತೆಯಾಗುತ್ತಿದ್ದವು. ಅಂಥದ್ದೇ ಒಂದು ಪೇಯ 'ಹುರುಳಿ ಸಂಗ್ಟಿ'. ಮಧ್ಯ ಕರ್ನಾಟಕ, ಉತ್ತರ ಕರ್ನಾಟಕ ಭಾಗದ ಮನೆಗಳಲ್ಲಿ ತಯಾರಾಗುತ್ತಿದ್ದ ಈ ಪೇಯ ಕ್ರಮೇಣ ಮರೆಯಾಗುತ್ತಿದೆ. 'ಟಿ' ಅಕ್ಷರವನ್ನೂ ಅಂಟಿಸಿಕೊಂಡಿರುವ ಇದು ಒಂದು ರೀತಿಯ ಆರೋಗ್ಯಪೂರ್ಣ ಟೀ ಎಂದೇ ಹೇಳಬಹುದು!

ಮಧುಮೇಹ, ಹೃದ್ರೋಗ, ಮೂತ್ರಪಿಂಡದಲ್ಲಿರುವ ಕಲ್ಲುಗಳನ್ನು ಕರಗಿಸಲು, ಅಸ್ತಮಾ, ಶೀತ, ಕಫ, ವಾತ, ಪಿತ್ತ, ಅಜೀರ್ಣ, ಪಾರ್ಶ್ವವಾಯು ಪೀಡಿತರಿಗೆ ಇದರ ಸೇವನೆ ತುಂಬಾ ಉಪಯುಕ್ತ. ಇದರಲ್ಲಿ ಕಡಿಮೆ ಕ್ಯಾಲೊರಿ ಇರುವುದರಿಂದ ತೂಕ ಇಳಿಸುವವರಿಗೂ ಇದು ವರದಾನ.

ಆಗಿನ ಕಾಲದಲ್ಲಿ ಬಾಣಂತಿಯರಿಗೆ ತಪ್ಪದೇ ಈ ಪೇಯವನ್ನು ಕೊಡುತ್ತಿದ್ದರು. ಸೊಂಟಕ್ಕೆ ಶಕ್ತಿ ನೀಡುವ ಜೊತೆಗೆ ದೇಹವನ್ನು ಬೆಚ್ಚಗಿಡುತ್ತಿತ್ತು. ಬಾಣಂತಿಯ ಮೂಲಕ ನವಜಾತ ಶಿಶುವಿಗೂ ಪೌಷ್ಟಿಕಾಂಶಯುಕ್ತ ಪೇಯ ನೀಡಿದಂತಾಗುತ್ತಿತ್ತು. ರುಚಿಯಲ್ಲೂ ಇತರ ಗಂಜಿ ಅಥವಾ ಪೇಯಗಳಿಗಿಂತ ಒಂದು ಕೈ ಮೇಲು. ಮಕ್ಕಳು, ವೃದ್ಧರು, ವಯಸ್ಕರು ಎನ್ನುವ ಭೇದವಿಲ್ಲದೆ ಎಲ್ಲರೂ ಸವಿಯಬಹುದಾದ ಪೇಯ ಇದು.

ಹುರುಳಿ ಪೋಷಕಾಂಶದ ಸುರುಳಿ

ಈ ಕಾಳಿನಲ್ಲಿ ಯಥೇಚ್ಛ ಪೋಷಕ ಸತ್ವಗಳು, ಪ್ರೋಟೀನ್, ಫೈಬರ್, ಕ್ಯಾಲ್ಸಿಯಂ, ಐರನ್, ಆ್ಯಂಟಿ ಆಕ್ಸಿಡೆಂಟ್ ಅಂಶಗಳು ಅಡಕವಾಗಿವೆ. ವಿಟಮಿನ್, ಖನಿಜಾಂಶ ಹೇರಳವಾಗಿವೆ. ಅಲ್ಲದೆ ಕಾರ್ಬೊಹೈಡ್ರೇಟ್ ಅಂಶ ಅಧಿಕವಾಗಿದೆ.
ಬೆಳಗಿನ ಧಾವಂತದ ಬದುಕಿಗೆ ಈ ಪೇಯ ಹೇಳಿಮಾಡಿಸಿದಂತಿದೆ.
ಒಂದು ದೊಡ್ಡ ಲೋಟದ ತುಂಬಾ ಇದನ್ನು ಹೊಟ್ಟೆಗಿಳಿಸಿ ಕಚೇರಿಗೆ ತೆರಳಬಹುದು.
ಆ ದಿನದ ತಿಂಡಿಯ ಜಾಗವನ್ನೂ ಇದು ತುಂಬುತ್ತದೆ. ಅವಿವಾಹಿತರು, ಉದ್ಯೋಗಸ್ಥ ಮಹಿಳೆಯರಿಗೆ ಎಷ್ಟೋ ಬಾರಿ ತಿಂಡಿ ತಿನ್ನಲೂ ಪುರಸತ್ತು ಇರುವುದಿಲ್ಲ. ಅಂತಹ ಸಮಯದಲ್ಲಿ ಈ ಪೇಯ ಮಾಡಿಕೊಳ್ಳುವುದು ಆರಾಮದಾಯಕ, ಆರೋಗ್ಯದಾಯಕ.

ರಸಾಸ್ವಾದ

ಹೀಗೆ ಮಾಡಿ ಹುರುಳಿ ಸಂಗ್ಟಿ

ಏನೇನು ಬೇಕು?: ಒಂದು ಕಪ್ ಹುರುಳಿಕಾಳನ್ನು ಕೆಂಪಗೆ ಹುರಿದು ನುಣ್ಣಗೆ ಪುಡಿ ಮಾಡಿಟ್ಟುಕೊಳ್ಳಿ. ಅರ್ಧ ಕಪ್ ಬೆಲ್ಲ, ಸ್ವಲ್ಪ ಏಲಕ್ಕಿ ಪುಡಿ, ಸ್ವಲ್ಪ ಶುಂಠಿ ಪುಡಿ, ಒಂದು ಕಪ್ ಕಾಯಿಸಿ ಆರಿಸಿದ ಹಾಲು, ಚಿಟಿಕೆ ಉಪ್ಪು, ಒಂದು ಟೀ ಚಮಚ ತುಪ್ಪ.

ಹೀಗೆ ಮಾಡಿ: ಒಂದು ಪಾತ್ರೆಯಲ್ಲಿ 2 ಲೋಟ ನೀರು ಹಾಕಿ ಅದಕ್ಕೆ ಅರ್ಧ ಕಪ್ ಬೆಲ್ಲದ ಪುಡಿ, ಹುರಿದು ಪುಡಿಮಾಡಿಟ್ಟುಕೊಂಡ ಹುರುಳಿಕಾಳಿನ ಪುಡಿ 6 ಟೀ ಚಮಚ ಹಾಕಿ, ಗಂಟಾಗದಂತೆ ಕೈಯಾಡಿಸಿ. ಸ್ವಲ್ಪ ಕುದಿ ಬಂದ ನಂತರ ಒಂದು ಟೀ ಚಮಚ ತುಪ್ಪ, ಚಿಟಿಕೆ ಉಪ್ಪು, ಏಲಕ್ಕಿ ಪುಡಿ, ಶುಂಠಿ ಪುಡಿ ಹಾಕಿ ಕೈಯಾಡಿಸಿ. ಬಳಿಕ ಒಂದು ಲೋಟ ಹಾಲನ್ನು ಹಾಕಿ ಚೆನ್ನಾಗಿ ಮಿಶ್ರ ಮಾಡಿ ಕೆಳಗಿಳಿಸಿ.

ಇದನ್ನು ಬಿಸಿ ಇರುವಾಗಲೂ ಕುಡಿಯಬಹುದು ತಣ್ಣಗೆ ಮಾಡಿಯೂ ಸವಿಯಬಹುದು. ಎರಡು ಬಗೆಯಲ್ಲೂ ರುಚಿಕರವಾಗಿರುತ್ತದೆ. ಉಷ್ಣದ ಗುಣ ಹೊಂದಿರುವುದರಿಂದ ಇದು ಚಳಿಗಾಲಕ್ಕೆ ಹೇಳಿಮಾಡಿಸಿದ ಪಾನೀಯ.

ಸ್ಪಂದನ

ಡಾ. ವೀಣಾ ಎಸ್. ಭಟ್

ಕೃತಕ ಗರ್ಭಧಾರಣೆ ಚಿಕಿತ್ಸೆ ಸುರಕ್ಷಿತವೇ?

• **ನಾನು 33 ವರ್ಷದ ಶಿಕ್ಷಕಿ. ಮದುವೆಯಾಗಿ ಮೂರೂವರೆ ವರ್ಷವಾದರೂ ಮಕ್ಕಳಾಗಿಲ್ಲ. ವೈದ್ಯರು 'ನಿಮ್ಮಿಬ್ಬರಿಗೂ ಗಂಭೀರವಾದ ತೊಂದರೆಯೇನಿಲ್ಲ' ಎಂದಿದ್ದಾರೆ. ಆದರೆ, ವಯಸ್ಸಾಗುತ್ತಿದೆ, ಕೃತಕ ಗರ್ಭಧಾರಣೆ ಚಿಕಿತ್ಸೆ ಪಡೆದುಕೋ ಎಂದು ಮನೆಯಲ್ಲಿ ಸಲಹೆ ನೀಡುತ್ತಿದ್ದಾರೆ. ಮಾತ್ರೆ, ಇಂಜೆಕ್ಷನ್ ಪಡೆಯಲು ಹೆದರಿಕೆ. ಈ ಚಿಕಿತ್ಸೆ ಸುರಕ್ಷಿತವೇ?**

ಸರಿತಾ, ಶಿವಮೊಗ್ಗ

ಋತು ಫಲಪ್ರದ ದಿನಗಳಲ್ಲಿ ನಿರಂತರವಾಗಿ ಲೈಂಗಿಕ ಸಂಪರ್ಕ ಮಾಡಿಯೂ ಪ್ರಯತ್ನ ಫಲಿಸದಿದ್ದರೆ, ಅಂಡಾಣು ಉತ್ಪಾದನೆಯ ಪ್ರಚೋದನೆಗೆ ಮಾತ್ರೆ ಬಳಸಿದ್ದರೂ ಗರ್ಭಧಾರಣೆ ಆಗಿಲ್ಲವೆಂದರೆ, ಐವಿಎಫ್ ತಜ್ಞರ ಸಲಹೆ ಪಡೆದು, ಸಂತಾನ ಪಡೆಯಬಹುದು. ಕೃತಕ ಗರ್ಭಧಾರಣೆ ಚಿಕಿತ್ಸೆಯು ತಜ್ಞರ ಮೇಲ್ವಿಚಾರಣೆಯಲ್ಲಿ ಇದ್ದಾಗ ಸುರಕ್ಷಿತವಾಗಿರುತ್ತದೆ. ಹಾಗಾಗಿ, ಭಯ ಬೇಡ. ಇನ್ನು ಎಲ್ಲ ಚಿಕಿತ್ಸೆಗಳಲ್ಲಿಯೂ ಅದರದ್ದೇ ಆದ ತೊಂದರೆಗಳಿರುತ್ತವೆ.

ಅಂಡೋತ್ಪತ್ತಿ ಪ್ರಚೋದಕ ಔಷಧಗಳನ್ನು ಬಳಸಿದಾಗ ಕೆಲವು ಬಾರಿ ಬಹುಗರ್ಭಧಾರಣೆ ಅಂದರೆ ಅವಳಿ, ತ್ರಿವಳಿಗಳಾಗಬಹುದು. ಯಾಕೆಂದರೆ ಈ ಸಂಬಂಧದ ಮಾತ್ರೆಗಳು ಒಂದಕ್ಕಿಂತ ಹೆಚ್ಚು ಕೋಶಿಕೆಗಳನ್ನು ಅಂದರೆ ಫಾಲಿಕಲ್‌ಗಳನ್ನು ಉತ್ತೇಜಿಸುವುದರಿಂದ ಈ ಅಪಾಯ ಹೆಚ್ಚು.

ಇನ್ನು ಐವಿಎಫ್‌ನಲ್ಲಿ ಒಂದಕ್ಕಿಂತ ಹೆಚ್ಚು ಭ್ರೂಣಗಳನ್ನು ಗರ್ಭಕ್ಕೆ ವರ್ಗಾಯಿಸಬೇಕಾಗಬಹುದು. ಆಗ ಅತಿಯಾದ ಕಾಳಜಿ ಅಗತ್ಯ. ಇವುಗಳಲ್ಲಿ ಗರ್ಭಪಾತ, ಅಕಾಲಿಕ ಶಿಶು ಜನನ, ಕಡಿಮೆ ತೂಕದ ಶಿಶು ಹುಟ್ಟುವುದು ಸೇರಿದಂತೆ ಹಲವು ಸವಾಲುಗಳು ಎದುರಾಗಬಹುದು. ಇದಕ್ಕೆ ತಜ್ಞರು ಸೂಕ್ತ ಚಿಕಿತ್ಸೆ ನೀಡುತ್ತಾರೆ.

ಅಪರೂಪಕ್ಕೊಮ್ಮೆ ಅಂಡಾಶಯ ಅತಿಯಾಗಿ ಉತ್ತೇಜನಗೊಂಡು (ಹೈಪರ್ ಸ್ಟಿಮ್ಯುಲೇಷನ್) ಹೊಟ್ಟೆನೋವು, ಅಂಡಾಶಯ ಊದಿಕೊಳ್ಳುವುದು ಇತ್ಯಾದಿ ಆದಾಗ ತುರ್ತಾಗಿ ಚಿಕಿತ್ಸೆ ಕೊಡಬೇಕಾಗಬಹುದು. ಅದನ್ನು ತಜ್ಞ ವೈದ್ಯರು ನಾಜೂಕಾಗಿ ನಿರ್ವಹಿಸುತ್ತಾರೆ.

ಇನ್ನು ಕೆಲವು ಬಾರಿ ಎಕ್ಟ್ರೋಪಿಕ್ ಗರ್ಭಧಾರಣೆ ಅಂದರೆ ಗರ್ಭನಾಳದಲ್ಲಿಯೇ ಭ್ರೂಣ ನೆಲಸುತ್ತದೆ. ಇದು ಸಹಜ ಗರ್ಭಧಾರಣೆಯಲ್ಲೂ ಆಗಬಹುದು. ಆದರೆ ಐವಿಎಫ್‌ನಲ್ಲಿ ಈ ಅಪಾಯ ಹೆಚ್ಚು. ಇನ್ನು ಐವಿಎಫ್ ಚಿಕಿತ್ಸೆ ತೆಗೆದುಕೊಂಡರೂ ಯಶಸ್ಸು ಸಿಗದೇ ಇರಬಹುದು. ಪ್ರತಿ ಋತುಚಕ್ರದಲ್ಲಿ ಐವಿಎಫ್ ಯಶಸ್ಸು ಶೇ 35ರಿಂದ 40ರಷ್ಟು ಮಾತ್ರ. 35ರ ವಯಸ್ಸಿನ ನಂತರ ಈ ಫಲಿತಾಂಶದ ಪ್ರಮಾಣ ಇನ್ನಷ್ಟು ಕಡಿಮೆಯಾಗುತ್ತದೆ. ಭಯ, ಆತಂಕ, ಕೋಪ, ದುಃಖ ಎಲ್ಲವನ್ನೂ ಆಪ್ತಸಮಾಲೋಚನೆ ಮೂಲಕ ನಿವಾರಿಸಿಕೊಳ್ಳಿ. ಭಾವನಾತ್ಮಕವಾಗಿ ದೃಢವಾಗಿ. ಸಹಜವಾಗಿ ಮಗು ಪಡೆಯಲು ಪ್ರಯತ್ನಿಸಿ. ಅವಶ್ಯವಿದ್ದಲ್ಲಿ ಮಾತ್ರ ಐವಿಎಫ್ ಮೊರೆ ಹೋಗಿ.

'ಕುಕ್ಕೆ' ಅತ್ಯಂತ ಶ್ರೀಮಂತ ದೇಗುಲ

ರಾಜ್ಯದ ಧಾರ್ಮಿಕ ದತ್ತಿ ಇಲಾಖೆ ಸುಪರ್ದಿಯ ದೇವಾಲಯಗಳಲ್ಲಿ ವರಮಾನ ಹೆಚ್ಚಳ

• ಸಿದ್ದು ಆರ್.ಜಿ.ಹಳ್ಳಿ

ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ದೇವರ ಬ್ರಹ್ಮರಥೋತ್ಸವದ ನೋಟ (ಸಂಗ್ರಹ ಚಿತ್ರ)

ಆದಾಯದಿಂದ ದೇವಾಲಯಗಳ ಸಮಗ್ರ ಅಭಿವೃದ್ಧಿ ಮತ್ತು ಭಕ್ತರಿಗೆ ಸೌಕರ್ಯ ಕಲ್ಪಿಸಲಾಗಿದೆ. ಅಗತ್ಯವಿದ್ದಲ್ಲಿ ಹೆಚ್ಚುವರಿ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುತ್ತದೆ
ರಾಮಲಿಂಗಾರೆಡ್ಡಿ, ಮುಜರಾಯಿ ಸಚಿವ

ಮುಖ್ಯಾಂಶಗಳು

- ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿ 34,566 ದೇವಾಲಯಗಳು
- 'ಎ' ವರ್ಗದ ದೇವಾಲಯಗಳಿಂದ ₹798 ಕೋಟಿ ವಾರ್ಷಿಕ ಆದಾಯ

2024–25ನೇ ಸಾಲಿನ ರಾಜ್ಯದ 10 ಶ್ರೀಮಂತ ದೇವಾಲಯಗಳು (₹ಕೋಟಿಗಳಲ್ಲಿ)

ದೇವಾಲಯಗಳು	ವಾರ್ಷಿಕ ಆದಾಯ
ಕುಕ್ಕೆ ಸುಬ್ರಹ್ಮಣ್ಯ	155
ಕೊಲ್ಲೂರು ಮೂಕಾಂಬಿಕಾ	71
ಮೈಸೂರಿನ ಚಾಮುಂಡೇಶ್ವರಿ	50
ನಂಜನಗೂಡಿನ ಶ್ರೀಕಂಠೇಶ್ವರ	36
ಸವದತ್ತಿಯ ರೇಣುಕಾ ಯಲ್ಲಮ್ಮ	30
ಎಡಿಯೂರು ಸಿದ್ದಲಿಂಗೇಶ್ವರ	29
ಕೊಪ್ಪಳದ ಹುಲಿಗೆಮ್ಮ	17
ಬ್ರಹ್ಮಾವರದ ಮಂದಾರ್ತಿ ದುರ್ಗಾಪರಮೇಶ್ವರಿ	16
ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯ	13
ಬೆಂಗಳೂರಿನ ಬನಶಂಕರಿ	11

ಮಂಡ್ಯ: ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವಾಲಯ ಆದಾಯ ಗಳಿಕೆಯಲ್ಲಿ 'ಅತ್ಯಂತ ಶ್ರೀಮಂತ' ಎನಿಸಿದೆ. 2022-23ರಲ್ಲಿ ₹123 ಕೋಟಿ, 2023-24ರಲ್ಲಿ ₹146 ಕೋಟಿ, 2024-25ರಲ್ಲಿ ₹155 ಕೋಟಿ ಆದಾಯದೊಂದಿಗೆ ಮೊದಲ ಸ್ಥಾನದಲ್ಲಿದೆ.

ಕೊಲ್ಲೂರು ಮೂಕಾಂಬಿಕಾ ದೇವಾಲಯ ಮತ್ತು ಮೈಸೂರಿನ ಚಾಮುಂಡೇಶ್ವರಿ ದೇವಾಲಯ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿವೆ.

ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34,566 ದೇವಾಲಯಗಳಿದ್ದು, ಇವುಗಳಲ್ಲಿ 205 ದೇವಾಲಯಗಳು 'ಎ' ವರ್ಗ, 193 ದೇವಾಲಯಗಳು 'ಬಿ' ವರ್ಗ ಹಾಗೂ 34,168 ದೇವಾಲಯಗಳು 'ಸಿ' ವರ್ಗದಲ್ಲಿವೆ.

ಆದಾಯ ಹೆಚ್ಚಳ: ಮೂರು ವರ್ಷಗಳಿಂದ ವರ್ಷದಿಂದ ವರ್ಷಕ್ಕೆ ದೇವಾಲಯಗಳ ವರಮಾನ ಹೆಚ್ಚಳವಾಗುತ್ತಿದೆ. ರಾಜ್ಯದ ಪ್ರಮುಖ 10 ದೇವಸ್ಥಾನಗಳಿಂದ 2022–23ರಲ್ಲಿ ₹368 ಕೋಟಿ, 2023–24ರಲ್ಲಿ ₹418 ಕೋಟಿ ಹಾಗೂ 2024–25ರಲ್ಲಿ ₹433 ಕೋಟಿ ಆದಾಯ ಗಳಿಕೆಯಾಗಿದೆ.

'ಕಳೆದ ಮೂರು ವರ್ಷಗಳಲ್ಲಿ 'ಎ' ವರ್ಗದ ದೇವಾಲಯಗಳಿಂದ ₹2,216 ಕೋಟಿ ಮತ್ತು 'ಬಿ' ವರ್ಗದ ದೇವಾಲಯಗಳಿಂದ ₹103 ಕೋಟಿ ಆದಾಯ ಬಂದಿದೆ. 25,171 ಪ್ರವರ್ಗ 'ಸಿ' ದೇವಾಲಯಗಳಿಗೆ ವಾರ್ಷಿಕ ₹72 ಸಾವಿರಗಳ ತಸ್ತೀಕ್ ಮೊತ್ತವನ್ನು ಹಾಗೂ ತಸ್ತೀಕ್ ಪಡೆಯದಿರುವ ಒಟ್ಟು 3,721 ದೇವಾಲಯಗಳಿಗೆ ವಾರ್ಷಿಕ ₹72 ಸಾವಿರ ವರ್ಷಾಸನವನ್ನು ನೀಡಲಾಗುತ್ತಿದ್ದು, ಇದು ಆ ದೇವಾಲಯಗಳ ವಾರ್ಷಿಕ ಆದಾಯವಾಗಿದೆ' ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮೂಲಸೌಕರ್ಯಕ್ಕೆ ಒತ್ತು: 'ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯ ದೇವಾಲಯಗಳಿಗೆ ಬರುವ ಭಕ್ತರ ಅನುಕೂಲಕ್ಕಾಗಿ ಮೂಲಸೌಕರ್ಯ ಕಲ್ಪಿಸಲು ಆದ್ಯತೆ ನೀಡಲಾಗಿದೆ. ಶುದ್ಧ ಕುಡಿಯುವ ನೀರು, ಶೌಚಾಲಯ, ವಸತಿ ಸೌಲಭ್ಯ, ಅನ್ನದಾಸೋಹ (ಪ್ರಸಾದ), ನಾಮಫಲಕ ಅಳವಡಿಕೆ, ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ಪ್ರತ್ಯೇಕ ದರ್ಶನ ವ್ಯವಸ್ಥೆ, ವಿಶ್ರಮಿಸಲು ನೆರಳು ಮತ್ತು ಆಸನ, ಭದ್ರತಾ ದೃಷ್ಟಿಯಿಂದ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಮೊದಲಾದ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಮೂರು ವರ್ಷಗಳಲ್ಲಿ ಅನ್ನದಾಸೋಹ ಮತ್ತು ಮೂಲಸೌಕರ್ಯಕ್ಕಾಗಿ 'ಎ' ವರ್ಗದ ದೇವಾಲಯಗಳಿಗೆ ₹1,647 ಕೋಟಿ ಮತ್ತು 'ಬಿ' ವರ್ಗದ ದೇವಾಲಯಗಳಿಗೆ ₹76 ಕೋಟಿ ವೆಚ್ಚ ಭರಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕಟಾವು ಆಗಿದ್ದ ಭತ್ತದ ಗದ್ದೆಯಲ್ಲಿ ಮಳೆಯಿಂದಾಗಿ ನೀರು ನಿಂತಿದೆ

ಅಕಾಲಿಕ ಮಳೆ: ನೂರಾರು ಎಕರೆ ಭತ್ತ ಬೆಳೆ ಹಾನಿ

ಮಳವಳ್ಳಿ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕಸಬಾ, ಹಲಗೂರು ಹೋಬಳಿಯ ವಿವಿಧೆಡೆ ಗುರುವಾರ ರಾತ್ರಿ ಅಕಾಲಿಕ ಧಾರಾಕಾರ ಮಳೆಯಾಗಿದ್ದು, ನೂರಾರು ಎಕರೆಯಲ್ಲಿ ಭತ್ತದ ಬೆಳೆ ಮುಳುಗಿದೆ.

ತಾಲ್ಲೂಕಿನ ನೆಲಮಾಕನಹಳ್ಳಿ, ತಳಗವಾದಿ, ಮಾದಹಳ್ಳಿ, ಗುಳಘಟ್ಟ, ಕಂದೇಗಾಲ, ನೆಲ್ಲೂರು, ದುಗ್ಗನಹಳ್ಳಿ ತಾಲ್ಲೂಕಿನ ಬಹುತೇಕ ಕಡೆ ಮಧ್ಯರಾತ್ರಿ 2 ಗಂಟೆ ಕಾಲ ಮಳೆಯಾಯಿತು.

'ರೈತರಿಗೆ ಪ್ರತಿ ಎಕರೆಗೆ ಕನಿಷ್ಠ ₹30 ಸಾವಿರ ಪರಿಹಾರ ನೀಡಬೇಕು' ಎಂದು ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಎಲ್.ಎನ್. ಭರತ್ ರಾಜ್ ಆಗ್ರಹಿಸಿದ್ದಾರೆ.

ಚಾಮರಾಜನಗರ; ಬಿರುಸು ಮಳೆ: ಜಿಲ್ಲೆಯ ಹಲವೆಡೆ ಶುಕ್ರವಾರ ಬೆಳಿಗ್ಗೆ ಬಿರುಸಿನ ಮಳೆಯಾಯಿತು. ನಗರದಲ್ಲಿ ಜೋರು ಮಳೆಯಾದರೆ, ಯಳಂದೂರು, ಸಂತೇಮರಹಳ್ಳಿ ಹಾಗೂ ಗುಂಡ್ಲುಪೇಟೆಯಲ್ಲಿ ಸಾಧಾರಣ ಮಳೆ ಬಿತ್ತು.

ವರದಿ ಬಳಿಕ ಸಫಾರಿ: ಸಿ.ಎಂ

ಬಂಡೀಪುರ, ನಾಗರಹೊಳೆಯಲ್ಲಿ ಪುನರಾರಂಭಕ್ಕೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಪ್ರದೇಶಗಳಲ್ಲಿ ಸಫಾರಿಯನ್ನು ಪುನರಾರಂಭಿಸುವ ಸಾಧಕ–ಬಾಧಕಗಳ ಅಧ್ಯಯನಕ್ಕಾಗಿ ವನ್ಯಜೀವಿ ತಜ್ಞರ ಸಮಿತಿ ರಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಕರ್ನಾಟಕ ವನ್ಯಜೀವಿ ಮಂಡಳಿ ಸಭೆ ನಿರ್ಧರಿಸಿದೆ.

ಸಭೆಯ ನಂತರ ಈ ಕುರಿತು ಮಾಹಿತಿ ನೀಡಿದ ಅರಣ್ಯ ಸಚಿವ ಈಶ್ವರ ಖಂಡ್ರೆ, 'ಸಫಾರಿ ವಾಹನಗಳ ಹಾವಳಿಯಿಂದ ವನ್ಯಜೀವಿಗಳು ಕಾಡಿನಿಂದ ಹೊರಗೆ ಬರುತ್ತಿವೆ. ವಾಹನಗಳ ಬೆಳಕಿಗೆ ವನ್ಯಜೀವಿಗಳು ವಿಚಲಿತವಾಗುತ್ತಿವೆ ಎಂಬ ಸ್ಥಳೀಯರ ಹಾಗೂ ರೈತರ ದೂರುಗಳನ್ನು ಪರಿಶೀಲಿಸಿ, ವರದಿ ನೀಡಲಿದೆ. ನಂತರ ಬಂಡೀಪುರ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿ ಪುನರಾರಂಭಿಸುವ ಕುರಿತು ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದರು.

'ಅಕ್ಟೋಬರ್, ನವೆಂಬರ್‌ನಲ್ಲಿ ಹುಲಿಗಳ ದಾಳಿಯಿಂದ ಮೂವರು ಮೃತಪಟ್ಟು, ಒಬ್ಬರು ಅಂಗವಿಕಲರಾಗಿದ್ದಾರೆ. ಈ ಘಟನೆಗೆ ಸಫಾರಿ ಕಾರಣ ಎನ್ನುವುದು ಸ್ಥಳೀಯರ ಆರೋಪ. ಹೀಗಾಗಿ, ಮುಂದಿನ ಆದೇಶದವರೆಗೆ ಬಂಡೀಪುರ, ನಾಗರಹೊಳೆಯಲ್ಲಿ ಸಫಾರಿ ಸ್ಥಗಿತಗೊಳಿಸಲು ಆದೇಶ ಹೊರಡಿಸಲಾಗಿತ್ತು. ಸ್ಥಗಿತದ ನಂತರ ಕಾಡಿನ ಹೊರಗೆ ಹುಲಿ ದಾಳಿ ನಡೆದಿಲ್ಲ, ಜೀವಹಾನಿ ಆಗಿಲ್ಲ' ಎಂದು ವಿವರಿಸಿದರು.

'1972ರಲ್ಲಿ ಬಂಡೀಪುರ ವ್ಯಾಪ್ತಿಯಲ್ಲಿ 12 ಹುಲಿಗಳು ಇದ್ದವು. ಪ್ರಸ್ತುತ ಹುಲಿಗಳ ಸಂಖ್ಯೆ ಸುಮಾರು 200 ಇದೆ. ಒಂದು ಹುಲಿ ಸ್ವಚ್ಛಂದವಾಗಿ ಜೀವಿಸಲು 10 ಚದರ ಕಿ.ಮೀ ಪ್ರದೇಶ ಬೇಕು ಎಂದು ತಜ್ಞರು ಹೇಳುತ್ತಾರೆ. ಆದರೆ, 900 ಚದರ ಕಿ.ಮೀ ಕಾಡಿನಲ್ಲಿ ದುಪ್ಪಟ್ಟು ಹುಲಿಗಳಿವೆ. ಹುಲಿಗಳು ಕಾಡು ತೊರೆಯಲು ಇದೂ ಕಾರಣ ಇರಬಹುದು' ಎಂದರು.

ವನ್ಯಜೀವಿ ರಾಯಭಾರಿ ಅನಿಲ್ ಕುಂಬ್ಳೆ, 'ವನ್ಯಜೀವಿಗಳು ಕಾಡಿನಿಂದ ಹೊರಗೆ ಬರುವುದಕ್ಕೂ, ಸಫಾರಿಗೂ ಸಂಬಂಧವಿಲ್ಲ, ಸಫಾರಿಗೆ ಕೇವಲ ಶೇ 8 ರಷ್ಟು ಅರಣ್ಯ ಪ್ರದೇಶವೂ ಬಳಕೆ ಆಗುತ್ತಿಲ್ಲ. ಸ್ಥಳೀಯರ ಜೀವನೋಪಾಯವೂ ಇದರಲ್ಲಿ ಅಡಗಿದೆ. ಹೀಗಾಗಿ ಪುನರ್ ಪರಿಶೀಲಿಸಲು ಕೋರಲಾಗಿದೆ' ಎಂದರು.

'ಸ್ವಜಾತಿ ಪಕ್ಷಪಾತ ಮಾಡಬೇಡಿ'

ಸಿದ್ದರಾಮಯ್ಯ

'ಅಧಿಕಾರಿಗಳು ಜಾತ್ಯತೀತವಾಗಿ ಕಾರ್ಯನಿರ್ವಹಿಸಬೇಕು. ಸ್ವಜಾತಿ ಪಕ್ಷಪಾತ ಮಾಡಬೇಡಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಕೆಎಎಸ್ ಅಧಿಕಾರಿಗಳ ಸಂಘದ ಕ್ಯಾಲೆಂಡರ್ ಹಾಗೂ ದಿನಚರಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, 'ಸ್ವಾತಂತ್ರ್ಯ ಬಂದು ಏಳು ದಶಕ ಕಳೆದರೂ ಜಾತಿ ವ್ಯವಸ್ಥೆ ನಿರ್ಮೂಲನೆಯಾಗಿಲ್ಲ. ರಾಜ್ಯದಲ್ಲಿನ ಬಡವರು, ದಲಿತರು, ಅಲ್ಪಸಂಖ್ಯಾತರ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು. ಎಲ್ಲರಿಗೂ ಸಮಾನ ಅವಕಾಶ ನೀಡಬೇಕು. ಜಾತಿ ಮತ್ತು ವರ್ಗ ವ್ಯವಸ್ಥೆ ಅಳಿಯಬೇಕು. ಆಗಮಾತ್ರ ಸಮಸಮಾಜ ನಿರ್ಮಾಣ ಸಾಧ್ಯ' ಎಂದರು.

ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಎಲ್ಲರಿಗೂ ನ್ಯಾಯ ಒದಗಿಸಬೇಕು. ಬಡವರ ಹಕ್ಕುಗಳ ರಕ್ಷಣೆಗೆ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಬಾಂಗ್ಲಾ ವಲಸಿಗರಾಗಿದ್ದರೆ ಜೈಲಿಗೆ ಹಾಕಲಿ: ಸಚಿವ ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಮಾಲೂರು (ಕೋಲಾರ): 'ಬೆಂಗಳೂರು ಸಮೀಪದ ಕೋಗಿಲು ಬಡಾವಣೆಯಲ್ಲಿ ನೆಲಸಿರುವವರು ಬಾಂಗ್ಲಾ ದೇಶದವರು ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಹಾಗಾದರೆ ಕೇಂದ್ರ ಸರ್ಕಾರ ಏನು ಮಾಡುತ್ತಿದೆ?' ಎಂದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶುಕ್ರವಾರ ಪ್ರಶ್ನಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಏನು ಮಾಡುತ್ತಿದ್ದಾರೆ. ಏಕೆ ಅವರನ್ನು ಇಲ್ಲಿಯವರೆಗೆ ಬರಲು ಬಿಟ್ಟರು? ಬಾಂಗ್ಲಾದಿಂದ ಅಕ್ರಮವಾಗಿ ಬಂದಿದ್ದರೆ ಬಂಧಿಸಿ ಜೈಲಿಗೆ ಹಾಕಲಿ' ಎಂದು ಸವಾಲು ಹಾಕಿದರು.

ತಾಲ್ಲೂಕಿನ ತೋರ್ನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದವರು ಅಥವಾ ಅಕ್ಕಪಕ್ಕದ ರಾಜ್ಯದವರು ಆಗಿದ್ದರೆ ಅರ್ಹರಿಗೆ ಮನೆ ನೀಡಬೇಕಾಗುತ್ತದೆ' ಎಂದು ಹೇಳಿದರು.

ಬೆಂಗಳೂರು ಸುತ್ತಮುತ್ತ ಬಿಜೆಪಿ ಶಾಸಕರು ಭೂ ಮಂಜೂರಾತಿ ಸಮಿತಿ ಮೂಲಕ ಸಾವಿರಾರು ಎಕರೆಯನ್ನು ಕಾರ್ಯಕರ್ತರಿಗೆ ನೀಡಿದ್ದಾರೆ. ಸಿಬಿಐ ತನಿಖೆ ನಡೆಸಿದರೆ ಎಲ್ಲವೂ ಹೊರಗೆ ಬರುತ್ತದೆ ಎಂದು ಹೇಳಿದರು.

ಯುವ ಸಾಹಿತ್ಯ ಪುಸ್ತಕ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಫೌಝಿಯಾ ಸಲೀಮ್

ಕಾವ್ಯಾ ಕಡಮೆ

ಗೋವಿಂದರಾಜು ಕಲ್ಲೂರ

ಜಯರಾಮಚಾರಿ

ಅರುಣಕುಮಾರ ಹಬ್ಬು

ಬೆಳಗಾವಿ: ಇಲ್ಲಿನ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ 2023 ಮತ್ತು 2024ನೇ ಸಾಲಿನ 'ಬಸವರಾಜ ಕಟ್ಟೀಮನಿ ಯುವ ಸಾಹಿತ್ಯ ಪುಸ್ತಕ ಪ್ರಶಸ್ತಿ' ಪುರಸ್ಕೃತರ ವಿವರ ಪ್ರಕಟಿಸಿದೆ.

2023ನೇ ಸಾಲಿನ ಪ್ರಶಸ್ತಿಗೆ ಕತೆ ಪ್ರಕಾರದಲ್ಲಿ ಕಾಸರಗೋಡಿನ ಗೋವಿಂದರಾಜು ಕಲ್ಲೂರ ಅವರ 'ನಕ್ಷತ್ರಕ್ಕಂಟಿದ ಮುಟ್ಟಿನ ನೆತ್ತರು' ಕಥಾಸಂಕಲನ, ಕಾದಂಬರಿ ಪ್ರಕಾರದಲ್ಲಿ ಮಂಗಳೂರಿನ ಫೌಝಿಯಾ ಸಲೀಮ್ ಅವರ 'ನೀ ದೂರ ಹೋದಾಗ' ಕೃತಿ ಆಯ್ಕೆಯಾಗಿವೆ.

2024ನೇ ಸಾಲಿನ ಕತೆ ಪ್ರಕಾರದಲ್ಲಿ ಹುಬ್ಬಳ್ಳಿಯ ಕಾವ್ಯಾ ಕಡಮೆ ಅವರ 'ತೊಟ್ಟು ಕ್ರಾಂತಿ' ಕಥಾಸಂಕಲನ, ಕಾದಂಬರಿ ಪ್ರಕಾರದಲ್ಲಿ ಬೆಂಗಳೂರಿನ ಜಯರಾಮಚಾರಿ ಅವರ 'ಕಿಲಿಗ್' ಕೃತಿ ಆಯ್ಕೆಯಾಗಿವೆ. ಪ್ರಶಸ್ತಿ ತಲಾ ₹10 ಸಾವಿರ ನಗದು ಬಹುಮಾನ ಹೊಂದಿವೆ.

ಮಲ್ಲಿಕಾರ್ಜುನ ಹಿರೇಮಠ ಸ್ಥಾಪಿಸಿರುವ ದತ್ತಿನಿಧಿಯ ಬಸವರಾಜ ಕಟ್ಟೀಮನಿ ಆತ್ಮಕಥಾ ಪುಸ್ತಕ ಪ್ರಶಸ್ತಿಗೆ ಹುಬ್ಬಳ್ಳಿಯ ಅರುಣಕುಮಾರ ಹಬ್ಬು ಅವರ 'ಬೊಗಸೆ ನೀರು' ಕೃತಿ ಆಯ್ಕೆಯಾಗಿದೆ. ಇದು ₹20 ಸಾವಿರ ನಗದು ಬಹುಮಾನ ಒಳಗೊಂಡಿದೆ. ಧಾರವಾಡದಲ್ಲಿ ಜ. 18ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

14ರಿಂದ ಶರಣ ಸಂಸ್ಕೃತಿ ಉತ್ಸವ

ಹಾವೇರಿ: 'ತಾಲ್ಲೂಕಿನ ನರಸೀಪುರದ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದಿಂದ ಜ. 14 ಮತ್ತು 15ರಂದು 'ಅಂಬಿಗರ 10ನೇ ಶರಣ ಸಂಸ್ಕೃತಿ ಉತ್ಸವ–2026' ಹಾಗೂ 'ವಚನ ಗ್ರಂಥ ಮಹಾ ರಥೋತ್ಸವ' ನಡೆಯಲಿದೆ' ಎಂದು ಗುರುಪೀಠದ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಹೇಳಿದರು.

'ಅಂಬಿಗರ ಚೌಡಯ್ಯನವರ ಶಿಲಾಮಂಟಪ, ಕಂಚಿನ ಪುತ್ಥಳಿ ಲೋಕಾರ್ಪಣೆ ಹಾಗೂ ಮಹರ್ಷಿ ವೇದವ್ಯಾಸ ಕಲ್ಯಾಣ ಮಂಟಪದ ಉದ್ಘಾಟನೆಯೂ ನಡೆಯಲಿದೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. 'ಸಮುದಾಯಕ್ಕೆ ಎಸ್.ಟಿ. ಮೀಸಲಾತಿ ನೀಡುವಂತೆ ಸರ್ಕಾರಕ್ಕೆ ಕೋರಲಾಗುವುದು' ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ
ತೋಟಗಾರಿಕೆ ನಿರ್ದೇಶನಾಲಯ, ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು–76. ದೂರವಾಣಿ: 080–26582775.
ಇ–ಮೇಲ್ : ddhbiotech3@gmail.com

ಟೆಂಡರ್ ಪ್ರಕಟಣೆ
ಜೈವಿಕ ಕೇಂದ್ರ, ಹುಳಿಮಾವು, ತೋಟಗಾರಿಕೆ ಇಲಾಖೆ ಇಲ್ಲಿಗೆ ವಿದ್ಯುಚ್ಛಕ್ತಿಗಾಗಿ ಸೋಲಾರ್ ರೂಫ್ ಟಾಪ್ ಅಳವಡಿಸಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು http://www.kppp.karnataka.gov.in ವೆಬ್‌ಸೈಟ್‌ನ ಟೆಂಡರ್ ಸಂಖ್ಯೆ: **KSHD/2025-26/OW/WORK_INDENT39** ರಲ್ಲಿ ಪಡೆಯಬಹುದಾಗಿರುತ್ತದೆ. ಬಿಡ್ ಸಲ್ಲಿಸಬಹುದಾದ ಅವಧಿ ದಿನಾಂಕ: **31.12.2025 ರಿಂದ 15.01.2026 ರ ಸಂಜೆ 5.30 ಘಂಟೆ.** ಈ ಕಛೇರಿಯಲ್ಲಿ ಪ್ರಿ – ಬಿಡ್ (Prebid) ಸಭೆಯು: **ದಿನಾಂಕ:07.01.2026 ರಂದು ಬೆಳಗ್ಗೆ 11–30 ಘಂಟೆಗೆ** ನಡೆಯಲಿದೆ.
ಸಹಿ/–
ವಾಸಾಸಂಇ/ವಾ.ಪ್ರ./4783/ಎಂಎಪಿ/25–26 ತೋಟಗಾರಿಕೆ ಉಪ ನಿರ್ದೇಶಕರು (ಅಂಗಾಂಶ ಕೃಷಿ)

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ ಎ+ ಮಾನ್ಯತೆ
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು–560065
ದೂರವಾಣಿ : GKVK: 2330153-250, Direct : 23332765
Email : eo@uasbangalore.edu.in, Website: www.uasbangalore.edu.in
ಸಂ:ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/13/2025–26 ದಿ:30–12–2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ **ಉಪಕರಣಗಳನ್ನು**, ಸರಬರಾಜು ಮಾಡಲು ಕೆ.ಜಿ–1, ಮತ್ತು ಕೆ.ಜಿ–2, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.
ವಿವರ: ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 14–01–2026 ಸಂಜೆ 4.00 ಘಂಟೆಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16–01–2026 ಸಮಯ ಬೆಳಗ್ಗೆ 10.30ಕ್ಕೆ, ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 19–01–2026 ಸಮಯ ಬೆಳಗ್ಗೆ 10.30ಕ್ಕೆ. ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ.
ಸೂಚನೆ: ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: https://kppp.karnataka.gov.in ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು, ಕಛೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ. 91–8046010000, +91–8068948777 09240214000/09240214001 support@eprochelpdesk.com ಅಥವಾ www.uasbangalore.edu.in ದೂರವಾಣಿ ಸಂಖ್ಯೆ: 23630128 ಅನ್ನು ಸಂಪರ್ಕಿಸಬಹುದು.
ಸಹಿ/–
ವಾಸಾಸಂಇ/ವಾಪ್ರ/ಜಿಎ/4805/2025–26 ಆಸ್ತಿ ಅಧಿಕಾರಿಗಳು

ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಬೆಂಗಳೂರು–560 009, ದೂರವಾಣಿ ಸಂ: 080–22876553, ಫ್ಯಾಕ್ಸ್:080–22340139, ಇ–ಮೇಲ್: karnatakanam@gmail.com
ಸಂಖ್ಯೆ: AYUSH/469/DLA1/2024 Date: 02-01-2026

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)
2025–26ನೇ ಸಾಲಿಗೆ ಸಂಬಂಧಿಸಿದಂತೆ ಅಲ್ಪಾವಧಿ ಮರು ಇ–ಟೆಂಡರ್ ಮೂಲಕ ಅನುಮೋದಿತ ಪ್ರಯೋಗಾಲಯಗಳಿಂದ ಔಷಧಗಳನ್ನು ಪರೀಕ್ಷಿಸಿ ವಿಶ್ಲೇಷಣ ವರದಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಮೂಲಕ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಾಗಿ, ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿ ವೇಳೆಯಲ್ಲಿ (ರಜಾದಿನಗಳನ್ನು ಹೊರತುಪಡಿಸಿ) ನೋಡಬಹುದಾಗಿದೆ.

ಇ–ಟೆಂಡರ್ ಪ್ರಕ್ರಿಯೆ :

1.	ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ	02.01.2026 ಸಂಜೆ 5:30 ಗಂಟೆಗೆ
2.	ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	12.01.2026ರ ಸಂಜೆ 4:30 ಗಂಟೆಗೆ
3.	ಟೆಂಡರ್ ತೆರೆಯುವ (ತಾಂತ್ರಿಕ ಬಿಡ್) ದಿನಾಂಕ	13.01.2026ರ ಸಂಜೆ 5:00 ಗಂಟೆಗೆ

ಸಹಿ/– ಲೆಕ್ಕಪತ್ರ ಅಧಿಕಾರಿ/ಅಧ್ಯಕ್ಷರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
DIPR/CP/RO4795/AAPL/2025-26 ಆಯುಷ್ ನಿರ್ದೇಶನಾಲಯ, ಬೆಂಗಳೂರು.

ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
9ನೇ ಮಹಡಿ, ವಿ.ವಿ. ಚಿಕ್ಕ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001. ಫೋನ್: 080–22868870, 22867097, 22865192 ಫ್ಯಾಕ್ಸ್ : 080–22860396, ಇ–ಮೇಲ್: mdadcl2011@gmail.com
ಸಂಖ್ಯೆ:ಎಡಿಸಿಎಲ್/ಫುಡ್‌ಕಾರ್ಟ್/ಟೆಂಡರ್/2025–26/6541 ದಿನಾಂಕ:02.01.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇವರು 2025–26ನೇ ಸಾಲಿಗೆ ಕರ್ನಾಟಕ ರಾಜ್ಯದ ನಗರಗಳಲ್ಲಿ ಸ್ವ–ಉದ್ಯೋಗ–ಉದ್ಯಮಶೀಲತಾ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ **ಇವಿ ಫುಡ್‌ಕಾರ್ಟ್‌ಗಳನ್ನು (ಎಲೆಕ್ಟ್ರಿಕಲ್ ಫಾಸ್ಟ್ ಫುಡ್ ಟ್ರಕ್ ಟ್ರೇಲರ್‌ಗಳು / ಮೊಬೈಲ್ ಕಿಚನ್, ಫುಡ್ ಕಿಯೋಸ್ಕ್)** ಪೂರೈಸಲು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಆಸಕ್ತ ತಯಾರಕರಿಂದ (OEMs) ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ಡರ್‌ಗಳು ಮೇಲೆ ತಿಳಿಸಿದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳುವುದು.
ಟೆಂಡರ್‌ಗೆ ನಿಗದಿಪಡಿಸಲಾದ ಮೊತ್ತ: **ರೂ. 63.05 ಕೋಟಿಗಳು.** ಇಎಂಡಿ ಮೊತ್ತ **ರೂ. 63.00 ಲಕ್ಷಗಳು.** ಬಿಡ್ ಪೂರ್ವ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **13/01/2026 ರಂದು ಸಂಜೆ 05.00 ಗಂಟೆಯವರೆಗೆ.** ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: **12/01/2026 ರಂದು ಬೆಳಿಗ್ಗೆ 11.30 ಗಂಟೆಗೆ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **03/02/2026 ರಂದು ಸಂಜೆ 05.00 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **06/02/2026 ರಂದು ಬೆಳಿಗ್ಗೆ 11.00 ಗಂಟೆಗೆ.** ಬಿಡ್ಡರ್‌ಗಳ ಡೆಮೋ ವಾಹನಗಳ ಪ್ರದರ್ಶನ ಮತ್ತು ತಾಂತ್ರಿಕ ಸಮಿತಿಯಿಂದ ಮೌಲ್ಯಮಾಪನ: **04/02/2026 ರಂದು ಬೆಳಿಗ್ಗೆ 11.30 ಗಂಟೆಗೆ (ತಾತ್ಕಾಲಿಕ).** ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **10/02/2026 ರಂದು ಬೆಳಿಗ್ಗೆ 11.00 ಗಂಟೆಗೆ (ತಾತ್ಕಾಲಿಕ).** ಬಿಡ್ ಪೂರ್ವಭಾವಿ ಸಭೆಯ ಸ್ಥಳ, ಟೆಂಡರ್ ತೆರೆಯುವಿಕೆ ಮತ್ತು ಸಂಪರ್ಕಿಸುವ ವಿಳಾಸ: **ಮೇಲ್ಕಂಡ ಕಚೇರಿ ವಿಳಾಸದಲ್ಲಿ.**
ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ಡರ್‌ಗಳು https://kppp.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
ಸಹಿ/–
ವಾಸಾಸಂಇ/ವಾಪ್ರ/ಜಿಎ/4806/2025–26 ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ – ಕೃಷಿ ಮಾರಾಟ ಇಲಾಖೆ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಾಗರ
ಈಳಿ ರಸ್ತೆ, ಸಾಗರ–577401
ಸಂಖ್ಯೆ: ಕೃಮಾಇ/ಕೃಉಮಾಸ(ಸಾ)/ಅಭಿವೃದ್ಧಿ/673/2025–26 ದಿ:30–12–2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಲೋಕೋಪಯೋಗಿ ಇಲಾಖೆ ನೋಂದಾಯಿತ ಹಾಗೂ KW–3 ರಂತೆ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಸಾಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಸಾಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರಸ್ತುತ ಶಿಥಿಲಗೊಂಡಿರುವ ಆವಣಗೋಡೆಯನ್ನು ಕೆಡವಿ ಹೊಸ ಗೋಡೆಯನ್ನು ನಿರ್ಮಾಣ ಮಾಡುವ 3 ನೇ ಹಂತದ ಕಾಮಗಾರಿಯು ಟೆಂಡರ್ ಆಹ್ವಾನಿಸಲಾಗಿದೆ.(I.No-735, KW-3) ಟೆಂಡರಿಗಿಟ್ಟ ಮೊತ್ತ ರೂ.65,82,291/–, ಇಎಂಡಿ ಮೊತ್ತ ರೂ.1,31,700/–. ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು **:02–01–2026 ರಿಂದ ದಿ:17–01–2026** ಕಾಲಾವಧಿ: 03–ತಿಂಗಳು (ಮಳೆಗಾಲ ಹೊರತುಪಡಿಸಿ). ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ: 08183– 295057&200170)ಮಾಹಿತಿ ಪಡೆಯಬಹುದು.
ಸಹಿ/– ಕಾರ್ಯದರ್ಶಿಕೃ.ಉ.ಮಾ.ಸ., ಸಾಗರ. ಸಹಿ/– ಆಡಳಿತಾಧಿಕಾರಿ ಕೃ.ಉ.ಮಾ.ಸ., ಸಾಗರ.
ಎಸ್‌ಎಂಸಿಎ/ಕೆಎಸ್‌ಎಂಸಿಎ/ಶಿ/16/01/1513

ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಜಿಲ್ಲಾಡಳಿತ ಭವನ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ – 562110
ಇ–ಮೇಲ್: eerdwsd.bngr1@gmail.com; ದೂ: 080–29787463
ಸಂ: ಕಾಇಂ/ಗ್ರಾ.ಕು.ನೀ&ನೈವಿ/ಬೆಂ.ಗ್ರಾ/ಟೆ.ಪ್ರ/2025–26/968 ದಿನಾಂಕ: 01.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 19/2025–26
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ ರವರು 2021–2022ನೇ ಸಾಲಿನ 2215 ಜೆಜೆಎಮ್ ಲೆಕ್ಕಶೀರ್ಷಿಕೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಾಮಗಾರಿಗಳಿಗೆ ಹಾಗೂ ದೇವನಗುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಸ್‌ಎಲ್‌ಡಬ್ಲ್ಯೂಎಂ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಅರ್ಹ ಗುತ್ತಿಗೆದಾರರಿಂದ ಹಾಗೂ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ನಿಯಮಾನುಸಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ–2 & ಕೆಡಬ್ಲ್ಯೂ–4 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿ ಯನ್ನು ಇ–ಪೇಮೆಂಟ್ ಮುಖಾಂತರ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಟೆಂಡರ್‌ನ ವೇಳಾಪಟ್ಟಿ: (1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 02/01/2026ರ ಸಂಜೆ 4.00 ಗಂಟೆಯ ನಂತರ. (2) ಪ್ರಿ–ಬಿಡ್ ಸಭೆಯ ಸ್ಥಳ ಮತ್ತು ದಿನಾಂಕ: ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾ.ಕು.ನೀ& ನೈ.ವಿಭಾಗ, ಬೆಂಗಳೂರು ಗ್ರಾಮಾಂತರ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು, ದಿನಾಂಕ: 05/01/2026ರ ಬೆಳಿಗ್ಗೆ 11.00 ಗಂಟೆಗೆ. (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16/01/2026ರ ಸಂಜೆ 4.00 ಘಂಟೆವರೆಗೆ (4) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17/01/2026ರ ಸಂಜೆ 4.00 ಗಂಟೆಯ ನಂತರ. (5) ಆರ್ಥಿಕ್ ಬಿಡ್ ತೆರೆಯುವ ದಿನಾಂಕ: 19/01/2026ರ ಬೆಳಿಗ್ಗೆ 11.00 ಗಂಟೆಯ ನಂತರ.
ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ.
DIPR/CP/SPAN/4771/2025-26

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2025–26/3076
ದಿನಾಂಕ : 01–01–2026

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1
ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-1,ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 6 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2025–26 ನೇ ಸಾಲಿನ 3054 ಸಿ.ಎಂ.ಜಿ.ಎಸ್.ವೈ ಯೋಜನೆ ಅಡಿಯಲ್ಲಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ಕ್ರೀಯಾ ಯೋಜನೆ; 2025–26 ನೇ ಸಾಲಿನ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯೂಮೆಂಟ್(2515–00–196–122–300) ಜಿಲ್ಲಾ ಪಂಚಾಯತ್ ಅನಿರ್ಬಂಧಿತ ಅನುದಾನ ಕ್ರೀಯಾ ಯೋಜನೆಯಡಿ, ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.
WORK_INDENT : 21628, 21801, 21799, 22297, 22294, 22305
ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ. 1.94 ಲಕ್ಷ** ಮತ್ತು ಗರಿಷ್ಠ ಮೊತ್ತ **ರೂ. 12.69** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.
ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: **02–01–2026** ರಿಂದ **13–01–2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ **: 14–01–2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/493/2025–26

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560 001. ದೂರವಾಣಿ ಸಂಖ್ಯೆ: 080–22133370
ಸಂಖ್ಯೆ: 47/2025–26 ದಿನಾಂಕ:01.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರುರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.2 ಉತ್ತರ ಮತ್ತು ದೇವನಹಳ್ಳಿ ಉಪವಿಭಾಗಗಳಿಗೆ ಸಂಬಂಧಿಸಿದಂತೆ **05 ಸಂಖ್ಯೆಯ (ರೂ.10.00 ರಿಂದ 950.00ಲಕ್ಷಗಳ) ಕಾಮಗಾರಿಗಳಿಗೆ** ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರೊಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್ https://kppp.karnataka.gov.in ನಲ್ಲಿ ಸೂಚಿಸಲಾಗಿದೆ.
(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ:08.01.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 09.01.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ–ಸಿ.ಪಿ/4798/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.
ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/5054–ಪ.ಜಾ–ಪ.ಪಂ.ಯೋ/ಟೆ.ಪ್ರ/ತಾಸ/2025–26/ ದಿ: 02.01.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
1) ಕಾಮಗಾರಿಗಳ ವಿವರ. ಮತ್ತು ಇಂಡೆಂಟ್ ಸಂಖ್ಯೆ : ಸುರಪೂರ ತಾಲೂಕಿನ 5 ಕಾಮಗಾರಿಗಳು **(1)** RDPR/2025-26/RD/WORK_INDENT22271 **(2)**RDPR/2025-26/RD/WORK_ INDENT21785 **(3)** RDPR/2025-26/RD/WORK_INDENT21107 **(4)**RDPR/2025-26/RD/WORK_INDENT22276 **(5)** RDPR/2025-26/RD/WORK_INDENT22269 2) ಲೆಕ್ಕ ಶೀರ್ಷಿಕೆ: 2025–26ನೇ ಸಾಲಿನ 5054 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆ 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ 25.00 ಮತ್ತು ಗರಿಷ್ಠ ರೂ. 50.00 ಲಕ್ಷ 4) ಗುತ್ತಿಗೆದಾರರ ದರ್ಜೆ : 4ನೇ ಹಾಗೂ 3ನೇ ಮೇಲ್ಪಟ್ಟು ದರ್ಜೆ ಮೇಲ್ಪಟ್ಟು 5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ: 05.01.2026 ರಿಂದ 14.01.2026 ಸಾಯಂಕಾಲ 4:00 ಗಂಟೆವರೆಗೆ 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ :14.01.2026 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ: 17.01.2026 ಬೆಳ್ಳಿಗೆ 11:00 ನಂತರ 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 10) ಅಂತರಜಾಲ ತಾಣದ ವಿಳಾಸ: https://kppp.karnataka.gov.in
ಸೂಚನೆ :– ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).
ಸಹಿ/– ಕಾರ್ಯಪಾಲಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.
ವಾ.ಸಾ.ಸಂ.ಇ/ಯಾದಗಿರ/448/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ/70/3086/2025–26 ದಿನಾಂಕ : 02.01.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು : ಭಾಗ–ಎ : ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನ ಕೆ.ಐ.ಎ.ಡಿ.ಬಿ ಓಬಲಾಪುರ ಕೈಗಾರಿಕಾ ಪ್ರದೇಶದಲ್ಲಿ 2x31.5 ಎಂ.ವಿ.ಎ ಸಾಮರ್ಥ್ಯದ 66/11 ಕೆ.ವಿ ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ಕಾಮಗಾರಿ. ಭಾಗ–ಬಿ : ಹಾದಿಹೊಸಹಳ್ಳಿ ಗ್ರಾಮದ ಹತ್ತಿರ ನಿರ್ಮಾಣ ಹಂತದಲ್ಲಿರುವ ದಾಬಸ್‌ಪೇಟೆ–ದೊಡ್ಡಬೆಳವಂಗಲ 66ಕೆವಿ ಪ್ರಸರಣ ಮಾರ್ಗವನ್ನು ಲಿಲೋ ಮಾಡಿ ಕೆಐಎಡಿಬಿ ಓಬಳಾಪುರ ಕೈಗಾರಿಕಾ ಪ್ರದೇಶದಲ್ಲಿ ಪ್ರಸ್ತಾವಿತ 66/11 ಕೆವಿ ಉಪಕೇಂದ್ರದವರೆಗೆ ಸುಮಾರು 1.636 ಕಿಮೀ ಉದ್ದದ ಪ್ರಸರಣ ಮಾರ್ಗವನ್ನು ಡ್ರೇಕ್ ಕಂಡಕ್ಟರ್ ಬಳಸಿ ನಿರ್ಮಾಣ ಮಾಡುವ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 27.01.2026 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/4810/NR/2025-26

ಮಹದಾಯಿ ಯೋಜನೆಗೆ ಕೇಂದ್ರ ಶಾಕ್

ಬಂಡೂರಿ ನಾಲಾ ತಿರುವಿಗೆ ತಗಾದೆ
ಚರ್ಚೆಗೆ ಬಾರದ ಕಳಸಾ ನಾಲಾ ತಿರುವು

• ಮಂಜುನಾಥ ಹೆಬ್ಬಾರ್

ನವದೆಹಲಿ: ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಮಹದಾಯಿ ಬಂಡೂರಿ ನಾಲಾ ತಿರುವು ಯೋಜನೆಗೆ ಮತ್ತೆ ತಗಾದೆ ಎತ್ತಿರುವ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಪ್ರಾದೇಶಿಕ ಉನ್ನತಾಧಿಕಾರ ಸಮಿತಿ (ಆರ್‌ಇಸಿ), ಯೋಜನೆಯ ಕಾಮಗಾರಿಗೆ ಅರಣ್ಯ ಬಳಕೆಗೆ ಅನುಮತಿ ನೀಡಲು ನಿರಾಕರಿಸಿದೆ.

ಯೋಜನೆಗೆ ಪೈಪ್‌ಲೈನ್, ಪಂಪ್‌ಹೌಸ್, ವಿದ್ಯುತ್ ಮಾರ್ಗ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ನೆರಸೆ, ಮಂತುರ್ಗ ಹಾಗೂ ಬಚೋಲಿ ಗ್ರಾಮಗಳ 71 ಎಕರೆ ಅರಣ್ಯ ಬಳಕೆಗೆ ಅನುಮೋದನೆ ಕೋರಿ ಕರ್ನಾಟಕ ನೀರಾವರಿ ನಿಗಮವು ಕೇಂದ್ರಕ್ಕೆ ಮೂರು ವರ್ಷಗಳ ಪ್ರಸ್ತಾವ ಸಲ್ಲಿಸಿತ್ತು. ಪ್ರಾದೇಶಿಕ ಉನ್ನತಾಧಿಕಾರ ಸಮಿತಿಯು ಕಳೆದ ಒಂದೂವರೆ ವರ್ಷದಲ್ಲಿ ರಾಜ್ಯದಿಂದ ಹತ್ತು ಹಲವು ಸ್ಪಷ್ಟೀಕರಣಗಳನ್ನು ಕೇಳಿತ್ತು.

ಈ ಯೋಜನೆಗೆ ಅನುಮೋದನೆ ನೀಡುವ ವಿಷಯದ ಚರ್ಚೆಗಷ್ಟೇ ಡಿಸೆಂಬರ್ 12ರಂದು ಸಮಿತಿಯ ಸಭೆ ನಡೆಸಿತ್ತು. ಸಭೆಯ ನಡಾವಳಿಯನ್ನು ಶುಕ್ರವಾರ ಸಂಜೆ ಬಿಡುಗಡೆ ಮಾಡಿದೆ. ಭೀಮಗಡ ಅಭಯಾರಣ್ಯದಿಂದ ಗ್ರಾಮಸ್ಥರ ಸ್ಥಳಾಂತರ ಮಾಡುತ್ತಿರುವ ಅರಣ್ಯ ಇಲಾಖೆಯ ಕಾರ್ಯಶೈಲಿಯನ್ನು ಸಮಿತಿ ತೀವ್ರ ತರಾಟೆಗೆ ತೆಗೆದುಕೊಂಡಿದೆ. ಜತೆಗೆ, ರಾಜ್ಯ ಸರ್ಕಾರದಿಂದ ನಾಲ್ಕು ಸ್ಪಷ್ಟೀಕರಣಗಳನ್ನು ಸಮಿತಿ ಕೇಳಿದೆ. ಸಮಿತಿಯ ಈ ನಡೆಯಿಂದ, ಯೋಜನೆಗೆ ಅನುಮೋದನೆ ಸಿಗುವ ಭಾರಿ ವಿಶ್ವಾಸದಲ್ಲಿದ್ದ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದೆ.

ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಅನುಮೋದನೆ ಕೋರಿ ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಮೂರು ವರ್ಷಗಳ ಹಿಂದೆ ರಾಜ್ಯ ಪ್ರಸ್ತಾವ ಕಳುಹಿಸಿತ್ತು. ಈ ವಿಷಯದ ಬಗ್ಗೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದಿಂದ ಅಭಿಪ್ರಾಯ ಕೇಳಲು ವನ್ಯಜೀವಿ ಮಂಡಳಿ 2024ರ ಅಕ್ಟೋಬರ್‌ನಲ್ಲಿ ನಿರ್ಧರಿಸಿತ್ತು. ಆ ಬಳಿಕ ನಡೆದ ಆರು ಸಭೆಗಳಲ್ಲಿ ಕಳಸಾ ಪ್ರಸ್ತಾವ ಚರ್ಚೆಗೇ ಬಂದಿಲ್ಲ. ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಇತ್ತೀಚಿನ ಸಭೆ ಡಿಸೆಂಬರ್ 9ರಂದು ನಡೆದಿತ್ತು.

> ಪುನರ್ವಸತಿ ಕಾರ್ಯಕ್ರಮ ಒಂದು ದೀರ್ಘಕಾಲೀನ ಪ್ರಕ್ರಿಯೆ ಹಾಗೂ ಸಂಪೂರ್ಣ ಸ್ವಯಂಪ್ರೇರಿತ. ಇದಕ್ಕೆ ಯಾವುದೇ ಕಾಲಮಿತಿ ಹಾಕಲು ಬರುವುದಿಲ್ಲ. ಅಲ್ಲದೆ, ಗ್ರಾಮಸಭೆಗಳ ಒಪ್ಪಿಗೆ ಮತ್ತು ಅರಣ್ಯ ಹಕ್ಕು ಕಾಯ್ದೆಯಡಿ ಪ್ರಕ್ರಿಯೆ ಕಡ್ಡಾಯ. ಇವುಗಳನ್ನು ಮಾಡದೆ ಪುನರ್ವಸತಿ ಯೋಜನೆ ರೂಪಿಸಿ ಸಮಿತಿಗೆ ಸಲ್ಲಿಸಿದ್ದು ಸರಿಯಲ್ಲ.
> **ಗಿರಿಧರ್ ಕುಲಕರ್ಣಿ,** ವನ್ಯಜೀವಿ ಸಂರಕ್ಷಣಾವಾದಿ

ಅಭಯಾರಣ್ಯದ ಪಕ್ಕದಲ್ಲೇ ತಿರುವು: ಆರ್‌ಇಸಿ ಆಕ್ಷೇಪ

- ತಿರುವಿಗೆ ಪ್ರಸ್ತಾಪಿಸಲಾದ ಅರಣ್ಯ ಪ್ರದೇಶವು ಭೀಮಘಡ ಅಭಯಾರಣ್ಯದ ಪರಿಸರ ಸೂಕ್ಷ್ಮ ಪ್ರದೇಶದಿಂದ ಕೇವಲ 29 ಮೀಟರ್ ದೂರದಲ್ಲಿದೆ. ಇದಲ್ಲದೆ, ಸಮಿತಿ ನಡೆಸಿದ ವಿಶ್ಲೇಷಣೆಯ ಪ್ರಕಾರ ತಿರುವಿನ ಪ್ರದೇಶವು ಸೂಕ್ಷ್ಮವಾದುದು ಎಂದು ಸಮಿತಿ ಅಭಿಪ್ರಾಯಪಟ್ಟಿದೆ.
- ಅಭಯಾರಣ್ಯದಿಂದ 161 ಕುಟುಂಬಗಳನ್ನು ಸ್ಥಳಾಂತರ ಮಾಡಲಾಗುತ್ತದೆ ಎಂಬ ಅಂಶವು ಅರಣ್ಯ ಇಲಾಖೆಯ ವನ್ಯಜೀವಿ ಸಂರಕ್ಷಣಾ ಯೋಜನೆಯಲ್ಲಿದೆ. ಗ್ರಾಮಸ್ಥರನ್ನು ಸ್ಥಳಾಂತರ ಮಾಡುವ ಪ್ರಕ್ರಿಯೆಯ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಉತ್ತರ ನೀಡಿಲ್ಲ. ಈ ಬಗ್ಗೆ ಪಿಸಿಸಿಎಫ್ ಅವರಿಂದ ಮಾಹಿತಿ ಪಡೆದು ಉತ್ತರಿಸುವುದಾಗಿ ನೋಡಲ್ ಅಧಿಕಾರಿ ತಿಳಿಸಿದ್ದಾರೆ. ಈ ಧೋರಣೆ ಸರಿಯಲ್ಲ ಎಂದೂ ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ.
- ಅಭಯಾರಣ್ಯದಿಂದ ಗ್ರಾಮಸ್ಥರ ಪುನರ್ವಸತಿಗೆ ರಾಜ್ಯ ಸರ್ಕಾರವು ಯಾವುದೇ ರಾಜ್ಯ ನೀತಿಯನ್ನು ಹೊಂದಿದೆಯೇ ಎಂದು ಆರ್‌ಇಸಿ ಪ್ರಶ್ನಿಸಿತು. ಪುನರ್ವಸತಿ ಯೋಜನೆಯು ಕೇಂದ್ರದ 2006ರ ಯೋಜನೆಯ ನಿಯಮಗಳು ಮತ್ತು ಮಾರ್ಗಸೂಚಿಗಳಿಗೆ ಅನುಗುಣವಾಗಿದೆಯೇ ಎಂದೂ ವಿಚಾರಿಸಿತು. ಸ್ಥಳಾಂತರಗೊಳ್ಳಲಿರುವ ಗ್ರಾಮಸ್ಥರಿಂದ ಒಪ್ಪಿಗೆ ಪಡೆದಿರುವ ಬಗ್ಗೆ ವಿವರ ನೀಡುವಂತೆ ಸೂಚಿಸಿತು. ಆದಾಗ್ಯೂ, ರಾಜ್ಯ ಸರ್ಕಾರವು ಯಾವುದೇ ವಿವರವಾದ ಸ್ಥಳಾಂತರ ಯೋಜನೆ ಅಥವಾ ಸ್ಥಳಾಂತರಕ್ಕೆ ಗ್ರಾಮಸ್ಥರ ಒಪ್ಪಿಗೆ ನೀಡಿರುವ ವಿವರಗಳನ್ನು ರಾಜ್ಯ ಸಲ್ಲಿಸಿಲ್ಲ. ಹೀಗಾಗಿ, ಈ ಪುನರ್ವಸತಿ ಯೋಜನೆ ಅಪೂರ್ಣವಾಗಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.
- ಈ ಯೋಜನೆಯಿಂದ ವನ್ಯಜೀವಿಗಳ ಮೇಲೆ ಕನಿಷ್ಠ ಪರಿಣಾಮ ಉಂಟಾಗಲಿದೆ ಎಂದು ಪಿಸಿಸಿಎಫ್ ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಆದರೆ, ತಿರುವಿನ ಪ್ರದೇಶವು ಶ್ರೀಮಂತ ಜೀವವೈವಿಧ್ಯ ಹೊಂದಿದೆ. ಪ್ರಸ್ತಾವಿತ ಯೋಜನೆಯ ಅನುಷ್ಠಾನದಿಂದ ಅಭಯಾರಣ್ಯಕ್ಕೆ ನೀರಿನ ಹರಿವು ಕಡಿಮೆ ಆಗುತ್ತದೆ ಮತ್ತು ಇದು ನದಿ ಪರಿಸರ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಸಮಿತಿ ಕಳವಳ ವ್ಯಕ್ತಪಡಿಸಿದೆ.
- ಪರ್ಯಾಯ ಅರಣ್ಯೀಕರಣಕ್ಕೆ ಅಥಣಿ ತಾಲ್ಲೂಕಿನ ಹಾಲಳ್ಳಿ ಗ್ರಾಮದ ಜಾಗ ಗುರುತಿಸಿದೆ. ಈ ಪ್ರದೇಶವು ಮೀಸಲು ಅರಣ್ಯದ ಪಕ್ಕದಲ್ಲಿದೆ. ಒಂದು ವೇಳೆ ಈ ಪ್ರದೇಶವು ಅರಣ್ಯ ಗಡಿ ಭಾಗದಲ್ಲಿದ್ದರೆ ರಾಜ್ಯ ಸರ್ಕಾರವು ಪರಿಷ್ಕೃತ ಪರ್ಯಾಯ ಅರಣ್ಯೀಕರಣದ ಯೋಜನೆ ಸಲ್ಲಿಸಬೇಕು.
- ಮಹದಾಯಿ ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿವೆ. ಕರ್ನಾಟಕ ಸರ್ಕಾರ ಸಲ್ಲಿಸಿದ ಇತ್ತೀಚಿನ ವಿಶೇಷ ಮೇಲ್ಮನವಿ ಅರ್ಜಿಯ ವಿವರ ಸೇರಿದಂತೆ ಎಲ್ಲ ಅರ್ಜಿಗಳು ಸ್ಥಿತಿಗತಿಯ ವಿವರಗಳನ್ನು ಸಲ್ಲಿಸಬೇಕು.

ಅರಣ್ಯ ಇಲಾಖೆಗೆ ಗೋವಾ ಫೌಂಡೇಷನ್ ನೋಟಿಸ್

ಬಂಡೂರಿ ನಾಲಾದಿಂದ ಕರ್ನಾಟಕವು 7 ಟಿಎಂಸಿ ನೀರನ್ನು ಬೇರೆಡೆಗೆ ತಿರುಗಿಸುತ್ತಿದೆ ಎಂದು ಆರೋಪಿಸಿ ಅರಣ್ಯ ಇಲಾಖೆಯ ಪಿಸಿಸಿಎಫ್ (ವನ್ಯಜೀವಿ) ಪಿ.ಸಿ.ರೇ ಅವರಿಗೆ ಗೋವಾ ಫೌಂಡೇಷನ್ ಡಿಸೆಂಬರ್ 30ರಂದು ನೋಟಿಸ್ ನೀಡಿದೆ. ನೋಟಿಸ್‌ಗೆ 15 ದಿನಗಳಲ್ಲಿ ಉತ್ತರ ನೀಡದಿದ್ದರೆ ನ್ಯಾಯಾಲಯದ ಮೊರೆ ಹೋಗುವುದಾಗಿ ಎಚ್ಚರಿಸಿದೆ.

ನದಿ ತಿರುವಿನಿಂದ ಭೀಮಘಡ ಹಾಗೂ ಮಹದಾಯಿ ವನ್ಯಜೀವಿಧಾಮದಿಂದ ಅಥವಾ ಪಕ್ಕದಿಂದ ನದಿ ನೀರನ್ನು ಬೇರೆಡೆಗೆ ಹರಿಸುವುದು 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಉಲ್ಲಂಘನೆ. ಜತೆಗೆ, ನದಿ ತಿರುವಿನಿಂದ ವನ್ಯಜೀವಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದೂ ಆರೋಪಿಸಿದೆ.

ಕಳಸಾ ನಾಲಾ ತಿರುವು ಯೋಜನೆಗೆ ಆಕ್ಷೇಪಿಸಿ ಗೋವಾ ಪಿಸಿಸಿಎಫ್ ಅವರು ಕರ್ನಾಟಕದ ಪಿಸಿಸಿಎಫ್ ಅವರಿಗೆ 2023ರ ಡಿಸೆಂಬರ್‌ನಲ್ಲಿ ನೋಟಿಸ್ ನೀಡಿದ್ದರು. ಅಧಿಕಾರ ವ್ಯಾಪ್ತಿ ಮೀರಿ ಗೋವಾ ಪಿಸಿಸಿಎಫ್ ನೋಟಿಸ್ ನೀಡಿದ್ದರು ಎಂದು ರಾಜ್ಯ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತ್ತು. ಈ ವಿಷಯವನ್ನು ಪ್ರಾದೇಶಿಕ ಉನ್ನತಾಧಿಕಾರ ಸಮಿತಿಯ ಗಮನಕ್ಕೂ ರಾಜ್ಯ ತಂದಿದೆ.

ರಾಜ್ಯದಲ್ಲಿ ಪಿಎಂ ಆವಾಸ್ (ನಗರ) ಪ್ರಗತಿ

ಜಿಲ್ಲೆ	ಮನೆ ಮಂಜೂರು	ಮನೆ ಪೂರ್ಣ	ಮನೆಯಲ್ಲಿ ವಾಸ
ಬಾಗಲಕೋಟೆ	5,829	2,303	1,801
ಬಳ್ಳಾರಿ	13,766	6,677	5,658
ಬೆಳಗಾವಿ	18,297	5,449	4,642
ಬೆಂಗಳೂರು ಗ್ರಾಮಾಂತರ	1,651	890	874
ಬೆಂಗಳೂರು ನಗರ	80,159	33,483	14,768
ಬೀದರ್	5,647	3,610	2,782
ಚಾಮರಾಜನಗರ	715	700	641
ಚಿಕ್ಕಬಳ್ಳಾಪುರ	2,649	1,666	1,653
ಚಿಕ್ಕಮಗಳೂರು	4,010	1,289	937
ಚಿತ್ರದುರ್ಗ	9,724	4,269	3,344
ದಕ್ಷಿಣ ಕನ್ನಡ	1,324	724	32
ದಾವಣಗೆರೆ	5,069	3,893	3,847
ಧಾರವಾಡ	10,051	3,712	1,514
ಗದಗ	7,304	3,421	2,631
ಹಾಸನ	4,868	1,574	1,080
ಹಾವೇರಿ	8,959	6,782	6,046
ಕಲಬುರಗಿ	12,730	5,821	4,551
ಕೊಡಗು	8	8	8
ಕೋಲಾರ	3,853	2,649	2,524
ಕೊಪ್ಪಳ	3,097	1,541	1,541
ಮಂಡ್ಯ	2,134	931	852
ಮೈಸೂರು	11,202	3,602	2,419
ರಾಯಚೂರು	8,489	3,877	3,539
ರಾಮನಗರ	8,928	5,489	3,046
ಶಿವಮೊಗ್ಗ	11,144	3,516	2,806
ತುಮಕೂರು	7,263	2,817	2,403
ಉಡುಪಿ	1,150	316	286
ಉತ್ತರ ಕನ್ನಡ	6,931	4,812	2,552
ವಿಜಯನಗರ	5,607	3,718	3,320
ವಿಜಯಪುರ	9,896	5,370	3,945
ಯಾದಗಿರಿ	1,702	1,202	827
ಒಟ್ಟು	2,74,156	1,26,110	86,869

ದಶಕದಲ್ಲಿ ಮುಗಿಸಿದ್ದು 1.26 ಲಕ್ಷ ಮನೆ

ಒಂದನೇ ಪುಟದಿಂದ...

ಯೋಜನೆಯ ಮಾರ್ಗಸೂಚಿಯ ಪ್ರಕಾರ, ಕೇಂದ್ರ ಸರ್ಕಾರವು ಮೂರು ಕಂತುಗಳಲ್ಲಿ ಅನುದಾನ ಬಿಡುಗಡೆ ಮಾಡುತ್ತದೆ. ರಾಜ್ಯದಲ್ಲಿ 2.74 ಲಕ್ಷ ಎಎಚ್‌ಪಿ ಮನೆಗಳು ಸೇರಿದಂತೆ 5.74 ಲಕ್ಷ ಮನೆಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು ₹9,696 ಕೋಟಿ ಅನುದಾನ ಮಂಜೂರು ಮಾಡಿತ್ತು. ಆದರೆ, ಡಿಸೆಂಬರ್ ಅಂತ್ಯದವರೆಗೆ ರಾಜ್ಯಕ್ಕೆ ಬಿಡುಗಡೆ ಮಾಡಿರುವ ಅನುದಾನ ₹7,379 ಕೋಟಿ ಅನುದಾನ ಮಾತ್ರ. ಕೇಂದ್ರದ ಪಾಲು ₹2,317 ಕೋಟಿ ಬರಬೇಕಿದೆ. ಮೊದಲ ಹಂತದ ಯೋಜನೆ ಮುಕ್ತಾಯ ಗೊಂಡಿರುವುದರಿಂದ ಕೇಂದ್ರದ ಪಾಲಿನಲ್ಲಿ ಖೋತಾ ಆಗುವ ಸಂಭವ ಇದೆ.

ಬಳಕೆ ಪ್ರಮಾಣಪತ್ರ ಸಲ್ಲಿಕೆ, ಫಲಾನುಭವಿಗಳ ಆಧಾರ್ ಜೋಡಣೆ, ಸ್ವತಂತ್ರ ಸಂಸ್ಥೆಯಿಂದ ಗುಣಮಟ್ಟ ಪರಿಶೀಲನೆ, ಮನೆಗಳ ಪ್ರಗತಿಯ ಜಿಯೊಟ್ಯಾಗಿಂಗ್, ರೇರಾ ನೋಂದಣಿ ಮತ್ತಿತರ ಷರತ್ತುಗಳನ್ನು ಪಾಲಿಸಿದರಷ್ಟೇ ಕೇಂದ್ರದ ಸಹಾಯಧನ ಬಿಡುಗಡೆ ಮಾಡಲಾಗುತ್ತದೆ. ರಾಜ್ಯ ಸರ್ಕಾರ ಸಲ್ಲಿಸಿರುವ ದಾಖಲೆಗಳ ಆಧಾರದಲ್ಲಿ ಕೇಂದ್ರದ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ಸ್ಪಷ್ಟಪಡಿಸಿದೆ.

ಜೈಲಲ್ಲಿ ಅಕ್ರಮ ತನಿಖೆ ಆರಂಭ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆ ಕುರಿತು ಕಾರಾಗೃಹಗಳ ಇಲಾಖೆಯ ಹೆಚ್ಚುವರಿ ಮಹಾನಿರೀಕ್ಷಕ ಪಿ.ವಿ.ಆನಂದ ರೆಡ್ಡಿ ಶುಕ್ರವಾರ ತನಿಖೆ ಆರಂಭಿಸಿದ್ದಾರೆ.

ಬೆಳಿಗ್ಗೆಯೇ ಬಂದ ಆನಂದ ರೆಡ್ಡಿ ನೇತೃತ್ವದ ತಂಡವು ಕಲಬುರಗಿ ಸೆಂಟ್ರಲ್ ಜೈಲು ಪ್ರವೇಶಿಸಿ, ತನಿಖೆ ಶುರು ಮಾಡಿದೆ.

‘ಕೈದಿಗಳಿಗೆ ಮೊಬೈಲ್, ಮದ್ಯ ಹೇಗೆ ತಲುಪುತ್ತಿವೆ? ಅದರಲ್ಲಿ ಯಾರ ಕೈವಾಡವಿದೆ? ಎಲ್ಲಿ ಭದ್ರತಾ ಲೋಪವಾಗುತ್ತಿದೆ ಎಂಬೆಲ್ಲ ವಿಷಯಗಳ ಬಗೆಗೆ ತನಿಖೆ ಸಾಗಿದೆ’ ಎಂದು ಮೂಲಗಳು ಹೇಳಿವೆ.

ಬಿಜೆಪಿ ದೂರು ಆಧರಿಸಿ ಭರತ್ ರೆಡ್ಡಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ನಗರದಲ್ಲಿ ನಡೆದ ಘರ್ಷಣೆ ಸಂಬಂಧ ಶಾಸಕ ನಾರಾ ಭರತ್ ರೆಡ್ಡಿ, ಬೆಂಬಲಿಗರ ವಿರುದ್ಧ ಬ್ರೂಸ್ ಪೇಟೆ ಠಾಣೆಯಲ್ಲಿ ಎರಡು ಪ್ರಕರಣ ದಾಖಲಾಗಿವೆ.

ಅವ್ವಂಬಾವಿಯಲ್ಲಿರುವ ಶಾಸಕ ಜನಾರ್ದನ ರೆಡ್ಡಿ ಮನೆಗೆ ಅತಿಕ್ರಮ ಪ್ರವೇಶ, ಜಾತಿನಿಂದನೆ, ಹಲ್ಲೆಗೆ ಯತ್ನ ಆರೋಪದಡಿ ಶಾಸಕ ಭರತ್ ರೆಡ್ಡಿ, ತಂದೆ ಸೂರ್ಯನಾರಾಣ ರೆಡ್ಡಿ, ಚಿಕ್ಕಪ್ಪ ಪ್ರತಾಪ್ ರೆಡ್ಡಿ, ಆಪ್ತರಾದ ಸತೀಶರೆಡ್ಡಿ, ಚಾನಾಳ ಶೇಖರ್, ಲೋಕೇಶ ಅವಂಬಾವಿ, ಗಂಗಾಧರ ಮತ್ತಿತರ ಮೇಲೆ ಕೇಸು ಹಾಕಲಾಗಿದೆ.

ಒಂದು ಪ್ರಕರಣದಲ್ಲಿ 41 ಜನರ ವಿರುದ್ಧ, ಮತ್ತೊಂದು ಪ್ರಕರಣದಲ್ಲಿ 23 ಮಂದಿ ವಿರುದ್ಧ ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರತಿದೂರು ದಾಖಲಾಗಿದೆ.

ರೆಡ್ಡಿ ಮನೆಗೇ ಬಂದು ದೂರು ಪಡೆದ ಎಎಸ್‌ಪಿ: ರಾಜ್ಯ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಭೇಟಿ ನೀಡಿದ್ದ ವೇಳೆ ಹೆಚ್ಚುವರಿ ಎಸ್‌ಪಿ ರವಿಕುಮಾರ್ ಅವರು ಜನಾರ್ದನ ರೆಡ್ಡಿ ಮನೆಗೇ ಬಂದು ದೂರು ಪಡೆದಿದ್ದರು.

ಕರ್ನಾಟಕ ಸರ್ಕಾರ
ಪ್ರವಾಸೋದ್ಯಮ ಇಲಾಖೆ
ರಿವರ್ ರಾಫ್ಟಿಂಗ್ ಮತ್ತು ಜಲಸಾಹಸ ಕ್ರೀಡೆ ನಿರ್ವಹಣೆ ಮತ್ತು ಮೇಲುಸ್ತುವಾರಿ ಸಮಿತಿ (ರಿ),
ಉಪನಿರ್ದೇಶಕರ ಕಛೇರಿ, ಆರ್.ಟಿ.ಓ. ಹತ್ತಿರ NH-66 ಕಾರವಾರ. ಉತ್ತರ ಕನ್ನಡ ಜಿಲ್ಲೆ–581301
ದೂ: 08382–221172 email- ddtourismkarwar@gmail.com
ಪ್ರ.ಇ/ಉ.ನಿ.ಕ/ಕಾ/25/2025/26/686 ದಿನಾಂಕ: 02/01/2026.

ಕೆ.ಪಿ.ಪಿ.ಪಿ. ಪ್ರಕಟಣೆ

ಈ ಮೂಲಕ ರಿವರ್ ರಾಫ್ಟಿಂಗ್ ಮತ್ತು ಜಲ ಸಾಹಸ ಕ್ರೀಡೆ ನಿರ್ವಹಣೆ ಮತ್ತು ಮೇಲುಸ್ತುವಾರಿ ಸಮಿತಿ (ರಿ), ಉತ್ತರ ಕನ್ನಡ ಜಿಲ್ಲೆ ರವರು ತಿಳಿಯಪಡಿಸುವುದೇನೆಂದರೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುರುಡೇಶ್ವರ ಕಡಲತೀರದಲ್ಲಿ ಜಲಸಾಹಸ ಕ್ರೀಡೆ ನಡೆಸಲು Two Cover ಟೆಂಡರ್ ಕರೆಯಲಾಗಿದೆ. ಆಸಕ್ತಿ ಇರುವವರು ಈ ಮುಂದೆ ತಿಳಿಸಲಾದ ಷರತ್ತಿಗೆ ಒಳಪಟ್ಟು ದಿನಾಂಕ: 16–01–2026 ರ ಸಾಯಂಕಾಲ 5:30 ಗಂಟೆ ಒಳಗಡೆ online ಮೂಲಕ https;//kppp.karnataka.gov.in ತಮ್ಮ ಟೆಂಡರನ್ನು ಈ ಕೆಳಗೆ ನಮೂದಿಸಿದ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ. ಈ ಸಂಬಂಧ ಹೆಚ್ಚಿನ ಮಾಹಿತಿ/ಸ್ಪಷ್ಟಿಕರಣ ಬೇಕಾದಲ್ಲಿ ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆರವರಿಂದ ಕಛೇರಿ ವೇಳೆಯಲ್ಲಿ ತಿಳಿದುಕೊಳ್ಳಬಹುದಾಗಿದೆ.

(1) Particulars: ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಮುರುಡೇಶ್ವರ ಕಡಲ ತೀರದಲ್ಲಿ ಜಲಸಾಹಸ ಕ್ರೀಡೆ ನಡೆಸಲು ಟೆಂಡರ್, Period: 05 ತಿಂಗಳ ಅವಧಿಗೆ, Security Deposit: ರೂ. 5.00 ಲಕ್ಷಗಳು, EMD Amount: ರೂ. 50,000/–

ಪ್ರಕಟಣೆ ಬಗ್ಗೆ ಮಾಹಿತಿ: (1) ದಿನಾಂಕ: 02–01–2026 ರಿಂದ 16–01–2026 ರ ಸಾಯಂಕಾಲ 5:30 ಗಂಟೆಯವರೆಗೆ ಟೆಂಡರನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. (2) ದಿನಾಂಕ: 19–01–2026 ರಂದು ಸಂಜೆ 5:00 ಗಂಟೆಗೆ ತಾಂತ್ರಿಕ ದಾಖಲೆಗಳನ್ನು ಪರಿಶೀಲಿಸಲಾಗುವುದು. ತದನಂತರ ಆರ್ಥಿಕ ಬಿಡ್‌ನ್ನು ದಿನಾಂಕ: 21–01–2026 ರಂದು ಪರಿಶೀಲಿಸಲಾಗುವುದು. (ಇ–ಪೋರ್ಟಲ್‌ನಲ್ಲಿ ಬದಲಾವಣೆ) (ಬದಲಾವಣೆಗೆ ಒಳಪಟ್ಟಿರುತ್ತದೆ.) (3) ಟೆಂಡರನ ಭದ್ರತಾ ಠೇವಣಿ ರೂ. 05.00 ಲಕ್ಷಗಳನ್ನು ಕಾರ್ಯಾದೇಶ ನೀಡಿದ 03 ದಿನಗೊಳಗಾಗಿ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ರಿವರ್ ರಾಫ್ಟಿಂಗ್ ಮತ್ತು ಜಲಸಾಹಸ ಕ್ರೀಡೆ ನಿರ್ವಹಣೆ ಮತ್ತು ಮೇಲುಸ್ತುವಾರಿ ಸಮಿತಿ (ರಿ) ಉತ್ತರ ಕನ್ನಡ ಜಿಲ್ಲೆ ಕಾರವಾರ ರವರ ಹೆಸರಿನಲ್ಲಿ ನೀಡುವುದು. ಸದರಿ ಭದ್ರತಾ ಠೇವಣಿ ಮೊತ್ತವನ್ನು ಟೆಂಡರನ ಅವಧಿ ಯಶಸ್ವಿಯಾಗಿ ಮುಗಿದ ನಂತರ ಟೆಂಡರದಾರರಿಗೆ ಬಡ್ಡಿ ರಹಿತವಾಗಿ ಮರಳಿಸಲಾಗುವುದು. (4) ಪ್ರಿಬಿಡ್ ಸಭೆ ದಿನಾಂಕ: 07–01–2026 ರಂದು ಮಧ್ಯಾಹ್ನ 3:00 ಗಂಟೆಗೆ (5) ಟೆಂಡರದಾರರು ಕಾರ್ಯಾದೇಶ ಪಡೆದ 05 ದಿನಗಳ ಒಳಗಡೆ ರೂ.500 ಛಾಪಕಾಗದದ ಮೇಲೆ ಕರಾರು ಪತ್ರ ಬರೆದುಕೊಡತಕ್ಕದ್ದು.

ಟೆಂಡರನಲ್ಲಿ ಸಲ್ಲಿಸಬೇಕಾದ ದಾಖಲೆಗಳು: (1) ಪಾನ್ ಕಾರ್ಡ (2) ಆಧಾರ ಕಾರ್ಡ (3) ಅನುಭವ ಪ್ರಮಾಣ ಪತ್ರ, (5) ಜಲ ಕ್ರೀಡೆ ನಡೆಸುವ ಬೋಟ್‌ಗಳು ಹಾಗೂ ನೋಂದಣಿಯ ವಿವರಗಳು. (5) ಸಂಸ್ಥೆಯ ನೊಂದಣಿ ಪ್ರಮಾಣ ಪತ್ರ, (6) Technical Bid ನಲ್ಲಿ ಸಲ್ಲಿಸಲು ತಿಳಿಸಿರುವ ಎಲ್ಲಾ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. (7) ಉತ್ತರ ಕನ್ನಡ ಜಿಲ್ಲಾ ಪ್ರವಾಸೋದ್ಯಮ ಇಲಾಖೆಯಿಂದ no-due ಪ್ರಮಾಣ ಪತ್ರ.

ಸಹಿ/– ಸದಸ್ಯ ಕಾರ್ಯದರ್ಶಿ ಹಾಗೂ ಉಪ ನಿರ್ದೇಶಕರು,
ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ,
ಕಾರವಾರ, ಉತ್ತರಕನ್ನಡ ಜಿಲ್ಲೆ.

DIPR/ADK/KSMCA/902/25-26 dt.02.01.2026

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ,
16 ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560 052 ಇವರ ಮುಂದೆ

ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003 ರ ಪರಿಚ್ಛೇದ 62 ಮತ್ತು 64 ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್ ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರಿಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024 ರ ಪ್ರಕಾರ ಆರ್ಥಿಕ ವರ್ಷ 2024-25ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ (ಎ.ಪಿ.ಆರ್) ಪ್ರಸರಣ ಜಕಾತಿಯ ಅರ್ಜಿಯನ್ನು ಅನುಮೋದನೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿರುವ ಅರ್ಜಿಯ ಬಗ್ಗೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು–560 009. ..... ಅರ್ಜಿದಾರರು

ಅಧಿಸೂಚನೆ
ಕವಿಪ್ರನಿನಿಯ ಎಪಿಆರ್ 2024–25ರ ಅಧಿಸೂಚನೆ.

1.0 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್ ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರಿಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024 ರ ಪ್ರಕಾರ ಆರ್ಥಿಕ ವರ್ಷ 2024-25ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಮತ್ತು ಅನುಮೋದನೆಗಾಗಿ ಅರ್ಜಿ ಸಲ್ಲಿಸಿರುತ್ತದೆ. ಕವಿಪ್ರನಿನಿಯ ಅರ್ಜಿಯು ಗೌರವಾನ್ವಿತ ಆಯೋಗದ ಪರಿಗಣನೆಯಲ್ಲಿರುತ್ತದೆ.

2.0 ಆರ್ಥಿಕ ವರ್ಷ 2024-25ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಅರ್ಜಿಯಲ್ಲಿ, ಕವಿಪ್ರನಿನಿಯು ಪರಿಷ್ಕೃತ ವಾರ್ಷಿಕ ಆದಾಯದ ಅಗತ್ಯತೆ ರೂ.6504.05 ಕೋಟಿಯಾಗಿರುತ್ತದೆ. ಅಧಿಕ/ಹೆಚ್ಚುವರಿ ಆದಾಯ ರೂ. 71.78 ಕೋಟಿಗಳಾಗಿರುತ್ತದೆ. ಈ ಅಧಿಕ/ಹೆಚ್ಚುವರಿ ಆದಾಯವನ್ನು ಆರ್ಥಿಕ ವರ್ಷ 2026-27 ರ ಅವಧಿಯ ಜಕಾತಿಯಲ್ಲಿ ಹೊಂದಾಣಿಕೆ ಮಾಡಲು ಅನುಮೋದನೆ ನೀಡಬೇಕಾಗಿ ಕೋರಲಾಗಿದೆ.

3.0 ವಿದ್ಯುಚ್ಛಕ್ತಿ ಕಾಯಿದೆ 2003 ರ ನಿಬಂಧನೆಗಳಿಗೆ ಅನುಸಾರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮಲ್ಟಿ ಇಯರ್ ಟ್ರಾನ್ಸ್ ಮಿಷನ್, ಡಿಸ್ಟ್ರಿಬ್ಯೂಷನ್ ಮತ್ತು ರಿಟೇಲ್ ಸಪ್ಲೈ ಟ್ಯಾರೀಫ್) ನಿಯಮಾವಳಿಗಳು, 2024 ರ ಪ್ರಕಾರ, ಮೇಲಿನ ಅರ್ಜಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಆಸಕ್ತಿ ಹೊಂದಿರುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ ಆರು ಸೆಟ್‌ಗಳೊಂದಿಗೆ ಪ್ರಮಾಣ ಪತ್ರದ (ಅಫಿಡವಿಟ್) ಜೊತೆಗೆ ಈ ಪ್ರಕಟಣೆ ಪ್ರಥಮವಾಗಿ ಪ್ರಕಟವಾದ ದಿನಾಂಕದಿಂದ **ಮೂವತ್ತು ದಿನಗಳ ಒಳಗಾಗಿ ಸ್ವೀಕರಣಾಧಿಕಾರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, 16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560 052 ಅವರಿಗೆ ಸಲ್ಲಿಸಬಹುದು.**

4.0 ಆಸಕ್ತಿಯುಳ್ಳವರು ಕವಿಪ್ರನಿನಿಯ ಎ.ಪಿ.ಆರ್. ಮತ್ತು ಎ.ಆರ್.ಆರ್. ಅರ್ಜಿಗಳ ಪ್ರತಿಗಳನ್ನು ಪರಾಮರ್ಶಿಸಲು ಅಥವಾ ಖರೀದಿಸಲು ಈ ಕೆಳಗೆ ತಿಳಿಸಿದ ಕಛೇರಿಗಳಲ್ಲಿ ಲಭ್ಯವಿರುತ್ತದೆ.
1. ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.
2. ಲೆಕ್ಕಾಧಿಕಾರಿ (ಸಾರ್ವಜನಿಕ ಸಂಪರ್ಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ನೆಲಮಹಡಿ, ಕಾವೇರಿ ಭವನ, ಬೆಂಗಳೂರು.
3. ವಿದ್ಯುತ್ ಸರಬರಾಜು ಕಂಪನಿಗಳ ಕಂಪನಿ ಕಾರ್ಯಾಲಯಗಳು, ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.

5.0 ಎ.ಪಿ.ಆರ್. ಪ್ರತಿಗಳನ್ನು ಖರೀದಿಸಲು ಇಚ್ಛಿಸುವವರು ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ ರೂ.111/- ಹಾಗು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ ರೂ.108/- ರಂತೆ ನಗದು / ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ ರೂ. 1/- ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು ಕೆಲಸದ ದಿನಗಳೊಳಗಾಗಿ** ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ನಲ್ಲಿ ಸಹ ಲಭ್ಯವಿರುತ್ತದೆ.

6.0 ಆಕ್ಷೇಪಣೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮಾತ್ರ ಸಲ್ಲಿಸಬೇಕು. ಆದರೆ, ಕವಿನಿ ಆಯೋಗದ ನಿರ್ದೇಶನದಂತೆ, ಆಕ್ಷೇಪಣೆ ಸಲ್ಲಿಕೆ ಮತ್ತು ಅದಕ್ಕೆ ಪ್ರತ್ಯುತ್ತರ ಸಲ್ಲಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು, ಆಕ್ಷೇಪಣಾದಾರರು ಏಕಕಾಲದಲ್ಲಿ ತಮ್ಮ ಆಕ್ಷೇಪಣೆಯ ಪ್ರತಿಯನ್ನು ನೇರವಾಗಿ **ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009** ಇವರಿಗೂ ಕಳುಹಿಸಲು ಕೋರಲಾಗಿದೆ. ಸಾರ್ವಜನಿಕ ಆಕ್ಷೇಪಣೆಗಳನ್ನು ಮೊದಲ ಪ್ರಕಟಣೆಯನ್ನು ಹೊರಡಿಸಿದ **ದಿನಾಂಕದಿಂದ 30 ದಿನದೊಳಗೆ** ಸ್ವೀಕರಿಸಲಾಗುವುದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009.

ಬನದ ಹುಣ್ಣಿಮೆ ಜಾತ್ರೆ ಇಂದು

ಉಗರಗೋಳ (ಬೆಳಗಾವಿ ಜಿಲ್ಲೆ): ಯಲ್ಲಮ್ಮನಗುಡ್ಡದಲ್ಲಿ ಬನದ ಹುಣ್ಣಿಮೆ ಪ್ರಯುಕ್ತ ಶನಿವಾರ (ಜ.3) ನಡೆಯುವ ಜಾತ್ರೆಗೆ, ಶುಕ್ರವಾರ ಬೆಳಿಗ್ಗೆಯಿಂದಲೇ ಅಪಾರ ಸಂಖ್ಯೆಯಲ್ಲಿ ಭಕ್ತರ ದಂಡು ಹರಿದು ಬರುತ್ತಿದೆ.

ಶನಿವಾರ ಬೆಳಿಗ್ಗೆ ವೇಳೆಗೆ ಗುಡ್ಡದ ಪರಿಸರ ಭಕ್ತರಿಂದ ಕಿಕ್ಕಿರಿದು ತುಂಬಲಿದೆ. ಗುಡ್ಡಕ್ಕೆ ಸಂಪರ್ಕ ಕಲ್ಪಿಸುವ ಉಗರಗೋಳ, ಜೋಗುಳಬಾವಿ ಮತ್ತು ಸವದತ್ತಿಯ ನೂಲಿನ ಗಿರಣಿ ಮಾರ್ಗಗಳಲ್ಲಿ ವಾಹನದಟ್ಟಣೆ ಹೆಚ್ಚಿದೆ. ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ.

‘ಜಾತ್ರೆಯಲ್ಲಿ 10 ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಅಗತ್ಯ ಮೂಲಸೌಲಭ್ಯ ಒದಗಿಸಲು ಕ್ರಮ ವಹಿಸಿದ್ದೇವೆ’ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಹೇಳಿದರು.

ಬಿದ್ದಿದ್ದು ಭರತ್ ಕಡೆಯವರ ಗುಂಡು

ಒಂದನೇ ಪುಟದಿಂದ...

ವಿಧಿವಿಜ್ಞಾನ ತಜ್ಞರು ಹಿಂದಿನ ದಿನ ಘಟನಾ ಸ್ಥಳದಲ್ಲಿ ಸಂಗ್ರಹಿಸಿದ ವಸ್ತುಗಳು ಹಾಗೂ ಮರಣೋತ್ತರ ಪರೀಕ್ಷೆಯ ಸಂದರ್ಭದಲ್ಲಿ ರಾಜಶೇಖರ ಅವರ ದೇಹದಲ್ಲಿ ಸಿಕ್ಕ ವಸ್ತುಗಳನ್ನು ನಾರಾ ಭರತ್ ರೆಡ್ಡಿ ಮತ್ತು ಆಪ್ತರ ಅಂಗರಕ್ಷಕರಿಂದ ಜಪ್ತಿ ಮಾಡಿಕೊಂಡ ಐದು ಬಂದೂಕುಗಳ ಗುಂಡುಗಳ ಜೊತೆ ಹೋಲಿಕೆ ಮಾಡಲಾಗಿದ್ದು, ಗುಂಡು ಭರತ್ ರೆಡ್ಡಿ ಆಪ್ತರ ಅಂಗರಕ್ಷಕರ ಬಂದೂಕಿನಿಂದಲೇ ಸಿಡಿದಿತ್ತು ಎಂಬುದು ದೃಢವಾಗಿದೆ ಎಂದು ಹೇಳಾಗಿದೆ.

ಇದಕ್ಕೆ ಪೂರಕ ಎಂಬಂತೆ ಭರತ್ ರೆಡ್ಡಿ ಅವರ ಖಾಸಗಿ ಅಂಗರಕ್ಷಕರು ಜನಾರ್ದನ ರೆಡ್ಡಿ ಮನೆಯತ್ತ ಮತ್ತು ಇತರ ಕಡೆ ಗುಂಡು ಹಾರಿಸುತ್ತಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

‘ಜನಾರ್ದನ ರೆಡ್ಡಿಯದ್ದೇ ಗುಂಡು‘: ರಾಜಶೇಖರ ಸಾವಿನ ಕುರಿತು ಅವರ ಸಹೋದರ ಈಶ್ವರ ರೆಡ್ಡಿ ಬ್ರೂಸ್‌ಪೇಟೆ ಠಾಣೆಯಲ್ಲಿ ದಾಖಲಿಸಿದ ಪ್ರಕರಣದಲ್ಲಿ (0001/2026), ‘ಖುದ್ದು ಶಾಸಕ ಜನಾರ್ದನ ರೆಡ್ಡಿ ಅವರೇ ಗುಂಡು ಹಾರಿಸಿ ಕೊಂದು, ನನ್ನ ತಂಟೆಗೆ ಬಂದವರಿಗೆ ಇದೇ ಗತಿ ಆಗುತ್ತದೆ. ಜೀವ ತೆಗೆದುಬಿಡ್ತೀನಿ ಎಂದು ಜೀವ ಬೆದರಿಕೆ ಹಾಕಿದರು’ ಎಂದು ಆರೋಪಿದ್ದಾರೆ.

ಬಂದೂಕುಗಳು ಠಾಣೆಗೆ: ಘರ್ಷಣೆಯಲ್ಲಿ ಆದ ಸಾವಿನ ತನಿಖೆ ನಡೆಸುತ್ತಿರುವ ಪೊಲೀಸರು ನಾರಾ ಭರತ್ ರೆಡ್ಡಿ ಮತ್ತು ಅವರ ಆಪ್ತರ ಖಾಸಗಿ ಮತ್ತು ಸರ್ಕಾರಿ ಅಂಗರಕ್ಷಕರ ಐದು ಬಂದೂಕುಗಳನ್ನು ವಶಕ್ಕೆ ಪಡೆದಿದ್ದಾರೆ. ಅವುಗಳನ್ನು ನಗರದ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಇಟ್ಟಿದ್ದಾರೆ.

> ಮೃತ ರಾಜಶೇಖರ ಒಡಲಲ್ಲಿ ಸಿಕ್ಕಿದ್ದು ಭರತ್ ರೆಡ್ಡಿ ಅಂಗರಕ್ಷಕರ ಗುಂಡು ಎಂಬುದು ಖಚಿತವಾಗಿದೆ. ಅದನ್ನು ಸಾಬೀತು ಮಾಡಲು ನಮ್ಮ ಬಳಿ ಸಾಕಷ್ಟು ಸಾಕ್ಷ್ಯಗಳು, ವೈಜ್ಞಾನಿಕ ಪುರಾವೆಗಳು ಇವೆ
> **ಹಿರಿಯ ಪೊಲೀಸ್ ಅಧಿಕಾರಿ**

ಶವಯಾತ್ರೆಗೆ ಹೆಗಲು ಕೊಟ್ಟ ಶಾಸಕರು: ವಿಮ್ಸ್‌ನಲ್ಲಿ ಇರಿಸಲಾಗಿದ್ದ ರಾಜಶೇಖರ ಅವರ ಮೃತದೇಹವನ್ನು ಹುಸೇನ್ ನಗರದಲ್ಲಿ ಇರುವ ಮನೆಗೆ ಬಿಗಿ ಭದ್ರತೆಯಲ್ಲಿ ಒಯ್ಯಲಾಯಿತು. ಅಲ್ಲಿಗೆ ಬಂದ ಶಾಸಕರಾದ ನಾರಾ ಭರತ್ ರೆಡ್ಡಿ ಮತ್ತು ಜೆ.ಎನ್ ಗಣೇಶ್ ಅಂತಿಮ ದರ್ಶನ ಪಡೆದರು. ಈ ವೇಳೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಶಾಸಕರಾದ ನಾರಾ ಭರತ್ ರೆಡ್ಡಿ ಮತ್ತು ಜೆ.ಎನ್ ಗಣೇಶ್ ಶವಯಾತ್ರೆಗೆ ಹೆಗಲು ನೀಡಿದರು. ರೂಪನಗುಡಿ ರಸ್ತೆಯಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಿತು. ‘ಸರ್ಕಾರದಿಂದ ಮೃತನ ಕುಟುಂಬಕ್ಕೆ ಪರಿಹಾರ ಕೊಡಿಸುವೆ. ವೈಯಕ್ತಿಕವಾಗಿಯೂ ಕೊಡುವೆ’ ಎಂದು ಭರತ್ ರೆಡ್ಡಿ ಹೇಳಿದರು.

ದೊಡ್ಡ ಮಟ್ಟದಲ್ಲಿ ಶವಯಾತ್ರೆ ಮಾಡಲು ಕಾಂಗ್ರೆಸ್ಸಿಗರು ಆರಂಭದಲ್ಲಿ ಪ್ರಯತ್ನಿಸಿದ್ದರು. ಆದರೆ, ಅದಕ್ಕೆ ಅವಕಾಶ ನಿರಾಕರಿಸಲಾಯಿತು. ಅಂತಿಮವಾಗಿ ನಿರ್ದಿಷ್ಟ ಮಾರ್ಗದಲ್ಲಿ ಮಾತ್ರವೇ ಶವಯಾತ್ರೆ ಮಾಡಲು ಸೂಚಿಸಲಾಯಿತು. ಆ ಮಾರ್ಗದಲ್ಲಿ ಸೆಕ್ಷನ್ 144 ಜಾರಿ ಮಾಡಲಾಗಿತ್ತು.

4 ಎಫ್‌ಐಆರ್: ರೆಡ್ಡಿ ಎ1

ಒಂದನೇ ಪುಟದಿಂದ...

ಎಲ್ಲ ಪ್ರಕರಣಗಳಲ್ಲೂ ಶಾಸಕ ಜನಾರ್ದನ ರೆಡ್ಡಿ, ಸೋಮಶೇಖರ ರೆಡ್ಡಿ ಮತ್ತು ಶ್ರೀರಾಮುಲು ಅವರನ್ನು ಕ್ರಮವಾಗಿ ಎ1, ಎ2, ಎ3 ಆರೋಪಿಗಳನ್ನಾಗಿ ಮಾಡಲಾಗಿದೆ.

ಪೊಲೀಸರು ದಾಖಲು ಮಾಡಿರುವ ಸ್ವಯಂ ಪ್ರೇರಿತ ಪ್ರಕರಣದಲ್ಲಿ ಶಾಸಕ ಜನಾರ್ದನ ರೆಡ್ಡಿ ಮತ್ತು ಸಹಚರರ ಜೊತೆಗೆ, ಭರತ್ ರೆಡ್ಡಿ ಅವರ ಆಪ್ತ ಸತೀಶ್ ರೆಡ್ಡಿ ಅವರನ್ನೂ ಆರೋಪಿಯನ್ನಾಗಿ ಮಾಡಲಾಗಿದೆ.

ಆರೋಪವಿದ್ದರೂ ಭರತ್ ಮೇಲಿಲ್ಲ ಕೇಸು: ಪೊಲೀಸರು ಸ್ವಯಂಪ್ರೇರಿತರಾಗಿ ದಾಖಲಿಸಿರುವ 04/2026ನೇ ಎಫ್‌ಐಆರ್‌ನಲ್ಲಿ ‘ಶಾಸಕ ನಾರಾ ಭರತ್ ರೆಡ್ಡಿ 1000 ಜನರ ಗುಂಪು ಕಟ್ಟಿಕೊಂಡು ಜನಾರ್ದನ ರೆಡ್ಡಿ ಮನೆ ಬಳಿಗೆ ಬಂದರು’ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆದರೆ, ಆರೋಪಿಗಳ ಪಟ್ಟಿಯಲ್ಲಿ ಅವರ ಹೆಸರಿಲ್ಲ.

ಬಳ್ಳಾರಿ ಎಸ್‌ಪಿ ಪವನ್ ಅಮಾನತು

ಒಂದನೇ ಪುಟದಿಂದ...

‘ಪರಿಸ್ಥಿತಿ ನಿಭಾಯಿಸುವಲ್ಲಿ ಹಾಗೂ ಹಿರಿಯ ಅಧಿಕಾರಿಗಳಿಗೆ ಘಟನೆಯ ಗಾಂಭೀರ್ಯದ ಬಗ್ಗೆ ಮಾಹಿತಿ ನೀಡುವಲ್ಲಿ ಎಸ್‌ಪಿ ವಿಫಲರಾಗಿದ್ದಾರೆ’ ಎಂದು ವರ್ತಿಕಾ ಕಟಿಯಾರ್ ವರದಿ ನೀಡಿದ್ದರು. ಅದನ್ನು ಆಧರಿಸಿ ಅಮಾನತು ಮಾಡಲಾಗಿದೆ. ಚಿತ್ರದುರ್ಗ ಜಿಲ್ಲಾ ಎಸ್‌ಪಿ ರಂಜಿತ್ ಕುಮಾರ್ ಭಂಡಾರಿ ಅವರಿಗೆ ಬಳ್ಳಾರಿ ಉಸ್ತುವಾರಿ ನೀಡಲಾಗಿದೆ.

‘ಇವಿಎಂ ವಿಶ್ವಾಸಾರ್ಹ’: ರಾಹುಲ್‌ಗೆ ಆಘಾತ ತಂದ ಸಮೀಕ್ಷೆ–ಬಿಜೆಪಿ

ನವದೆಹಲಿ (ಪಿಟಿಐ): ‘ಇವಿಎಂಗಳು ವಿಶ್ವಾಸಾರ್ಹ ಎಂದು ಕರ್ನಾಟಕದಲ್ಲಿ ನಡೆದ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದವರ ಪೈಕಿ ಶೇ 83.61ರಷ್ಟು ಜನರು ಹೇಳಿದ್ದಾರೆ. ರಾಜ್ಯ ಸರ್ಕಾರದ ಸಂಸ್ಥೆಯೇ ನಡೆಸಿದ ಈ ಸಮೀಕ್ಷೆಯ ಫಲಿತಾಂಶ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪಾಲಿಗೆ ಭಾರಿ ಆಘಾತವೇ ಸರಿ’ ಎಂದು ಬಿಜೆಪಿ ಶುಕ್ರವಾರ ಕುಟುಕಿದೆ.

‘ಭಾರತದಲ್ಲಿ ಚುನಾವಣೆಗಳು ಮುಕ್ತ ಮತ್ತು ನ್ಯಾಯ ಸಮ್ಮತವಾಗಿ ನಡೆಯುತ್ತವೆ ಎಂದು ಸಮೀಕ್ಷೆಯ ಭಾಗವಾಗಿದ್ದ ಬಹುತೇಕ ಜನರು ಹೇಳಿದ್ದಾರೆ. ಇದರಿಂದ ಕಾಂಗ್ರೆಸ್ ನಾಯಕ ಹಾಗೂ ಅವರು ಮಾಡುತ್ತಿದ್ದ ಮತ ಕಳುವು ಆರೋಪದ ವಿಶ್ವಾಸಾರ್ಹತೆ ಕುರಿತು ಪ್ರಶ್ನೆಗಳು ಉದ್ಭವಿಸುವಂತಾಗಿದೆ’ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಹೇಳಿದ್ದಾರೆ.

ಭಾಟಿಯಾ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕರ್ನಾಟಕ ಸರ್ಕಾರ ಅಧೀನದ ಸಂಸ್ಥೆಯೊಂದು ಪ್ರಕಟಿಸಿರುವ ಈ ವರದಿಯು ರಾಹುಲ್ ಹಾಗೂ ರಾಜ್ಯದಲ್ಲಿರುವ ಅವರ ಪಕ್ಷದ್ದೇ ಸರ್ಕಾರದ ನಡುವಿನ ವಿರೋಧಾಭಾಸವನ್ನು ಪ್ರತಿಬಿಂಬಿಸುತ್ತದೆ’ ಎಂದು ವಾಗ್ದಾಳಿ ನಡೆಸಿದ್ದಾರೆ. ಮೈಸೂರು ಮೂಲದ ‘ಗ್ರಾಸ್‌ರೂಟ್ಸ್ ರಿಸರ್ಚ್ ಆ್ಯಂಡ್ ಅಡ್ವೊಕಸಿ ಮೂವ್‌ಮೆಂಟ್’ (ಜಿಆರ್‌ಎಎಂ) ಸಂಸ್ಥೆಯು 2025ರ ಮೇ ತಿಂಗಳಿನಲ್ಲಿ ಈ ಸಮೀಕ್ಷೆ ನಡೆಸಿತ್ತು. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಈ ಸಮೀಕ್ಷಾ ವರದಿಯನ್ನು ಪ್ರಕಟಿಸಿದೆ.

‘ಮತಕಳವು ಆರೋಪಕ್ಕೆ ವ್ಯತಿರಿಕ್ತ’

ಇವಿಎಂ ಮೂಲಕ ಮುಕ್ತ ಮತ್ತು ಸ್ವತಂತ್ರವಾಗಿ ಚುನಾವಣೆ ನಡೆಸಲು ಸಾಧ್ಯ ಎಂಬುದನ್ನು ರಾಜ್ಯದ ಬಹುತೇಕ ಜನರು ಒಪ್ಪಿಕೊಂಡಿದ್ದಾರೆ ಎಂಬುದನ್ನು ಕರ್ನಾಟಕ ಸರ್ಕಾರವೇ ಪ್ರಕಟಿಸಿರುವ ವರದಿ ಹೇಳುತ್ತದೆ. ಚುನಾವಣಾ ಆಯೋಗವು ಮತಕಳವಿಗೆ ನೆರವು ನೀಡುತ್ತಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಾಡುತ್ತಿರುವ ಆರೋಪವನ್ನು ಈ ಸಮೀಕ್ಷಾ ವರದಿ ನಿವಾಳಿಸಿ ಬಿಸಾಡುತ್ತದೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಗಂಭೀರ ಪ್ರಶ್ನೆಗಳನ್ನು ‘ತಪ್ಪು’ ಎಂದು ಬಿಂಬಿಸುವ ಕುತಂತ್ರ; ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ

‘ಮತ ಕಳವು’ ಮರೆಮಾಚಲು ಸಮೀಕ್ಷೆ ದುರ್ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ–2024ರ ಕುರಿತು ಚುನಾವಣಾ ಆಯೋಗ ನಡೆಸಿದ ಹಳೆಯ ಸಮೀಕ್ಷೆಯ ಆಯ್ದ ಭಾಗಗಳನ್ನು ಬಳಸಿಕೊಂಡು ‘ಮತ ಕಳವು’ ವಿರುದ್ಧ ರಾಹುಲ್ ಗಾಂಧಿ ಅವರು ಎತ್ತಿರುವ ಗಂಭೀರ ಪ್ರಶ್ನೆಗಳನ್ನು ‘ತಪ್ಪು’ ಎಂದು ಬಿಂಬಿಸುವ ಕುತಂತ್ರ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

‘ಎಕ್ಸ್’ನಲ್ಲಿ ಅಭಿಪ್ರಾಯ ಹಂಚಿಕೊಂಡಿರುವ ಅವರು, ‘ಜನರಲ್ಲಿ ಮತದಾನದ ಬಗ್ಗೆ ಅರಿವು ಮೂಡಿಸುವ ಆಡಳಿತಾತ್ಮಕ ಮೌಲ್ಯಮಾಪನದ ಉದ್ದೇಶದಿಂದ ಭಾರತದ ಚುನಾವಣಾ ಆಯೋಗದ ಆದೇಶದಂತೆ ಸಮೀಕ್ಷೆ ನಡೆದಿತ್ತು. ರಾಹುಲ್ ಗಾಂಧಿ ಅವರು ಆರೋಪಿಸಿರುವ ಮತ ಕಳವು ವಿರುದ್ಧದ ಜನಾಭಿಪ್ರಾಯ ಸಂಗ್ರಹ ಅಲ್ಲ. ಜನರ ದಾರಿ ತಪ್ಪಿಸುವ ದುರುದ್ದೇಶದ ರಾಜಕೀಯ ಹುನ್ನಾರಕ್ಕೆ ಸಮೀಕ್ಷೆ ಬಳಸಿಕೊಳ್ಳಲಾಗಿದೆ’ ಎಂದು ಟೀಕಿಸಿದ್ದಾರೆ.

‘ಈ ಸಮೀಕ್ಷೆಯನ್ನು 2025ನೇ ಮೇ ನಲ್ಲಿ ನಡೆಸಲಾಗಿದೆ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ಅಕ್ರಮಗಳ ಕುರಿತು ಪುರಾವೆ ಸಹಿತ ಸುದ್ದಿಗೋಷ್ಠಿ ನಡೆಸಿದ್ದು 2025ನೇ ಆಗಸ್ಟ್‌ನಲ್ಲಿ. ಸಮೀಕ್ಷೆ ನಡೆದ ಮೂರು ತಿಂಗಳ ಬಳಿಕ ರಾಹುಲ್ ಅವರು ಮತ ಕಳವಿನ ವಿರುದ್ಧ ಧ್ವನಿ ಎತ್ತಿದ್ದಾರೆ. ಹಿಂದಿನ ಜನಾಭಿಪ್ರಾಯದ ದತ್ತಾಂಶಗಳನ್ನು ಬಳಸಿಕೊಂಡು ನಂತರದ ಮತ ಕಳವು ಆರೋಪಕ್ಕೆ ಜನಮನ್ನಣೆ ಇಲ್ಲ ಎಂದು ಬಿಂಬಿಸುತ್ತಿರುವುದು ಹಾಸ್ಯಾಸ್ಪದ’ ಎಂದಿದ್ದಾರೆ.

‘ಸುಮಾರು 5.3 ಕೋಟಿ ಮತದಾರರನ್ನು ಹೊಂದಿರುವ ರಾಜ್ಯದಲ್ಲಿ ಕೇವಲ 5,100 ಜನರನ್ನಷ್ಟೇ ಸಮೀಕ್ಷೆಗೆ ಒಳಪಡಿಸಲಾಗಿದೆ. ಇದು ಮತದಾರರನ್ನು ಶೇ 0.1ಕ್ಕಿಂತ ಕಡಿಮೆ. ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ಮತದಾರರ ಪಟ್ಟಿಯನ್ನು ತಿರುಚಿರುವುದು ಸತ್ಯ. ಅಂತಹ ಕ್ಷೇತ್ರದಲ್ಲಿ ಸಮೀಕ್ಷೆಗೆ ಒಳಪಟ್ಟಿರುವವರ ಸಂಖ್ಯೆ ಎರಡಂಕಿ ದಾಟಿಲ್ಲ. ಇದನ್ನೇ ಜನರ ತೀರ್ಮಾನ ಎಂದು ಬಿಂಬಿಸುವುದು ಸಮಂಜಸವಲ್ಲ’ ಎಂದು ಹೇಳಿದ್ದಾರೆ.

ಸಮೀಕ್ಷೆಯನ್ನು ಆರ್. ಬಾಲಸುಬ್ರಮಣ್ಯಂ ಸ್ಥಾಪಿಸಿದ ಜಿಆರ್‌ಎಎಂ ಎಂಬ ಎನ್‌ಜಿಒ ನಡೆಸಿದೆ. ಬಾಲಸುಬ್ರಮಣ್ಯಂ ಅವರು ಕೇಂದ್ರ ಸರ್ಕಾರ ನೇಮಿಸಿರುವ ಒಂದು ಹುದ್ದೆಯಲ್ಲಿ ಇದ್ದಾರೆ. ಅವರು 2024ರಲ್ಲಿ ಪ್ರಧಾನಿ ಮೋದಿ ಬಗ್ಗೆ ಬರೆದಿರುವ ಪುಸ್ತಕವನ್ನು ನೋಡಿದರೆ ಅವರ ಅಂಧ ಅಭಿಮಾನಿಯಂತೆ ಕಾಣುತ್ತಾರೆ. ಇಂತಹ ಹೊಗಳುಭಟರು ನಡೆಸಿರುವ ಸಮೀಕ್ಷೆ ನಂಬಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ.

ಆಳಂದದಲ್ಲಿ ಸುಮಾರು 5,994 ಅಧಿಕೃತ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಲು ಪ್ರಯತ್ನಿಸಿದ ಆರೋಪ ಕುರಿತು ತನಿಖೆ ನಡೆಸಿದ ಎಸ್‌ಐಟಿ 22,000 ಪುಟಗಳ ಆರೋಪಪಟ್ಟಿ ಸಲ್ಲಿಸಿದೆ. ಬಿಜೆಪಿಯ ಮಾಜಿ ಶಾಸಕ ಸೇರಿದಂತೆ ಏಳು ಆರೋಪಿಗಳಿದ್ದಾರೆ. ಆರೋಪವನ್ನು ಮರೆಮಾಚಲು ಚುನಾವಣಾ ಆಯೋಗವೇ ವ್ಯವಸ್ಥಿತವಾಗಿ ಪ್ರಯತ್ನಿಸಿರುವುದು ಕಂಡುಬಂದಿದೆ ಎಂದು ಆರೋಪಿಸಿದ್ದಾರೆ.

ಸಿಇಒ ಕಚೇರಿಯಿಂದ ಬಿಡುಗಡೆ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ತನ್ನ ಜಾಲತಾಣದಲ್ಲಿ ಪ್ರಕಟಿಸಲಾಗಿತ್ತು ಎನ್ನಲಾದ ‘ಲೋಕಸಭಾ ಚುನಾವಣೆ–2024’ ವರದಿಯು ಈಗ ಪ್ರಾಧಿಕಾರದ ಜಾಲತಾಣದಲ್ಲಿ ಲಭ್ಯವಿಲ್ಲ. ಆದರೆ, ಇದೇ ವರದಿಯನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯಿಂದ (ಸಿಇಒ) ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗಿದೆ. ಚುನಾವಣಾ ಆಯೋಗದ ಮಾಹಿತಿ ನೀಡಲು ವಾಟ್ಸ್‌ಆ್ಯಪ್ ಗ್ರೂಪ್ ಬಳಕೆಯಲ್ಲಿದೆ. ಶುಕ್ರವಾರ ಮಧ್ಯಾಹ್ನ ಈ ಗ್ರೂಪ್‌ನಲ್ಲಿ ಸದರಿ ವರದಿಯ ಪಿಡಿಎಫ್ ಕಡತವನ್ನು ಹಂಚಿಕೊಳ್ಳಲಾಗಿದೆ.

ಮೋದಿ ಮೆಚ್ಚಿಸಲು ಆಪ್ತನ ಸಮೀಕ್ಷೆ

‘ಇವಿಎಂ ವಿಶ್ವಾಸಾರ್ಹತೆ ಕುರಿತು ಸಮೀಕ್ಷೆ ನಡೆಸಿದ್ದು ಪ್ರಧಾನಮಂತ್ರಿ ನರೇಂದ್ರ ಮೋದಿ ಆಪ್ತ. ಹಿಂದೆ ಮೋದಿ ಹೊಗಳಿ ಪುಸ್ತಕ ರಚಿಸಿದ್ದ ಅವರು, ಈಗ ಅವರನ್ನು ಮೆಚ್ಚಿಸಲು ಸಮೀಕ್ಷೆ ನಡೆಸಿದ್ದಾರೆ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದ್ದಾರೆ.

ರಾಜ್ಯ ಮುಖ್ಯ ಚುನಾವಣಾಧಿಕಾರಿಯ ಆದೇಶದಂತೆ ಸಮೀಕ್ಷೆ ನಡೆಸಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ 50 ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಇಂತಹ ಯೋಗ್ಯವಲ್ಲದ ಸಮೀಕ್ಷೆ ಇಟ್ಟುಕೊಂಡು ವಿರೋಧ ಪಕ್ಷಗಳು ರಾಜ್ಯ ಸರ್ಕಾರದ ಸಮೀಕ್ಷೆ ಎಂಬಂತೆ ಬಿಂಬಿಸಿವೆ. ಆಳಂದ ಪ್ರಕರಣದಲ್ಲಿ ಬಿಜೆಪಿ ಮಾಜಿ ಶಾಸಕ ಮೊದಲ ಆರೋಪಿಯಾಗಿದ್ದರೂ ಮೌನವಹಿಸಿವೆ ಎಂದು ಟೀಕಿಸಿದ್ದಾರೆ.

ಚಟಿಕೆ ಸುದ್ದಿ

ಸೌದಿ ಅರೇಬಿಯಾಕ್ಕೆ ಔಷಧಿ ಒಯ್ಯಲು ಅನುಮತಿ ಕಡ್ಡಾಯ

ನವದೆಹಲಿ: ಸೌದಿ ಅರೇಬಿಯಾಕ್ಕೆ ಪ್ರಯಾಣ ಬೆಳೆಸುವ ಭಾರತೀಯ ಪ್ರವಾಸಿಗರು ತಮ್ಮ ವೈಯಕ್ತಿಕ ಬಳಕೆಗಾಗಿ ತೆಗೆದುಕೊಂಡು ಹೋಗುವ ಔಷಧಿಗಳ ಕುರಿತು ಅಲ್ಲಿನ ಆಡಳಿತದಿಂದ ಆನ್‌ಲೈನ್ ಮೂಲಕ ಕಡ್ಡಾಯವಾಗಿ ಅನುಮತಿ ಪಡೆಯಬೇಕಾಗಿದೆ ಎಂದು ಎನ್‌ಸಿಬಿ ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತ ಮತ್ತು ಇತರ ದೇಶಗಳಲ್ಲಿ ಕಾನೂನಾತ್ಮಕ ವಾಗಿ ಲಭ್ಯವಿರುವ ಕೆಲ ಔಷಧಿಗಳನ್ನು ಸೌದಿ ಅರೇಬಿಯಾ 'ನಿರ್ಬಂಧಿತ' ಅಥವಾ 'ನಿಷೇಧಿತ' ಎಂದು ಘೋಷಿಸಿರಬಹುದು. ಹೀಗಾಗಿ ಕೆಲ ಔಷಧಿಗಳನ್ನು ವೈಯಕ್ತಿಕ ಬಳಕೆಗಾಗಿ ಸೌದಿಗೆ ತೆಗೆದುಕೊಂಡು ಹೋಗುವ ಭಾರತೀಯ ಪ್ರವಾಸಿಗರು ಅದಕ್ಕೆ ಅಗತ್ಯ ಅನುಮತಿ ಪಡೆಯಬೇಕು ಎಂದು ಅದು ಸಲಹೆ ನೀಡಿದೆ. ವೈಯಕ್ತಿಕ ಬಳಕೆಗಾಗಿ ಔಷಧಿಗಳನ್ನು ತೆಗೆದುಕೊಂಡು ಸೌದಿಗೆ ಹೋಗುವ ಪ್ರವಾಸಿಗರು https://cds.sfda.gov.sa ವೆಬ್‌ಸೈಟ್‌ನಲ್ಲಿ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು ಎಂದು ಅದು ಹೇಳಿದೆ.

ಲಂಚ: ಐಎಎಸ್ ಅಧಿಕಾರಿ ಬಂಧನ

ಅಹಮದಾಬಾದ್(ಪಿಟಿಐ): ಲಂಚ ಪ್ರಕರಣವೊಂದರ ಜೊತೆ ಹಣ ಅಕ್ರಮ ವರ್ಗಾವಣೆ ನಂಟಿರುವ ಆರೋಪಕ್ಕೆ ಸಂಬಂಧಿಸಿ ಐಎಎಸ್ ಅಧಿಕಾರಿ ರಾಜೇಂದ್ರ ಕುಮಾರ್ ಪಟೇಲ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಬಂಧಿಸಿದ್ದಾರೆ.

2015 ರ ಬ್ಯಾಚ್‌ನ ಐಎಎಸ್ ಅಧಿಕಾರಿ ಪಟೇಲ್ ಅವರು ಸುರೇಂದ್ರನಗರ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದರು.

ವಿದ್ಯುನ್ಮಾನ ಮತ ಯಂತ್ರಗಳ (ಇವಿಎಂ) ಬಗ್ಗೆ ನಿಮ್ಮ ನಿಲುವೇನು?

- ನಿಖರವಾಗಿದೆ
- ಸುಧಾರಣೆಯ ಅಗತ್ಯವಿದೆ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

2,520 ಮೆ.ವಾ ಸೌರ ವಿದ್ಯುತ್: ಟೆಂಡರ್

'ಕುಸುಮ್-ಸಿ' ಯೋಜನೆ: ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನಲ್ಲೂ ವಿದ್ಯುತ್

● ಎ.ಎಂ.ಸುರೇಶ

ಬೆಂಗಳೂರು: ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ಹೊತ್ತಿನಲ್ಲೇ ಗುಣಮಟ್ಟದ ವಿದ್ಯುತ್ ಪೂರೈಸುವ ಉದ್ದೇಶದಿಂದ ರೂಪಿಸಿರುವ ಕುಸುಮ್-ಸಿ ಯೋಜನೆಯಡಿ ರಾಜ್ಯದಲ್ಲಿ 2,520 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಸರ್ಕಾರ ಮುಂದಡಿ ಇಟ್ಟಿದೆ.

ಆರಂಭದಲ್ಲಿ ಈ ಯೋಜನೆಯಡಿ 3,900 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಇತ್ತು. ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ರಾಜ್ಯದಲ್ಲಿ ಇನ್ನೂ 750 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಅವಕಾಶ ಕಲ್ಪಿಸಿದೆ. 2,520 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಟೆಂಡರ್ ಕರೆಯಲಾಗಿದೆ.

ಯೋಜನೆಯಡಿ 1 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಸುಮಾರು ₹4 ಕೋಟಿ ವೆಚ್ಚವಾಗಲಿದೆ. ಕೇಂದ್ರ ಸರ್ಕಾರವು ₹1 ಕೋಟಿ ಸಹಾಯಧನ ನೀಡಲಿದೆ. ಉಳಿದ ಹಣವನ್ನು ಖಾಸಗಿ ಕಂಪನಿಗಳೇ ಭರಿಸಬೇಕಾಗುತ್ತದೆ. ಉತ್ಪಾದನಾ ವೆಚ್ಚ ಆಧರಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಪ್ರತಿ ಯೂನಿಟ್ ವಿದ್ಯುತ್‌ಗೆ ಗರಿಷ್ಠ ₹3.17 ದರ ನಿಗದಿಪಡಿಸಿದೆ. ಆ ಪ್ರಕಾರ ಖರೀದಿ ಮಾಡಿ, ಆಯಾ ಫೀಡರ್‌ಗಳ ವ್ಯಾಪ್ತಿಯಲ್ಲಿ ಬರುವ ರೈತರ ಪಂಪ್‌ಸೆಟ್‌ಗಳಿಗೆ ಪೂರೈಸಲಾಗುತ್ತದೆ.

ಕುಸುಮ್-ಸಿ ಯೋಜನೆಯಡಿ ರಾಜ್ಯದಲ್ಲಿನ 397 ವಿದ್ಯುತ್ ಸರಬರಾಜು ಉಪ ಕೇಂದ್ರಗಳ ವ್ಯಾಪ್ತಿಯಲ್ಲಿ 2,520 ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳನ್ನು ಆರಂಭಿಸಲಾಗುತ್ತದೆ. ಇದರಿಂದ 1,684 ಫೀಡರ್‌ಗಳ ಮೂಲಕ 6,70,185 ಕೃಷಿ ಪಂಪ್‌ಸೆಟ್‌ಗಳಿಗೆ ಸೌರ ವಿದ್ಯುತ್ ನೀಡಲು ಉದ್ದೇಶಿಸಲಾಗಿದೆ. ಇದರಿಂದಾಗಿ ರೈತರ ಬೆಳೆಗಳಿಗೆ ನೀರು ಹರಿಸಲು ಹಗಲಿನಲ್ಲೇ ವಿದ್ಯುತ್ ಲಭ್ಯವಾಗಲಿದೆ. ಅಲ್ಲದೆ ವಿದ್ಯುತ್ ಪರಿವರ್ತಕಗಳ ಮೇಲಿನ ಒತ್ತಡವೂ ಕಡಿಮೆಯಾಗಲಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಕುಸುಮ್-ಸಿ ಯೋಜನೆಯಡಿ ಒಟ್ಟು 1,159 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದಿಸುವ 157 ಯೋಜನೆಗಳಿಗೆ ಅನುಮತಿ ನೀಡಲಾಗಿದೆ. ಈ ಪೈಕಿ ಸುಮಾರು 200 ಮೆಗಾವಾಟ್ ಸಾಮರ್ಥ್ಯದ 32 ಯೋಜನೆಗಳು ಪೂರ್ಣಗೊಂಡಿವೆ. ಈ ತಿಂಗಳ ಅಂತ್ಯದ ವೇಳೆಗೆ 500 ಮೆಗಾವಾಟ್ ಹಾಗೂ ಮಾರ್ಚ್‌ಗೆ 1,051 ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಗಳು ಪೂರ್ಣಗೊಳ್ಳಲಿದೆ.



ಕೆರೆಗಳ ಜಾಗ ಬಳಕೆ: 'ಬೆಂಗಳೂರು ಸುತ್ತಮುತ್ತ ಭೂಮಿಯ ಬೆಲೆ ಜಾಸ್ತಿ ಇದ್ದು ರೈತರು ಜಾಗ ನೀಡಲು ಮುಂದೆ ಬರುತ್ತಿಲ್ಲ. ಹೀಗಾಗಿ ಸಣ್ಣ ನೀರಾವರಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿರುವ ಕೆರೆಗಳ ಅಂಗಳ ಬಳಸಿಕೊಂಡು ಸೌರ ವಿದ್ಯುತ್ ಘಟಕಗಳನ್ನು ಆರಂಭಿಸಲಾಗುತ್ತಿದೆ' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೂಲಿಬೆಲೆ, ಕುಂದಾಣ ಕೆರೆ ಅಂಗಳದಲ್ಲಿ ಈಗಾಗಲೇ ಸೌರವಿದ್ಯುತ್ ಘಟಕಗಳನ್ನು ಆರಂಭಿಸಿ, ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಇದಲ್ಲದೆ ದೊಡ್ಡಬಳ್ಳಾಪುರ, ಹೊಸಕೋಟೆ, ದೇವನಹಳ್ಳಿಯ ವಿವಿಧ ಉಪಕೇಂದ್ರಗಳ ವ್ಯಾಪ್ತಿಯ ಕೆರೆ ಅಂಗಳದಲ್ಲಿ 10 ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಒಂದು ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಸುಮಾರು ನಾಲ್ಕು ಎಕರೆ ಜಾಗ ಬೇಕಾಗುತ್ತದೆ. ಈ ಜಾಗವನ್ನು 25 ವರ್ಷಕ್ಕೆ ಗುತ್ತಿಗೆ ಪಡೆಯಬಹುದು. ಒಂದು ಎಕರೆಗೆ ವರ್ಷಕ್ಕೆ ₹25 ಸಾವಿರ ಬಾಡಿಗೆ ನಿಗದಿಪಡಿಸಲಾಗಿದೆ. ಈ ದರವನ್ನು ನೀಡಿ ಖಾಸಗಿಯವರು ರೈತರಿಂದ ಜಮೀನು ಪಡೆಯಬಹುದು. ಒಂದು ವೇಳೆ ಸರ್ಕಾರಿ ಜಾಗ ಇದ್ದರೆ, ಅದನ್ನು ನೀಡಲಾಗುತ್ತದೆ. ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ರೈತರು ಭೂಮಿಯನ್ನು ಗುತ್ತಿಗೆಗೆ ನೀಡುವ ಮೂಲಕ ಆದಾಯಗಳಿಸಬಹುದು.

'ಖಾಸಗಿಯವರು ಸೌರ ಘಟಕಗಳನ್ನು ಆರಂಭಿಸಿ, ವಿದ್ಯುತ್ ಉತ್ಪಾದಿಸುತ್ತಾರೆ. ಅದನ್ನು ಸರ್ಕಾರ ಖರೀದಿಸಿ ಆಯಾ ಫೀಡರ್‌ಗಳ ವ್ಯಾಪ್ತಿಯ ಕೃಷಿ ಪಂಪ್‌ಸೆಟ್‌ಗಳಿಗೆ ಪೂರೈಸಲಿದೆ. ಸ್ಥಳೀಯವಾಗಿ ಉಪಕೇಂದ್ರಗಳ ವ್ಯಾಪ್ತಿಯಲ್ಲೇ ಸೌರ ವಿದ್ಯುತ್ ಉತ್ಪಾದನೆ ಆಗುವುದರಿಂದ ಪ್ರಸರಣ ನಷ್ಟ ಇರುವುದಿಲ್ಲ' ಎಂದು ಶಿವಶಂಕರ್ ತಿಳಿಸಿದರು.

ಮುಖ್ಯಾಂಶಗಳು

- 2025ರ ಜೂನ್‌ನಲ್ಲಿ 'ಕುಸುಮ್ ಸಿ'ಗೆ ಚಾಲನೆ
- ಒಟ್ಟು 4,650 ಮೆಗಾವಾಟ್ ವಿದ್ಯುತ್ ಉತ್ಪಾದನೆಯ ಗುರಿ
- ರೈತರಿಗೆ ಜಮೀನು ಬಾಡಿಗೆಗೆ ನೀಡಲು ಅವಕಾಶ

'ರೈತರು ಭೂಮಿ ನೀಡಲು ಮುಂದೆ ಬರಲಿ'

'ಕುಸುಮ್-ಸಿ' ಯೋಜನೆ ಬಯಲು ಸೀಮೆ ಭಾಗದ ರೈತರಿಗೆ ವರದಾನವಾಗಿದೆ. ಇದನ್ನು ಅನುಷ್ಠಾನಗೊಳಿಸಲು ಸರ್ಕಾರ ಎಲ್ಲಾ ರೀತಿಯ ಬೆಂಬಲ ನೀಡುತ್ತಿದೆ. ಆದರೆ, ಇದಕ್ಕೆ ಭೂಮಿಯ ಕೊರತೆ ಇದೆ. ಸ್ಥಳೀಯ ಶಾಸಕರು ಆಸಕ್ತಿ ವಹಿಸಿ, ಯೋಜನೆ ಜಾರಿಗೆ ಸಹಕಾರ ನೀಡಿದರೆ ರೈತರಿಗೆ ಅನುಕೂಲವಾಗಲಿದೆ. ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ರೈತರೇ ಭೂಮಿಯನ್ನು ಗುತ್ತಿಗೆಗೆ ನೀಡುವ ಮೂಲಕ ವಾರ್ಷಿಕವಾಗಿ ಆದಾಯ ಗಳಿಸಬಹುದು. ಹಾಗಾಗಿ, ರೈತರು ಭೂಮಿ ನೀಡಲು ಮುಂದೆ ಬರಬೇಕು.

ಕೆ.ಜೆ. ಜಾರ್ಜ್, ಇಂಧನ ಸಚಿವ

ಪ್ರತೀಕಾರಕ್ಕೆ ಕ್ರಿಮಿನಲ್ ದಾವೆ ಸಲ್ಲ

'ಪರಿತ್ಯಕ್ತ ಪತಿಯು ತಾನು ಕಳುಹಿಸಿದ ಹಣವನ್ನು ಖರ್ಚು ಮಾಡಿದ್ದರ ಕುರಿತು ಪರಿತ್ಯಕ್ತ ಪತ್ನಿಯಿಂದ ವಿವರ ಕೇಳುವುದು ಕ್ರೌರ್ಯ ಎನಿಸುವುದಿಲ್ಲ'

'ಹಣಕಾಸು: ಪತಿ ಪ್ರಾಬಲ್ಯ ಕ್ರೌರ್ಯವಲ್ಲ'

ನವದೆಹಲಿ(ಪಿಟಿಐ): ಹಣಕಾಸು ವಿಚಾರಕ್ಕೆ ಸಂಬಂಧಿಸಿ ಪತಿಯೊಬ್ಬ ತನ್ನ ಪರಿತ್ಯಕ್ತ ಪತ್ನಿ ಮೇಲೆ ಅಧಿಕಾರ ಚಲಾಯಿಸಿದರೆ ಅಥವಾ ಪ್ರಾಬಲ್ಯ ಪ್ರದರ್ಶಿಸಿದರೆ ಅದನ್ನು ಕ್ರೌರ್ಯ ಎಂಬುದಾಗಿ ಪರಿಗಣಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಒಡಕು ಮೂಡಿರುವ ವೈವಾಹಿಕ ಸಂಬಂಧಗಳಲ್ಲಿ, ಕ್ರಿಮಿನಲ್ ಮೊಕದ್ದಮೆ ಎಂಬುದು ಪ್ರತೀಕಾರ ತೀರಿಸಿಕೊಳ್ಳಲು ಹಾಗೂ ವೈಯಕ್ತಿಕ ದ್ವೇಷ ಸಾಧಿಸಲು ಅಸ್ತ್ರವಾಗಬಾರದು' ಎಂದೂ ಹೇಳಿದೆ.

ಪರಿತ್ಯಕ್ತ ಪತಿ ವಿರುದ್ಧ ಪತ್ನಿ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣವನ್ನು ವಜಾಗೊಳಿಸಿ ತೀರ್ಪು ನೀಡಿದ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ. 'ಪತಿ ತನಗೆ ಚಿತ್ರಹಿಂಸೆ ಹಾಗೂ ವರದಕ್ಷಿಣೆಗಾಗಿ ಕಿರುಕುಳ ನೀಡುತ್ತಿದ್ದಾನೆ' ಎಂದು ಆರೋಪಿಸಿ ಮಹಿಳೆ ಪ್ರಕರಣ ದಾಖಲಿಸಿದ್ದರು.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಹಾಗೂ ಆರ್.ಮಹದೇವನ್ ಅವರು ಇದ್ದ ನ್ಯಾಯಪೀಠವು ಪತಿ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದತಿಗೆ ನಿರಾಕರಿಸಿ ತೆಲಂಗಾಣ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಕೂಡ ರದ್ದುಪಡಿಸಿದೆ.

'ಪ್ರತಿವಾದಿ ಆರೋಪಿಸಿರುವಂತೆ, ಮೇಲ್ಮನವಿದಾರ(ಪತಿ) ಹಣಕಾಸು ವಿಚಾರದಲ್ಲಿ ತೋರಿದ್ದಾನೆ ಎನ್ನಲಾದ ಪ್ರಾಬಲ್ಯವನ್ನು ಕ್ರೌರ್ಯವೆಂದು ಪರಿಗಣಿಸಲು ಸಾಧ್ಯವಿಲ್ಲ. ಅದರಲ್ಲೂ, ವಾಸ್ತವಿಕವಾದ ಮಾನಸಿಕ ಅಥವಾ ದೈಹಿಕ ಹಿಂಸೆ ಇರದಿದ್ದಾಗ ಇಂತಹ ನಡೆಯನ್ನು ಕ್ರೌರ್ಯ ಎನ್ನಲಾಗದು' ಎಂದು ನ್ಯಾಯಪೀಠ ಹೇಳಿದೆ. 'ಈ ಪ್ರಕರಣವು ಭಾರತೀಯ ಸಮಾಜದ ಪ್ರತಿಬಿಂಬವಾಗಿದೆ ಎಂದು ಅಭಿಪ್ರಾಯಪಟ್ಟಿದೆ.

ಕೆಕೆಆರ್ ತಂಡಕ್ಕೆ ಬಾಂಗ್ಲಾ ಕ್ರಿಕೆಟಿಗ ಮುಸ್ತಫಿಝೂರ್ ರೆಹಮಾನ್ ಖರೀದಿ

ಶಾರುಕ್ ವಿರುದ್ಧ ಬಿಜೆಪಿ, ಶಿವಸೇನಾ ಕಿಡಿ

ನವದೆಹಲಿ (ಪಿಟಿಐ): ಬಾಲಿವುಡ್ ನಟ ಶಾರುಕ್ ಖಾನ್ ಅವರು ಬಾಂಗ್ಲಾದೇಶದ ಕ್ರಿಕೆಟಿಗ ಮುಸ್ತಫಿಝೂರ್ ರೆಹಮಾನ್ ಅವರನ್ನು ತಮ್ಮ ಕೆಕೆಆರ್ ಐಪಿಎಲ್ ತಂಡಕ್ಕೆ ಖರೀದಿಸಿರುವುದು ವಿವಾದಕ್ಕೆ ಕಾರಣವಾಗಿದೆ.

ಶಾರುಕ್

ಬಿಜೆಪಿ ಮತ್ತು ಶಿವಸೇನಾ (ಶಿಂಧೆ ಬಣ) ಪಕ್ಷಗಳು ಶಾರುಕ್ ಅವರ ವಿರುದ್ಧ ಕಿಡಿಕಾರಿದರೆ, ಮುಸ್ಲಿಂ ಎನ್ನುವ ಕಾರಣಕ್ಕೆ ಶಾರುಕ್ ಅವರನ್ನು ಗುರಿ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ಪಕ್ಷವು ನಟನ ಪರ ನಿಂತಿದೆ.

'ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ ರೆಹಮಾನ್ ಅವರು ಭಾರತದಲ್ಲಿ ಐಪಿಎಲ್ ತಂಡವೊಂದರ ಭಾಗವಾಗಿ ಆಟವಾಡುವುದನ್ನು ನಾವು ಸಹಿಸುವುದಿಲ್ಲ' ಎಂದು ಬಿಜೆಪಿ ಮತ್ತು ಶಿವಸೇನಾ (ಶಿಂಧೆ ಬಣ) ಆಕ್ರೋಶ ವ್ಯಕ್ತಪಡಿಸಿವೆ.

'ಬಾಂಗ್ಲಾದಲ್ಲಿ ಹಿಂದೂಗಳಿಗೆ ಚಿತ್ರಹಿಂಸೆ ನೀಡಲಾಗುತ್ತಿದೆ, ಮನೆಯಿಂದ ಹೊರಹಾಕಿ ಥಳಿಸಲಾಗುತ್ತಿದೆ. ಆದರೆ ಅಲ್ಲಿನ ಕ್ರಿಕೆಟಿಗನನ್ನು ಐಪಿಎಲ್ ತಂಡವೊಂದಕ್ಕೆ ಖರೀದಿಸುವುದು ದೇಶದ್ರೋಹ. ಶಾರುಕ್ ಖಾನ್ ಅಂಥವರು ದೇಶದ್ರೋಹಿಗಳು' ಎಂದು ಬಿಜೆಪಿಯ ಸಂಗೀತ್ ಸೋಮ್ ಅವರು ಆರೋಪಿಸಿದ್ದಾರೆ.

ಶಿವಸೇನಾ ನಾಯಕ ಕೃಷ್ಣ ಹೆಗ್ಡೆ, 'ಹಿಂದೂಗಳ ವಿರುದ್ಧ ದೌರ್ಜನ್ಯ ಎಸಗುವವರು ಅಥವಾ ದೇಶದಲ್ಲಿ ಭಯೋತ್ಪಾದಕ ದಾಳಿ ನಡೆಸುವರಿಗೆ ಭಾರತದಲ್ಲಿ ಆಟವಾಡಲು ಅವಕಾಶವಿಲ್ಲ. ಬಿಸಿಸಿಐ ಈ ಆಟಗಾರರನ್ನು ನಿಷೇಧಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಈ ಮಧ್ಯೆ ಮಹಾರಾಷ್ಟ್ರದ ವಿಧಾನ ಪರಿಷತ್ ಸದಸ್ಯ ಬಾಯಿ ಜಗತಾಪ್ ಅವರು, 'ಆಪರೇಷನ್ ಸಿಂಧೂರ'ದ ನಂತರವೂ ಭಾರತ ಪಾಕಿಸ್ತಾನದೊಂದಿಗೆ ಕ್ರಿಕೆಟ್ ಆಟವಾಡುತ್ತಿದೆ. ಬಿಜೆಪಿ-ಆರ್‌ಎಸ್‌ಎಸ್‌ನ ಇಬ್ಬಗೆಯ ನೀತಿಗೆ ಈ ವಿವಾದವೇ ಸಾಕ್ಷಿ' ಎಂದು ಹೇಳಿದ್ದಾರೆ.

'ಶಾರುಕ್ ಅವರೊಬ್ಬರೇ ತಂಡವನ್ನು ಆಯ್ಕೆ ಮಾಡಿಲ್ಲ. ಎಲ್ಲದಕ್ಕೂ ಪ್ರಕ್ರಿಯೆ ಎಂದಿರುತ್ತದೆ. ಶಾರುಕ್ ಖಾನ್ ಅವರು ಬಾಂಗ್ಲಾ ಅಥವಾ ಪಾಕಿಸ್ತಾನಕ್ಕೆ ತೆರಳಿ ಆಟಗಾರರನ್ನು ಆಯ್ಕೆ ಮಾಡುವುದಿಲ್ಲ. ಐಸಿಸಿ ಒಪ್ಪಿಗೆ ಮತ್ತು ನಿಯಮಾನುಸಾರವೇ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ' ತಿಳಿಸಿದ್ದಾರೆ.

ಟಿಎಂಸಿ ವಕ್ತಾರ ಕುನಾಲ್ ಘೋಷ್ ಅವರು, 'ಎಲ್ಲ ವಿಷಯಕ್ಕೂ ರಾಜಕೀಯ ಲೇಪ ಅಂಟಿಸುವ ಅಗತ್ಯವಿಲ್ಲ' ಎಂದಿದ್ದಾರೆ.

ದ್ವೇಷ ಹರಡುವ ಯತ್ನ

ಸಮಾಜವಾದಿ ಪಕ್ಷದ ನಾಯಕ ಅಬೂ ಆಜ್ಮಿ ಅವರು, 'ಕೆಕೆಆರ್ ತಂಡಕ್ಕೆ ಸೇರ್ಪಡೆಯಾಗಿರುವ ಆಟಗಾರ ಹಿಂದೂಗಳ ಮೇಲೆ ದೌರ್ಜನ್ಯ ಎಸಗಿದ್ದಾರೆಯೇ? ಸರ್ಕಾರಗಳು ದ್ವೇಷವನ್ನು ಹರಡುತ್ತಿವೆ. ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರಿಗೆ ಮರಣದಂಡನೆ ಶಿಕ್ಷೆಯಾಗಿದೆ. ಆದರೆ ಅವರೀಗ ಎಲ್ಲಿದ್ದಾರೆ? ನಮ್ಮ ದೇಶದಲ್ಲಿ ನೆಲಸಲು ಅವರಿಗೆ ಅವಕಾಶ ನೀಡಲಾಗಿದೆ. ತಸ್ಲೀಮಾ ನಸ್ರೀನ್ ಅವರೂ ಇಲ್ಲಿದ್ದಾರೆ. ಈ ಪ್ರಕರಣಗಳನ್ನು ಗಮನಿಸಿದಾಗ ಜನರ ಮಧ್ಯೆ ದ್ವೇಷ ಹರಡುವ ಯತ್ನ ಇದು ಎಂಬುದು ಸ್ಪಷ್ಟವಾಗುತ್ತದೆ' ಎಂದು ಹೇಳಿದ್ದಾರೆ.

'ಶಾರುಕ್ ನಾಲಿಗೆ ಕತ್ತರಿಸಿದರೆ ₹1 ಲಕ್ಷ ಬಹುಮಾನ'

ಲಖನೌ: ಬಾಂಗ್ಲಾದೇಶದ ಕ್ರಿಕೆಟಿಗನನ್ನು ತನ್ನ ಐಪಿಎಲ್ ತಂಡಕ್ಕೆ ಖರೀದಿಸಿದ ಬಾಲಿವುಡ್ ನಟ ಶಾರುಕ್ ಖಾನ್ ಅವರ ನಾಲಿಗೆ ಕತ್ತರಿಸಿದವರಿಗೆ ₹1 ಲಕ್ಷ ನಗದು ಬಹುಮಾನ ನೀಡುವುದಾಗಿ ಹಿಂದೂ ಪರ ಸಂಘಟನೆಯ ನಾಯಕಿಯೊಬ್ಬರು ಘೋಷಿಸಿದ್ದಾರೆ.

ಕ್ರಿಕೆಟಿಗ ಮುಸ್ತಾಫಿಝೂರ್ ರೆಹಮಾನ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿರುವುದನ್ನು ಅಖಿಲ ಭಾರತ ಹಿಂದೂ ಮಹಾಸಭಾದ ಆಗ್ರಾ ಜಿಲ್ಲಾ ಘಟಕದ ಅಧ್ಯಕ್ಷೆ ಮೀರಾ ಠಾಕೂರ್ ವಿರೋಧಿಸಿದ್ದಾರೆ. ಶಾರುಕ್ ಖಾನ್ ಚಿತ್ರವಿದ್ದ ಪೋಸ್ಟರ್‌ಗೆ ಮಸಿ ಬಳಿದು, ಚಪ್ಪಲಿಯಲ್ಲಿ ಹೊಡೆದಿದ್ದಾರೆ. ಹಿಂದೂ ಸಹೋದರರು ಬಾಂಗ್ಲಾದಲ್ಲಿ ಜೀವಂತವಾಗಿ ದಹನವಾಗುತ್ತಿದ್ದಾರೆ. ನಾವಿದನ್ನು ಒಪ್ಪುವುದಿಲ್ಲ ಎಂದಿದ್ದಾರೆ.

ನಗರಗಳಿಗಿಂತ ಗ್ರಾಮೀಣ ಪ್ರದೇಶಗಳೇ ಮುಂದು

ನವದೆಹಲಿ(ಪಿಟಿಐ): ಒಂಬತ್ತು ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ'(ಎಸ್‌ಐಆರ್) ನಡೆದಿದೆ. ಆದರೆ, ಭರ್ತಿ ಮಾಡಿದ ಅರ್ಜಿಗಳನ್ನು ಮರಳಿ ನೀಡುತ್ತಿರುವವರ ಸಂಖ್ಯೆ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿಯೇ ಅಧಿಕ ಎಂದು ಚುನಾವಣಾ ಅಧಿಕಾರಿಗಳು ಶುಕ್ರವಾರ ಹೇಳಿದ್ದಾರೆ.

ಉದ್ಯೋಗದ ಕಾರಣಕ್ಕೆ ನಗರ ಪ್ರದೇಶಗಳಲ್ಲಿ ಮತದಾರರು ಮನೆಗಳಲ್ಲಿ ಸಿಗುವುದು ಕಡಿಮೆ. ಭರ್ತಿ ಮಾಡಿದ ಅರ್ಜಿಗಳನ್ನು ಸಂಗ್ರಹಿಸಲು ಚುನಾವಣಾ ಸಿಬ್ಬಂದಿ ಮನೆಗಳಿಗೆ ಭೇಟಿ ನೀಡಿದ ವೇಳೆ, ಅವುಗಳನ್ನು ಮರಳಿಸಲು ಯಾರೂ ಇರುವುದಿಲ್ಲ. ಅಲ್ಲದೇ, ವಲಸೆ ಹೋಗುತ್ತಿರುವುದು ಕೂಡ ಮತ್ತೊಂದು ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪುದುಚೆರಿ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಪಶ್ಚಿಮ ಬಂಗಾಳ, ಸೇರಿ ಹಲವೆಡೆ ನವೆಂಬರ್ 4ರಂದು ಎರಡನೇ ಹಂತದ 'ಎಸ್‌ಐಆರ್' ಆರಂಭವಾಗಿತ್ತು.

'ಮಧ್ಯಪ್ರದೇಶ ದುರಾಡಳಿತದ ಕೇಂದ್ರಬಿಂದು'

ನವದೆಹಲಿ: 'ಬಿಜೆಪಿ ಆಡಳಿತದ ಮಧ್ಯಪ್ರದೇಶವು ದುರಾಡಳಿತದ ಕೇಂದ್ರಬಿಂದುವಾಗಿದೆ. ಇಲ್ಲಿ ಕಲುಷಿತ ನೀರು ಸೇವನೆಯಿಂದ ಹಲವರು ಜೀವ ಕಳೆದುಕೊಂಡಿದ್ದರೂ, ಪ್ರಧಾನಿ ಎಂದಿನಂತೆ ಬಡವರ ಸಾವಿನ ವಿಷಯದಲ್ಲಿ ಮೌನ ವಹಿಸಿದ್ದಾರೆ' ಎಂದು ಲೋಕಸಭೆಯ ವಿರೋಧ ಪಕ್ಷದ ಮುಖಂಡ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

'ಇಂದೋರ್‌ನಲ್ಲಿ ಜನರಿಗೆ ವಿತರಿಸಿರುವುದು ನೀರಲ್ಲ. ವಿಷ'. ಆದರೆ, ಮಧ್ಯಪ್ರದೇಶ ಸರ್ಕಾರವು ಕುಂಭಕರ್ಣನಂತೆ ನಿದ್ರೆ ಮಾಡುತ್ತಿದೆ.' ಎಂದು ರಾಹುಲ್ ಗಾಂಧಿ 'ಎಕ್ಸ್' ಪೋಸ್ಟ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭೋಪಾಲ್‌ನ ಕೆರೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮಧ್ಯಪ್ರದೇಶದ ಸಂಸದೀಯ ವ್ಯವಹಾರಗಳ ಸಚಿವ ಕೈಲಾಶ್ ವಿಜಯವರ್ಗೀಯ ವಿರುದ್ಧ ಶುಕ್ರವಾರ ಪ್ರತಿಭಟನೆ ನಡೆಸಿದರು — ಪಿಟಿಐ ಚಿತ್ರ

ಖರ್ಗೆ ವಾಗ್ದಾಳಿ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು, ಜಲ ಜೀವನ್ ಮಿಷನ್ ಬಗ್ಗೆ ತುತ್ತೂರಿ ಊದುತ್ತಿದ್ದಾರೆ. ಆದರೆ, ಇಂದೋರ್‌ನಲ್ಲಿ ಕಲುಷಿತ ನೀರು ಸೇವನೆಯಿಂದ ಮೃತಪಟ್ಟವರ ಬಗ್ಗೆ ಮೌನವಾಗಿದ್ದಾರೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದಾರೆ. ದೇಶದ ಸ್ವಚ್ಛ ನಗರಿ ಎಂಬ ಗರಿಮೆಗೆ ಪಾತ್ರವಾಗಿರುವ ಇಂದೋರ್‌ನಲ್ಲೇ ಜನರಿಗೆ ಕುಡಿಯಲು ಶುದ್ಧ ನೀರು ಸಿಗದಿರುವುದು ನಾಚಿಕೆಗೇಡಿನ ಸಂಗತಿ' ಎಂದು ಖರ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಾವಿನ ಸಂಖ್ಯೆ 10ಕ್ಕೆ ಏರಿಕೆ

ಇಂದೋರ್ (ಪಿಟಿಐ): ನಗರದ ಭಾಗೀರಥಪುರ ಪ್ರದೇಶದಲ್ಲಿ ಕಲುಷಿತ ನೀರು ಕುಡಿದು ಸಾವಿಗೀಡಾದವರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

'ಹತ್ತು ಮಂದಿ ಸಾವಿಗೀಡಾಗಿರುವ ಬಗ್ಗೆ ನನಗೆ ಮಾಹಿತಿ ಬಂದಿದೆ' ಎಂದು ಮೇಯರ್ ಪುಷ್ಯಮಿತ್ರ ಭಾರ್ಗವ ಅವರು ಹೇಳಿದ್ದಾರೆ.

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1, ಫ್ಯಾಕ್ಸ್: 080 22210117
ಫೋನ್: 080-22211086 / 22212137/ WEB SITE: (http://www.schooleducation.kar.nic.in)

No: DPI-CPI0PRO(OTH)/50/2025-PRO SEC E-2015323 Date: 02.01.2026

ಅಲ್ಪಾವಧಿ ಪ್ರಸ್ತಾವನೆ ಅಧಿಸೂಚನೆ

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು, ಕರ್ನಾಟಕ ರಾಜ್ಯದ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಸುಧಾರಣೆ ಕುರಿತು ವಿವರವಾದ ಯೋಜನಾ ವರದಿಗಳನ್ನು ತಯಾರಿಸಲು ಆಸಕ್ತ ಬಿಡ್ಡರ್‌ಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

1	ಆರ್‌ಎಫ್‌ಪಿ ಉಲ್ಲೇಖ ಸಂಖ್ಯೆ.	DPI/2025-26/SE0419
2	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ನಿಂದ RFP ದಾಖಲೆಯನ್ನು ಡೌನ್‌ಲೋಡ್ ಮಾಡುವ ಪ್ರಾರಂಭ ದಿನಾಂಕ:	02/01/2026 ರಿಂದ
3	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	07/01/2026ರ ಸಂಜೆ 5:30 ಗಂಟೆಯವರೆಗೆ
4	ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ	08/01/2026ರ ಬೆಳಿಗ್ಗೆ 11:00 ಗಂಟೆಗೆ, ಈ ಕೆಳಗಿನ ಸ್ಥಳದಲ್ಲಿ: ಆಯುಕ್ತರ ಕಚೇರಿ, ಶಾಲಾ ಶಿಕ್ಷಣ, ಮೊದಲ ಮಹಡಿ, ಹೊಸ ಸಾರ್ವಜನಿಕ ಕಚೇರಿ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು.
5	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ RFP ಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	16/01/2026ರ ಸಂಜೆ 5:00 ಗಂಟೆಗೆ
6	RFP ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ	17/01/2026ರ ಸಂಜೆ 5:10 ಗಂಟೆಗೆ
7	ಆರ್‌ಎಫ್‌ಪಿ ಅರ್ಜಿಗಳನ್ನು ತೆರೆಯುವ ಸ್ಥಳ	ಆನ್‌ಲೈನ್ – ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ
8	ಯೋಜನೆಯ ಮೆಥಡಾಲಜಿಯ ಪ್ರಸ್ತುತಿಯ ದಿನಾಂಕ ಮತ್ತು ಸಮಯ	20/01/2026ರ ಮಧ್ಯಾಹ್ನ 12:00 ಗಂಟೆಗೆ
9	ಸಂಪರ್ಕ ವಿಳಾಸ	ಮೊದಲನೇ ಮಹಡಿ, ಹೊಸ ಸಾರ್ವಜನಿಕ ಕಚೇರಿಗಳ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್ ವೃತ್ತ, ಬೆಂಗಳೂರು – 560001, ಇಮೇಲ್: primarydpi@gmail.com, ದೂರವಾಣಿ: 080–22270072.

1. ಟೆಂಡರ್ ದಾಖಲೆಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
2. ಇತರ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಸಹಿ/–
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ವಾಸಾಸಂಇ/ವಾಪ್ರ/ಜಿಎ/4815/2025–26

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis') ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

Short description of the Immovable Property (SPLOCA/AUC(2)/CR/06/2025-26)
Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. and Hon'ble High Court Of Karnataka has cleared the title (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in order No. MISC No. 692/2019)	Minimum Bid Price (Rs)	EMD (Rs)	Bid Increase Value (Rs)
1.	No. 2/3, New PID No.078-W0202-8 (Old PID No.91-76-2/3), Spencer Road, Frazer Town, Bangalore-05, measuring East to West 52.6 ft and North to South 38 ft aggregating 1998.8 Sq.ft Location: https://maps.app.goo.gl/MPsttJnuANmSDoKo8 Latitude and Longitude: 12°59'50.0"N 77°36'29.9"E			
(a)	Ground Floor, Flat No.GF-01, UDS-399.67, SBA- 1602 Sq.ft	1,61,50,000/-	16,15,000/-	1,62,000/-
(b)	1st Floor, Flat No. FF-01, UDS-399.76, SBA-1602.50 Sq.ft	1,63,40,000/-	16,34,000/-	1,64,000/-
(c)	2nd Floor, Flat No. SF-01, UDS-399.76 , SBA-1602.50 Sq.ft	1,65,30,000/-	16,53,000/-	1,66,000/-
(d)	3rd Floor, Flat No.TF-01, UDS-399.76 , SBA-1602.50 Sq.ft	1,62,45,000/-	16,25,000/-	1,63,000/-
(e)	4th Floor, Flat No.FRF-01, UDS-399.76 , SBA-1602.50 Sq.ft	1,62,45,000/-	16,25,000/-	1,63,000/-

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
21ನೇ ಜನವರಿ 2026 ಮಧ್ಯಾಹ್ನ 3 ರಿಂದ 4 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01	28ನೇ ಜನವರಿ 2026 ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ	16ನೇ ಫೆಬ್ರವರಿ 2026 ಸಂಜೆ 5 ಗಂಟೆಯವರೆಗೆ	17ನೇ ಫೆಬ್ರವರಿ 2026 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 9945515174 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 01.01.2026
DIPR/CP/4802/Zen/2025-26
ಸಹಿ/– ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis') ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

Short description of the Immovable Property (SPLOCA/AUC(2)/CR/07/2025-26)
Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. and Hon'ble High Court Of Karnataka has cleared the title (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in order No. MISC No. 694/2019)	Minimum Bid Price (Rs)	EMD (Rs)	Bid Increase Value (Rs)
1.	No. 77, PID No. 91-33-77, Pottery Town Layout (William's Town), Civil Station, Bangalore-46. Measuring East to West 30 ft, North to South 57 ft 6 inches Total 1725 Sq.ft Location: https://maps.app.goo.gl/1JsBueaXDbQfo6LR8			
(a)	Ground Floor, Flat No. GF-01, UDS-350.75, SBA-1525 Sq.ft	87,87,500/-	8,79,000/-	88,000/-
(b)	First Floor, Flat No. FF-01, UDS-350.75, SBA-1525 Sq.ft	89,30,000/-	8,93,000/-	90,000/-
(c)	Second Floor, Flat No. SF-01, UDS-350.75, SBA-1525 Sq.ft	90,25,000/-	9,03,000/-	91,000/-
(d)	Third Floor, Flat No.TF-01, UDS-350.75, SBA-1525 Sq.ft	88,35,000/-	8,84,000/-	89,000/-
(e)	Fourth Floor, Flat No.FF-01, UDS-322, SBA-1400 Sq.ft	88,35,000/-	8,84,000/-	89,000/-

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
21ನೇ ಜನವರಿ 2026 ಮಧ್ಯಾಹ್ನ 3 ರಿಂದ 4 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01	29ನೇ ಜನವರಿ 2026 ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ	16ನೇ ಫೆಬ್ರವರಿ 2026 ಸಂಜೆ 5 ಗಂಟೆಯವರೆಗೆ	17ನೇ ಫೆಬ್ರವರಿ 2026 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 9945515174 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 01.01.2026
DIPR/CP/4800/NR/2025-26
ಸಹಿ/– ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

‘ಬನ್ನೇರುಘಟ್ಟ: ‘ಸುಪ್ರೀಂ’ಗೆ ಶೀಘ್ರ ವರದಿ’

ಸಿಇಸಿ ಸದಸ್ಯ ಭೇಟಿ: ಆನೆ ಕಾರಿಡಾರ್ ಹಾನಿ, ವಾಣಿಜ್ಯ ಚಟುವಟಿಕೆ ಮಾಹಿತಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಪರಿಸರ ಸೂಕ್ಷ್ಮ ವಲಯದ(ಇಎಸ್‌ಝಡ್) ಅಧಿಸೂಚನೆಗೂ ಮುನ್ನಾ ಹಾಗೂ ಆ ನಂತರ ನಿರ್ಮಾಣವಾಗಿರುವ ಬಡಾವಣೆ, ರೆಸಾರ್ಟ್ ಸಹಿತ ವಾಣಿಜ್ಯ ಚಟುವಟಿಕೆಗಳು, ಆನೆ ಕಾರಿಡಾರ್‌ಗೆ ಅಡ್ಡಿಯಾಗುತ್ತಿರುವ ವಸ್ತುಸ್ಥಿತಿ ಮಾಹಿತಿ ಪಡೆದು ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಲಾಗುವುದು’ ಎಂದು ಕೇಂದ್ರ ಉನ್ನತಾಧಿಕಾರ ಸಮಿತಿ(ಸಿಇಸಿ) ಸದಸ್ಯ ಚಂದ್ರಪ್ರಕಾಶ್ ಗೋಯಲ್ ತಿಳಿಸಿದರು.

ಇಎಸ್‌ಝಡ್ ಅಂತಿಮ ಅಧಿಸೂಚನೆ ಪ್ರಶ್ನಿಸಿ ನಗರದ ಬೆಳ್ಳಿಯಪ್ಪ ಹಾಗೂ ಶಶಿಧರ್ ಅವರು 2025ರ ಮೇ ತಿಂಗಳಿನಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿರುವ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ಭಾಗಕ್ಕೆ ಶುಕ್ರವಾರ ಗೋಯಲ್ ಭೇಟಿ ನೀಡಿದ್ದರು. ಅಧಿಕಾರಿಗಳೊಂದಿಗೆ ಸಭೆ ನಡೆಸಿ ಬನ್ನೇರುಘಟ್ಟ ಭಾಗದ ರಾಗಿಹಳ್ಳಿ, ತೇರುಬೀದಿ ಶಿವನಹಳ್ಳಿ ಗ್ರಾಮಗಳ ಸುತ್ತ-ಮುತ್ತಲಿನ ಪ್ರದೇಶಕ್ಕೂ ತೆರಳಿ ಮಾಹಿತಿ

ಮುಖ್ಯಾಂಶಗಳು

- ವನ್ಯಜೀವಿ– ಮಾನವ ಸಂಘರ್ಷ ಹೆಚ್ಚಳ– ಅಭಿಪ್ರಾಯ ಸಂಗ್ರಹ
- ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ವಿಚಾರಣೆಗೂ ಮುನ್ನ ವರದಿ ಸಲ್ಲಿಕೆ
- ಸೂಕ್ಷ್ಮ ವಲಯದಲ್ಲಿ ಯಾವುದೇ ಗಣಿಗಾರಿಕೆ ನಡೆಸುವಂತಿಲ್ಲ

ಪಡೆದರು.

ಈ ವೇಳೆ ಸುದ್ದಿಗಾರರೊಂ-ದಿಗೆ ಮಾತನಾಡಿದ ಅವರು, ‘ಈ ಭಾಗದಲ್ಲಿರುವ ಆನೆಗಳ ಮೂರು ಕಾರಿಡಾರ್ ಹಾಳಾಗಿವೆ. ಅಲ್ಲದೇ ವನ್ಯಜೀವಿಗಳ ಸಹಜ ಸಂಚಾರಕ್ಕೆ ಅಡ್ಡಿಯಾಗಿದೆ ಎನ್ನುವ ಅಂಶವನ್ನು ದಾವೆಯಲ್ಲಿ ಉಲ್ಲೇಖಿಸಲಾಗಿದೆ. ಇದರಿಂದ ವನ್ಯಜೀವಿ ಮಾನವ ಸಂಘರ್ಷ ಪ್ರಮಾಣ ಹೆಚ್ಚಳವಾಗಿರುವ ಮಾಹಿತಿಯನ್ನು ಪಡೆಯುವೆ. ಕರ್ನಾಟಕ

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಪರಿಸರ ಸೂಕ್ಷ್ಮ ವಲಯದಲ್ಲಿನ ಆನೆ ಕಾರಿಡಾರ್ ಹಾನಿ, ವಾಣಿಜ್ಯ ಚಟುವಟಿಕೆಗಳ ಕುರಿತು ಮಾಹಿತಿ ಪಡೆಯಲು ಆಗಮಿಸಿದ್ದ ಕೇಂದ್ರ ಉನ್ನತಾಧಿಕಾರ ಸಮಿತಿ ಸದಸ್ಯ ಚಂದ್ರಪ್ರಕಾಶ್ ಗೋಯಲ್ ಅವರು ಶಿವನಹಳ್ಳಿ, ರಾಗಿಹಳ್ಳಿ, ತೇರುಬೀದಿ ರೈತರಿಂದ ಅಹವಾಲು ಆಲಿಸಿದರು
ಪ್ರಜಾವಾಣಿ ಚಿತ್ರ ಎಂ. ಎಸ್. ಮಂಜುನಾಥ್

ಗೃಹ ಮಂಡಳಿ ನಿರ್ಮಿಸುತ್ತಿರುವ ಬಡಾವಣೆ ಮತ್ತಿತರರ ಚಟುವಟಿಕೆಗ-ಳನ್ನೂ ಗಮನಿಸುವೆ. ಜನವರಿ 7ರಂದು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ವಿಚಾರಣೆಗೆ ಬರುವುದರಿಂದ ಅದಕ್ಕಿಂತ ಮೊದಲು ವರದಿಯನ್ನು ಸಿಇಸಿ ಅಧ್ಯಕ್ಷರಿಗೆ ಸಲ್ಲಿಸುವೆ’ ಎಂದು ಹೇಳಿದರು.

‘ರಾಷ್ಟ್ರೀಯ ಉದ್ಯಾನಗಳ ಪರಿಸರ ಸೂಕ್ಷ್ಮ ವಲಯದಲ್ಲಿ ಯಾವುದೇ ರೀತಿ ಗಣಿಗಾರಿಕೆ, ಕಲ್ಲುಕ್ವಾರಿ ನಡೆಸಬಾರದು. ಅದನ್ನು ಅರಣ್ಯವಾಗಿಯೇ ಉಳಿಸಿ-ಕೊಳ್ಳಬೇಕು ಎನ್ನುವ ಮಾರ್ಗಸೂಚಿಯನ್ನು ಈಗಾಗಲೇ ನೀಡಲಾಗಿದೆ. ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಇದನ್ನು ನಿಯಂತ್ರಿಸಬೇಕು’ ಎಂದರು.

‘ಬನ್ನೇರುಘಟ್ಟವು ಬೆಂಗಳೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಪ್ರಮುಖ ಅರಣ್ಯ ಪ್ರದೇಶ. ಉದ್ಯಾನದ ವ್ಯಾಪ್ತಿ 268.8 ಚದರ ಕಿ.ಮೀ. ಎಂದು ಗುರುತಿಸಲಾಗಿದೆ. ಇದರಲ್ಲಿ 100 ಮೀಟರ್‌ನಿಂದ 4.5 ಕಿ.ಮೀ. ವ್ಯಾಪ್ತಿಯನ್ನು ಪರಿಸರ ಸೂಕ್ಷ್ಮ ವಲಯವಾಗಿ ಘೋಷಿಸಲಾಗಿತ್ತು. ಆ ನಂತರ 2018ರಲ್ಲಿ ಇದನ್ನು ಬದಲಾಯಿಸಿ 100 ಮೀಟರ್‌ನಿಂದ 1 ಕಿ.ಮೀ. ವ್ಯಾಪ್ತಿಗೆ ಸೀಮಿತಗೊಳಿಸ-ಲಾಯಿತು. 2020ರಲ್ಲಿ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯ ಅಂತಿಮ ಅಧಿಸೂಚನೆ ಜಾರಿಗೊಳಿಸಿದಾಗ ಉದ್ಯಾನದ ವ್ಯಾಪ್ತಿ 168.84 ಚದರ ಕಿ.ಮೀ.ಗೆ ಸೀಮಿತಗೊಳಿಸಲಾಯಿತು. ಇದರಿಂದ ಸುಮಾರು 100 ಚದರ ಕಿ.ಮೀ.ಗೆ ಸೂಕ್ಷ್ಮ ವಲಯ ಕಡಿಮೆ-ಯಾಗಿರುವುದನ್ನು ದೂರುದಾರರು ತಿಳಿಸಿದ್ದಾರೆ. ಈ ಎಲ್ಲಾ ಅಂಶದ ಕುರಿತು ಅರಣ್ಯ ಇಲಾಖೆಯ ಹಿರಿಯ ಅಧಿ-ಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಂಡಿರುವೆ’ ಎಂದರು.

ರೈತರಿಂದಲೂ ಅಹವಾಲು ಸಲ್ಲಿಕೆ

ರೈತರಾದ ಕಾಡುಬೆಟ್ಟನಹಳ್ಳಿಯ ಶಿವಕುಮಾರ್, ಲಿಂಗಪ್ಪ, ಸೋಮಶೇಖರ್ ಅಹವಾಲು ಸಲ್ಲಿಸಿ ಹಲವಾರು ವರ್ಷಗಳಿಂದ ಬನ್ನೇರುಘಟ್ಟ ಭಾಗದಲ್ಲಿ ಬದುಕು ಕಟ್ಟಿಕೊಂಡಿದ್ದೇವೆ. ಪರಿಸರ ಸೂಕ್ಷ್ಮ ವಲಯ ಹೆಸರಲ್ಲಿ ನಮಗೆ ತೊಂದರೆ ನೀಡಲಾಗುತ್ತಿದೆ. ಕರ್ನಾಟಕ ಗೃಹ ಮಂಡಳಿ ಬಡಾವಣೆ ನಿರ್ಮಿಸಲು ನಮ್ಮನ್ನು ಒಕ್ಕಲೆಬ್ಬಿಸಲಾಗಿದೆ. ಜನಪ್ರತಿನಿಧಿಗಳು, ಗಣ್ಯರು ಭೂಮಿ ಒತ್ತುವರಿ ಮಾಡಿಕೊಂಡಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ. ಇದನ್ನು ಸಮಿತಿ ಗಮನಹರಿಸಬೇಕು’ ಎಂದು ಮನವಿ ಮಾಡಿದರು.

ದೂರುದಾರರ ಪರ ವಕೀಲ ಮೈತ್ರೇಯ ಘೋರ್ಪಡೆ, ಬನ್ನೇರುಘಟ್ಟ ನೇಚರ್ ಕನ್ಸರ್‌ವೇಷನ್ ಟ್ರಸ್ಟ್‌ನ ಕಿರಣ್ ಅರಸ್, ಕೀರ್ತನ್ ರೆಡ್ಡಿ ಮತ್ತಿತರರು, ‘ಅಂತಿಮ ಅಧಿಸೂಚನೆ ಹೊರಡಿಸಿದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯೊಳಗೂ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿವೆ. ಇದನ್ನೂ ಸಮಿತಿ ಗಂಭೀರವಾಗಿ ಪರಿಗಣಿಸಬೇಕು. ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಪರಿಸರ ಮಹತ್ವ ಆಧರಿಸಿ ಸೂಕ್ಷ್ಮ ಪ್ರದೇಶವನ್ನು 10.ಕಿ.ಮೀ ವ್ಯಾಪ್ತಿಗೂ ವಿಸ್ತರಿಸಲು ಅವಕಾಶ ಇರುವುದರಿಂದ ಇದನ್ನು ಬನ್ನೇರಘಟ್ಟ ಪ್ರದೇಶಕ್ಕೂ ಅನ್ವಯಿಸಬೇಕು’ ಎಂದು ಸಮಿತಿಗೆ ದಾಖಲೆ ಒದಗಿಸಿದರು.

ಸುದ್ದಿ 2 ನಿಮಿಷ

ಆರ್‌ಎಸ್‌ಎಸ್ ಅರೆ ಮಿಲಿಟರಿ ಸಂಘಟನೆಯಲ್ಲ: ಭಾಗವತ್

ಭೂಪಾಲ್ (ಪಿಟಿಐ): ‘ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಅರೆ ಮಿಲಿಟರಿ ಸಂಘಟನೆಯಲ್ಲ. ಬಿಜೆಪಿಯನ್ನು ನೋಡಿಕೊಂಡು ಅರ್‌ಎಸ್‌ಎಸ್ ಅನ್ನು ಅರ್ಥಮಾಡಿಕೊಳ್ಳುವುದು ದೊಡ್ಡ ತಪ್ಪು’ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಶುಕ್ರವಾರ ಹೇಳಿದರು.

‘ನಮ್ಮ ಸ್ವಯಂ ಸೇವಕರು ಸಮವಸ್ತ್ರ ಧರಿಸುತ್ತಾರೆ, ಮೆರವಣಿಗೆಗಳಲ್ಲಿ ಸಾಗುತ್ತಾರೆ ಮತ್ತು ಕೋಲು ಹಿಡಿದು ದೈಹಿಕ ವ್ಯಾಯಾಮ ಮಾಡುತ್ತಾರೆ. ಹೀಗೆಂದಮಾತ್ರಕ್ಕೆ ಸಂಘವನ್ನು ಪ್ಯಾರಾ ಮಿಲಿಟರಿ ಸಂಘಟನೆ ಎಂದು ಭಾವಿಸಿದರೆ ತಪ್ಪಾಗುತ್ತದೆ. ಇದು ಒಂದು ವಿಶಿಷ್ಟ ಸಂಘಟನೆಯಾಗಿದ್ದು, ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ’ ಎಂದು ಅವರು ತಿಳಿಸಿದರು.

‘ಸಮಾಜವನ್ನು ಒಗ್ಗೂಡಿಸಲು ಮತ್ತು ಭಾರತವು ಮತ್ತೆ ವಿದೇಶಿ ಶಕ್ತಿಯ ಹಿಡತಕ್ಕೆ ಸಿಲುಕದಂತೆ ನೋಡಿಕೊಳ್ಳಲು ಆರ್‌ಎಸ್‌ಎಸ್ ಶ್ರಮಿಸುತ್ತಿದೆ’ ಎಂದು ಅವರು ಇಲ್ಲಿ ಪ್ರಮುಖ ವ್ಯಕ್ತಿಗಳ ಸಭೆಯಲ್ಲಿ ಹೇಳಿದರು.

‘ಬಿಜೆಪಿಯನ್ನು ನೋಡಿ ಸಂಘವನ್ನು ಅರ್ಥಮಾಡಿಕೊಳ್ಳಲು ಬಯಸಿದರೆ ಅದು ದೊಡ್ಡ ತಪ್ಪು ಮಾಡಿದಂತೆ. ಅದೇ ರೀತಿ ವಿದ್ಯಾ ಭಾರತಿಯನ್ನು (ಆರ್‌ಎಸ್‌ಎಸ್– ಸಂಯೋಜಿತ ಸಂಸ್ಥೆ) ನೋಡಿ ಸಂಘವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೂ ತಪ್ಪೇ ಆಗುತ್ತದೆ’ ಎಂದರು.

‘ವಿಶ್ವಾಸಾರ್ಹ ಮೂಲಗಳಿಂದ ಮಾಹಿತಿ ಪಡೆಯುವವರಿಗೆ ಮಾತ್ರ ಸಂಘದ ಬಗ್ಗೆ ತಿಳಿದುಕೊಳ್ಳಲು ಸಾಧ್ಯ-ವಾಗುತ್ತದೆ. ತಿಳಿದುಕೊಳ್ಳಬಯಸುವ-ವರು ಸಂಘಕ್ಕೆ ಭೇಟಿ ನೀಡಬಹುದು’ ಎಂದು ಅವರು ವಿವರಿಸಿದರು.



ಸಂಘದ ಆರ್ಥಿಕ ಸ್ಥಿತಿ ಈಗ ಸರಿಯಿದೆ. ಅದು ಹೊರಗಿನ ನಿಧಿ ಅಥವಾ ದೇಣಿಗೆಗಳನ್ನು ಅವಲಂಬಿಸಿಲ್ಲ ಎಂದರು.

ಕಾಮರಾಜ್ ರಸ್ತೆ: ಎರಡೂ ಬದಿ ಸಂಚಾರಕ್ಕೆ ಮುಕ್ತ

ಬೆಂಗಳೂರು: ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಕಾಮಗಾರಿಗಾಗಿ ಮುಚ್ಚಿದ್ದ ಕಾಮರಾಜ್ ರಸ್ತೆ ಆರೂವರೆ ವರ್ಷಗಳ ಬಳಿಕ ಶುಕ್ರವಾರ ಪೂರ್ಣಪ್ರಮಾಣದಲ್ಲಿ ಸಂಚಾರಕ್ಕೆ ತೆರೆದುಕೊಂಡಿದೆ.

ಎಂ.ಜಿ. ರಸ್ತೆಯಿಂದ ಕಬ್ಬನ್ ರಸ್ತೆ ಜಂಕ್ಷನ್ ಕಡೆಗೆ ಸಾಗುವ ಒಂದು ಬದಿ ರಸ್ತೆಯಲ್ಲಿ 2024ರ ಜೂನ್‌ನಲ್ಲಿ ವಾಹನ ಸಂಚಾರ ಆರಂಭವಾಗಿತ್ತು. ಕಬ್ಬನ್ ರಸ್ತೆ ಜಂಕ್ಷನ್‌ನಿಂದ ಎಂ.ಜಿ. ರಸ್ತೆ ಕಡೆಗೆ ಬರುವ ಪಥದಲ್ಲಿ ಒಂದೂವರೆ ವರ್ಷದ ಬಳಿಕ ವಾಹನ ಸಂಚಾರ ಆರಂಭಗೊಂಡಿತು.

ನಾಗವಾರ–ಕಾಳೇನ ಅಗ್ರಹಾರ ಮೆಟ್ರೊ ಮಾರ್ಗದಲ್ಲಿ ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ ಅಂತ-ರ್‌ಬದಲಾವಣೆಯ (ಇಂಟರ್‌ಚೇಂಜ್) ಎಂ.ಜಿ. ರಸ್ತೆ ಮೆಟ್ರೊ ಭೂಗತ ನಿಲ್ದಾಣ ನಿರ್ಮಿಸಲು ಕಾಮರಾಜ್ ರಸ್ತೆಯನ್ನು 2019ರ ಜೂನ್‌ನಲ್ಲಿ ಬಿಎಂಆರ್‌ಸಿಎಲ್ ಮುಚ್ಚಿತ್ತು.

ಕಾಮರಾಜ್ ರಸ್ತೆ ಮುಚ್ಚಿದ್ದರಿಂದ, ಈ ರಸ್ತೆ ಮೂಲಕ ಬ್ರಿಗೇಡ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಮತ್ತು ಇತರ ಸ್ಥಳಗಳನ್ನು ತಲುಪಲು ವಾಹನಸವಾರರು ಸುತ್ತು ಹಾಕಿಕೊಂಡು ಬರುವಂತಾಗಿತ್ತು.

ಪುನರ್ ನಿರ್ಮಿತ ರಸ್ತೆಯು 214 ಮೀಟರ್ ಉದ್ದವಿದ್ದು, ಎರಡು ಮಾರ್ಗಗಳು 11 ಮೀಟರ್ ಅಗಲ ಹೊಂದಿವೆ. ರಸ್ತೆ ಮುಕ್ತ ಆಗಿರುವುದರಿಂದ ವಾಹನ ಸಂಚಾರ ಸುಗಮವಾಗಲಿದೆ. ಕಮರ್ಷಿಯಲ್ ಸ್ಟ್ರೀಟ್ ಮತ್ತು ಬ್ರಿಗೇಡ್ ರಸ್ತೆ ನಡುವಿನ ಸಂಪರ್ಕ ಇನ್ನಷ್ಟು ಸುಧಾರಣೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಗಣರಾಜ್ಯೋತ್ಸವದ ಅಂಗವಾಗಿ ಜನವರಿ ತಿಂಗಳು ಪೂರ್ತಿ ತನ್ನ ಪ್ರಕಟಣೆಗಳ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಂಪುಟ ಮಾಲೆಯ 49 ಸಂಪುಟಗಳು, ಕನಕದಾಸ (ನಾಟಕ), ಕನಕದಾಸರ ಕೃತಿಗಳ ಭಾಷೆ ಮತ್ತು ಶೈಲಿ, ಕನ್ನಡ ಸಂಸ್ಕೃತಿ ಅಧ್ಯಯನದ ಆಕರವಾಗಿ ಕನಕದಾಸರ ಕೃತಿಗಳ ಅಧ್ಯಯನ, ಕನಕದಾಸರ ಕೃತಿಗಳ ಮಧ್ಯಕಾಲೀನ ಚರಿತ್ರೆಯ ಪುನಾರಚನೆ, ಗೋಪಾಳ ಗ್ಯಾನ, ಕನಕದಾಸರ ಕುರಿತ ನಾಟಕಗಳಲ್ಲಿ ಸಾಂಸ್ಕೃತಿಕ ಚಲನಶೀಲತೆ, ಇಪ್ಪತ್ತನೇ ಶತಮಾನ ಕಂಡ ಕನಕದಾಸರು, ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು ಹಾಗೂ ಸಂತಕವಿ ಕನಕದಾಸರ ಜೀವನ ಚರಿತ್ರೆಯ ಬಗೆಗೆ ಹಿಂದಿ, ತಮಿಳು, ತೆಲುಗು, ಬಂಗಾಳಿ, ಮಲೆಯಾಳ, ಮರಾಠಿ, ಅಸ್ಸಾಂ, ಪಂಜಾಬ ಭಾಷೆಗಳಿಗೆ ಅನುವಾದಗೊಂಡ ಪುಸ್ತಕಗಳು ಮಾರಾಟಕ್ಕೆ ಲಭ್ಯವಿವೆ.

ಆಸಕ್ತರು ಕನ್ನಡ ಭವನದ ಆವರಣ-ದಲ್ಲಿರುವ ಸಿರಿಗನ್ನಡ ಪುಸ್ತಕ ಮಳಿಗೆಗೆ ಅಥವಾ ಕಲಾಗ್ರಾಮದಲ್ಲಿರುವ ಅಧ್ಯಯನ ಕೇಂದ್ರಕ್ಕೆ ನೇರವಾಗಿ ಭೇಟಿ ನೀಡಿ ಪುಸ್ತಕಗಳನ್ನು ಖರೀದಿಸಬಹುದು. ಅಧ್ಯಯನ ಕೇಂದ್ರದ ದೂರವಾಣಿ ಸಂಖ್ಯೆ 080-22113147 ಅಥವಾ 7338640080ಕ್ಕೆ ಕರೆ ಮಾಡಿ, ಅಂಚೆಯ ಮೂಲಕವೂ ಪುಸ್ತಕಗಳನ್ನು ಖರೀದಿಸಲು ಅವಕಾಶವಿದೆ. ಅಂಚೆ ವೆಚ್ಚ ಪ್ರತ್ಯೇಕವಾಗಿ ಪಾವತಿಸಬೇಕಿದ್ದು, ಆನ್‌ಲೈನ್ ವೇದಿಕೆಗಳ ಮೂಲಕವು ಹಣ ಪಾವತಿಸಬಹುದು ಎಂದು ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ.

ಫೆಲೋಷಿಪ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ‘ಕುವೆಂಪು’ ಅವರ ಹೆಸರಿನಲ್ಲಿ ನೀಡುವ ಫೆಲೋಷಿಪ್‌ಗೆ ಅರ್ಜಿ ಆಹ್ವಾನಿಸಿದೆ.

35 ವರ್ಷ ಮೇಲ್ಪಟ್ಟವರು ಹಿರಿಯರ ವಿಭಾಗ ಹಾಗೂ 35 ವರ್ಷದೊಳಗಿನವ-ರು ಕಿರಿಯರ ವಿಭಾಗದ ಫೆಲೋಷಿಪ್‌ಗೆ ಅರ್ಜಿ ಸಲ್ಲಿಸಬಹುದಾಗಿದೆ. ಈ ಫೆಲೋಷಿಪ್‌ಗಳು ಕ್ರಮವಾಗಿ ₹3 ಲಕ್ಷ ಮತ್ತು ₹2 ಲಕ್ಷ ಒಳಗೊಂಡಿವೆ.

ನಿಯಮಗಳು ಹಾಗೂ ಅರ್ಜಿಯ ಪ್ರತಿಗಳಿಗೆ www.kuvempubhashabharathi.karnataka.gov.inಗೆ ಭೇಟಿ ನೀಡಬಹುದಾಗಿದೆ. ಭರ್ತಿ ಮಾಡಿದ ಅರ್ಜಿಯ ಪ್ರತಿಯನ್ನು ಇದೇ 31ರೊಳಗೆ ಕಳುಹಿಸಬೇಕು ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ದತ್ತಪ್ಪ ಸಾಗನೂರು ತಿಳಿಸಿದ್ದಾರೆ.

ಭೂಸ್ವಾಧೀನಕ್ಕೆ ಸಚಿವ ಸಂಪುಟ ಅನುಮೋದನೆ

ಒಂದನೇ ಪುಟದಿಂದ...

ಹೆಚ್ಚುವರಿ ಮೊತ್ತಕ್ಕೆ ಸಮ್ಮತಿ: ಬೆಂಗಳೂರು ಉಪನಗರ ಸಾರಿಗೆ ಯೋಜನೆಯ (ಬಿಎಸ್‌ಟಿಪಿ) ಕಾರಿಡಾರ್ 2 ಮತ್ತು 4ರ ಪರಿಷ್ಕೃತ ವೆಚ್ಚ ₹16,876 ಕೋಟಿಗೆ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಎರಡೂ ಕಾರಿಡಾರ್‌ಗೆ ₹3,066 ಕೋಟಿ ಭೂಸ್ವಾಧೀನ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಲಿದೆ. ಭವಿಷ್ಯದಲ್ಲಿ ಅಗತ್ಯವಿರುವ ಚತುಷ್ಪಥಕ್ಕೆ ₹357 ಕೋಟಿಯನ್ನು ರೈಲ್ವೆ ಸಚಿವಾಲಯ ನೀಡಬೇಕು. ಇತರೆ ವೆಚ್ಚಗಳನ್ನು ರಾಜ್ಯ ಸರ್ಕಾರ ಮತ್ತು ರೈಲ್ವೆ ಸಚಿವಾಲಯ 50:50ರ ಅನುಪಾತದಲ್ಲಿ ಭರಿಸಲು ಸಚಿವ ಸಂಪಟ ಸಮ್ಮತಿಸಿದೆ.

ರಸ್ತೆ ಕತ್ತರಿಸಲು ‘ಮಾರ್ಕ್ಸ್’ ಅನುಮತಿ ಕಡ್ಡಾಯ

ಜಿಬಿಎ ವ್ಯಾಪ್ತಿಯಲ್ಲಿ ಎಲ್ಲ ಇಲಾಖೆಗಳೂ ಸಮ್ಮತಿ ಪಡೆಯದಿದ್ದರೆ ದಂಡ, ಪ್ರಕರಣ: ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ರಸ್ತೆ ಕತ್ತರಿಸಲು ‘ಮಾರ್ಕ್ಸ್’ ತಂತ್ರಾಂಶದಲ್ಲಿ ಅನುಮತಿ ಪಡೆಯಬೇಕು. ಯಾವುದೇ ಇಲಾಖೆ ಸಮ್ಮತಿ ಪಡೆಯದೆ ರಸ್ತೆ ಕತ್ತರಿಸಿದರೆ ದಂಡ ವಿಧಿಸುವ ಜೊತೆಗೆ ಕಾನೂನು ಪ್ರಕಾರ ಪ್ರಕರಣ ದಾಖಲಿ-ಸಲಾಗುತ್ತದೆ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಮಹೇಶ್ವರ್ ರಾವ್

ಬೆಸ್ಕಾಂ, ಕೆಪಿಟಿಸಿಎಲ್, ಜಲಮಂಡಳಿ ಹಾಗೂ ಗೇಲ್ ಸೇರಿದಂತೆ ಹಲವು ಇಲಾಖೆಗಳ ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳ ಕುರಿತು ಶುಕ್ರವಾರ ನಡೆದ ಸಮನ್ವಯ ಸಭೆಯಲ್ಲಿ ಅವರು ಮಾತನಾಡಿದರು.

ನಗರದಲ್ಲಿ ರಸ್ತೆ ಕತ್ತರಿಸುವ ಅಗತ್ಯ-ವಿದ್ದಲ್ಲಿ ‘ಮಾರ್ಕ್ಸ್’ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿ ಅನುಮತಿ ಪಡೆಯುವುದು ಕಡ್ಡಾಯ. ಆಯಾ ನಗರ ಪಾಲಿಕೆಗಳು ಅರ್ಜಿಗಳನ್ನು ಪರಿಶೀಲಿಸಿ ಅನುಮತಿ ನೀಡಲಿವೆ. ಅನುಮತಿ ದೊರಕಿದ ನಂತರ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಿ, ರಸ್ತೆ ದುರಸ್ತಿ ಕಾರ್ಯವನ್ನು ಸಮರ್ಪಕವಾಗಿ ನಡೆಸಬೇಕು ಎಂದು ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದರು.

ಮುಂದಿನ ದಿನಗಳಲ್ಲಿ ರಸ್ತೆ ಕತ್ತರಿಸುವ ಕುರಿತ ಪೂರ್ವಭಾವಿ ಪಟ್ಟಿಯನ್ನು ಎಲ್ಲ ಇಲಾಖೆಗಳು ಸಿದ್ಧಪಡಿಸಿ ಸಲ್ಲಿಸಬೇಕು. ಜೊತೆಗೆ, ಗೂಗಲ್ ಮ್ಯಾಪ್‌ನಲ್ಲಿ ಯಾವ ರಸ್ತೆಯಲ್ಲಿ ಎಷ್ಟು ಉದ್ದದ ರಸ್ತೆ ಕತ್ತರಿ-ಸಲಾಗುತ್ತಿದೆ ಎಂಬುದನ್ನು ಗುರುತಿಸಿ, ಆ ಮಾಹಿತಿಯನ್ನು ಎಲ್ಲಾ ನಗರ ಪಾಲಿಕೆಗಳಿಗೆ ಒದಗಿಸಬೇಕು ಎಂದರು.

ಕಾಲಮಿತಿ: ನಗರದಲ್ಲಿ ‘ಲಾಸ್ಟ್ ಮೈಲ್ ಕನೆಕ್ಟಿವಿಟಿ’ ಕಾರ್ಯಗಳಿಗೆ ಹೆಚ್ಚಿನ ವೇಗ ನೀಡಬೇಕು. ಈಗಾಗಲೇ ಎನ್–ಕ್ಯಾಪ್ ಅನುದಾನದಡಿ ಹಲವೆಡೆ ಕಾಮಗಾರಿ ಆರಂಭಗೊಂಡಿದೆ. ಬಿಎಂಟಿಸಿಯಿಂದ ಫೀಡರ್ ಬಸ್ ವ್ಯವಸ್ಥೆ, ಪಾರ್ಕಿಂಗ್ ಸೌಲಭ್ಯ, ಸ್ಕೈ ವಾಕ್ ನಿರ್ಮಾಣ, ಬಸ್ ನಿಲ್ದಾಣಗಳ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಮಹೇಶ್ವರ್ ರಾವ್ ಸೂಚಿಸಿದರು.

ಜೆಟ್ಟಿಂಗ್ ಯಂತ್ರ ಖರೀದಿ: ನಗರದ ಪಾದಚಾರಿ ಮಾರ್ಗಗಳನ್ನು ಸ್ವಚ್ಛವಾಗಿ ನಿರ್ವಹಿಸುವ ಉದ್ದೇಶದಿಂದ ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ಪ್ರತಿಯೊಂದು ನಗರ ಪಾಲಿಕೆಗೆ ಒಂದರಂತೆ ಐದು ವಾಟರ್ ಜೆಟ್ಟಿಂಗ್ ಯಂತ್ರಗಳನ್ನು ಖರೀದಿಸಬೇಕು ಎಂದು ಹೇಳಿದರು.

ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವ ಕೆಲವು ರಸ್ತೆಗಳಲ್ಲಿ ಜಲಮಂಡಳಿ ಕಾಮಗಾರಿ ಮತ್ತು ಸಂಚಾರ ಪೊಲೀಸ್ ಇಲಾಖೆಯಿಂದ ಅನುಮತಿ ನೀಡಬೇಕಿದೆ. ಈ ಸಂಬಂಧ ಎಲ್ಲೆಲ್ಲಿ ಸಮಸ್ಯೆಗಳಿವೆ ಎಂಬುದನ್ನು ಪಟ್ಟಿ ಮಾಡಿ, ಆ ಸ್ಥಳಗಳಿಗೆ ಜಿಬಿಎ, ಸಂಚಾರ ಪೊಲೀಸ್ ಹಾಗೂ ಜಲಮಂಡಳಿ ಅಧಿಕಾರಿಗಳು ಜಂಟಿಯಾಗಿ ಭೇಟಿ ನೀಡಿ ಪರಿಶೀಲಿಸಿ ಸಮಸ್ಯೆ ಬಗೆಹರಿಸಬೇಕು ಎಂದರು.

ಮಹೇಶ್ವರ್ ರಾವ್ ಸೂಚನೆಗಳು

- ನಗರದಲ್ಲಿನ 69 ಮೆಟ್ರೊ ನಿಲ್ದಾಣಗಳ ಸುತ್ತಮುತ್ತ ಅನಧಿಕೃತ ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಿ ಪಟ್ಟಿ ಸಲ್ಲಿಸಬೇಕು
- ರಸ್ತೆ ಸುರಕ್ಷತಾ ಭಾಗವಾಗಿ ಆಯಾ ನಗರ ಪಾಲಿಕೆಗಳು, ಡಲ್ಟ್ ಹಾಗೂ ಮೆಟ್ರೊ ನಿಗಮ ಕ್ರಾಸಿಂಗ್, ಪೇಂಟಿಂಗ್ ಸೇರಿದಂತೆ ಅಗತ್ಯ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳಬೇಕು
- ಬಸ್ ತಂಗುದಾಣಗಳ ಸ್ಥಳಾಂತರ ಕಾರ್ಯವನ್ನು ಆದ್ಯತೆಯ ಮೇರೆಗೆ ಪೂರ್ಣ-ಗೊಳಿಸಬೇಕು
- ಪಾದಚಾರಿ ಮಾರ್ಗಗಳಲ್ಲಿ ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್ ಸ್ಥಳಾಂತರ, ಅಪಾಯಕರ ಸ್ಥಿತಿಯಲ್ಲಿರುವ ತಂತಿಗಳನ್ನು ಗುರುತಿಸಿ ಸಮಸ್ಯೆ ಪರಿಹರಿಸಬೇಕು

ಸ್ವಚ್ಛ ಭಾರತ ಮಿಷನ್ ಶ್ಲಾಘನೆ

2026ರ ಹೊಸ ವರ್ಷ ಆಚರಣೆ ಸಂದರ್ಭದಲ್ಲಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪ್ರಮುಖ ರಸ್ತೆಗಳಲ್ಲಿ ಉತ್ಪತ್ತಿಯಾದ ಸುಮಾರು ಒಂಬತ್ತು ಟನ್ ತ್ಯಾಜ್ಯವನ್ನು ಐದು ಗಂಟೆಯಲ್ಲಿ ತೆರವುಗೊಳಿಸಿರುವುದಕ್ಕೆ ಕೇಂದ್ರ ಸರ್ಕಾರದ ‘ಸ್ವಚ್ಛ ಭಾರತ ಮಿಷನ್’ ಮೆಚ್ಚುಗೆ ವ್ಯಕ್ತಪಡಿಸಿದೆ.

‘ಎಕ್ಸ್’ನಲ್ಲಿ ಮಾಹಿತಿ ಹಾಗೂ ಚಿತ್ರಗಳನ್ನು ಹಂಚಿಕೊಂಡು, ಬೆಂಗಳೂರು ಕೇಂದ್ರ ನಗರ ಪಾಲಿಕೆಯನ್ನು ಶ್ಲಾಘಿಸಲಾಗಿದೆ ಎಂದು ಜಿಬಿಎ ಪ್ರಕಟಣೆ ತಿಳಿಸಿದೆ.

‘ನೈಸ್ ಅರ್ಜಿ: ಡಿಸಿಎಂ ಆಕ್ಷೇಪ ಸ್ವಾಗತಾರ್ಹ-ಎಚ್.ಡಿ.ದೇವೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಹಾಕಿರುವ ನೈಸ್ ಕಂಪನಿಯ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿ-ರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಿಲುವನ್ನು ಜೆಡಿಎಸ್ ವರಿಷ್ಠ ಎಚ್. ಡಿ.ದೇವೇಗೌಡ ಸ್ವಾಗತಿಸಿದ್ದಾರೆ.

ಎಚ್‌.ಡಿ. ದೇವೇಗೌಡ

ಶುಕ್ರವಾರ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿ, ‘ಈ ಇಳಿ ವಯಸ್ಸಿನಲ್ಲಿ ನನ್ನನ್ನು ಪ್ರತಿವಾ-ದಿಯಾಗಿಸಿ ಅರ್ಜಿ ಹಾಕಿರುವುದು ಎಷ್ಟು ಸರಿ ಎಂದು ನಾನು ಪ್ರಶ್ನಿಸಿದ್ದೆ. ಡಿ.ಕೆ. ಶಿಕುಮಾರ್ ಸಹ ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದರೆ, ಅವರು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬುದನ್ನು ನೋಡಬೇಕು’ ಎಂದರು.

‘ಈ ಯೋಜನೆ ಬಗ್ಗೆ ಮುಖ್ಯಮಂತ್ರಿ ಅವರಿಗೆ ಈ ಹಿಂದೆಯೇ ಪತ್ರ ಬರೆದಿದ್ದೆ. ಎಷ್ಟು ಭೂಮಿ ತೆಗೆದುಕೊಂಡಿದ್ದಾರೆ ಮತ್ತು ಎಷ್ಟು ಬಳಕೆ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಮಾಹಿತಿ ನೀಡಿ ಎಂದು ಕೋರಿದ್ದೆ. ಈ ವಿಚಾರದಲ್ಲಿ ಅಶೋಕ್ ಖೇಣಿ ವಿರುದ್ಧ ಸರ್ಕಾರವು ಕ್ರಮ ತೆಗೆದುಕೊಂಡರೆ ಸಂತೋಷ’ ಎಂದರು.

ಈ ಸಂಬಂಧ ಸ್ಪಷ್ಟನೆ ನೀಡಿರುವ ನೈಸ್ ಸಂಸ್ಥೆ, ‘ದೇವೇಗೌಡ ಅವರ ಹೇಳಿಕೆ ವಾಸ್ತವಕ್ಕೆ ವಿರುದ್ಧವಾಗಿದೆ. ನೈಸ್ ಸಂಸ್ಥೆಯು ಸರ್ಕಾರ ಹಾಗೂ ರೈತರ ವಿರುದ್ಧ ಯಾವುದೇ ಹೊಸ ಕ್ರಮ ತೆಗೆದುಕೊಂಡಿಲ್ಲ’ ಎಂದು ಹೇಳಿದೆ. ನ್ಯಾಯಾಲಯದ ನಿರ್ದೇಶನದ ಮೇಲೆಯೇ ಮುಂದಿನ ಹೆಜ್ಜೆ ಇಡಲಾಗುತ್ತಿದೆ ಎಂದು ತಿಳಿಸಿದೆ.

ನ್ಯಾಯಾಂಗದ ನಿರ್ದೇಶನ-ಗಳಿಗೆ ಅನುಗುಣವಾಗಿ ಬಿಎಂಐಸಿ ಯೋಜನೆಯನ್ನು ಕಾರ್ಯಗತಗೊಳಿಸಲು ತಾನು ಬದ್ಧವಾಗಿರುವುದಾಗಿ ಕಂಪನಿಯು ಹೇಳಿದೆ.

ಬಿಬಿಸಿ ಯೋಜನೆ ರದ್ದತಿಗೆ ಪಟ್ಟು

ಒಂದನೇ ಪುಟದಿಂದ...

ಮಾರುಕಟ್ಟೆ ದರದಲ್ಲಿ ನಗರ ಭಾಗದಲ್ಲಿ ಎರಡು ಪಟ್ಟು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಮೂರು ಪಟ್ಟು ನಗದು ಪರಿಹಾರ ಅಥವಾ ವರ್ಗಾಯಿಸ-ಬಹುದಾದ ಹಕ್ಕು (ಟಿಡಿಆರ್) ಅಥವಾ ನೆಲ ವಿಸ್ತೀರ್ಣ ಅನುಪಾತ (ಎಫ್‌ಎಆರ್) ಅಥವಾ ಶೇ 35ರಷ್ಟು ವಾಣಿಜ್ಯ ಭೂಮಿಯನ್ನು ಪಡೆಯಬಹುದು. ಒಂದು ವೇಳೆ ವಾಣಿಜ್ಯ ಭೂಮಿ ಬೇಡ, ವಸತಿ ಪ್ರದೇಶದಲ್ಲಿ ಜಾಗ ಬೇಕು ಎಂದರೆ ಬಿಡಿಎ ನಿರ್ಮಿಸುತ್ತಿರುವ ನೂತನ ಬಡಾವಣೆಗ-ಳಲ್ಲಿ ಶೇ 40ರಷ್ಟು ಜಾಗ ನೀಡಲಾಗುತ್ತದೆ.

ಪರಿಹಾರ ಸೂತ್ರ ತಿರಸ್ಕರಿಸಿರುವ ರೈತರು, ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ಮಾಡಬೇಕು ಹಾಗೂ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕು. ಮೆಟ್ರೊ, ರೈಲ್ವೆ ಸೇರಿ ಅನೇಕ ಸರ್ಕಾರಿ ಇಲಾಖೆಗಳು ಕೇಂದ್ರ ಭೂಸ್ವಾಧೀನ ಕಾಯ್ದೆಯಡಿ ಪರಿಹಾರ ನೀಡುತ್ತಿವೆ. ಬಿಬಿಸಿ ಯೋಜನೆ ಸಂತ್ರಸ್ತರಿಗೆ ಈ ಕಾಯ್ದೆ ಅನ್ವಯಿಸುವುದಿಲ್ಲವೇ ಎಂದು ಭೂ ಮಾಲೀಕರು ಪ್ರಶ್ನಿಸಿದ್ದಾರೆ.

‘ಸರ್ಕಾರದ ಪರಿಹಾರ ಸೂತ್ರ ಸರಿಯಿಲ್ಲ. ಇದನ್ನು ವಿರೋಧಿಸಿ ಸಾವಿರಕ್ಕೂ ಅಧಿಕ ಆಕ್ಷೇಪಣೆ ಸಲ್ಲಿಕೆಯಾಗಿವೆ. 2016ರ ಮಾರ್ಗಸೂಚಿ ಆಧರಿಸಿ ಪರಿಹಾರ ನಿಗದಿ ಮಾಡಿರುವುದು ಕಾನೂನುಬಾ-ಹಿರವಾಗಿದೆ. 20 ಗುಂಟೆಗಿಂತ ಒಳಗೆ ಭೂಮಿ ಕಳೆದುಕೊಳ್ಳುವವರಿಗೆ ನಗದು ಪರಿಹಾರ ಮಾತ್ರ ನೀಡಲಾಗುತ್ತದೆ. ಇದರಲ್ಲಿ 2003– 2005ರ ಅವಧಿಯ ಮಾರುಕಟ್ಟೆ ದರ ನಿಗದಿಪಡಿಸಲಾಗಿದೆ. ಇದರಿಂದ ಸಣ್ಣ ರೈತರಿಗೆ, ನಿವೇಶನ-ದಾರರಿಗೆ, ಮನೆ ಕಳೆದುಕೊಂಡವರಿಗೆ ಸಹಾಯವಾಗುವುದಿಲ್ಲ. ಬಿಡಿಎ ನಿರ್ಮಿ-ಸುತ್ತಿರುವ ನೂತನ ಬಡಾವಣೆಗಳಲ್ಲಿ ಶೇ 40ರಷ್ಟು ಜಾಗ ಅಥವಾ ಶೇ 35ರಷ್ಟು ವಾಣಿಜ್ಯ ಭೂಮಿ ನೀಡಲಾಗುತ್ತದೆ. ಆದರೆ, ಬಿಬಿಸಿ ಯೋಜನೆಗೆ ವಶಪಡಿ-ಸಿಕೊಳ್ಳುತ್ತಿರುವ ಭೂಮಿ ಅಭಿವೃದ್ಧಿ ಹೊಂದಿದೆ. ಹಾಗಾಗಿ ಸೂಕ್ತ ಪರಿಹಾರ ನೀಡಬೇಕು’ ಎಂದು ರೈತರ ಮುಖಂಡ ಶ್ರೀನಿವಾಸ್ ಆಗ್ರಹಿಸಿದ್ದಾರೆ.

‘ಬಿಬಿಸಿ ಯೋಜನೆಯಲ್ಲಿ 65 ಮೀಟರ್ ರಸ್ತೆ ನಿರ್ಮಿಸಿ, ಉಳಿದ 35 ಮೀಟರ್ ಜಾಗದಲ್ಲಿ ವಾಣಿಜ್ಯ ಭೂಮಿ ಕೊಡುವುದಾಗಿ ಬಿಡಿಎ ಹೇಳಿದೆ. ಸ್ವಾಧೀನಪಡಿಸಿಕೊಂಡ 65 ಮೀಟರ್ ರಸ್ತೆಗೆ ಏಕೆ ಪರಿಹಾರ ನೀಡುತ್ತಿಲ್ಲ?. ಅಲ್ಲದೆ, ಟಿಡಿಆರ್ ಅಥವಾ ಎಫ್‌ಎಆರ್ ನಿಂದ ರೈತರಿಗೆ ಅನುಕೂಲವಿಲ್ಲ. ಟಿಡಿಆರ್ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡಿಲ್ಲ. ಪರಿಹಾರ ಆಯ್ಕೆಗಳು ಸಂವಿಧಾನ ವಿರೋಧಿಯಾಗಿದೆ. ಕೇಂದ್ರ ಸರ್ಕಾರದ 2013ರ ಭೂ ಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆಗೂ ವಿರುದ್ಧವಾಗಿದೆ. ಹಲವು ಯೋಜನೆಗಳಲ್ಲಿ ಹೊಸ ಕಾಯ್ದೆ ಅಳವಡಿಸಿಕೊಳ್ಳುವಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರೂ ಸರ್ಕಾರ ಪಾಲಿಸುತ್ತಿಲ್ಲ’ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬನಶಂಕರಿ ಅಮ್ಮನವರ ಬ್ರಹ್ಮರಥೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ವತಿಯಿಂದ ಜ.3ರಂದು ಮಧ್ಯಾಹ್ನ 1.10ಕ್ಕೆ ಬನಶಂಕರಿ ಅಮ್ಮನವರ ಬ್ರಹ್ಮ-ರಥೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಬನಶಂಕರಿ ಅಮ್ಮನ ಜಾತ್ರೆ ಡಿ. 28ಕ್ಕೆ ವಿಧ್ಯುಕ್ತವಾಗಿ ಆರಂಭವಾಗಿದೆ. ಜ.7ರವರೆಗೆ ಇರಲಿದ್ದು, ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು ಜ.3ರಂದು ನಡೆಯಲಿವೆ. ಅಂದು ಬೆಳಿಗ್ಗೆ 7ಕ್ಕೆ ಮೃತ್ಯುಂಜಯ ಪುರಸ್ಸರ ನವಗ್ರಹ ಶಾಂತಿ, ದೇವಿ ಮೂಲಮಂತ್ರ ಹೋಮ, ರಥಾಂಗಹೋಮ ಇರಲಿದೆ’ ಎಂದು ವಿವರಿಸಿದರು.

ಮಧ್ಯಾಹ್ನ 1.10ರಿಂದ ಸಂಜೆ 1.40ರವರೆಗೆ ಬನಶಂಕರಿ ಅಮ್ಮನವರ ಬ್ರಹ್ಮರಥೋತ್ಸವ ನಡೆಯಲಿದೆ. ಸಂಜೆ 4.30ಕ್ಕೆ ಶಾಕಾಂಬರೀ ದೇವಿಗೆ ಧೂಳೋತ್ಸವ, ಸಂಜೆ 6ಕ್ಕೆ ಬನಶಂಕರಿ ದೇವಿ, ಚೌಡೇಶ್ವರಿ ದೇವಿ, ಪುಟ್ಟೇನಹಳ್ಳಿ ಆಂಜನೇಯ ಸ್ವಾಮಿ, ಪಾರ್ವತಿ ಪರಮೇಶ್ವರ ದೇವರು, ಸೀತಾಲಕ್ಷ್ಮಣ ಹನುಮಂತ ಸಮೇತ ರಾಮಚಂದ್ರ ಸ್ವಾಮಿಗೆ, ಮಹಾಗಣಪತಿ, ವರಪ್ರಸಾದ್ ಆಂಜನೇಯ ಸ್ವಾಮಿ, ಸುಬ್ರಹ್ಮಣ್ಯೇಶ್ವರ ಸ್ವಾಮಿಗೆ ಮುತ್ತಿನ ಪಲಕ್ಕಿ ಉತ್ಸವ ನೇರವೇರಲಿದೆ ಎಂದು ಹೇಳಿದರು.

ಮುಜರಾಯಿ ಇಲಾಖೆಯ ಎಲ್ಲ ದೇವಸ್ಥಾನಗಳಲ್ಲಿ ಪ್ಲಾಸ್ಟಿಕ್ ನಿಷೇಧ ಮಾಡಲಾಗಿದೆ. ಅದರಲ್ಲಿಯೂ ಬನಶಂಕರಿ ಅಮ್ಮನವರ ದೇವಸ್ಥಾನವು ಪ್ಲಾಸ್ಟಿಕ್‌ಮುಕ್ತ ಆಗುವಲ್ಲಿ ಯಶಸ್ವಿಯಾಗಿದೆ. ಬ್ರಹ್ಮರಥೋತ್ಸವ ಸಂದರ್ಭದಲ್ಲಿ ಅಹಿತಕರ ಘಟನೆ, ವಾಹನದಟ್ಟಣೆ ಉಂಟಾಗದಂತೆ ನೋಡಿಕೊಳ್ಳಲಾಗುವುದು. ಪ್ರಮುಖ ರಸ್ತೆಗಳಲ್ಲಿ ದೀಪಾಲಂಕಾರ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ರಥೋತ್ಸವದಲ್ಲಿ ಕಳೆದ ವರ್ಷ 60 ಸಾವಿರ ಭಕ್ತರು ಪಾಲ್ಗೊಂಡಿದ್ದರು. ಈ ವರ್ಷ ಅದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ಬಾರಿ ಬೆಳ್ಳಿ ತೇರಿನಲ್ಲಿ ರಥೋತ್ಸವ ಮಾಡಲು ತೀರ್ಮಾನಿಸಲಾಗಿದೆ ಎಂದರು.

ದೇವಸ್ಥಾನದ ಸಮೀಪದಲ್ಲಿ ಬಹುಮಹಡಿ ಪಾರ್ಕಿಂಗ್ ವ್ಯವಸ್ಥೆ ಅಭಿವೃದ್ಧಿ ಪಡಿಸಲಾಗುತ್ತಿದೆ. ಜೊತೆಗೆ ಎರಡು ಮಹಡಿಯ ಹೆಚ್ಚುವರಿ ಅನ್ನದಾನ ಕೊಠಡಿ ನಿರ್ಮಿಸಲು ದಾನಿಗಳು ಮುಂದೆ ಬಂದಿದ್ದಾರೆ ಎಂದು ಹೇಳಿದರು.

ರಥೋತ್ಸವ: ಸಂಚಾರ ನಿರ್ಬಂಧ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕನಕಪುರ ಮುಖ್ಯರಸ್ತೆಯಲ್ಲಿ ಇರುವ ಬನಶಂಕರಿ ಅಮ್ಮನವರ ಬ್ರಹ್ಮರಥೋತ್ಸವವು ಜ.3ರಂದು ನಡೆಯಲಿದ್ದು, ಸಂಚಾರ ಮಾರ್ಪಾಡು ಮಾಡಲಾಗಿದೆ ಎಂದು ಬೆಂಗಳೂರು ನಗರ ಸಂಚಾರ ದಕ್ಷಿಣ ವಿಭಾಗದ ಡಿಸಿಪಿ ತಿಳಿಸಿದ್ದಾರೆ.

ವಾಹನ ಸಂಚಾರ ನಿರ್ಬಂಧಿಸಿರುವ ರಸ್ತೆ: ಕನಕಪುರ ಮುಖ್ಯರಸ್ತೆ ಬನಶಂಕರಿ ದೇವಸ್ಥಾನದಿಂದ ಸಾರಕ್ಕಿ ಮಾರುಕಟ್ಟೆ ಜಂಕ್ಷನ್ ವರೆಗೆ.

ನಿರ್ಬಂಧಿಸಲಾದ ಸಂಚಾರಕ್ಕೆ ಬದಲಿ ಮಾರ್ಗಗಳು: ಕನಕಪುರ ಮುಖ್ಯರಸ್ತೆ ಕೋಣನಕುಂಟೆ ಕಡೆಯಿಂದ ಬನಶಂಕರಿ ಬಸ್ ನಿಲ್ದಾಣದ ಕಡೆಗೆ ಹೋಗುವ ವಾಹನಗಳ, ಜೆ.ಪಿ.ನಗರ ಮೆಟ್ರೊ ಜಂಕ್ಷನ್ (ಸಾರಕ್ಕಿ ಸಿಗ್ನಲ್) ಹತ್ತಿರ ಬಲಕ್ಕೆ ತಿರುವು ಪಡೆದು ಸಿಂಧೂರ ವೃತ್ತದ ಮೂಲಕ ರಾಜಲಕ್ಷ್ಮಿ ಮಾರ್ಗವಾಗಿ ಸಂಚರಿಸಬಹುದು.

ಬನಶಂಕರಿ ಬಸ್ ನಿಲ್ದಾಣದ ಕಡೆಯಿಂದ ಸಾರಕ್ಕಿ ಸಿಗ್ನಲ್ ಕಡೆ ಸಂಚರಿಸುವ ವಾಹನಗಳು ಬನಶಂಕರಿ ಬಸ್ ನಿಲ್ದಾಣದ ಹತ್ತಿರ ಬಲಕ್ಕೆ ತಿರುವು ಪಡೆದು ಯಾರಬ್ ನಗರದ ಮೂಲಕ ಕೆ.ಎಸ್.ಲೇಔಟ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ಇಲಿಯಾಸ್ ನಗರ-ಸಾರಕ್ಕಿ ತಲುಪಿ ಅಲ್ಲಿಂದ ಬೇರೆಡೆಗೆ ತೆರಳಬಹುದು ಎಂದು ಅವರು ತಿಳಿಸಿದ್ದಾರೆ.

ಅತಿವಿರಳ ‘ಚಂದನ ಚಿರತೆ’ ಗೋಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿವಿರಳ ಸಂದರ್ಭದಲ್ಲಿ ರೂಪುಗೊಳ್ಳುವ ಗಂಧದ ಬಣ್ಣದ ಚರ್ಮ–ತುಪ್ಪಳ ಮತ್ತು ಮಂಕಾದ ಕಂದು ಬಣ್ಣದ ಚುಕ್ಕೆಗಳಿರುವ ಚಿರತೆಯು ರಾಜ್ಯದ ವಿಜಯನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದೆ. ಇದನ್ನು ಪತ್ತೆ ಮಾಡಿರುವ ವನ್ಯಜೀವಿ ತಜ್ಞರ ತಂಡವು, ಇದಕ್ಕೆ ‘ಚಂದನ ಚಿರತೆ’ ಎಂದು ಹೆಸರಿಟ್ಟಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿನ ವನ್ಯಜೀವಿಗಳ ಅಧ್ಯಯನ ನಡೆಸುತ್ತಿರುವ ಹೊಳೆಮತ್ತಿ ನೇಚರ್ ಫೌಂಡೇಶನ್ (ಎಚ್‌ಎನ್‌ಎಫ್) ವಿಜಯನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಕ್ಯಾಮೆರಾ ಟ್ರ್ಯಾಪಿಂಗ್ ಸಾಧನಗಳನ್ನು ಅಳವಡಿಸಿತ್ತು. ಈ ಕ್ಯಾಮೆರಾಗಳಲ್ಲಿ ಅತ್ಯಪರೂಪದ ‘ಚಂದನ ಚಿರತೆ’ ಹಲವು ಬಾರಿ ಸೆರೆಯಾಗಿದೆ.

ಸಾಮಾನ್ಯ ಚಿರತೆಗಳು ಹಳದಿ–ಕಂದು ಮಿಶ್ರಿತ ಚರ್ಮ ಮತ್ತು ಕಪ್ಪು ಬಣ್ಣದ ಚುಕ್ಕೆಗಳನ್ನು ಹೊಂದಿರುತ್ತವೆ. ಆದರೆ, ಈ ಚಿರತೆಯು ಗಂಧದ ಬಣ್ಣವನ್ನು ಹೋಲುವ ಕೆಂಪು–ಗುಲಾಬಿ ಮಿಶ್ರಿತ ಬಣ್ಣದ ತುಪ್ಪಳ ಮತ್ತು ಮಾಸಲು ಕಂದು ಬಣ್ಣದ ಚುಕ್ಕೆ ಹೊಂದಿದೆ. ಜಗತ್ತಿನಾದ್ಯಂತ ಈವರೆಗೆ ಕೆಲವು ಬಾರಿಯಷ್ಟೇ ಈ ಸ್ವರೂಪದ ಚಿರತೆಗಳು ಪತ್ತೆಯಾಗಿವೆ.

‘ಜಾಗತಿಕವಾಗಿ ಇಂತಹದ್ದನ್ನು ಸ್ಟ್ರಾಬೆರಿ ಚಿರತೆ (Strawberry Leopard) ಎಂದು ಕರೆಯುತ್ತಾರೆ. ಆದರೆ ಈ ರೂಪಾಂತರಕ್ಕೆ ಸ್ಥಳೀಯ ಗುರುತನ್ನು ನೀಡಲು ಮತ್ತು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸಲು ‘ಚಂದನ ಚಿರತೆ’ ಎಂದು ನಾಮಕರಣ ಮಾಡಲಾಗಿದೆ’ ಎಂದು ಎಚ್‌ಎನ್‌ಎಫ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ದಕ್ಷಿಣ ಆಫ್ರಿಕಾದಲ್ಲಿ ಕೆಲವು ಬಾರಿ, ತಾಂಜೇನಿಯಾದಲ್ಲಿ ಒಂದು ಬಾರಿ, ರಾಜಸ್ಥಾನದ ರಣಕಪುರದಲ್ಲಿ 2021ರಲ್ಲಿ ಇಂತಹ ಚಿರತೆ ಪತ್ತೆಯಾಗಿತ್ತು. ಭಾರತದಲ್ಲಿ ಇಂತಹ ಚಿರತೆ ಕಾಣಿಸಿಕೊಳ್ಳುತ್ತಿರುವುದು ಇದು ಎರಡನೇ ಬಾರಿ, ಕರ್ನಾಟಕದಲ್ಲಿ ಇದೇ ಮೊದಲ ಬಾರಿ ಎಂದು ಎಚ್‌ಎನ್‌ಎಫ್ ಮಾಹಿತಿ ನೀಡಿದೆ.

6-7 ವರ್ಷ ವಯಸ್ಸಿನ ಹೆಣ್ಣು ಚಿರತೆ

ಕೆಂಪು–ಗುಲಾಬಿ ಮಿಶ್ರಣದ ಗಂಧದ ಬಣ್ಣದ ಚರ್ಮ ಮತ್ತು ತುಪ್ಪಳ

ಮಾಸಲು ಅಥವಾ ಮಂಕಾದ ಕಂದು ಬಣ್ಣದ ಚುಕ್ಕೆಗಳು

ಸಾಮಾನ್ಯ ಬಣ್ಣದ ಮರಿ ಚಿರತೆಯೊಂದಿಗೂ ಈ ಚಂದನ ಚಿರತೆ ಕಾಣಿಸಿಕೊಂಡಿದೆ



‘ವಿಬಿ–ಜಿ ರಾಮ್ ಜಿ ಕಾಯ್ದೆ ರದ್ದುಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರವು ‘ವಿಬಿ–ಜಿ ರಾಮ್ ಜಿ’ ಕಾಯ್ದೆಯನ್ನು ತಕ್ಷಣವೇ ರದ್ದುಗೊಳಿಸಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆ ಮುಂದುವರಿಸಬೇಕು’ ಎಂದು ಆಗ್ರಹಿಸಿರುವ ನರೇಗಾ ಸಂಘರ್ಷ ಮೋರ್ಚಾ, ಇದೇ 5ರಿಂದ ದೇಶದಾದ್ಯಂತ ಕಾಂಗ್ರೆಸ್ ಆರಂಭಿಸುತ್ತಿರುವ ‘ಮನರೇಗಾ ಉಳಿಸಿ’ ಆಂದೋಲನಕ್ಕೆ ಬೆಂಬಲ ಸೂಚಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಾವೇರಿ ಜಿಲ್ಲಾ ವೇತನ ಕಾರ್ಮಿಕರ ಸಂಘದ ಅಧ್ಯಕ್ಷೆ ಗುತ್ತಮ್ಮ ಸುನಗರ, ‘ನೂತನ ಕಾಯ್ದೆ ರದ್ದಾಗುವ-ವರೆಗೂ ಹೋರಾಟ ಮಾಡಲಿದ್ದೇವೆ. ಈ ಕಾನೂನಿನಿಂದ 26 ಕೋಟಿಗೂ ಹೆಚ್ಚು ನೋಂದಾಯಿತ ಮನರೇಗಾ ಕಾರ್ಮಿಕರ ಜೀವನೋಪಾಯಗಳ ಮೇಲೆ ಗಾಢ ಪರಿಣಾಮ ಬೀರುತ್ತದೆ. ಪ್ರಸ್ತುತ ಬಜೆಟ್‌ನೊಂದಿಗೆ, ಕೇಂದ್ರ ಸರ್ಕಾರವು ಪ್ರತಿ ಮನೆಗೆ ವರ್ಷಕ್ಕೆ 50 ದಿನಗಳ ಕೆಲಸವನ್ನು ಒದಗಿಸಲು ಸಹ ಸಾಧ್ಯ-ವಾಗುತ್ತಿಲ್ಲ. ಈಗ ಹಣ ಹೊಂದಿಸುವ ಹೊಣೆಯನ್ನೂ ರಾಜ್ಯಗಳ ಮೇಲೆ ಹಾಕಿದೆ. 125 ದಿನಗಳ ಕೆಲಸದ ಖಾತರಿ ಇಲ್ಲವಾಗಿದೆ’ ಎಂದು ಆರೋಪಿಸಿದರು.

ಹೈಕೋರ್ಟ್ ವಕೀಲ ಕ್ಲಿಫ್ಟನ್ ಡಿ. ರೊಜಾರಿಯೊ, ‘ಕೇಂದ್ರ ಸರ್ಕಾರ ಹೆಚ್ಚಿನ ಆದ್ಯತೆ ನೀಡುವ ಮೂಲಕ ಜನರ ದುಡಿಯುವ ಹಕ್ಕನ್ನೇ ದೋಚಿದೆ’ ಎಂದು ಅಭಿಪ್ರಾಯಪಟ್ಟರು.

ಬೆಳಗಾವಿ ಜಿಲ್ಲೆ ಜಾಗೃತ ಮಹಿಳಾ ಒಕ್ಕೂಟದ ಅಧ್ಯಕ್ಷೆ ಸುವರ್ಣ ಕುತಾಳೆ, ‘ನರೇಗಾದಂತಹ ಯೋಜನೆಗಳಿಂದ ಗ್ರಾಮಸಭೆಗಳು ಉಸಿರಾಡುತ್ತಿದ್ದವು. ವಿಬಿ–ಜಿ ರಾಮ್ ಜಿ ಅದನ್ನು ಕೊಲ್ಲುತ್ತದೆ. ಕೃಷಿ ಕೊರತೆಯ ಋತುಗಳಲ್ಲಿ ಮೇಕೆ ಮತ್ತು ಕೋಳಿ ಸಾಕಾಣಿಕೆ ಮಾಡಬಹು-ದಾಗಿತ್ತು. ಈಗ ಅದು ಸಾಧ್ಯವಾಗದು’ ಎಂದು ಹೇಳಿದರು.

‘ಜಿ ರಾಮ್ ಜಿ’ ತಿರಸ್ಕರಿಸಲು ಸಂಪುಟ ತೀರ್ಮಾನ

ಬೆಂಗಳೂರು: ನರೇಗಾವನ್ನು ರದ್ದು ಮಾಡಿ 'ಜಿ ರಾಮ್ ಜಿ' ಮಸೂದೆ ಅಂಗೀಕರಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ತಿರಸ್ಕರಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಅಲ್ಲದೇ, ನರೇಗಾ ಫಲಾನುಭವಿಗಳಿಂದ ಬೃಹತ್ ಹೋರಾಟ ನಡೆಸಲೂ ತೀರ್ಮಾನಿಸಲಾಗಿದೆ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಸುದ್ದಿಗೋಷ್ಠಿ ನಡೆಸಿ ವಿವರ ನೀಡಲಿದ್ದಾರೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ತಿಳಿಸಿದರು.

ಕೇಂದ್ರದ ಕ್ರಮವನ್ನು ಸಂಪುಟ ಸಭೆ ಖಂಡಿಸಿದ್ದು, ಮಸೂದೆಯನ್ನು ಹಿಂದಕ್ಕೆ ಪಡೆಯಲೂ ಒತ್ತಾಯಿಸಲಾಗಿದೆ. ಹೊಸ ಮಸೂದೆ ಜಾರಿಯಾದರೆ ಗ್ರಾಮೀಣ ವ್ಯವಸ್ಥೆಯನ್ನು ಬುಡಮೇಲು ಮಾಡಲಿದೆ. ಕೃಷಿ ಕಾರ್ಮಿಕರು ಕೆಲಸ ಕಳೆದುಕೊಳ್ಳಲಿದ್ದಾರೆ ಎಂದು ಹೇಳಿದರು.

ಪಡಿತರ ಚೀಟಿ ರದ್ದು; ಅವ್ಯವಹಾರದ ಸದ್ದು

ಕೆಲವು ನ್ಯಾಯಬೆಲೆ ಅಂಗಡಿಗಳಿಂದ ಹಣಕ್ಕಾಗಿ ಬೇಡಿಕೆ: ಆರೋಪ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರ ಗುರುತಿಸಿದ ಅನರ್ಹ ಪಡಿತರ ಚೀಟಿಗಳ ಪರಿಶೀಲನಾ ಕಾರ್ಯ ಮುಂದುವರಿದಿದೆ. ಈ ಸಂದರ್ಭದ ಲಾಭ ಪಡೆದ ಹಲವು ನ್ಯಾಯಬೆಲೆ ಅಂಗಡಿಗಳು 'ಪಡಿತರ ಚೀಟಿಗಳು ರದ್ದಾಗುತ್ತವೆ' ಎಂಬ ಭಯಹುಟ್ಟಿಸಿ ವಸೂಲಿ ಮಾಡುತ್ತಿವೆ ಎಂದು ಅರ್ಹ ಪಡಿತರದಾರರು ದೂರಿದ್ದಾರೆ.

ಕರ್ನಾಟಕದಲ್ಲಿ 7.76 ಲಕ್ಷ ಶಂಕಾಸ್ಪದ ಪಡಿತರ ಚೀಟಿಗಳಿವೆ ಎಂದು ಕೇಂದ್ರ ಸರ್ಕಾರ ಗುರುತಿಸಿತ್ತು. ರಾಜ್ಯದಲ್ಲಿ ಒಟ್ಟು 13.87 ಲಕ್ಷ ಅನರ್ಹ ಬಿಪಿಎಲ್ ಪಡಿತರ ಚೀಟಿಗಳು ಇರುವುದಾಗಿ ಕರ್ನಾಟಕ ಸರ್ಕಾರದ 'ಕುಟುಂಬ ತಂತ್ರಾಂಶ' ಪತ್ತೆ ಮಾಡಿತ್ತು. ತೀವ್ರ ಪರಿಶೀಲನೆಯ ನಂತರ 3.65 ಲಕ್ಷ ಪಡಿತರ ಚೀಟಿಗಳನ್ನು ರಾಜ್ಯ ಸರ್ಕಾರ ಅಮಾನತು, ರದ್ದು ಹಾಗೂ ಎಪಿಎಲ್‌ಗೆ ಬದಲಾವಣೆ ಮಾಡಿತ್ತು. ಸರ್ಕಾರದ ಕ್ರಮಕ್ಕೆ ಆಕ್ಷೇಪ ವ್ಯಕ್ತವಾದ ನಂತರ 3.52 ಲಕ್ಷ ಪಡಿತರ ಚೀಟಿಗಳನ್ನು ಮರು ಸ್ಥಾಪಿಸಲಾಗಿತ್ತು. ಆದರೆ, ಪರಿಶೀಲನಾ ಕಾರ್ಯ ಮುಂದುವರಿಸಲಾಗಿದೆ.

ಪಡಿತರ ಚೀಟಿ ವಿಚಾರದಲ್ಲಿ ಯಾರಾದರೂ ಲಾಭ ನಿರೀಕ್ಷೆ ಮಾಡಿದರೆ ಆಯಾ ತಹಶೀಲ್ದಾರ್‌ಗಳಿಗೆ ದೂರು ಸಲ್ಲಿಸಬೇಕು. ಅಂತಹ ಅಂಗಡಿಗಳ ಪರವಾನಗಿ ರದ್ದು ಸೇರಿದಂತೆ ಕಠಿಣ ಕ್ರಮ ಕೈಗೊಳ್ಳಲಾಗುವುದು
ಕೆ.ಎಚ್.ಮುನಿಯಪ್ಪ, ಆಹಾರ ಸಚಿವ

ಪರಿಸ್ಥಿತಿಯ ಲಾಭ ಪಡೆದ ಕೆಲ ನ್ಯಾಯಬೆಲೆ ಅಂಗಡಿಗಳು ಹಾಗೂ ಅಧಿಕಾರಿಗಳು ಹಣಕ್ಕಾಗಿ ಬೇಡಿಕೆ ಇಡುತ್ತಿದ್ದು, ಬಿಪಿಎಲ್ ಚೀಟಿಗಳು ರದ್ದಾಗುವ, ಎಪಿಎಲ್‌ಗೆ ಪರಿವರ್ತಿತವಾಗುವ ಭಯದಿಂದ ಪಡಿತರದಾರರು ಆಹಾರ ಇಲಾಖೆ ನಿರೀಕ್ಷಕರು, ಶಿರಸ್ತೇದಾರರು ಹಾಗೂ ತಹಶೀಲ್ದಾರ್ ಕಚೇರಿಗಳಿಗೆ ಅಲೆಯುತ್ತಿದ್ದಾರೆ. ಕಚೇರಿಗಳ ಮುಂದೆ ಪ್ರತಿ ದಿನವೂ ಬಿಪಿಎಲ್ ಪಡಿತ ಚೀಟಿ ಮರಳಿ ಪಡೆಯಲು ಸರದಿ ಸಾಲು ಬೆಳೆಯುತ್ತಲೇ ಇದೆ.

'ತಳ್ಳುವ ಗಾಡಿಯಲ್ಲಿ ತರಕಾರಿ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದೇವೆ. ಒಂದು ದಿನ ವ್ಯಾಪಾರ ಆಗದಿದ್ದರೆ ಅಂದು ಹೊಟ್ಟೆ ತುಂಬಾ ಊಟವೂ ಇಲ್ಲ. ಮತ್ತೊಬ್ಬರಿಗೆ ಹಂಚಿಕೆಯಾದ ಆಶ್ರಯ ಮನೆಯಲ್ಲಿ ₹1,200 ಬಾಡಿಗೆ ನೀಡಿ ವಾಸ ಮಾಡುತ್ತಿದ್ದೇವೆ. ಅನ್ನಭಾಗ್ಯ ಯೋಜನೆಯಲ್ಲಿ ಪ್ರತಿ ತಿಂಗಳು ಸಿಗುವ ಅಕ್ಕಿ ಆಸರೆಯಾಗಿದೆ. ನ್ಯಾಯಬೆಲೆ ಅಂಗಡಿಯವರು ವಾರದ ಹಿಂದೆ ಕರೆ ಮಾಡಿ, ನಿಮ್ಮ ಪಡಿತರ ಚೀಟಿ ಶಂಕಾಸ್ಪದ ಪಟ್ಟಿಯಲ್ಲಿದೆ. ನಾವು ಸರಿಪಡಿಸುತ್ತೇವೆ. ₹4,000 ತಂದು ಕೊಡಿ ಎಂದಿದ್ದಾರೆ. ಹಣವಿಲ್ಲದ ಕಾರಣ ಅಲ್ಲಿಗೆ ಹೋಗಲು ಆಗಿಲ್ಲ. ಯಾರನ್ನು ಕಾಣಬೇಕು ಎಂಬ ಮಾಹಿತಿಯೂ ಇಲ್ಲ' ಎಂದು ಅಳಲು ತೋಡಿಕೊಂಡರು ಮೈಸೂರು ರಸ್ತೆಯ ಬ್ಯಾಟರಾಯನಪುರ ಕೊಳೆಗೇರಿಯ ನಿವಾಸಿ ಸೀತಾಳಮ್ಮ.

ಸರ್ಕಾರದ ಮಾನದಂಡಗಳ ಅನುಸಾರ ₹1.20 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಇರುವವರು, ಕುಟುಂಬದಲ್ಲೊಬ್ಬರು ಆದಾಯ ತೆರಿಗೆ ಪಾವತಿದಾರರು, ಕಂಪನಿಗಳಲ್ಲಿ ನಿರ್ದೇಶಕರು, ನಾಲ್ಕು ಚಕ್ರಗಳ ವಾಹನ ಹೊಂದಿದವರು, ಜಿಎಸ್‌ಟಿ ನಂಬರ್ ಹೊಂದಿದ್ದು ₹25 ಲಕ್ಷಕ್ಕಿಂತ ಹೆಚ್ಚಿನ ವಹಿವಾಟು ನಡೆಸುವವರು, ಸರ್ಕಾರಿ ನೌಕರರು ಬಿಪಿಎಲ್ ಪಡಿತರ ಚೀಟಿ ಹೊಂದಲು ಅನರ್ಹರು. ಅಲ್ಲದೇ ಕನಿಷ್ಠ 6 ತಿಂಗಳಿಂದ ಪಡಿತರ ಪಡೆಯದವರ ಚೀಟಿಗಳನ್ನೂ ನಿಯಮದಂತೆ ರದ್ದು ಮಾಡಲಾಗುತ್ತದೆ. ಆದರೆ, ಆಹಾರ ಇಲಾಖೆ ಅಧಿಕಾರಿಗಳು ಆದಾಯ ತೆರಿಗೆ ಕಟ್ಟದೆ, ಕೇವಲ ರಿಟರ್ನ್‌ಫೈಲ್ ಮಾಡಿದವರ ಬಿಪಿಎಲ್ ಚೀಟಿಗಳನ್ನೂ ರದ್ದು ಮಾಡಿದ್ದಾರೆ.

'ಮಗಳನ್ನು ಎಂಜಿನಿಯರಿಂಗ್ ಕೋರ್ಸ್‌ಗೆ ಸೇರಿಸಲು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದೆವು. ಬ್ಯಾಂಕ್ ವ್ಯವಸ್ಥಾಪಕರು ಆದಾಯ ತೆರಿಗೆ ರಿಟರ್ನ್ಸ್ ಫೈಲ್ ಕೇಳಿದ್ದರು. ಅದಕ್ಕಾಗಿ ವ್ಯವಸ್ಥೆ ಮಾಡಿಕೊಂಡಿದ್ದೆವು. ಈಗ ನೋಡಿದರೆ ನೀವು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿರುವುದರಿಂದ ನಿಮ್ಮ ಬಿಪಿಎಲ್ ಪಡಿತರ ರದ್ದಾಗಿದೆ ಎಂದು ಹೇಳುತ್ತಿದ್ದಾರೆ. ಆಹಾರ ಇಲಾಖೆಯ ಅಧಿಕಾರಿಗಳಿಗೆ ವಾಸ್ತವ ಮನವರಿಕೆ ಮಾಡಿಕೊಟ್ಟರೂ ಎರಡು ತಿಂಗಳಿನಿಂದ ಪಡಿತರ ನೀಡಿಲ್ಲ' ಎನ್ನುವುದು ಮೂಡಲಪಾಳ್ಯದ ಶೋಭಾ ದೂರು.

ಅಂಕಿ ಅಂಶಗಳು

1.53 ಕೋಟಿ
ರಾಜ್ಯದಲ್ಲಿರುವ ಪಡಿತರ ಚೀಟಿಗಳು

5.41 ಕೋಟಿ
ಪಡಿತರ ಚೀಟಿಗಳಲ್ಲಿರುವ ಸದಸ್ಯರು

7.76 ಲಕ್ಷ
ಕೇಂದ್ರ ಗುರುತಿಸಿದ ಶಂಕಾಸ್ಪದ ಪಡಿತರ ಚೀಟಿ

13.87 ಲಕ್ಷ
ರಾಜ್ಯ ಸರ್ಕಾರ ಗುರುತಿಸಿದ ಪಡಿತರ ಚೀಟಿ

ಪ್ರತಿ ತಿಂಗಳು ₹535 ಕೋಟಿ ವೆಚ್ಚ

'ಅನ್ನಭಾಗ್ಯ' ಗ್ಯಾರಂಟಿ ಯೋಜನೆಯಡಿ ಪ್ರತಿ ತಿಂಗಳು 4.46 ಕೋಟಿ ಫಲಾನುಭವಿಗಳಿಗೆ 2.15 ಲಕ್ಷ ಟನ್ ಅಕ್ಕಿ ಹಂಚಿಕೆ ಮಾಡಲಾಗುತ್ತಿದೆ. ಅದಕ್ಕಾಗಿ ₹535 ಕೋಟಿ ವೆಚ್ಚ ಮಾಡಲಾಗುತ್ತಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಅಡಿಯಲ್ಲಿರುವ ಪಡಿತರ ಚೀಟಿಗಳಿಗೆ ಕೇಂದ್ರ ಸರ್ಕಾರದಿಂದ ಪ್ರತಿ ತಿಂಗಳು 2.17 ಲಕ್ಷ ಟನ್ ಆಹಾರ ಧಾನ್ಯ ಹಂಚಿಕೆ ಆಗುತ್ತಿದೆ. ರಾಜ್ಯ ಸರ್ಕಾರದ ಬಿಪಿಎಲ್ ಪಡಿತರ ಚೀಟಿಗಳಿಗೆ ಭಾರತೀಯ ಆಹಾರ ನಿಗಮದಿಂದ (ಎಫ್‌ಸಿಐ) ಪ್ರತಿ ತಿಂಗಳು 20 ಸಾವಿರ ಟನ್ ಆಹಾರ ಧಾನ್ಯ ಖರೀದಿಸಿ ಹಂಚಲಾಗುತ್ತಿದೆ.

ಎಎಸ್‌ಐ, ವೈದ್ಯನ ವಿರುದ್ಧ 2ನೇ ದೋಷಾರೋಪ ಪಟ್ಟಿ

ಒಂದನೇ ಪುಟದಿಂದ...

'ಆರೋಪಿಗಳ ಪೈಕಿ ಅನಿಸ್ ಫಾತಿಮಾ ಅವರು ನಾಸೀರ್ ತಪ್ಪಿಸಿಕೊಳ್ಳಲು ಸಂಚು ರೂಪಿಸುವುದರ ಜತೆಗೆ ಆರ್ಥಿಕ ಸಹಾಯ ಮಾಡುತ್ತಿದ್ದರು. ತನ್ನ ಪುತ್ರ ಜುನೈದ್ ಅಹಮದ್ ಸೂಚನೆ ಮೇರೆಗೆ ಹ್ಯಾಂಡ್ ಗ್ರೆನೇಡ್‌ಗಳು, ವಾಕಿ ಟಾಕಿಗಳನ್ನು ಇತರೆ ಶಂಕಿತರಿಗೆ ಪೂರೈಕೆ ಮಾಡಲು ಸೂಚಿಸಿದ್ದರು. ಅಲ್ಲದೆ, ಜೈಲಿನಲ್ಲಿ ಶಂಕಿತರು ಪರಸ್ಪರ ಮಾತನಾಡಲು ಮೊಬೈಲ್ ಪೂರೈಕೆ ಮಾಡಿದ್ದರು. ಜುನೈದ್ ಅಹಮದ್ ದುಬೈಗೆ ಪರಾರಿಯಾಗಲು ನೆರವು ನೀಡಿದ್ದರು' ಎಂಬುದು ತನಿಖೆ ವೇಳೆ ಪತ್ತೆಯಾಗಿದೆ.

'ನಗರ ಸಶಸ್ತ್ರ ಮೀಸಲು ಪಡೆಯ (ದಕ್ಷಿಣ ವಿಭಾಗ) ಎಎಸ್‌ಐ ಆಗಿದ್ದ ಚಾನ್ ಪಾಷಾ ಅವರು ಕೈದಿಗಳ ಬೆಂಗಾವಲು ಕರ್ತವ್ಯದಲ್ಲಿದ್ದಾಗ ಟಿ.ನಾಸೀರ್‌ನನ್ನು ನ್ಯಾಯಾಲಯಕ್ಕೆ ಕರೆದೊಯ್ಯುವ ಸಮಯ, ಮಾರ್ಗದ ವಿವರಗಳನ್ನು ಆರೋಪಿಗಳು ಹಂಚಿಕೊಳ್ಳುತ್ತಿದ್ದರು. ಇದಕ್ಕಾಗಿ ಮತ್ತೊಬ್ಬ ಆರೋಪಿ ಸಲ್ಮಾನ್ ಖಾನ್‌ನಿಂದ ಪ್ರತಿಫಲವನ್ನು ಪಡೆದುಕೊಂಡಿದ್ದರು' ಎಂಬುದು ತನಿಖೆ ವೇಳೆ ಪತ್ತೆಯಾಗಿದೆ.

'ಮತ್ತೊಬ್ಬ ಆರೋಪಿ ಜೈಲಿನ ವೈದ್ಯ ನಾಗರಾಜ್, ಜೈಲಿಗೆ ಅಕ್ರಮವಾಗಿ ಮೊಬೈಲ್‌ಗಳನ್ನು ಕಳ್ಳಸಾಗಣೆ ಮಾಡಿ ಟಿ.ನಾಸೀರ್ ಸೇರಿ ಇತರೆ ಕೈದಿಗಳಿಗೆ ಮಾರಾಟ ಮಾಡಿದ್ದರು. ನಾಸೀರ್‌ಗೆ ನಾಲ್ಕು ಮೊಬೈಲ್‌ಗಳನ್ನು ಮಾರಾಟ ಮಾಡಿದ್ದು, ಆತನಿಂದ ಹಣ ಪಡೆದುಕೊಂಡಿದ್ದರು. ನಾಸೀರ್ ಉಗ್ರ ಎಂಬುದು ಗೊತ್ತಿದ್ದರೂ ಭಯೋತ್ಪಾದನಾ ಚಟುವಟಿಕೆಗೆ ಸಂಚು ರೂಪಿಸಲು ಸಹಕಾರ ನೀಡಿದ್ದರು' ಎಂಬುದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ವಿಜಯಲಕ್ಷ್ಮಿ ಅಸಮಾಧಾನ ಹೊರಹಾಕಿದ್ದ ಬೆನ್ನಲ್ಲೇ ತನಿಖೆ ಚುರುಕು

ಅಶ್ಲೀಲ ಸಂದೇಶ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ಅವರ ಪತ್ನಿ, ಹೊಸಕೆರೆಹಳ್ಳಿಯ ನಿವಾಸಿ ವಿಜಯಲಕ್ಷ್ಮಿ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಸಂದೇಶ ಕಳುಹಿಸಿ, ಬೆದರಿಕೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ಆಟೊ ಚಾಲಕನನ್ನು ಸೈಬರ್ ಅಪರಾಧ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ವಿಜಯಲಕ್ಷ್ಮಿ

ಚಿಕ್ಕಬಾಣಾವರದ ನಿವಾಸಿ, ಆಟೊ ಚಾಲಕ ಬಿ.ಚಂದ್ರಶೇಖರ್ (45) ಹಾಗೂ ದಾವಣಗೆರೆಯ ನಿವಾಸಿ, ಸಾಫ್ಟ್‌ವೇರ್ ಎಂಜಿನಿಯರ್ ನಿತಿನ್ ಬಂಧಿತರು. ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯಲ್ಲಿ ನಿತಿನ್ ಕೆಲಸ ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ. 'ಆರೋಪಿಗಳ ಬಂಧನಕ್ಕೆ ಮೂರು ವಿಶೇಷ ತಂಡ ರಚಿಸಲಾಗಿತ್ತು. ಬೆಂಗಳೂರು, ದಾವಣಗೆರೆಯಲ್ಲಿ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ. ಉಳಿದ 16 ಖಾತೆಗಳ ಕುರಿತು ತನಿಖೆ ಮುಂದುವರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಪ್ರಚೋದನೆ ನೀಡಿದ್ದವರ ಪತ್ತೆ: ಪೊಲೀಸ್ ಕಮಿಷನರ್

'ಬಂಧಿತ ಇಬ್ಬರು ಆರೋಪಿಗಳಿಗೆ ಯಾರು ಪ್ರಚೋದನೆ ನೀಡಿದ್ದಾರೆ ಎಂಬುದನ್ನೂ ಪತ್ತೆ ಹಚ್ಚಲಾಗುತ್ತಿದೆ. ಅಶ್ಲೀಲವಾಗಿ ಸಂದೇಶ ಕಳುಹಿಸಿ, ಬೆದರಿಕೆ ಹಾಕಿದ ಕಿಡಿಕೇಡಿಗಳ ವಿರುದ್ಧ ಮಹಿಳೆಯರು ಧೈರ್ಯದಿಂದ ದೂರು ನೀಡಬಹುದು. ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ' ಎಂದು ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ತಿಳಿಸಿದರು.



ಸೀಮಾಂತ್ ಕುಮಾರ್

ಪ್ರಕರಣ ಏನು?

ದಾವಣಗೆರೆಯಲ್ಲಿ ಆಯೋಜಿಸಿದ್ದ 'ಡೆವಿಲ್' ಸಿನಿಮಾದ ಪ್ರಚಾರದಲ್ಲಿ 'ಯಾರು ಏನೇ ಹೇಳಿದರೂ ತಲೆಕೆಡಿಸಿಕೊಳ್ಳಬೇಡಿ' ಎಂದು ವಿಜಯಲಕ್ಷ್ಮಿ ಅವರು ಅಭಿಮಾನಿಗಳಿಗೆ ಕರೆ ನೀಡಿದ್ದರು. ಅದಾದ ಮೇಲೆ ವಿಜಯಲಕ್ಷ್ಮಿ ಹಾಗೂ ಅವರ ಕುಟುಂಬದವರಿಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿಗಳು

₹1.37 ಕೋಟಿ ಮೌಲ್ಯದ ಚಿನ್ನಾಭರಣ ಕಳವು

ಉದ್ಯಮಿಯ ಮನೆಯಲ್ಲಿದ್ದ ₹1.27 ಕೋಟಿ ಮೌಲ್ಯದ ಚಿನ್ನಾಭರಣ, ₹10 ಲಕ್ಷ ಮೌಲ್ಯದ ವಾಚುಗಳ ಕಳ್ಳತನವಾಗಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಸದಾಶಿವನಗರ ಠಾಣೆಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಸದಾಶಿವನಗರದ ನಿವಾಸಿ ಅಭಿಷೇಕ್ ಅವರ ಮನೆಯಲ್ಲಿ ಕಳ್ಳತನ ನಡೆದಿದೆ. ಡಿ.30ರಂದು ಹೊಸ ವರ್ಷದ ಸಂಭ್ರಮಾಚರಣೆಗೆಂದು ಕೊಯಮತ್ತೂರಿಗೆ ಅಭಿಷೇಕ್ ಕುಟುಂಬವು ತೆರಳಿತ್ತು. ಆಗ ಕಳ್ಳತನವಾಗಿದೆ ಎಂದು ದೂರು ನೀಡಲಾಗಿದೆ. ಮನೆ ಕೆಲಸ ಮಾಡುತ್ತಿದ್ದ ಹಾಜಿರಾ ಅವರ ಬಳಿ ಮನೆಯ ಒಂದು ಕೀಯನ್ನು ಕೊಟ್ಟಿದ್ದ ಅಭಿಷೇಕ್ ಅವರು, ಅದನ್ನು ತಮ್ಮ ಅತ್ತೆಗೆ ನೀಡುವಂತೆ ಸೂಚಿಸಿದ್ದರು. ಆದರೆ, ಅಂದು ಸಂಜೆಯಾದರೂ ಮನೆಯ ಕೀಯನ್ನು ಅತ್ತೆಗೆ ಹಾಜಿರಾ ಅವರು ನೀಡಿರಲಿಲ್ಲ. ಅನುಮಾನ ಬಂದು ಹಾಜಿರಾಗೆ ಅಭಿಷೇಕ್ ಕರೆ ಮಾಡಿದ್ದಾಗ ಅವರ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಬಳಿಕ ಕಾರು ಚಾಲಕನಿಗೆ ಕರೆ ಮಾಡಿ ಮನೆಯ ಬಳಿಗೆ ಹೋಗಿ ಪರಿಶೀಲನೆ ನಡೆಸುವಂತೆ ತಿಳಿಸಿದ್ದರು. ಅವರು ಮನೆಗೆ ತೆರಳಿ ಪರಿಶೀಲಿಸಿದಾಗ, ಮನೆಯ ಕಬೋರ್ಡ್‌ಗಳು ತೆರೆದಿರುವುದು ಕಂಡುಬಂದಿತ್ತು. ಅಭಿಷೇಕ್ ಅವರು ಪ್ರವಾಸ ಮುಗಿಸಿ ಮನೆಗೆ ಬಂದು ನೋಡಿದಾಗ ₹1.27 ಕೋಟಿ ಮೌಲ್ಯದ 979 ಗ್ರಾಂ ಚಿನ್ನಾಭರಣ ಹಾಗೂ ₹10 ಲಕ್ಷ ಮೌಲ್ಯದ ವಾಚ್‌ಗಳ ಕಳ್ಳತನ ಮಾಡಿರುವುದು ಕಂಡು ಬಂದಿತ್ತು ಎಂದು ಪೊಲೀಸರು ಹೇಳಿದರು.

ಜೀಪು ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ಹಲಸೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಪಾದಚಾರಿ ಮಾರ್ಗದಲ್ಲಿ ನಡೆದು ತೆರಳುತ್ತಿದ್ದ ಮೂವರು ಪಾದಚಾರಿಗಳಿಗೆ ಜೀಪು ಡಿಕ್ಕಿ ಹೊಡೆದು, ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ಇಂದಿರಾನಗರದ ಕದಿರಾಯನಪಾಳ್ಯದ ನಿವಾಸಿ ರೋಸಿ (51) ಮೃತಪಟ್ಟವರು. ರೋಸಿ ಅವರು ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು.

ಗುರುವಾರ ಸಂಜೆ 5ರ ಸುಮಾರಿಗೆ ರೋಸಿ ಅವರು ತಮ್ಮ ಸಂಬಂಧಿಕರೊಬ್ಬರ ಪುತ್ರ ಮಿಥುನ್ ಜತೆಗೆ ನಡೆದು ತೆರಳುತ್ತಿದ್ದರು. ಇವರ ಪಕ್ಕದಲ್ಲೇ ವೃದ್ಧೆ ಶೈಲಜಾ ಎಂಬುವವರೂ ತೆರಳುತ್ತಿದ್ದರು. ಆಗ ಎದುರಿನಿಂದ ಅತಿ ವೇಗದಿಂದ ಬಂದ ಜೀಪು ಮೂವರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಮೂವರೂ ಗಾಯಗೊಂಡಿದ್ದರು. ರೋಸಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಗಾಯಗೊಂಡಿರುವ ವೃದ್ಧೆ ಹಾಗೂ ಬಾಲಕನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ಹೇಳಿದರು.

ಚಾಲಕ ವಾಹನವನ್ನು ಬಿಟ್ಟು ಪರಾರಿಯಾಗಿದ್ದಾನೆ. ಹಲಸೂರು ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಲೆ: ಮೂವರ ಬಂಧನ

ಬೆಂಗಳೂರು: ಆಟೊ ಚಾಲಕನನ್ನು ಕೊಲೆ ಮಾಡಿ ಪರಾರಿಯಾಗಿದ್ದ ಒಡಿಶಾದ ಮೂವರು ಆರೋಪಿಗಳನ್ನು ಕೆ.ಪಿ.ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸೌರಭ್ ಬಿಸ್ವಾಲ್ (25), ಸಾಗರ್ ದಾಸ್ (24), ಸುಬ್ರಕಾಂತ್ ಭುವಿಯಾ (35) ಬಂಧಿತರು. ಕೆ.ಪಿ.ಅಗ್ರಹಾರದ ನಿವಾಸಿ ಆಟೊ ಚಾಲಕ ರೇಚಣ್ಣ (36) ಅವರನ್ನು ಮೂವರು ಆರೋಪಿಗಳು ಕೊಲೆ ಮಾಡಿ ಪರಾರಿ ಆಗಿದ್ದರು. ಒಡಿಶಾದ ಮೂವರು ಆರೋಪಿಗಳು ಕೆ.ಪಿ.ಅಗ್ರಹಾರದಲ್ಲಿ ನೆಲಸಿದ್ದರು.

ಡಿ.31ರಂದು ರಾತ್ರಿ ಜಗಳವಾಡಿದ ಆರೋಪಿಗಳು ಚಾಕುವಿನಿಂದ ರೇಚಣ್ಣನ ಎದೆ, ಬೆನ್ನಿಗೆ ಇರಿದಿದ್ದರು. ಅವರು ಸ್ಥಳದಲ್ಲೇ ಮೃತಪಟ್ಟಿದ್ದರು. ವಿಚಾರ ತಿಳಿದ ಕೆ.ಪಿ. ಅಗ್ರಹಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಿದ್ದಾರೆ.

'ಇಡ್ಲಿ ಹಬ್ಬ' ಎಂದೇ ಪ್ರಸಿದ್ಧಿ • ಸಂಜೆ ರಥೋತ್ಸವ

ಬಂಡೆಮಠ: ಇಂದು ಆರಿದ್ರೋತ್ಸವ

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಇಡ್ಲಿ ಹಬ್ಬ' ಎಂದೇ ಪ್ರಸಿದ್ಧವಾಗಿರುವ ಬಂಡೇಶ್ವರ ಸ್ವಾಮಿ ಆರಿದ್ರೋತ್ಸವ ಶನಿವಾರ ಕೆಂಗೇರಿ ಉಪನಗರದ ಏಕ ಬಿಲ್ವ ಬಂಡೆಮಠದಲ್ಲಿ ವಿಜೃಂಭಣೆಯಿಂದ ಜರುಗಲಿದೆ.

ಋಷಿ ಮುನಿಗಳಿಗೆ, ದೇವತೆಗಳಿಗೆ ಕಂಟಕವಾಗಿ ಪರಿಣಮಿಸಿದ್ದ ಅಂಧಕಾಸುರನ ಸಂಹರಿಸಿದ ಶಿವನ ಕೋಪವನ್ನು ತಣಿಸಲು ಆರಿದ್ರ ದರ್ಶನ ಮಾಡಿಸಿದ ಪೌರಾಣಿಕ ಐತಿಹ್ಯದ ಭಾಗವಾಗಿ ಶತಮಾನಗಳಿಂದ ಆರಿದ್ರೋತ್ಸವ ಆಚರಿಸಿಕೊಂಡು ಬರಲಾಗುತ್ತಿದೆ. ಬಹುತೇಕ ಎಲ್ಲಾ ಶಿವಾಲಯಗಳಲ್ಲಿ ಅಂದು ವಿಶೇಷ ಕಾರ್ಯಕ್ರಮಗಳು ನಡೆಯಲ್ಲಿದ್ದು, ಬಂಡೆಮಠದ ಬಂಡೇಶ್ವರ ದೇಗುಲದಲ್ಲಿ ವಿಶೇಷ ಪೂಜೆ ನಡೆಯಲಿದೆ.

ಬಂಡೆಮಠಕ್ಕೆ ಶತಮಾನಗಳ ಇತಿಹಾಸವಿದೆ. ಭಕ್ತರ ಸಹಕಾರದೊಂದಿಗೆ ಆರಿದ್ರೋತ್ಸವ ಸಾಂಗವಾಗಿ ನಡೆದುಕೊಂಡು ಬರುತ್ತಿದೆ. ವಿವಿಧ ಧರ್ಮೀಯರು, ಜನಾಂಗದವರು ಭಾಗಿಯಾಗುವುದು ವಿಶೇಷ
ಸಚ್ಚಿದಾನಂದ ಸ್ವಾಮಿ

ಉತ್ಸವದ ಪ್ರಯುಕ್ತ ದೇವಾಲಯವನ್ನು ಹೂ ಮತ್ತು ದೀಪಗಳಿಂದ ಅಲಂಕರಿಸಲಾಗಿದೆ. ಬೆಂಗಳೂರಿನ ವಿವಿಧ ಭಾಗಗಳಿಂದ ಬರುವ ಭಕ್ತರಿಗೆ ಇಡ್ಲಿಯನ್ನು ಪ್ರಸಾದವಾಗಿ ನೀಡಲಾಗುತ್ತದೆ.

ಕೆಂಗೇರಿ ಸುತ್ತಮುತ್ತಲ ಗ್ರಾಮೀಣ ಭಾಗದಲ್ಲಿ ಆರಿದ್ರೋತ್ಸವವನ್ನು ಲಿಂಗಾಯತರೊಡಗೂಡಿ ಎಲ್ಲಾ ಸಮುದಾಯದವರು ಊರ ಹಬ್ಬವಾಗಿ ಆಚರಿಸುವುದು ಮತ್ತೊಂದು ವಿಶೇಷ. ಸಂಜೆ ಮೂಲ ದೇವರು ಬಂಡೇಶ್ವರ ಸ್ವಾಮಿಗೆ ಪೂಜೆ ನಡೆಯಲಿದೆ. ಬಳಿಕ ಕೆಂಗೇರಿವರೆಗೆ ರಥೋತ್ಸವ ಜರುಗಲಿದೆ. ರಥ ಸಾಗುವ ಬೀದಿಯನ್ನು ಅಲ್ಲಿನ ನಿವಾಸಿಗಳು ಶುಚಿಗೊಳಿಸಿರುತ್ತಾರೆ.

ಶತ ಶತಮಾನದಿಂದ ಆಚರಿಸಿಕೊಂಡು ಬರಲಾಗುತ್ತಿರುವ ಈ ಆರಿದ್ರೋತ್ಸವ, ಬಾಂಧವ್ಯ ವೃದ್ಧಿಗೆ ವೇದಿಕೆಯಾಗಿದೆ. ಜಾತಿ, ಮತವನ್ನು ಮೀರಿದ ಧಾರ್ಮಿಕ ಆಚರಣೆಯಾಗಿ, ಸಾಮರಸ್ಯದ ವೇದಿಕೆಯಾಗಿ ಎಲ್ಲರನ್ನೂ ಬೆಸೆದುಕೊಂಡು ಬರುತ್ತಿದೆ ಎಂದು ಬಂಡೆಮಠದ ಪ್ರಕಟಣೆ ತಿಳಿಸಿದೆ.

'ಮತದಾರರ ಪಟ್ಟಿ ಮ್ಯಾಪಿಂಗ್‌ಗೆ ಶಿಕ್ಷಕರು ಬೇಡ'

ಬೆಂಗಳೂರು: ಮತದಾರರ ಪಟ್ಟಿ ಮ್ಯಾಪಿಂಗ್ ಮಾಡುವ ಕೆಲಸಕ್ಕೆ ಪ್ರೌಢಶಾಲಾ ಶಿಕ್ಷಕರ ಬದಲಿಗೆ ಅಧಿಕಾರಿಗಳನ್ನೇ ನಿಯೋಜಿಸಬೇಕು ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಮತ್ತು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಮನವಿ ಸಲ್ಲಿಸಿದರು.

'ತಮ್ಮ ಮನವಿಗೆ ಹಿರಿಯ ಅಧಿಕಾರಿಗಳಿಬ್ಬರು ಸಕಾರಾತ್ಮಕವಾಗಿ ಸ್ಪಂದಿಸಿ, ಕ್ರಮ ಕೈಗೊಳ್ಳುವುದಾಗಿ ಮತ್ತು ಸಂಬಂಧಪಟ್ಟವರಿಗೆ ಸೂಚನೆ ನೀಡುವುದಾಗಿ ತಿಳಿಸಿದ್ದಾರೆ' ಎಂದರು.

ಕೋಗಿಲು: ಫ್ಲ್ಯಾಟ್‌ಗಳ ಹಂಚಿಕೆಗೆ ದಿನಾಂಕ ನಿಗದಿ ಮಾಡದ ಸರ್ಕಾರ

ಪರ್ಯಾಯ ಮನೆ ಮಂಜೂರು ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಗಿಲು ಬಂಡೆ ಪ್ರದೇಶದಲ್ಲಿ ಶೆಡ್, ಮನೆ ನೆಲಸಮ ಮಾಡಿ ಹೊರಹಾಕಲಾದ ಕುಟುಂಬಗಳಿಗೆ ಪರ್ಯಾಯ ಮನೆಗಳನ್ನು ಮಂಜೂರು ಮಾಡುವುದನ್ನು ಸರ್ಕಾರ ಮುಂದಕ್ಕೆ ಹಾಕಿದೆ.

ಕಂದಾಯ ಇಲಾಖೆ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) 'ಅರ್ಹ' ಫಲಾನುಭವಿಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ ಎಂದು ಹೇಳಲಾಗಿದ್ದರೂ, ಸರ್ಕಾರವು ಫ್ಲ್ಯಾಟ್‌ಗಳ ಹಂಚಿಕೆಗೆ ದಿನಾಂಕ ನಿಗದಿ ಮಾಡಿಲ್ಲ.

ಮುಖ್ಯಮಂತ್ರಿಯವರ ಒಂದು ಲಕ್ಷ ವಸತಿ ಯೋಜನೆಯ ಭಾಗವಾಗಿ ನಿರ್ಮಿಸಲಾದ ಫ್ಲ್ಯಾಟ್‌ಗಳನ್ನು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಶಾಸಕರೂ ಆಗಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಶನಿವಾರ ವಿದೇಶ ಪ್ರವಾಸದಿಂದ ಹಿಂದಿರುಗಿದ ನಂತರವೇ ಹಂಚಿಕೆ ಮಾಡಲಾಗುತ್ತದೆ ಎಂದು ವಸತಿ ಇಲಾಖೆಯ ಮೂಲಗಳು ತಿಳಿಸಿವೆ. ನಿಯಮಗಳ ಪ್ರಕಾರ, ಆಶ್ರಯ ಸಮಿತಿಯ ಮುಖ್ಯಸ್ಥರಾಗಿರುವ ಸ್ಥಳೀಯ ಶಾಸಕರು ತಮ್ಮ ಕ್ಷೇತ್ರದಲ್ಲಿ ನೆಲೆಗೊಂಡಿರುವ ವಸತಿ ಯೋಜನೆಯ ಫಲಾನುಭವಿಗಳ ಹೆಸರನ್ನು ಅನುಮೋದಿಸಬೇಕಿದೆ.

ವಸತಿ ಯೋಜನೆಗೆ ಅರ್ಹರಾಗಲು ಅಗತ್ಯವಾದ ದಾಖಲೆಗಳನ್ನು ಕೆಲವು ಕುಟುಂಬಗಳು ಹೊಂದಿಲ್ಲದ ಕಾರಣ ಫಲಾನುಭವಿಗಳ ಆಯ್ಕೆ ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿದೆ, ಜೊತೆಗೆ ₹5 ಲಕ್ಷ ಆರ್ಥಿಕ ನೆರವು ನೀಡುವ ಒಂಟಿ ಮನೆ ಯೋಜನೆಗೂ ಅರ್ಹರಾಗಲು ಅಗತ್ಯ ದಾಖಲೆಗಳನ್ನು ಹೊಂದಿಲ್ಲ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತವು ತ್ಯಾಜ್ಯ ನಿರ್ವಹಣೆ ಸಂಬಂಧಿತ ಯೋಜನೆಗಳನ್ನು ಕೈಗೆತ್ತಿಕೊಳ್ಳಲು 167 ಶೆಡ್‌ಗಳನ್ನು ಕೆಡವಿತ್ತು. 90 ಕುಟುಂಬಗಳು ಪರ್ಯಾಯ ವಸತಿ ಯೋಜನೆಗೆ ಅರ್ಹವಾಗಿವೆ ಎಂದು ಸರ್ಕಾರ ಘೋಷಿಸಿದೆ.

ತಾತ್ಕಾಲಿಕ ವಸತಿಗೆ ಜಿಬಿಎ ಸೂಚನೆ

ಕೋಗಿಲು ಬಡಾವಣೆಯಿಂದ ಸ್ಥಳಾಂತರಿಸಲಾದ ಕುಟುಂಬಗಳಿಗೆ ಚಳಿಯಿಂದ ರಕ್ಷಣೆ ಒದಗಿಸಲು ತಾತ್ಕಾಲಿಕ ವಸತಿ ಸೌಲಭ್ಯವನ್ನು ಒದಗಿಸುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ನಿರ್ದೇಶನ ನೀಡಿದೆ.

ನೆಲೆ ಒದಗಿಸಲು ಆಗ್ರಹ

ಕೋಗಿಲು ಪ್ರಕರಣದಲ್ಲಿ ಅಮಾನವೀಯ ರೀತಿಯಲ್ಲಿ ಬಡವರ ಮನೆಗಳನ್ನು ಧ್ವಂಸ ಮಾಡಿ ರಾಜ್ಯ ಸರ್ಕಾರವು ಘೋರ ತಪ್ಪು ಮಾಡಿದೆ. ಇದೀಗ ಕೊಟ್ಟ ಮಾತನ್ನು ತಪ್ಪುವ ಮೂಲಕ ಮತ್ತೊಂದು ತಪ್ಪು ಮಾಡಬಾರದು. ಬಡವರಲ್ಲಿ ರಾಜ್ಯದವರು, ಹೊರಗಿನವರು ಎಂಬ ಬೇಧ ಮಾಡದೆ, ಮನೆ ಕಳೆದುಕೊಂಡ ಎಲ್ಲರಿಗೂ ನೆಲೆ ಒದಗಿಸಬೇಕು ಎಂದು ಸಂಯುಕ್ತ ಹೋರಾಟ ಕರ್ನಾಟಕ ಆಗ್ರಹಿಸಿದೆ.

ಸಂಯುಕ್ತ ಹೋರಾಟ ಕರ್ನಾಟಕದ ಬಡಗಲಪುರ ನಾಗೇಂದ್ರ, ಎಚ್. ಆರ್. ಬಸವರಾಜಪ್ಪ, ಎಸ್.ವರಲಕ್ಷ್ಮೀ, ನೂರ್ ಶ್ರೀಧರ್, ಗುರುಪ್ರಸಾದ್ ಕೆರಗೋಡು, ಭಗವಾನ್ ರೆಡ್ಡಿ, ಎಸ್.ಆರ್. ಹಿರೇಮಠ, ಮಾವಳ್ಳಿ ಶಂಕರ್, ಅಪ್ಪಣ್ಣ, ಪಿ.ವಿ.ಲೋಕೇಶ್, ಸಿದ್ಧಗೌಡ ಮೋದಗಿ, ಕೆ.ವಿ. ಭಟ್, ಡಿ.ಎಚ್. ಪೂಜಾರ್, ಸಿದ್ದನಗೌಡ ಪಾಟೀಲ್, ಕುಮಾರ್ ಸಮತಳ, ಯು.ಬಸವರಾಜ್, ಯಶವಂತ್ ಟಿ., ದೇವಿ, ಶಿವಪ್ಪ, ಅಭಿರುಚಿ ಗಣೇಶ್, ನಾಗರಾಜ್ ಪೂಜಾರ್, ನವೀನ್ ಈ ಬಗ್ಗೆ ಜಂಟಿ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಕೋಗಿಲು ಪ್ರಕರಣದ ಸಂತ್ರಸ್ತರಿಗೆ ಮಾನವೀಯ ನೆಲೆಯ ಮೇಲೆ ಹೊಸ ವರ್ಷಕ್ಕೆ ರಾಜೀವ್ ಗಾಂಧಿ ಆಶ್ರಯ ಯೋಜನೆಯಡಿ ನಿರ್ಮಿಸಲಾಗಿರುವ ಮನೆಗಳ ಬೀಗದ ಕೀ ನೀಡುವ ಮೂಲಕ ಶುಭ ಸಂದೇಶ ನೀಡುವುದಾಗಿ ಮಾತನಾಡಿದ್ದ ಕಾಂಗ್ರೆಸ್ ಸರ್ಕಾರವು ಈಗ ಮೀನಮೇಷ ಎಣಿಸುತ್ತಿರುವುದು ಗೋಚರಿಸುತ್ತಿದೆ ಎಂದು ದೂರಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಸತಿ ಸಚಿವ ಜಮೀರ್ ಅಹ್ಮದ್ ತೆಗೆದುಕೊಳ್ಳುತ್ತಿರುವ ತೀರ್ಮಾನಗಳನ್ನು ಕಾಂಗ್ರೆಸ್ ಒಳಗೂ ವಿರೋಧಿಸುವ ಶಕ್ತಿಗಳು ಕೆಲಸ ಮಾಡುತ್ತಿವೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಡಕ್ ಮಾತುಗಳು ಇದನ್ನು ಪ್ರತಿನಿಧಿಸುತ್ತಿದೆ ಎಂದು ಆರೋಪಿಸಿದ್ದಾರೆ.



ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

KHB Sites in Bangalore
Electronic City, Bommasandra, Jigani, Bannerghatta Road
Land Owner Share
Prime Location, Fully Developed Layout, Ready for Registration Plots
SBI & Nationalised Bank Loan Available
Call: 70260 13388

VAARAHI VIVAREA
RERA NO: PRM/KA/RERA/1251/310/PR/261124/007247
CC & OC PROJECT | NO COMMON WALLS | 100% VASTU | 168 UNITS
2BHK 1125-1185 Sq.ft | 3BHK 1390-1665 Sq.ft | 5 Floors

For Booking Contact: 78921 99941 70191 96747
Project Address : Near Rajarajeswari Medical College, Good Earth Malhar Villas Road, Opp: Challagatta Metro Station, Mysore Road, Bangalore-60

REAL ESTATE SELLING

Sites

Indiranagar

COMMERCIAL PROPERTY 60 FEET ROAD 2100 SQFT WITH OLD HOUSE. SITE VALUE SUITABLE COMMERCIAL COMPLEX, PG BUILDING, CAPITAL GAIN INVESTMENT: 9900110517

J P Nagar

"J.P.NAGAR, SRINIDHI_LAYOUT 30x51 Residential Site, East Facing, BBMP A Katha, Full White. Direct Owner: 9845249799/ 9845088449"

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

BDA SITE South facing, measuring 50x80, 1st K Sector, 60 ft Double Road (Commercial), Connects Business Corridor, Kempegowda Layout, Site Sale. 13000/- psqft. +919353534340.

Nagarabhavi

"AVAILABLE MPM_LAYOUT 40x60 Corner Site 40 feet Road, Vishveshwaraiah 50x80, 30x40 Genuine Buyers. 9448733456/ 7259675150"

Banashankari

BANASHANKARI 6TH Stage,1st Block 40x60,BDA 40feet Road Near Sri Convention Centre Rs 15500/- Negotioble: 9845600007

ಅಭಿನಂದನೆಗಳು

ಹರೀಶ್ ಕುಮಾರ್ ಆರ್
ಪಿ ಹೆಚ್.ಡಿ ಪ್ರಧಾನ

ಬೆಂಗಳೂರು ನಗರದ ಶ್ರೀ ಹೇಮಲತಾ, ಶ್ರೀ ಕೆ. ರಾಮಚಂದ್ರನ್ ನವರ ಪುತ್ರ ಹರೀಶ್ ಕುಮಾರ್ ಆರ್. ಸಂಶೋಧನಾ ವಿದ್ಯಾರ್ಥಿ ಇವರಿಗೆ ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ನೀಡಿ ಗೌರವ ನೀಡಲಾಗಿದೆ. ಮೈಸೂರು ವಿ ವಿ ಯದ ನಿವೃತ್ತ ಪ್ರೊ. ಬಿ.ಕೆ. ತುಳಸಿಮಾಲಾ ಅರ್ಥಸಾಸ್ತ್ರ ವಿಭಾಗ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ " IMPACT ANALYSIS OF PRADHAN MANTRI KAUSHAL VIKAS YOJANNA IN KARNATAKA" ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗಿದೆ ಎಂದು ಮೈಸೂರು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

"BANASHANKARI 6TH_STAGE 4th Block`50x80 North`West corner and`50x80 North`facing 7th-Block and`30x40 West`facing 2nd-Block and`40x60 3rd-Block East`facing near`BDA Complex. Call: 9845146725/ 9741466369"

BANASHANKARI 6TH Stage 10th Block 40X60 West Facing Price. 2.40 CR. Stlightly Negotiable: 9148914809/ 9993959099

Uttarahalli

SALE: KUMARASWAMY layout, ISRO housing society, 3rd B Main road 3630 sq ft, 17.5 K/ sq ft,Serious buyers only Call +17028216450 Whatspp or email animalhouzvet@gmail.com

Vijayanagar

SITE FOR SALE 60x90 RPC LAYOUT VIJAYANAGAR
SALE: 60X90 West Facing
Only Genuine Buyers Contact:
6363250343
9845038343

Vishweshwariah Layout

"VISVESHWARAIAH LAYOUT 1st Block 40x60 East facing Site for sale Call: "Krishna"- 9886294610 (Brokers Excuse)"

'DIRECT OWNER' 20x30 N/F Vishveswaraiah Layout 2nd Block, Near Kommagatta, Full Developed Area:8496030007/ 8310885235

BDA SITE SALE VISHWESHWARAIAH LAYOUT 2ND BLOCK 40X60 NORTH FACE, NEAR 100FT ROAD, GOOD LOCATION CONTACT: 8892901567

DIRECT OWNER 30x40 BDASite Sale VISHWESHWARAIAH LAYOUT 40ft Road, Full Developed Area, ₹11000/-. 9742681666

VISHVESHWARAIAH LAYOUT BDA Site SALE 30X40 North Face. 4th & 6th Block East Face: 8970306030

Doddaballapur Road

DODDABALAPURA TO BANGALORE Main Road Facing 20x30 Near Doddabalapura Railway Station SALE 49 LakhS: 9342552428

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

R T Nagar

R.T.NAGAR 2ND BLOCK East Facing 40X60 Site Near BDA COMPLEX For Sale Contact: 9341260828

R.T.NAGAR HMT Layout East Facing 30X50 With Duplex old House For Sale Contact: 9341260828

BUNGALOW FOR SALE
5989 Sq ft, Furnished 4 BHK Bungalow for sale in Baglur. It's 20 minutes drive to Airport. Price 5cr.
Call owner :
9113209192

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್

ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ, ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ
ದಿನಾಂಕ 03.01.2026 to 14.01.2026
ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್
ನಂ. 58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
ಕರೆ ಮಾಡಿ: 9632781499

House

Banashankari

BANASHANKARI 6TH Stage 10th Block 20x30, 4 BHK House Rs. 1.17 Crore. Contact: 9148914809/ 9993959099

Vishweshwariah Layout

"30X40 BDA ONE AND TWO BHK FOUR HOUSES IMMEDIATE SALE 5TH BLOCK VISHVESHWARAIAH LAYOUT. 9845143579"

Flat

Malleshwaram

17TH CROSS Near Cloudnine Hospital Sale 2BHK 1100sft Flat, Price 1.30Cr fixed. Owner: 7013351639/ 9945617455

Uttarahalli

4BHK NEW FLATS SALE Ready to Move, A Khatha, E-swathu, Carparking Lift Vaasthu, Maruthi Layout, Rs.1.10 Cr. 9945224058 6363181276.

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Mysore Road

NEAR KENGERI Metro Provident Equinox 3, New Ready to move, 2 BHK with car parking, All amenities, OC, CC, RERA, Loanable, Rs 62 Lakhs, Call Vijay: 98443-37944

Commercial Building

Nagarabhavi

***NAGARABAVI* BDA** COMPLEX opposite COMMERCIAL 50x80 4-FLOOR BUILDING SALE with SELLAR,suitable for HOSPITAL,SHOWROOM, others.Contact: 9845059407

Commerical

Vijayanagar

450-SQFT COMMERCIAL Office Space Floor Wise For Sale Opposite to Vijayanagar Metro Station Contact: 7676900174 9945569909

NISCHITHA PROPERTIES Pvt.Ltd.
More Than Real Estate
NISCHITHA DIVINE PAARK

BUY TODAY for Growth,
BUILD TOMORROW for Life
Premium 'A'-Khatha Plots
ನೆಲಮಂಗಲ ಹತ್ತಿರ
LIMITED PERIOD OFFER
₹3999 per sqft
Ready for Registration

Life-style Amenities
- landscaped park
- Cricket Pitch
- Kids Play Area
- Senior citizen Zone

Location Highlights
- Just 5 mins from NH4
- 2 Km from BH Road
- Close to schools, Colleges & Hospitals
- Great Connectivity to Peenya & Nice Road

- Guaranteed Best Appreciation
- Resale Assistance Available
- Buy-Back Option

- Premium Plots with clear Titles
- 100ft & 60ft wide road Connectivity
- Water & Power Connectivity 24/7
- Excellent ROI & Rapid Value Growth

80-90%* Bank Loan Available
A SAFE • SMART • SECURE INVESTMENT
* T&C Apply
www.nischithaproperties.com Call NOW 9164009004

REAL ESTATE BUYING

Sites

Anjanapura

BDA-SITES WANTED @ Banashankari 6th Stage, Visveshwaraiah Layout, Anjanapura 30x40,40x60, 50x80 Immediate Settlement Rajesh: 9945610779

Multiple Locations

REQUIRED FOR genuine buyers, BDA Sites, houses in Jayanagar, J.P.Nagar, South Bangalore any facing, measurement, Suraj Realtors- 9845242711

Mysore

WANTED MUDA SITES Vijayanagara Dattagalli Kuvempunagara Saraspathipuram Ramakrisnanagar Jayalakshmipuram Srirampura, Bhogadi Sagatalli Siddharthnagar Rajiv Nagara. 9845608259.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

FOR RENT: PRIME COMMERCIAL BUILDING, Mariappa Rd, off CMR Main Rd, Kalyan Nagar. Ideal for Clinic, Diagnostic, Tuition, Corporate Office, Banks. GF-300 sqft, FF- 1250 sqft, SF-1250 sqft, TF-500 sqft. Ample parking (4 cars & 25 two-wheelers). 24/7 power & water. Ph: 9845123866, 9880016254. Location: Google Maps -13.021880, 77.638321

1,25,000 SFT Prime Commercial Land Suitable for Office Space, Outlet Mall & Warehouse Available For Rent in Bidadi. Contact 9972181837

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

BUILDERS ESSENTIAL

Roofing Materials

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

General

WE ARE hiring Sales & Operations Manager, Accountant & MIS Executive. Experience in NBFCs, Banks or Retail Jewelry preferred. Must have strong knowledge of gold loan branch operations. Call 7892851151/ 9496650620

FUTURE FOCUS

Astrology

WHAT'S YOUR House energy say? Continuous health issues, No prosperity, Feeling stuck & sad. Consult today- 6361712857 *Sanjeevani Vaastu Consultancy*

MORE Classifieds Ads on Subsequent Pages

PERSONAL

Change of Name

CHANGE OF NAME
I, **Venu Gopal,** residing at No. 99, Ferns Residency, K Narayanapura, Kothanur Post, Bengaluru-560077, have changed my name to **VENUGOPAL G** vide affidavit dated 29.12.2025 before notary Y.R. Chandrasekar, Bengaluru. Henceforth I shall be called **VENUGOPAL G** only

I,PRIYANKA AMIN,D/O B Hemraj Amin, residing at 11 Fairview Rd Scarsdale NY 10583 and home address 88/5 10th C main 1st block Jayanagar Bangalore 560011, hereby change my name from Priyanka Amin to Priyanka Amin Rao. Attested on Dec 19th,2025

Lost

DOCUMENT LOST
I, **M. P. MURALI,** residing at No.2, New Pension Lane, 1st Cross, JJR Nagar, Bengaluru - 560018, have lost my **Original Mortagage Deed and Discharge Deed No. SRI-1-00153-2004-05. Document No./ Identification: REGD No. 989, Volume 2014, dated: 09-07-1998.** While in transit. If found please contact: **9035653026**

DH Classifieds More value, more impact
REAL ESTATE
ಪ್ರಜಾವಾಣಿ
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY - ON SATURDAY + SUNDAY
@ 2481/-* FOR 15 WORDS

www.dhclassifieds.com BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

DH DECCAN HERALD Classifieds More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW

For more details contact:
+91 9731810277 | +91 9886213331
+91 9845114560 | +91 9900428036
080- 45557163/164
*Conditions apply

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

NewAge Group of Institutions

NewAge Learning Academy

IIT JEE | NEET | FOUNDATION

The Ultimate Destination For
MEDICAL & ENGINEERING Aspirants!

Super 30 Medico
Super 30 Engineering
Spark Engineering

Website

Now @ Yelahanka

newagelearningacademyblr@gmail.com
63648 35030

NewAge PU College

Integrated PUC

SCIENCE STREAMS
PCMC + KCET
PCMC + KCET + IIT-JEE
PCMB + KCET + NEET

COMMERCE STREAMS
CEBA + CA/CS
CEBA + IAS/IPS/KAS

Website
84700 78633
newagepucollege@gmail.com

EARLY BIRD OFFER
Limited seats available

ENROLL NOW

NewAge World School

ICSE | ISC
to set the child free

Admissions Open For
Grade 1 to 11

Website
84700 78633
70267 03399
admission@newageworldschool.com

NewAge PreSchool

Branches: Peer Group 0-3

Mylappanahalli | Yelahanka
Vidyaranyapura | R.T.Nagar
Nagenahalli | Rajanukunte

Website
to set the child free
admission@newagepreschools.com

Mylappanahalli, Near New RTO, Yelahanka, Bengaluru - 560 089
84700 78633

ನಿಯೋ ಏರ್ ಸೋರ್ಸ್ ಹೀಟ್ ಪಂಪ್‌ಗಳು

ಶೂನ್ಯ ನಿರ್ವಹಣೆಯೊಂದಿಗೆ ಸುರಕ್ಷಿತ, ವಿಶ್ವಾಸಾರ್ಹ, ಆಟೋ-ನಿಯಂತ್ರಿತ ವ್ಯವಸ್ಥೆ
ನಿಮ್ಮ ಎಲ್ಲಾ ಬಿಸಿನೀರಿನ ಅಗತ್ಯಗಳಿಗೆ ಪರಿಪೂರ್ಣ ಪರಿಹಾರ

ಹೊಸ ವರ್ಷದ ಶುಭಾಶಯಗಳು

NEW Special YEAR Offer

ನಿಮ್ಮ ದೈನಂದಿನ ವಿದ್ಯುತ್ ಬಿಲ್‌ಗಳಲ್ಲಿ 80%
ಉಳಿತಾಯದ ದಿನಗಳನ್ನು
2026 ರಿಂದ ಆರಂಭಿಸಿ

Neo™ HEAT PUMP

24/7- INSTANT
HOT WATER

ಹೊಸ ವರ್ಷದ ಪ್ರಯುಕ್ತ ವಿಶೇಷ ರಿಯಾಯಿತಿಗಳನ್ನು ಆನಂದಿಸಿ.
ನಿಮ್ಮ ಖರೀದಿಯ NEO HEAT PUMP ಮತ್ತು INSTALLATION, ಮೊತ್ತದಲ್ಲಿ
ರಿಯಾಯಿತಿ ಪಡೆಯಲು ಈಗಲೇ ಸಂಪರ್ಕಿಸಿ

info@neoheatpumps.com
neoheatpumps.com
+91 70266 00105

AISHWARYA'S

ಹೊಸ ವರ್ಷದ ಶುಭಾಶಯಗಳು
2026

ಕರ್ನಾಟಕದ ಹೆಮ್ಮೆ

PURE & NATURAL

MONEY GUARANTEE BACK

AISHWARYA'S SPECIAL BLEND
Kt Special Tea

AISHWARYA'S
SHALIMAR GOLD
PREMIUM ASSAM TEA
THE HOMEMAKERS CHOICE

Available in amazon

ಅದ್ಭುತ ರುಚಿ • ಮಿತವಾದ ಬೆಲೆ • ಉತ್ಕೃಷ್ಟ ಗುಣಮಟ್ಟ

TRADE ENQUIRIES
Bangalore Sales Head +91 9980 157884
Rest of Karnataka Satish RSM +91 97313 03541

www.aishwaryateaindustries.com
aishwaryatea@gmail.com

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಮನುಷ್ಯನು ಅಲ್ಪಜ್ಞಾನಿ. ಮುಂದೇನು ಸಂಭವಿಸುವುದು ಎಂಬುದನ್ನು ಅವನ ಸಣ್ಣ ಮನಸ್ಸು ಊಹಿಸಲಾರದು.

–ಪಂಜೆ ಮಂಗೇಶರಾವ್

ಸಂಪಾದಕೀಯ

ಅರಣ್ಯ ಭೂಮಿ ಪರಭಾರೆ ಸಲ್ಲ ಹೊಣೆ ಮರೆಯದಿರಲಿ ಸರ್ಕಾರ

ಜಾತಿ ಆಧಾರಿತ ಸಂಘಸಂಸ್ಥೆಗಳಿಗಲ್ಲದೆ ಸರ್ಕಾರಿ ಸಂಸ್ಥೆಗಳಿಗೂ ಬೆಂಗಳೂರಿನ ಹೊರವಲಯದಲ್ಲಿರುವ ಮಾಚೋಹಳ್ಳಿಯ 78 ಎಕರೆ ಅರಣ್ಯ ಭೂಮಿಯನ್ನು ಗುತ್ತಿಗೆ ನೀಡಿದ ರಾಜ್ಯ ಸರ್ಕಾರದ ಕ್ರಮವು ವಿವೇಚನಾರಹಿತವಾದುದು. ಅರಣ್ಯ ಭೂಮಿಯನ್ನು ಪರಭಾರೆ ಮಾಡದಂತೆ ಸುಪ್ರೀಂ ಕೋರ್ಟ್‌ನ ಸ್ಪಷ್ಟ ಸೂಚನೆ ಇದ್ದರೂ ಗುತ್ತಿಗೆ ಆದೇಶ ಹಿಂಪಡೆಯಲು ಸರ್ಕಾರ ಮೀನಮೇಷ ಎಣಿಸುತ್ತಿರುವುದನ್ನು ಗಮನಿಸಿದರೆ, ಅರಣ್ಯ ಸಂರಕ್ಷಣೆಯಲ್ಲಿ ಅದಕ್ಕೆ ಕಿಂಚಿತ್ತೂ ಕಾಳಜಿ ಇಲ್ಲ ಎಂದೇ ಭಾವಿಸಬೇಕಾಗುತ್ತದೆ. ಅರಣ್ಯ ಭೂಮಿಯ ಬಳಕೆ ಮತ್ತು ಹಂಚಿಕೆಯ ವಿಷಯದಲ್ಲಿ ಗೋದಾವರ್ಮನ್ ಪ್ರಕರಣವೂ ಸೇರಿದಂತೆ ಹಲವು ಪ್ರಕರಣಗಳ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನಗಳನ್ನು ನೀಡಿದೆ. ಅರಣ್ಯ ಭೂಮಿಯನ್ನು ಪರಭಾರೆ ಮಾಡದಂತೆ ಘಂಟಾಘೋಷವಾಗಿ ಹೇಳಿದೆ. ಹೀಗಿದ್ದೂ, 2017ರಲ್ಲಿ ಆಗ ಅಸ್ತಿತ್ವದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರ, ಕೋರ್ಟ್ ಆದೇಶಗಳಿಗೆ ವಿರುದ್ಧವಾಗಿ ವಿವಿಧ ಜಾತಿ ಸಂಘಟನೆಗಳಿಗೆ ಅರಣ್ಯ ಭೂಮಿಯನ್ನು 30 ವರ್ಷಗಳಿಗೆ ಗುತ್ತಿಗೆ ನೀಡಿದೆ. ಹಂಚಿಕೆ ಮಾಡಲಾಗಿರುವ ಭೂಮಿಯನ್ನು ಈಗ ವಾಪಸ್ ಪಡೆಯಲು ಸರ್ಕಾರಕ್ಕೆ ಕಷ್ಟವಾಗುತ್ತಿದೆ. ಸಮುದಾಯಗಳಿಗೆ ತಾನೇ ಹಂಚಿಕೆ ಮಾಡಿರುವ ಭೂಮಿಯನ್ನು ವಾಪಸ್ ಪಡೆದರೆ ಟೀಕೆಗೆ ಗುರಿಯಾಗಬೇಕಾಗುತ್ತದೆ ಎಂಬ ಭೀತಿ ಅದನ್ನು ಕಾಡುತ್ತಿರುವಂತಿದೆ. ಹೀಗಾಗಿ ಸಚಿವ ಸಂಪುಟದ ಮುಂದೆ ಈ ವಿಷಯ ಹಲವು ಬಾರಿ ಬಂದರೂ ನಿರ್ಣಯ ಕೈಗೊಳ್ಳದೆ ಮುಂದೂಡಲಾಗುತ್ತಿದೆ.

ಬೆಂಗಳೂರಿಗೆ ಹೊಂದಿಕೊಂಡಿರುವ ಮಾಚೋಹಳ್ಳಿಯ ಅರಣ್ಯ ಭೂಮಿಗೆ ಭಾರೀ ಬೆಲೆ ಇದೆ. ಅಲ್ಲಿಂದ ಹತ್ತು ಕಿ.ಮೀ. ದೂರದಲ್ಲಿರುವ ಕೃಷಿ ಭೂಮಿ ಎಕರೆಗೆ ₹5 ಕೋಟಿಯಿಂದ ₹15 ಕೋಟಿ ದರಕ್ಕೆ ಮಾರಾಟವಾಗುತ್ತಿರುವ ಮಾಹಿತಿ ಇದೆ. ಮಾಗಡಿ ರಸ್ತೆಗೆ ನೇರವಾಗಿ ಹೊಂದಿಕೊಂಡಿರುವ ಅರಣ್ಯ ಭೂಮಿಯ ಸುತ್ತಲೂ ವಸತಿ ನಿವೇಶನಗಳಿಗೆ ಸಾಕಷ್ಟು ಬೇಡಿಕೆ ಇದೆ. ನೈಸ್ ರಸ್ತೆಯ ವೃತ್ತದಿಂದ ಸುಮಾರು 1 ಕಿ.ಮೀ. ದೂರದಲ್ಲಿರುವ ಈ ಭೂಮಿಯ ಮೌಲ್ಯ ₹2,500 ಕೋಟಿಗಿಂತ ಹೆಚ್ಚು ಎಂದು ಅಂದಾಜಿಸಲಾಗಿದೆ. ಆದ್ದರಿಂದಲೇ ಎಲ್ಲರ ಕಣ್ಣು ಈ ಭೂಮಿಯ ಮೇಲೆ ಬಿದ್ದಿದೆ. ಅದು ರಿಯಲ್ ಎಸ್ಟೇಟ್ ವಿಷವರ್ತುಲದ ಪಾಲಾಗುವ ಭೀತಿ ಇದೆ. ಜಾತಿ ಆಧಾರಿತ ಸಂಘಟನೆಗಳು, ಮಠ ಸೇರಿ 36 ಸಂಸ್ಥೆಗಳಿಗೆ ತಲಾ ಎರಡೂವರೆ ಎಕರೆ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹಂಚಿಕೆ ಮಾಡಿದ ಕ್ರಮವನ್ನು ಕೋರ್ಟ್‌ನಲ್ಲೂ ಪ್ರಶ್ನಿಸಲಾಗಿದೆ. ಹೀಗಾಗಿ ಹಂಚಿಕೆಯಾಗಿದ್ದ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲು ಯಾವ ಸಂಸ್ಥೆಗೂ ಸಾಧ್ಯವಾಗಿಲ್ಲ. ಈ ಭೂಮಿ, ಇನ್ನೂ ಅರಣ್ಯ ಇಲಾಖೆಯ ಸುಪರ್ದಿಯಲ್ಲೇ ಇರುವುದು ಸದ್ಯದ ಸಮಾಧಾನದ ಸಂಗತಿ.

ಅರಣ್ಯ ಭೂಮಿಯನ್ನು ಗುತ್ತಿಗೆ ನೀಡಿರುವ ಸರ್ಕಾರದ ಕ್ರಮ ಹೊಣೆಗೇಡಿತನದ್ದು. ಹಂಚಿಕೆ ಮಾಡಿದ ಭೂಮಿಯನ್ನು ಹಿಂದಕ್ಕೆ ಪಡೆಯುವ ಮೂಲಕ ಸರ್ಕಾರ ತನ್ನ ಲೋಪವನ್ನು ಸರಿಪಡಿಸಿಕೊಳ್ಳಬೇಕು.

ದೇಶದಲ್ಲಿ ಅರಣ್ಯ ನಾಶ ಹೆಚ್ಚುತ್ತಿದೆ ಎನ್ನುವ ಆತಂಕದ ಮಾತುಗಳು ಆಗಾಗ ಕೇಳಿಬರುತ್ತಲೇ ಇವೆ. ಅದಕ್ಕೆ ಸಮರ್ಥನೆ ಎನ್ನುವಂತೆ ಪರಿಸರದಲ್ಲಿ ಭಾರೀ ಏರುಪೇರು ಕಾಣಿಸಿಕೊಳ್ಳುತ್ತಿದೆ. ವಾತಾವರಣ ಬಿಸಿಯಾಗುತ್ತಿದೆ, ಮಳೆ ಋತುಗಳಲ್ಲೂ ವ್ಯತ್ಯಾಸಗಳಾಗುತ್ತಿವೆ. ಇದ್ದ ಅರಣ್ಯವನ್ನು ಸಂರಕ್ಷಿಸಿಕೊಳ್ಳುವುದರ ಜತೆಗೆ ಮರ ಬೆಳೆಸುವುದಕ್ಕೆ, ಅರಣ್ಯೀಕರಣಕ್ಕೆ ಒತ್ತು ನೀಡಬೇಕಾದ ಹೊಣೆ ಸರ್ಕಾರದ ಮೇಲಿದೆ. ಆದರೆ, ತನ್ನ ಹೊಣೆಗಾರಿಕೆಯನ್ನು ಮರೆತು ಸರ್ಕಾರವೇ ಈ ರೀತಿ ಅರಣ್ಯ ಭೂಮಿಯನ್ನು ಪರಭಾರೆ ಮಾಡುತ್ತಾ ಹೋದರೆ, ಮುಂದಿನ ಪೀಳಿಗೆಗೆ ಏನನ್ನು ಉಳಿಸಿಹೋಗುತ್ತೇವೆ ಎಂಬುದನ್ನು ಎಲ್ಲರೂ ಯೋಚಿಸಬೇಕಾದ ಸಂಗತಿ. ಅರಣ್ಯ ಭೂಮಿಯನ್ನು ಸಂರಕ್ಷಿಸಬೇಕಾದ ಸರ್ಕಾರವೇ ಅದನ್ನು ಹಂಚಿಕೆ ಮಾಡುವುದು ಸರಿಯಲ್ಲ. ಬೆಂಗಳೂರು ಸುತ್ತಲಿನ ಅರಣ್ಯ ಪ್ರಮಾಣ ತೀವ್ರಗತಿಯಲ್ಲಿ ಕುಗ್ಗುತ್ತಿದೆ. 'ಹಸಿರೇ ಉಸಿರು, ಅರಣ್ಯವೇ ನಮ್ಮ ಜೀವಾಳ' ಎಂಬ ಆಕರ್ಷಕ ಘೋಷಣೆಗಳಿಂದ ಅರಣ್ಯ ಉಳಿಯುವುದಿಲ್ಲ, ಬೆಳೆಯುವುದಿಲ್ಲ. ಅದಕ್ಕೆ ಸರ್ಕಾರದ ಮನೋಭಾವ ಬದಲಾಗಬೇಕು. ಅರಣ್ಯ ರಕ್ಷಕನ ಸ್ಥಾನದಲ್ಲಿರುವ ಸರ್ಕಾರವೇ ಮುಂದೆ ನಿಂತು ಭಕ್ಷಕರಿಗೆ ಅನುಕೂಲ ಮಾಡಿಕೊಡುವ ಪ್ರವೃತ್ತಿ ಕೊನೆ ಆಗಬೇಕು. ಇರುವ ಅರಣ್ಯವನ್ನು ಜೋಪಾನವಾಗಿ ಉಳಿಸುವುದು– ಮತ್ತಷ್ಟು ಬೆಳೆಸುವುದು ಎಲ್ಲರ ಸಾಮಾಜಿಕ ಹೊಣೆಗಾರಿಕೆಯೂ, ನಿರ್ವಹಿಸಲೇಬೇಕಾದ ನಾಗರಿಕ ಕರ್ತವ್ಯವೂ ಆಗಬೇಕು.

ಚಾಟಿ

ಯಾರ ತಡೆ?

ದೇಶದಿಂದ ಅಕ್ರಮ ವಲಸಿಗರನ್ನು ಹೊರಹಾಕಬಾರದೆಂದು ಕೇಂದ್ರ ಸರ್ಕಾರವನ್ನು ಯಾರು ತಡೆದಿದ್ದಾರೆ? ಗಡಿಗಳಲ್ಲಿ ಕಾವಲು ಕಾಯುತ್ತಿರುವ ರಕ್ಷಣಾ ಪಡೆಗಳು ಯಾರ ನಿಯಂತ್ರಣದಲ್ಲಿವೆ?

ಜಿ.ಟಿ. ನರೇಂದ್ರ, ವಕೀಲ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಬಳ್ಳಾರಿಯಲ್ಲಿ ಶಾಸಕ ಜನಾರ್ದನ ರೆಡ್ಡಿ ಅವರ ಮನೆ ಎದುರು ಕಾಂಗ್ರೆಸ್ ಗೂಂಡಾಗಳು ನಡೆಸಿದ ದುಷ್ಕೃತ್ಯವು ಸರ್ಕಾರಿ ಪ್ರಾಯೋಜಕತ್ವದ ಪೂರ್ವ ನಿಯೋಜಿತ ಘಟನೆಯಾಗಿದೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಬುಧವಾರ, 3-1-2001

• ವಿದ್ಯುತ್ ವೈಫಲ್ಯ: ಅಂಧಕಾರದಲ್ಲಿ ಮುಳುಗಿದ ಉತ್ತರದ ರಾಜ್ಯಗಳು

ಕಾನ್ಪುರ, ಜ. 2 (ಯುಎನ್‌ಐ, ಪಿಟಿಐ)– ನಗರದ ಹೊರವಲಯದ ಪಂಕಿ ವಿದ್ಯುತ್ ಕೇಂದ್ರದಲ್ಲಿ ಎರಡು ಲೈನ್‌ಗಳು ಇಂದು ಬೆಳಗಿನ ಜಾವ ಟ್ರಿಪ್ ಆದ ಕಾರಣ ಉತ್ತರ ವಿದ್ಯುತ್ ಜಾಲದಿಂದ ವಿದ್ಯುತ್ ಪಡೆಯುವ ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ, ದೆಹಲಿ, ಜಮ್ಮು ಮತ್ತು ಕಾಶ್ಮೀರ ಸೇರಿದಂತೆ ಹಲವಾರು ರಾಜ್ಯಗಳು ಗಾಢಾಂಧಕಾರದಲ್ಲಿ ಮುಳುಗಿದವು.

ಈ ಭಾರೀ ವಿದ್ಯುತ್ ವೈಫಲ್ಯದಿಂದಾಗಿ ಉತ್ತರ ಭಾರತದಲ್ಲಿ ರೈಲು ಸಂಚಾರ ಹಲವು ಗಂಟೆವರೆಗೆ ಸ್ತಬ್ಧಗೊಂಡಿದ್ದೇ ಅಲ್ಲದೆ ಆಸ್ಪತ್ರೆ, ನೀರು ಸರಬರಾಜು ಮತ್ತು ದೂರವಾಣಿ ಸೇವೆಗಳಿಗೆ ತೀವ್ರ ಅಡಚಣೆ ಉಂಟಾಯಿತು. ವಿದ್ಯುತ್ ವೈಫಲ್ಯದಿಂದ ರೈಲ್ವೆ ಸಿಗ್ನಲ್‌ಗಳೂ ಕಾರ್ಯ ನಿರ್ವಹಿಸಲಿಲ್ಲ.

• ಮೀಸಲಾತಿ: ರಾಜ್ಯಪಾಲರಿಗೆ ಸರ್ಕಾರದ ಸ್ಪಷ್ಟನೆ ಶೀಘ್ರ

ಬೆಂಗಳೂರು, ಜ. 2– ಗ್ರಾಮೀಣ ಅಭ್ಯರ್ಥಿಗಳಿಗೆ ರಾಜ್ಯ ಸರ್ಕಾರದ ಉದ್ಯೋಗದಲ್ಲಿ ಶೇ 25ರಷ್ಟು ಸ್ಥಾನಗಳನ್ನು ಮೀಸಲಿರಿಸಿ ಸರ್ಕಾರ ರೂಪಿಸಿದ ಮಸೂದೆಯನ್ನು ಎಲ್ಲ ಸ್ಪಷ್ಟೀಕರಣಗಳೊಂದಿಗೆ ರಾಜ್ಯಪಾಲರಿಗೆ ಸರ್ಕಾರ ಕಳಿಸಲಿದೆ.

ಈ ಕಾಯ್ದೆ ರೂಪಿಸಲು ಶಾಸಕಾಂಗಕ್ಕೆ ಅಧಿಕಾರವಿದೆಯೇ, ಅದು ಸಂವಿಧಾನ ಬದ್ಧವಾಗಿದೆಯೇ ಎಂಬ ಅಂಶಗಳನ್ನೊಳಗೊಂಡ ಕೆಲವು ಸ್ಪಷ್ಟೀಕರಣಗಳನ್ನು ರಾಜ್ಯಪಾಲರಾದ ವಿ.ಎಸ್. ರಮಾದೇವಿ ಅವರು, ರಾಜ್ಯ ಸರ್ಕಾರವನ್ನು ಕೇಳಿ ಮಸೂದೆಯನ್ನು ವಾಪಸು ಕಳಿಸಿದ್ದ ಹಿನ್ನೆಲೆಯಲ್ಲಿ ಸರ್ಕಾರ ಉತ್ತರ ನೀಡಲಿದೆ.

75 ವರ್ಷಗಳ ಹಿಂದೆ

ಬುಧವಾರ, 3-1-1951

• ದೆಹಲಿ ಬ್ಯಾಂಕಿನಲ್ಲಿ ಹಗಲು ದರೋಡೆ

ನವದೆಹಲಿ, ಜ. 2– ವೇಷ ಮರೆಸಿಕೊಂಡ ಐದು ಮಂದಿ ಇಂದು ದೆಹಲಿಯಲ್ಲಿರುವ ಗೊಡೋಡಿಯ ಬ್ಯಾಂಕಿಗೆ ನುಗ್ಗಿ 16 ಸಹಸ್ರ ರೂಗಳಿದ್ದ ನಗದು ಪೆಟ್ಟಿಗೆಯನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಡಕಾಯಿತರು ನಾಲ್ಕು ಸಾರಿ ಗುಂಡು ಹಾರಿಸಿದರು. ಒಂದು ಗುಂಡು 28 ವರ್ಷ ವಯಸ್ಸಿನ ಬ್ಯಾಂಕ್ ಅಕೌಂಟೆಂಟಿಗೆ ತಗುಲಿ ತೀವ್ರ ಗಾಯ ಮಾಡಿದೆ. ಗಾಯಗೊಂಡ ಅಕೌಂಟೆಂಟ್ ಪ್ರೇಮಚಂದ್ರ ಜೈನ್ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ ಮತ್ತು ಅವರ ಸ್ಥಿತಿ ಚಿಂತಾಜನಕವಾಗಿದೆ.

ಡಕಾಯಿತರು ಜೀಪಿನಲ್ಲಿ ಬಂದು ಬ್ಯಾಂಕಿಗೆ ಸಮೀಪದ ಕರೋಲ್‌ಬಾಗ್ ಬಳಿ ಇಳಿದು ರಿವಾಲ್ವರ್ ಮತ್ತು ರೈಫಲ್ ಸಮೇತ ಬ್ಯಾಂಕಿಗೆ ನುಗ್ಗಿ ಗುಂಡು ಹಾರಿಸಿ ಡಕಾಯಿತಿ ನಡೆಸಿದರೆಂಬುದು ಪೊಲೀಸರ ವರದಿ.

ಪೊಲೀಸರು ಶೋಧನ ಕ್ರಮಕೈಗೊಂಡಿದ್ದಾರೆ. ಇದುವರೆಗೆ ಯಾರ ಬಂಧನವೂ ಆಗಿಲ್ಲ.

ಸಾವಿತ್ರಿಬಾಯಿ: ಎಲ್ಲ ಕಾಲದ ತಾಯಿ

ವಿಶ್ಲೇಷಣೆ

ಎಚ್.ಟಿ. ಪೋತೆ

ಭಾರತದ ಶೈಕ್ಷಣಿಕ ಇತಿಹಾಸದಲ್ಲಿ ಸಾವಿತ್ರಿಬಾಯಿ ಫುಲೆ ಅವರದು ತಾಯಿಯ ಸ್ಥಾನ. ಅಕ್ಷರಗಳಿಗೆ ಸಮಾನತೆಯ ಹಾದಿಯನ್ನು ಪರಿಚಯಿಸಿದ ಅವರು, ಪ್ರತಿಕೂಲ ಸನ್ನಿವೇಶದಲ್ಲೂ ಹೆಣ್ಣುಮಕ್ಕಳಿಗೆ ಕಲಿಸಿದ ಅಕ್ಷರತಾಯಿ. ಫುಲೆ ದಂಪತಿ ಆರಂಭಿಸಿದ ಅಕ್ಷರಕ್ರಾಂತಿ ಈಗಲೂ ಚಾಲ್ತಿಯಲ್ಲಿದೆ; ಸಮಾನತೆಯ ಕನವರಿಕೆ ಮುಂದುವರಿದಿದೆ.

ಇತಿಹಾಸದಲ್ಲಿ ಶಿಕ್ಷಣವು ಅಕ್ಷರಗಳ ಅಭ್ಯಾಸವಷ್ಟೇ ಆಗಿರಲಿಲ್ಲ. ಅದು ಅಧಿಕಾರ, ಸಂಸ್ಕೃತಿ ಮತ್ತು ಸಾಮಾಜಿಕ ನಿಯಂತ್ರಣದೊಂದಿಗೆ ಜೋಡಿಸಿಕೊಂಡಿದ್ದ ಶಕ್ತಿಯ ಕ್ಷೇತ್ರವಾಗಿತ್ತು. ಯಾರು ಓದಬೇಕು, ಯಾರು ಓದಬಾರದು ಎಂಬ ನಿರ್ಧಾರವೇ ಒಂದು ಸಮಾಜದ ನ್ಯಾಯಬುದ್ಧಿ ಮತ್ತು ಮಾನವೀಯತೆಯನ್ನು ನಿರ್ಧರಿಸುತ್ತಿತ್ತು. ಭಾರತೀಯ ಸಮಾಜದಲ್ಲಿ ಈ ನಿರ್ಧಾರ ಶತಮಾನಗಳ ಕಾಲ ವರ್ಣ, ಜಾತಿ ಮತ್ತು ಲಿಂಗದ ಆಧಾರದಲ್ಲಿ ನಡೆಯುತ್ತಿತ್ತು; ಅಕ್ಷರವು ಸಮಾನತೆಯ ದಾರಿಯಾಗುವ ಬದಲು ಶೋಷಣೆಯ ಉಪಕರಣವಾಗಿತ್ತು. ಇಂತಹ ಹಿನ್ನೆಲೆಯಲ್ಲಿಯೇ ಶಿಕ್ಷಣವನ್ನು ದೈವದತ್ತ ಅಧಿಕಾರದಿಂದ ಮಾನವಹಕ್ಕಾಗಿ ಪರಿವರ್ತಿಸಿದ ಹೋರಾಟಗಳು ರೂಪುಗೊಂಡವು. ಆ ಹೋರಾಟಗಳ ಕೇಂದ್ರಬಿಂದುವಾಗಿರುವುದು ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ದಂಪತಿಯ ಶಿಕ್ಷಣಕ್ರಾಂತಿ. ಅದು ಬರೀ ಶಾಲೆಗಳ ಸ್ಥಾಪನೆಯ ಕಥೆಯಲ್ಲ, ಸಮಾಜದ ಬೌದ್ಧಿಕ ಆತ್ಮಗೌರವವನ್ನು ಪುನರ್‌ರಚಿಸಿದ ಮಾನವೀಯ ಪಯಣ.

ಮಕ್ಕಳಿಗೆ ಶಿಕ್ಷಣ ಒದಗಿಸುವುದು ಪ್ರಸ್ತುತ ತೀರಾ ಕಷ್ಟವಾದ ವಿಚಾರವಲ್ಲ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಶಿಕ್ಷಣವು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು. ಸಂವಿಧಾನಾತ್ಮಕ ಭರವಸೆಗಳು, ರಾಜ್ಯದ ಶಿಕ್ಷಣ ನೀತಿಗಳು ಮತ್ತು ಸಾಮಾಜಿಕ ಜಾಗೃತಿಯ ಪರಿಣಾಮವಾಗಿ, ಪೋಷಕರು ಮಕ್ಕಳನ್ನು ತಮ್ಮ ಆಸಕ್ತಿ, ಸಾಮರ್ಥ್ಯ ಹಾಗೂ ಭವಿಷ್ಯದ ಗುರಿಗಳಿಗೆ ತಕ್ಕಂತೆ ಶಿಕ್ಷಣ ಪಡೆಯುವಂತೆ ಪ್ರೇರೇಪಿಸುವ ಅವಕಾಶವನ್ನು ಇಂದು ಸಂವಿಧಾನ ಕಲ್ಪಿಸಿದೆ. ಮತ, ಧರ್ಮ, ಜಾತಿ ಅಥವಾ ಲಿಂಗದ ಆಧಾರದ ಮೇಲೆ ಶಿಕ್ಷಣಕ್ಕೆ ನಿರ್ಬಂಧ ಹೇರುವ ವ್ಯವಸ್ಥೆಯನ್ನು ಸಮಕಾಲೀನ ಸಮಾಜ ತಿರಸ್ಕರಿಸಿದೆ. ಆದರೆ, ಈ ಸ್ಥಿತಿಯನ್ನು ಸಮಾಜ ಸಹಜವಾಗಿ ತಲುಪಿಲ್ಲ. ಇದರ ಹಿಂದೆ ಅಪಾರವಾದ ಹೋರಾಟ, ತ್ಯಾಗ, ಬೌದ್ಧಿಕ ಚಿಂತನೆ ಮತ್ತು ಸಾಮಾಜಿಕ ಪ್ರತಿರೋಧಗಳ ದೀರ್ಘ ಇತಿಹಾಸ ಇದೆ.

ಭಾರತೀಯ ಸಮಾಜದ ಪೂರ್ವಾಧುನಿಕ ಹಂತವನ್ನು ಅವಲೋಕಿಸಿದರೆ, ಅಕ್ಷರಸಂಸ್ಕೃತಿ ಕೆಲವೇ ಕೆಲವು ವರ್ಗಗಳಿಗೆ ಸೀಮಿತವಾಗಿದ್ದುದನ್ನು ಕಾಣಬಹುದು. ಶಿಕ್ಷಣವೆಂಬುದು ದೈವದತ್ತವಾದ ಕೊಡುಗೆ, ಕೆಲವರಿಗಷ್ಟೇ ಮೀಸಲಾದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಹಕ್ಕು ಎಂಬಂತೆ ವ್ಯವಸ್ಥಿತವಾಗಿ ಪ್ರತಿಪಾದಿಸಲಾಗುತ್ತಿತ್ತು. ಇದರ ಪರಿಣಾಮವಾಗಿ ಶೂದ್ರರು, ಅತಿಶೂದ್ರರು ಹಾಗೂ ಮಹಿಳೆಯರು ಶಿಕ್ಷಣದ ವಲಯಕ್ಕೆ ಪ್ರವೇಶಿಸುವುದೇ ಧರ್ಮಭ್ರಷ್ಟತೆ, ಪಾಪಕಾರ್ಯ ಎಂಬ ಮಿಥ್ಯಭಾವನೆಗಳು ಸಮಾಜದಲ್ಲಿ ಗಟ್ಟಿಯಾಗಿ ನೆಲೆಸಿದ್ದವು. ಈ ವ್ಯವಸ್ಥೆ ಶಾರೀರಿಕ ಹಾಗೂ ಮಾನಸಿಕ ದಾಸ್ಯವನ್ನು ನಿರ್ಮಿಸುವ ಕ್ರೂರ ತಂತ್ರವಾಗಿತ್ತು.

ಜನವಿರೋಧಿ ಮತ್ತು ಅಮಾನವೀಯ ವ್ಯವಸ್ಥೆಯ ವಿರುದ್ಧ ಗಟ್ಟಿಧ್ವನಿ ಎತ್ತಿದವರು ಆಧುನಿಕ ಭಾರತದ ಮಹಾನ್ ಸಮಾಜ ಸುಧಾರಕರಾದ ಮಹಾತ್ಮ ಜ್ಯೋತಿಬಾ ಫುಲೆ ಮತ್ತು ಮಾತೆ ಸಾವಿತ್ರಿಬಾಯಿ ಫುಲೆ. ಅವರು ಶಿಕ್ಷಣವನ್ನು ಬರೀ ಜ್ಞಾನಾರ್ಜನೆಯ ಸಾಧನವಾಗಿಯಷ್ಟೇ ನೋಡದೆ, ಸಾಮಾಜಿಕ ವಿಮೋಚನೆಯ ಮುಲಾಮನ್ನಾಗಿ ಗ್ರಹಿಸಿದರು. ಶೂದ್ರ–ಅತಿಶೂದ್ರರು ಹಾಗೂ ಮಹಿಳೆಯರಿಗೆ ಶಿಕ್ಷಣ ಒದಗಿಸುವುದನ್ನು ತಮ್ಮ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡ ಈ ದಂಪತಿ, ಸಮಾನತೆ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಅಪೂರ್ವ ಪಾತ್ರವಹಿಸಿದರು. ಈ ಕಾರಣಕ್ಕಾಗಿಯೇ ಡಾ. ಬಿ.ಆರ್. ಅಂಬೇಡ್ಕರ್ ಅವರು ಮಹಾತ್ಮ ಜ್ಯೋತಿಬಾ ಫುಲೆಯವರನ್ನು 'ಭಾರತೀಯ ಸಮಾಜ ಪರಿವರ್ತನೆಯ ಪಿತಾಮಹ' ಎಂದು ಗೌರವಪೂರ್ವಕವಾಗಿ ಸ್ಮರಿಸಿದ್ದಾರೆ.

ಸಾವಿತ್ರಿಬಾಯಿ ಫುಲೆಯವರು ಭಾರತದ ಮೊದಲ (ಮಹಿಳಾ) ಶಿಕ್ಷಕಿ ಎಂಬ ಐತಿಹಾಸಿಕ ಗೌರವಕ್ಕೆ ಪಾತ್ರರಾಗಿದ್ದಾರೆ. ಅವರು 1831ರ ಜನವರಿ 3ರಂದು ಮಹಾರಾಷ್ಟ್ರ ರಾಜ್ಯದ ಸಾತಾರ ಜಿಲ್ಲೆಯ ನೈಗಾಂವ ಗ್ರಾಮದಲ್ಲಿ ನೇವಸೆ ಪಾಟೀಲ ಮತ್ತು ಲಕ್ಷ್ಮಿ ದಂಪತಿಗೆ ಜನಿಸಿದರು. ಬಾಲ್ಯದಲ್ಲೇ ಜ್ಯೋತಿಬಾ ಫುಲೆ ಅವರೊಂದಿಗೆ ವಿವಾಹವಾದ ಸಾವಿತ್ರಿಬಾಯಿಗೆ ಆ ಸಮಯದಲ್ಲಿ ಕೇವಲ ಒಂಬತ್ತು ವರ್ಷ!

ಜಗತ್ತಿನ ಅನೇಕ ಭಾಗಗಳಲ್ಲಿ ಕೈಗಾರಿಕಾ ಯುಗದ ಆರಂಭದಿಂದ ಯಂತ್ರಯುಗದ ಚಲನೆಗಳು ಕಂಡುಬರುತ್ತಿದ್ದರೆ, ಮಹಾರಾಷ್ಟ್ರದಲ್ಲಿ ಪೇಶ್ವೆಗಳ ಆಡಳಿತದಡಿ ಮಂತ್ರ–ಮೌಢ್ಯ ಮತ್ತು ಮತಾಂಧತೆ ಪ್ರಾಬಲ್ಯದಲ್ಲಿತ್ತು. ವರ್ಣಾಶ್ರಮ ಮತ್ತು ಜಾತಿ ವ್ಯವಸ್ಥೆಗಳನ್ನು ದೈವಸಿದ್ಧವೆಂದು ಘೋಷಿಸಿ, ಶಿಕ್ಷಣವನ್ನು ಬ್ರಾಹ್ಮಣ ವರ್ಗಕ್ಕೆ ಸೀಮಿತಗೊಳಿಸಲಾಗಿತ್ತು. ಪೇಶ್ವೆಗಳ ಆಡಳಿತದ ಪತನದ ನಂತರ ಬ್ರಿಟಿಷರ ಆಡಳಿತ ಸ್ಥಾಪನೆಯಾಯಿತು. ಈ ರಾಜಕೀಯ ಬದಲಾವಣೆ ಸಾಮಾಜಿಕ ಕ್ಷೇತ್ರದಲ್ಲಿ ಸಂಪೂರ್ಣ ಸಮಾನತೆಯನ್ನು ತಕ್ಷಣವೇ ತರಲಿಲ್ಲವಾದರೂ, ಹೊಸ ಅವಕಾಶಗಳ ಕಿಟಕಿಯನ್ನು ತೆರೆದಿತು.

ಸೀಮಿತ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡ ಜ್ಯೋತಿಬಾ ಫುಲೆ, ಶೂದ್ರರು ಮತ್ತು ಅತಿಶೂದ್ರರ ಶಿಕ್ಷಣಕ್ಕಾಗಿ ಮೊದಲ ಸಂಘಟಿತ ಪ್ರಯತ್ನ ಆರಂಭಿಸಿದರು. ಮೊದಲ ಹಂತದಲ್ಲಿ ಕೆಲವೇ ಕೆಲವು ಮಂದಿಗೆ ಅಕ್ಷರಜ್ಞಾನ ನೀಡಿದ ಅವರು, ಆ ಶಿಕ್ಷಣ ಪಡೆದವರನ್ನೇ ಶಿಕ್ಷಕರನ್ನಾಗಿ ರೂಪಿಸುವ ಮೂಲಕ ಸಮುದಾಯಾಧಾರಿತ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿದರು. ಇದು ಕೆಳವರ್ಗಗಳಲ್ಲಿ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಮೂಡಿಸುವ ಮಹತ್ವದ ಹೆಜ್ಜೆಯಾಗಿತ್ತು.

1840ರಲ್ಲಿ ಅಸ್ಪೃಶ್ಯ ಸಮುದಾಯದವರಿಗಾಗಿ ಪುಣೆಯಲ್ಲಿ ಶಾಲೆ ಆರಂಭಿಸಿದ ಫುಲೆಯವರ ಪ್ರಯತ್ನವು, ಸಂಪ್ರದಾಯಬದ್ಧ ಶಕ್ತಿಗಳಿಂದ ವಿರೋಧಕ್ಕೆ ಗುರಿಯಾಯಿತು. ವೈದಿಕ ವರ್ಗದ ಒತ್ತಡಕ್ಕೆ ಮಣಿದ ಫುಲೆಯವರ ತಂದೆಯೇ ಮಗ ಮತ್ತು ಸೊಸೆಯನ್ನು ಮನೆಯಿಂದ ಹೊರಹಾಕಿದರು. ಶಾಲೆಯನ್ನೂ ಮುಚ್ಚಿಸಲಾಯಿತು. ಆದರೆ, ಆ ಘಟನೆ ಫುಲೆ ದಂಪತಿಯನ್ನು ಹಿಂಜರಿಯುವಂತೆ ಮಾಡಲಿಲ್ಲ. 1851ರ ಜುಲೈ 3ರಂದು ಅವರು ಮಹಿಳೆಯರಿಗಾಗಿ ಶಾಲೆ ಪ್ರಾರಂಭಿಸಿದರು. ಮಹಿಳೆಯರನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದ ಕಾಲಘಟ್ಟದಲ್ಲಿ, ಮಹಿಳಾ ಶಿಕ್ಷಣದ ಮಹತ್ವವನ್ನು ದೂರದೃಷ್ಟಿಯಿಂದ ಗ್ರಹಿಸಿದ್ದರು. ಮಹಿಳೆಯರ ಶಿಕ್ಷಣವೇ ಸಮಾಜದ ಸಮಗ್ರ ಪರಿವರ್ತನೆಗೆ ಮೂಲವೆಂಬ ಅವರ ನಂಬಿಕೆ ಇಂದಿಗೂ ಪ್ರಸ್ತುತ.

ಸಾವಿತ್ರಿಬಾಯಿ ಅವರಿಗೆ ಸ್ವತಃ ಜ್ಯೋತಿಬಾ ಫುಲೆಯವರೇ ಮರಾಠಿ, ಇಂಗ್ಲಿಷ್, ಪಾರ್ಸಿ ಹಾಗೂ ಸಂಸ್ಕೃತ ಭಾಷೆಯ ಶಿಕ್ಷಣ ನೀಡಿದರು. ಈ ತರಬೇತಿಯ ಮೂಲಕ ಅವರು ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸಲು ಸಮರ್ಥರಾದರು. ಆದರೆ, ಶಿಕ್ಷಕಿಯ ಪಾತ್ರ ಸುಲಭವಾಗಿರಲಿಲ್ಲ. ಶಾಲೆಗೆ ತೆರಳುವ ಮಾರ್ಗದಲ್ಲಿ ಅವಮಾನ, ಕಲ್ಲುತೂರಾಟ, ಶಾರೀರಿಕ ಹಲ್ಲೆ, ಕೊಳಕು ಎರಚುವಂತಹ ಹಿಂಸೆಯನ್ನು ಎದುರಿಸಿದರೂ, ಸಾವಿತ್ರಿಬಾಯಿ ತಮ್ಮ ಕರ್ತವ್ಯದಿಂದ ಹಿಂದೆ ಸರಿಯಲಿಲ್ಲ. ರಕ್ತಸ್ರಾವವಾದರೂ ಶಾಲೆಗೆ ತೆರಳಿ ಬೋಧನೆ ಮಾಡಿದ ಅವರ ಧೈರ್ಯ ಮತ್ತು ಬದ್ಧತೆ, ಭಾರತೀಯ ಮಹಿಳಾ ಶಿಕ್ಷಣದ ಇತಿಹಾಸದಲ್ಲಿ ಅನನ್ಯ ಉದಾಹರಣೆ. ಫುಲೆ ದಂಪತಿಯ ನಿರಂತರ ಹೋರಾಟದ ಫಲವಾಗಿ ಪುಣೆಯಲ್ಲಿ ಅನೇಕ ಶಾಲೆಗಳು ಆರಂಭವಾದವು. 'ಸತ್ಯಶೋಧಕ ಸಮಾಜ' ಸ್ಥಾಪಿಸುವ ಮೂಲಕ ಅವರು ಶಿಕ್ಷಣವಷ್ಟೇ ಅಲ್ಲದೆ, ಸಮಾಜದ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಟ ನಡೆಸಿದರು. ಬಾಲ್ಯವಿವಾಹ, ದೇವದಾಸಿ ಪದ್ಧತಿ, ವಿಧವೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಸಂಘಟಿತ ಪ್ರತಿರೋಧ ರೂಪಿಸಿದರು. ವಿಧವಾಶ್ರಮಗಳನ್ನು ಸ್ಥಾಪಿಸಿ, ವಿಧವೆಯರ ಮಾನವೀಯ ಹಕ್ಕುಗಳ ಪರವಾಗಿ ಧ್ವನಿ ಎತ್ತಿದರು. ಸಾವಿತ್ರಿಬಾಯಿ ಅವರು ತಮ್ಮ ಕಾವ್ಯ ಮತ್ತು ಬರಹಗಳ ಮೂಲಕವೂ ಮಹಿಳೆಯರಲ್ಲಿ ಮತ್ತು ಶೋಷಿತ ವರ್ಗಗಳಲ್ಲಿ ಜಾಗೃತಿ ಮೂಡಿಸಿದರು. 'ಕಾವ್ಯ ಫುಲೆ' ಅವರ ಕವಿತೆಗಳ ಸಂಕಲನ. 'ಭವನಕಾಶಿ ಸುಭೋದ ರತ್ನಾಕರ್' ಆತ್ಮಕಥೆ.

ಜ್ಯೋತಿಬಾ ಅವರ ನಿಧನದ (1890) ನಂತರವೂ ಸಾವಿತ್ರಿಬಾಯಿ ಅವರು 'ಸತ್ಯಶೋಧಕ ಸಮಾಜ'ದ ಕಾರ್ಯಗಳನ್ನು ಮುಂದುವರಿಸಿದರು. 1897ರಲ್ಲಿ ಪ್ಲೇಗ್ ರೋಗಕ್ಕೆ ತುತ್ತಾಗಿ ನಿಧನರಾದರು.

ಫುಲೆ ದಂಪತಿ ಕಂಡ ಸಮಾನತೆ, ಶಿಕ್ಷಣ ಮತ್ತು ಮಾನವೀಯತೆಯ ಕನಸು ಕಾಲಾತೀತವಾಗಿದೆ. ಅದು ಇಂದಿಗೂ ಭಾರತೀಯ ಸಮಾಜಕ್ಕೆ ದಿಕ್ಕು ತೋರಿಸುವ ಚಿಂತನಾದೀಪವಾಗಿದೆ. ಶೂದ್ರರು, ಅತಿಶೂದ್ರರು ಹಾಗೂ ಮಹಿಳೆಯರು ಅಕ್ಷರಜ್ಞಾನದಿಂದ ಸಬಲರಾಗಬೇಕು ಎಂಬ ಫುಲೆ ದಂಪತಿ ಕನಸನ್ನು ಸಾಕಾರಗೊಳಿಸುವ ಹೊಣೆಗಾರಿಕೆ ಇಂದಿನ ತಲೆಮಾರಿನ ಮೇಲಿದೆ. ಅವರ ಚಿಂತನೆಗಳನ್ನು ಇತಿಹಾಸದ ಭಾಗವಾಗಿಯಷ್ಟೇ ಕಾಣದೆ, ಸಮಕಾಲೀನ ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸುವ ಜೀವಂತ ಚಿಂತನಾ ಪರಂಪರೆಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಫುಲೆ ದಂಪತಿಯ ಹೋರಾಟವು ಇಂದಿಗೂ ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ನೆನಪಿಸುವ ಮಹತ್ವದ ಮಾರ್ಗದರ್ಶಿಯಾಗಿದೆ.

ಪ್ರಸ್ತುತ ಶಿಕ್ಷಣವು ಎಲ್ಲರಿಗೂ ಲಭ್ಯವಿರುವಂತೆ ಕಂಡರೂ, ಅದರ ಸಮಾನ ಪ್ರವೇಶ, ಗುಣಮಟ್ಟ ಮತ್ತು ಸಾಮಾಜಿಕ ನ್ಯಾಯ ಇನ್ನೂ ಸಂಪೂರ್ಣವಾಗಿ ಸಾಕಾರಗೊಂಡಿಲ್ಲ. ಈ ಸಂದರ್ಭದಲ್ಲೇ ಫುಲೆ–ಸಾವಿತ್ರಿಬಾಯಿ ಅವರ ಹೋರಾಟ ನಮಗೆ ನೆನಪಿಸುವುದು ಒಂದೇ ಸತ್ಯವನ್ನು: ಶಿಕ್ಷಣವು ಕೇವಲ ವ್ಯಕ್ತಿಯ ಉನ್ನತಿಗಲ್ಲ, ಸಮಾಜದ ನೈತಿಕ ಮರುಸಂರಚನೆಗೆ ಅಗತ್ಯವಾದ ಶಕ್ತಿ. ಶೂದ್ರರು, ಅತಿಶೂದ್ರರು ಮತ್ತು ಮಹಿಳೆಯರು ಅಕ್ಷರಜ್ಞಾನದಿಂದ ಸಬಲರಾಗಬೇಕು ಎಂಬ ಅವರ ಕನಸು, ಇಂದಿನ ತಲೆಮಾರಿನ ಜವಾಬ್ದಾರಿಯಾಗಿ ನಮ್ಮ ಮುಂದೆ ನಿಂತಿದೆ. ಆ ಕನಸನ್ನು ಜೀವಂತವಾಗಿಡುವುದು ಎಂದರೆ ಫುಲೆ ದಂಪತಿಯನ್ನು ಸ್ಮರಿಸುವುದಲ್ಲ; ಅವರ ಪ್ರಶ್ನೆಗಳನ್ನು, ಅವರ ಪ್ರತಿರೋಧವನ್ನು ಮತ್ತು ಅವರ ಮಾನವೀಯ ದೃಷ್ಟಿಯನ್ನು ಸಮಕಾಲೀನ ಸಮಾಜದಲ್ಲಿ ಮುಂದುವರಿಸುವುದೇ ನಿಜವಾದ ಗೌರವವಾಗಿದೆ.

ವಾಚಕರ ವಾಣಿ

ಹೊಂದಾಣಿಕೆ ಇದ್ದರೆ ಬದುಕು ಸುಸೂತ್ರ

ಕುಟುಂಬದ ಹಣಕಾಸು ನಿಭಾಯಿಸುವಲ್ಲಿ ಪತಿಯ ಪ್ರಾಬಲ್ಯವನ್ನು ಪತ್ನಿಯ ಮೇಲಿನ ಶೋಷಣೆ ಅಥವಾ ಕ್ರೌರ್ಯ ಎಂಬುದಾಗಿ ಪರಿಗಣಿಸಲಾಗದೆಂದು ಸುಪ್ರೀಂ ಕೋರ್ಟ್ ಹೇಳಿದೆ. ಪತಿಯ ಮೇಲೆ ಹೂಡಲಾಗಿದ್ದ ವರದಕ್ಷಿಣೆ ದೌರ್ಜನ್ಯದ ದಾವೆಯನ್ನು ವಜಾಗೊಳಿಸಿ ಬಡಪಾಯಿ ಗಂಡನನ್ನು ಪಾರು ಮಾಡಿದೆ.

ಭಾರತೀಯ ಕುಟುಂಬಗಳಲ್ಲಿ ಹಣಕಾಸಿನ ವಿಷಯದಲ್ಲಿ ಪತಿಯ ಪ್ರಾಬಲ್ಯ ಅತ್ಯಂತ ಸರ್ವೇ ಸಾಮಾನ್ಯ ಎಂದು ನ್ಯಾಯಾಲಯ ಹೇಳಿದೆ. ಹಾಗಂತ, ಗಂಡಂದಿರು ಈ ತೀರ್ಪನ್ನೇ ಬಳಸಿಕೊಂಡು ಹಣಕಾಸಿನ ಪ್ರಾಬಲ್ಯ ಹೊಂದಲು ಮುಂದಾಗಬಾರದು. 'ಸಮರಸವೇ ಜೀವನ' ಎಂಬ ತತ್ತ್ವದಡಿ ಒಬ್ಬರನ್ನೊಬ್ಬರು ಪರಸ್ಪರ ಅರಿತು ಕೊಂಡು ಖುಷಿಯಿಂದ ಜೀವನ ಮಾಡುವುದನ್ನು ರೂಢಿಸಿಕೊಂಡರೆ ಬಾಳು ಬಂಗಾರ ಆದೀತು.

ವೆಂಕಟೇಶ್ ಮುದಗಲ್, ಕಲಬುರಗಿ

ಗಂಡು–ಹೆಣ್ಣು: ಇಬ್ಬಗೆಯ ನೀತಿ ಸರಿಯಲ್ಲ

ಹೊಸ ವರ್ಷದ ಆಚರಣೆಯಿರಲಿ ಅಥವಾ ದೈನಂದಿನ ಜೀವನವಿರಲಿ, ಹೆಣ್ಣು ಮಕ್ಕಳು ತಮ್ಮಿಷ್ಟದಂತೆ ಬದುಕಿದಾಗ ಅವರ ಚಾರಿತ್ರ್ಯವನ್ನು ವಿಮರ್ಶಿಸಲು ಸಮಾಜಕ್ಕೆ ಯಾವುದೇ ಹಕ್ಕಿಲ್ಲ. ಗಂಡು ಮಾಡಿದರೆ ಅದು ಸಂಭ್ರಮ; ಹೆಣ್ಣು ಮಾಡಿದರೆ ಅದು ತಪ್ಪು ಎನ್ನುವ ಇಬ್ಬಗೆ ನೀತಿ ಅಸಹ್ಯಕರ. ಹೆಣ್ಣು ಸೀತೆಯಂತೆ ಸೌಮ್ಯಳಾಗಿದ್ದರೂ ಮಾತಾಡುವ ಈ ಸಮಾಜ, ಆಕೆ ತನ್ನಿಷ್ಟದಂತೆ ಬದುಕಿದಾಗ ಬೊಬ್ಬೆ ಹೊಡೆಯುತ್ತದೆ. ಈ ವಿರೋಧಾಭಾಸ ಬದಲಾಗದ ಜನರ ಕೊಳಕು ಮನಃಸ್ಥಿತಿಯ ದ್ಯೋತಕ. ಹೆಣ್ಣು ಕೇವಲ ಸೀರೆಯುಟ್ಟು, ತಗ್ಗಿಬಗ್ಗಿ ನಡೆದರಷ್ಟೆ ಗೌರವ ಎನ್ನುವ ಕಾಲ ಮುಗಿದುಹೋಗಿದೆ; ನಿಜವಾದ ತಪ್ಪು ಇರುವುದು ಹೆಣ್ಣಿನ ನಡವಳಿಕೆಯಲ್ಲಲ್ಲ, ಆಕೆಯನ್ನು ಸದಾ ನಿಯಂತ್ರಿಸಲು ಮತ್ತು ಟೀಕಿಸಲು ಹೊಂಚು ಹಾಕುವ ಸಮಾಜದ ದೃಷ್ಟಿಕೋನದಲ್ಲಿ ಮಾತ್ರ.

ನಿರಂಜನ್ ಎಚ್.ಬಿ., ಶಿವಮೊಗ್ಗ

ಸಮಾಧಿ ನಿರ್ಮಾಣ: ಸೋಜಿಗ ಈ ಜಗ

ತೆಲಂಗಾಣದ ವ್ಯಕ್ತಿಯೊಬ್ಬರು ಬದುಕಿರುವಾಗಲೇ ತಮಗಾಗಿ ಸಮಾಧಿ ನಿರ್ಮಿಸಿಕೊಂಡಿರುವುದು ವರದಿಯಾಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರಂತೆ, ಸಮಾಧಿ ನಿರ್ಮಾಣ ಮತ್ತು ಸಂಸ್ಕಾರದ ವಿಧಿವಿಧಾನಗಳ ಖರ್ಚಿಗೆಂದು ಹಣ ಎತ್ತಿಡುವವರಿದ್ದಾರೆ. ಗಿರೀಶ ಕಾರ್ನಾಡರಂತೆ, ಯಾವುದೇ ಧಾರ್ಮಿಕ ವಿಧಿವಿಧಾನಗಳಿಲ್ಲದೆ ದೇಹವನ್ನು ಸಂಸ್ಕಾರ ಮಾಡಬೇಕೆಂದು ಮನೆಯವರಿಗೆ ಹೇಳುವವರು ದೊರೆಯುತ್ತಾರೆ. ಶಿವರಾಮ ಕಾರಂತರಂತೆ 'ಸತ್ತ ಕೊರಡಿಗೆ ಶೃಂಗಾರ, ಉತ್ಸವ ಬೇಡ, ಎಲ್ಲಿ ಸತ್ತೆನೋ ಅಲ್ಲೇ ಸುಟ್ಟು ಬೂದಿ ಮಾಡಿ' ಎಂದು ಹೇಳುವವರೂ ದೊರೆಯುತ್ತಾರೆ. ತನ್ನ ಎಸ್ಟೇಟಿನ ಗುಡ್ಡದ ಬಳಿಯಲ್ಲಿ ದೇಹವನ್ನು ಸಮಾಧಿ ಮಾಡಿ ಎಂದು ಟಾಲ್‌ಸ್ಟಾಯ್ ಹೇಳಿದಂತೆ, ಇಂಥದೇ ಊರಿನ ಸ್ಮಶಾನದಲ್ಲಿ, ಇಂಥವರ ಸಮಾಧಿಯ ಪಕ್ಕದಲ್ಲಿ ಸಮಾಧಿ ಮಾಡಿ ಎಂದು ಹೇಳುವವರೂ ಇದ್ದಾರೆ. ಸಂಸ್ಕಾರ, ಸಮಾಧಿ ಯಾವುದೂ ಬೇಡ, ದೇಹವನ್ನು ಯಾವುದಾದರೂ ಒಂದು ಆಸ್ಪತ್ರೆಗೆ ಕೊಟ್ಟುಬಿಡಿ ಎಂದು ಹೇಳುವವರಿದ್ದಾರೆ. ಆದರೆ, ಬದುಕಿರುವಾಗಲೇ ತನ್ನ ಸಮಾಧಿ ನಿರ್ಮಿಸಿಕೊಂಡವರು ವಿರಳ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಸ್ವಾಗತಾರ್ಹ

ಜಾತಿ ಮೀರಿ ಪ್ರೀತಿಸಿದರೆ
ಕುಂದಲ್ಲವದು ಮರ್ಯಾದೆಗೆ
ಬದಲಿಗೆ ಹೆಚ್ಚುವುದು
ಮರ್ಯಾದೆ ಗೌರವ!
ಜಾತಿ ಕಟ್ಟಳೆ ಮುರಿವ
ಸಮತೆಯ ಸಂದೇಶ ಸಾರುವ
ಸಂಜೀವಿನಿಯದು ಪ್ರೀತಿ!
ಜಾತಿ ಮೀರದೆ ನಾವಾಗುವುದಿಲ್ಲ
ನಿಜದಲಿ ಮನುಜರು!
ಮರ್ಯಾದೆಗೇಡು ಹತ್ಯೆ ತಡೆಯಲು
ಸರ್ಕಾರ ಮಸೂದೆ ತರುತ್ತಿರುವುದು
ಸ್ವಾಗತಾರ್ಹ ನಡೆ!

ಸಿ.ಪಿ. ಸಿದ್ಧಾಶ್ರಮ, ಮೈಸೂರು

ಹಳ್ಳಿಗಳಲ್ಲೂ ರಿಯಲ್ ಎಸ್ಟೇಟ್ ಹಾವಳಿ!

ಬೆಂಗಳೂರಿನ ಕೋಗಿಲು ಬಳಿ ನಡೆದ ಒತ್ತುವರಿ ತೆರವು ಕಾರ್ಯಾಚರಣೆ ಕುರಿತು ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗುತ್ತಿದೆ. ಆದರೆ, ಹಳ್ಳಿಗಳಲ್ಲಿ ಪಿತ್ರಾರ್ಜಿತವಾಗಿ ಬಂದ ಆಸ್ತಿ ಹಾಗೂ ಕಷ್ಟಪಟ್ಟು ಕೊಂಡುಕೊಂಡ ಆಸ್ತಿಯನ್ನು ಇತ್ತೀಚೆಗೆ ಸರ್ಕಾರ ಮತ್ತು ರಿಯಲ್ ಎಸ್ಟೇಟ್ ಮಾಫಿಯಾದವರು ಕಬಳಿಕೆ ಮಾಡುತ್ತಿರುವುದು ಯಾರ ಗಮನಕ್ಕೂ ಬರುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚುತ್ತಿರುವ ರಿಯಲ್ ಎಸ್ಟೇಟ್ ಮಾಫಿಯಾಕ್ಕೆ ಕಡಿವಾಣ ಹಾಕಬೇಕಿದೆ.

ಮೋಹನ್ ಕುಮಾರ್, ಹೊಳೆನರಸೀಪುರ

ವಿದೇಶದಲ್ಲಿ ಬಣ್ಣನೆ, ಇಲ್ಲಿ ಮಾತ್ರ ವೇದನೆ

ಮಾಸಿಕ ರೇಡಿಯೊ ಕಾರ್ಯಕ್ರಮವಾದ 'ಮನ್ ಕಿ ಬಾತ್'ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ದುಬೈನಲ್ಲಿ ಭಾರತೀಯರಿಗೆ ಕನ್ನಡ ಕಲಿಸುತ್ತಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಿ, ಅದೊಂದು ವಿಶೇಷ ಸಾಧನೆಯೆಂದು ಬಣ್ಣಿಸಿದರು. ವಿಪರ್ಯಾಸವೆಂದರೆ ಬೆಂಗಳೂರಿನಲ್ಲಿ ನೆಲೆಸಿರುವ ಉತ್ತರ ಭಾರತೀಯರು ಕನ್ನಡ ಕಲಿಯುತ್ತಿಲ್ಲವಲ್ಲ ಎಂಬುದೇ ವೇದನೆ.

ಎಚ್.ವಿ. ಶ್ರೀಧರ್, ಬೆಂಗಳೂರು

ದ್ವೇಷ ಭಾಷಣ ಮಸೂದೆ ಜಾರಿಯಾಗಲಿ

ದ್ವೇಷ ಭಾಷಣ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸುವ ಮಸೂದೆಯನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸುವ ಮೂಲಕ ಸರ್ಕಾರವು ಚಾರಿತ್ರಿಕ ಹೆಜ್ಜೆ ಇಟ್ಟಿದೆ. ಈ ಮಸೂದೆ ಜನರ ವಾಕ್ ಸ್ವಾತಂತ್ರ್ಯವನ್ನು ಕಸಿಯುತ್ತಿದೆ ಎಂಬುದು ವಿಪಕ್ಷಗಳ ಆಕ್ಷೇಪ. ಆದರೆ, ಈ ಮಸೂದೆಯಲ್ಲಿ ದ್ವೇಷ ಭಾಷಣ ಮಾಡುವವರ ವಿರುದ್ಧವಷ್ಟೆ ನಿಯಮಗಳು ಅನ್ವಯಿಸುತ್ತವೆಯೇ ಹೊರತು ದ್ವೇಷ ಭಾಷಣ ಮಾಡದವರ ವಿರುದ್ಧವಲ್ಲ. ಆದರೆ, ಈ ನಿಯಮಗಳು ದುರ್ಬಲರ ಮೇಲೆ ಮಾತ್ರ ಜಾರಿಯಾಗಿ, ಪ್ರಬಲ ಶಕ್ತಿಶಾಲಿಗಳು ತಪ್ಪಿಸಿಕೊಳ್ಳುವಂತಾಗಬಾರದು.

ಬಾಬು ಶಿರಮೋಜಿ, ಬೆಳಗಾವಿ

ಚುರುಮುರಿ

ಕ್ಯಾಲೆಂಡರ್ ಶ್ರವಣ!

• ತುರುವೇಕೆರೆ ಪ್ರಸಾದ್

'**ಲೇಯ್**, ವೊಸ ವರ್ಸದ ಕ್ಯಾಲೆಂಡರ್ ಪಠಣ ಶುರು ಹಚ್ಕತೀನಿ... ರಾಜಕೀಯ ಕೊಳೆ, ಕಳೆ ಮತ್ತು ಗುಳೆ ಬಗ್ಗೆ ಯೋಳ್ತೀನಿ. ಕಣ್ಣು, ಕಿವಿ ಮತ್ತು ಗ್ಯಾನ ನೆಟ್ಟಗಿಟ್ಕಂಡು ಕೇಳಿ, ಪುಣ್ಯ ಬತ್ತದೆ' ಎಂದು ಕ್ಯಾಲೆಂಡರ್ ಕಣ್ಣೊತ್ತಿಕೊಂಡ ಗುದ್ಲಿಂಗ.

'ಅಂಗಾರೆ ಪುಣ್ಯ ಬರಾಕಿಲ್ಲ, ಮಾಡ್ದೋರ ಪಾಪ ಆಡ್ದೋರ ಬಾಯಲ್ಲಿ ಅಂದಂಗೆ ಪಾಪಾನೇ ಸುತ್ಕಳಾದು... ಸರಿ, ಅದೇನು ಒದ್ರು' ಎಂದ ಪರ್ಮೇಶಿ.

'ನಮ್ಮಲ್ಲಿ ಷಡೃತು ಇದ್ದಂಗೆ ರಾಜಕೀಯ ಕ್ಯಾಲೆಂಡರಲ್ಲಿ ಏಳು ಪರ್ವ ಇದಾವೆ! ಬಜೆಟ್ ಪರ್ವ, ಕ್ರಾಂತಿ ಪರ್ವ, ಅಧಿವೇಶನ ಪರ್ವ, ಭ್ರಾಂತಿ ಪರ್ವ, ಸಂಘರ್ಷ ಪರ್ವ, ಶೂನ್ಯ ಪರ್ವ, ಶಿಶಿರ ಪರ್ವ, ಅಂತ! ಬಜೆಟ್ ಪರ್ವ ಶುರುವಾಗದೆ, ಆದಾದ ಮೇಲೆ ಮತ್ತೆ ಕುರ್ಚಿ ಕ್ರಾಂತಿ ಶುರುವಾಯ್ತದೆ. ಆಮೇಲೆ ಅಧಿವೇಶನ ಪರ್ವ ಶುರುವಾಗಿ ಆಷಾಢದಲ್ಲಿ ಎಲ್ಲ ಭ್ರಾಂತಿ ಅನುಸ್ತದೆ...'

'ಅರ್ಥ ಆಯ್ತು ಬಿಡು. ಆಮೇಲೆ ಸಂಘರ್ಷ ಪರ್ವ ಶುರು. ಈ ಸಾರಿ ಸೀಕ್ರೆಟ್ ಡಿನ್ನರ್ ಬದ್ಲು ಓಪನ್ ಹಸ್ತಪಾತ್ರೆ ಭೋಜನ (ಬಫೆ) ಶುರುವಾಗ್ಬಹುದು'.

'ಕೈನಲ್ಲಿ ಮಾತ್ರ ಅಲ್ಲ, ಕಮಲ– ದಳದಲ್ಲೂ ಬಂಡಾಯ ಎಚ್ಚಾಗ್ಬಹುದು... ಕಮಲೇ ಕಮಲೋತ್ಪತ್ತಿಃ, ದಳೇ ಭಾರೀ ಕಳೆ ಉತ್ಪತ್ತಿಃ ಅನ್ನೋ ಅಂಗಾಗಬಹುದು'.

'ಈ ಶೂನ್ಯ ಪರ್ವ ಅಂದ್ರೇನು?'

'ರಾಜಕೀಯದೋರಿಗೆ (ಮೂಢ)ನಂಬಿಕೆ ಜಾಸ್ತಿ, ಅದ್ಕೇ ಅವರು ಅಮಾವಾಸ್ಯೆ ಹಿಂದೆ ಮುಂದೆ ಏನೂ ಮಾಡಕಿಲ್ಲ. ಅವೆಲ್ಲಾ ಸೇರಿ ಶೂನ್ಯ ಪರ್ವ, ವಿರೋಧಿಗಳಿಗೆ ಮಾಟ ಮಂತ್ರ ಮಾಡ್ಸೋ ಟೈಮ್ ಅದು'.

'ಸರಿ, ಈ ಶಿಶಿರ ಪರ್ವ ಅಂದ್ರೇನು?'

'ಶಿ–ಶಿರ ಅಂದ್ರೆ ಎಲ್ಲಾ ಹೈಕಮಾಂಡ್ ಸೋನಿಯಾಜಿ ಕೈಲಿದೆ ಅಂತ. ಅವರು ಯಾವ ಪರ್ವಾನ ಯಾವಾಗ ಬೇಕಾದ್ರೂ ಉಲ್ಟಾ ಮಾಡ್ ಹಾಕ್ಬಹುದು' ಎಂದ ಗುದ್ಲಿಂಗ ನಸುನಗುತ್ತಾ!

ಎಲ್ಲಾ ಕಣ್ ಕಣ್ ಬಿಟ್ಟರು!

ಸಂಗತ

ವಿಮರ್ಶೆ: ಚಿತ್ರರಂಗದ್ದು ಮುಚ್ಚಿದ ಬಾಗಿಲು!

ವಿಮರ್ಶೆಗೆ ಬೆನ್ನು ತೋರಿಸಿ ಯಾವುದೇ ಸೃಜನಶೀಲ ಕಲೆ ಬೆಳೆಯುವುದು ಸಾಧ್ಯವಿಲ್ಲ. ಕನ್ನಡ ಸಿನಿಮಾ ಮಂದಿಗೋ ಟೀಕೆ–ಟಿಪ್ಪಣಿಯೇ ಅಪಥ್ಯವಾಗಿದೆ.

• ವಿಶಾಖ ಎನ್.

'**ನಿಂದಕರಿರಬೇಕು**' ಎಂದು ಪುರಂದರದಾಸರು ಹೇಳಿದ್ದರು. ದೇವಾನುದೇವತೆಗಳಿಗೂ ನಿಂದನಾಸ್ತುತಿ ಎನ್ನುವುದು ಸ್ವೀಕೃತ. ಸಮಾಜೋ ವಿಜ್ಞಾನವು ಆತ್ಮವಿಮರ್ಶೆ, ಟೀಕೆ ಹಾಗೂ ವಿಶ್ಲೇಷಣೆಗೆ ಅವಕಾಶ ಕಲ್ಪಿಸಿದೆ ಹಾಗೂ ಸಮಾಜದ ಸ್ವಾಸ್ಥ್ಯಕ್ಕೆ ಮುಕ್ತ ಅಭಿಪ್ರಾಯ ಹಾಗೂ ಚರ್ಚೆ ಅವಶ್ಯವೂ ಹೌದು. ಈಗ ಸಾಮಾಜಿಕ ಮಾಧ್ಯಮವನ್ನು ಸಾರ್ವಜನಿಕ ಶೌಚಾಲಯ ಎಂದು ಭಾವಿಸಿರುವವರ ಕುಚೇಷ್ಟೆಯು ನಿಂದನಾಸ್ತುತಿಯನ್ನು ಹಗುರ ಮಾಡುವುದೇನು ಬಂತು; ಹಾಳು ಹಳ್ಳ ಹಿಡಿಸಿಬಿಟ್ಟಿದೆ.

2025ರ ಡಿಸೆಂಬರ್ ತಿಂಗಳಲ್ಲಿ ಹಿಂದಿಯಲ್ಲಿ 'ಧುರಂಧರ್' ಸಿನಿಮಾ ತೆರೆಕಂಡಿತು. ಕನ್ನಡದಲ್ಲಿ 'ಡೆವಿಲ್', '45' ಹಾಗೂ 'ಮಾರ್ಕ್' ಸಿನಿಮಾಗಳು ಬಿಡುಗಡೆಯಾದವು. ನಾಲ್ಕೂ ಸಿನಿಮಾಗಳಲ್ಲಿ ಅಭಿನಯಿಸಿದ್ದು ತಾರಾ ವರ್ಚಸ್ಸಿನ ನಟರು. 'ಧುರಂಧರ್', ರಣವೀರ್ ಸಿಂಗ್ ತಾರಾಬಲದ ಚಿತ್ರ. 'ಡೆವಿಲ್'ನಲ್ಲಿ ದರ್ಶನ್ ನಾಯಕತ್ವದ ಪ್ರಭಾವಳಿ. '45'ಕ್ಕೆ ಶಿವರಾಜ್ ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ. ಶೆಟ್ಟಿ ತ್ರಿತಾರಾ ಶಕ್ತಿ. ಸುದೀಪ್ ವರ್ಚಸ್ಸಿನ ಕಿಚ್ಚು 'ಮಾರ್ಕ್' ಚಿತ್ರಕ್ಕೆ ಇದೆ. ಈ ಸಿನಿಮಾಗಳು ಭಿನ್ನ ಕಾರಣಕ್ಕೆ ಸುದ್ದಿಯಲ್ಲಿದ್ದವು. ಅದು ಟೀಕಾಪ್ರಹಾರಕ್ಕೆ ಸಂಬಂಧಿಸಿದ ವಿದ್ಯಮಾನ.

ಸಿನಿಮಾ ವಿಮರ್ಶೆಯಲ್ಲಿ ಪಳಗಿದವರ ಸಾಲಿನಲ್ಲಿ ಇರುವ ಅನುಪಮಾ ಚೋಪ್ರಾ ಅವರು 'ದಿ ಹಾಲಿವುಡ್ ರಿಪೋರ್ಟರ್ ಇಂಡಿಯಾ' ಎಂಬ ಮಾಧ್ಯಮ ಸಂಸ್ಥೆಗಾಗಿ ಕೆಲಸ ಮಾಡುತ್ತಾರೆ. ಅವರು 'ಧುರಂಧರ್' ಸಿನಿಮಾದ ವಿಡಿಯೊ ವಿಮರ್ಶೆಯನ್ನು ಯೂಟ್ಯೂಬ್‌ನಲ್ಲಿ ಅಪ್ಲೋಡ್ ಮಾಡಿದ್ದರು. 'ಕುತರ್ಕದ ರಾಷ್ಟ್ರೀಯತೆಯ, ಪುರುಷಾಹಂಕಾರ ಮುಂದುಮಾಡಿದ, ಉನ್ಮಾದದ ಊಟೆಯ ಸಿನಿಮಾ ಇದು' ಎನ್ನುವ ಧಾಟಿಯಲ್ಲಿ ಅಭಿಪ್ರಾಯ ಮಂಡಿಸಿದ್ದರು. ನಟ ಪರೇಶ್ ರಾವಲ್ ಸೇರಿದಂತೆ ಅನೇಕರು ಸಾಮಾಜಿಕ ಮಾಧ್ಯಮದ ಮೂಲಕ ಅನುಪಮಾ ಮೇಲೆ ಮುಗಿಬಿದ್ದರು. ಧಮಕಿ ಹಾಕುವ ರೀತಿಯಲ್ಲಿ ಪೋಸ್ಟ್‌ಗಳನ್ನು ಹರಿಬಿಟ್ಟರು. ಕೊನೆಗೆ ವಿಧಿಯಿಲ್ಲದೆ ಅನುಪಮಾ ತಮ್ಮ ವಿಮರ್ಶೆಯನ್ನು ಯೂಟ್ಯೂಬ್‌ನಿಂದ ಅಳಿಸಿಹಾಕಿದರು.

'ಮಾರ್ಕ್' ಸಿನಿಮಾ ಪ್ರಚಾರದ ಸಮಾರಂಭದಲ್ಲಿ ಸುದೀಪ್ ಅವರು ತಾವು ಯುದ್ಧಕ್ಕೂ ಸಿದ್ಧ ಎಂಬ ಸಂದೇಶವೊಂದನ್ನು ವಾಚ್ಯವಾಗಿ ಹೇಳಿದರು. ದರ್ಶನ್ ಪತ್ನಿ ವಿಜಯಲಕ್ಷ್ಮಿ ಹಾಗೂ ಅವರ ಸುತ್ತಲಿನ ಅಭಿಮಾನಿಗಳು ಅದನ್ನು ವೈಯಕ್ತಿಕವಾಗಿ ಪರಿಗಣಿಸಿ, ಆವೇಶದಿಂದ ಪ್ರತಿಕ್ರಿಯಿಸಿದರು. ಆಮೇಲೆ, ತಾವು ಪೈರಸಿ ಮಾಡುವವರ ವಿಷಯದಲ್ಲಿ ಯುದ್ಧ ಸಾರಿದ್ದು ಎಂಬುದಾಗಿ ಸುದೀಪ್ ಸ್ಪಷ್ಟೀಕರಣ ಕೊಟ್ಟರು. ಅದಾಗಿ ಕೆಲವೇ ದಿನಗಳ ನಂತರ '45' ಚಿತ್ರತಂಡವು ಸಿನಿಮಾ ಕುರಿತು ಆಕ್ಷೇಪಾರ್ಹ ಪೋಸ್ಟರ್ ಹಾಕುವವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂಬ ಒಕ್ಕಣೆಯನ್ನು ಸಾಮಾಜಿಕ ಮಾಧ್ಯಮದಲ್ಲೇ ಹರಿಬಿಟ್ಟಿತು.

'ಧುರಂಧರ್' ಚಿತ್ರವು ಗಲ್ಲಾಪೆಟ್ಟಿಗೆಯಲ್ಲಿ ಯಶಸ್ವಿ ಆಗಿರುವುದರಿಂದ, ಸಿನಿಮಾ ಮೆಚ್ಚಿಕೊಂಡ ವೀಕ್ಷಕ ಸಮುದಾಯದಿಂದ ಟೀಕಾಕಾರರಿಗೆ ದೊಡ್ಡಮಟ್ಟದ ಬೆದರಿಕೆ ಬಂದುದು ಸ್ಪಷ್ಟ. ಕನ್ನಡ ಚಿತ್ರಗಳು ಯಶಸ್ಸನ್ನು ಪಡೆದೇ ತೀರುವ ಹತಾಶೆಯ ಮಾರ್ಗಗಳಂತೆ ಟೀಕೆ– ಪ್ರತಿ ಟೀಕೆಗಳ ಈ ವರಸೆ ವ್ಯಕ್ತಗೊಳ್ಳುತ್ತಿದೆ.

ಜನಪ್ರಿಯ ಚಿತ್ರವೊಂದು ಗೆಲ್ಲುವುದಕ್ಕೂ, ಅದರ ಗುಣಮಟ್ಟಕ್ಕೂ ಯಾವಾಗಲೂ ಸಂಬಂಧ ಇರಬೇಕು ಎಂದೇನೂ ಇಲ್ಲ. ಆಯಾ ಕಾಲಮಾನದ ಪ್ರೇಕ್ಷಕರ ಮನೋಭೂಮಿಕೆ ಹಾಗೂ ಮಾರುಕಟ್ಟೆ ತಂತ್ರಗಳನ್ನು ಆಧರಿಸಿ ಈ ಸ್ವೀಕೃತಿಯ ವಿವೇಕವೂ ಬದಲಾಗುತ್ತಾ ಇರುತ್ತದೆ. ಗಿರೀಶ ಕಾಸರವಳ್ಳಿ ಅವರ ಸಿನಿಮಾ ತೆರೆಕಂಡಾಗ, ಪ್ರಮುಖ ಚಿತ್ರಮಂದಿರದ ಎರಡು ಪ್ರದರ್ಶನಗಳನ್ನು ಅದಕ್ಕಾಗಿ ಬಿಟ್ಟುಕೊಡುವ ಉದಾರ ಮನಸ್ಸು ರಾಜ್‌ಕುಮಾರ್ ಅವರದ್ದಾಗಿತ್ತು. ಈಗ ಸಾಮಾಜಿಕ ಮಾಧ್ಯಮದ ಬೊಬ್ಬೆಗಳ ಮೂಲಕ ಒಬ್ಬರು ಇನ್ನೊಬ್ಬರನ್ನು ಹಣಿಯುವ, ಮುಗಿಸಿಹಾಕುವ ವ್ಯವಸ್ಥಿತ ಜಾಲವೊಂದು ಹೆಡೆ ಎತ್ತಿದೆ. ಪೈರಸಿ ಕೂಡ ಅದರ ಭಾಗವಾಗಿಯೇ ನಿರ್ಲಜ್ಜೆಯಿಂದ ನಡೆಯುತ್ತಿರುವುದು ಸ್ಪಷ್ಟ. ಆದರೆ, ಇದಕ್ಕೆ ಪ್ರತಿಕ್ರಿಯಾತ್ಮಕವಾಗಿ ಎಲ್ಲ ರೀತಿಯ ವಿಮರ್ಶೆ, ವಿಶ್ಲೇಷಣೆಗಳನ್ನು ತೆಗೆದುಹಾಕುವುದು, ರೇಟಿಂಗ್ ಕೊಡಕೂಡದು ಎಂದು ನ್ಯಾಯಾಲಯದಿಂದ ಆದೇಶ ತರುವ ಒಂದು ಟ್ರೆಂಡ್ ಶುರುವಾಗಿದೆ. ಇದು ಎಷ್ಟು ಸರಿ ಎಂಬ ಮುಖ್ಯ ಪ್ರಶ್ನೆಯೊಂದು ಈಗ ಉದ್ಭವಿಸಿದೆ.

'ಧುರಂಧರ್' ಸಿನಿಮಾ ಬಗ್ಗೆ ಟೀಕೆ ವ್ಯಕ್ತಪಡಿಸಿದ ವಿಮರ್ಶಕರನ್ನು ಬೆದರಿಸಿ, ಮುಕ್ತ ಅಭಿವ್ಯಕ್ತಿಗೆ ಕೊಡಲಿ ಪೆಟ್ಟು ಕೊಡುತ್ತಿರುವುದು ಸರಿಯಲ್ಲ ಎಂಬ ಅರ್ಥದಲ್ಲಿ 'ಫಿಲ್ಮ್ ಕ್ರಿಟಿಕ್ಸ್ ಗಿಲ್ಡ್' ಪ್ರತಿಕ್ರಿಯೆಯನ್ನು ಬಿಡುಗಡೆ ಮಾಡಿತು. ಆದರೆ, ಕೂಗುಮಾರಿಗಳ ಹೇಷಾರವದ ಎದುರು ಅದು ಅರಣ್ಯ ರೋದನವಾಯಿತು. ಕನ್ನಡ ಸಿನಿಮಾಗಳಿಗೆ ಸಂಬಂಧಿಸಿದಂತೆಯೂ ಭಿನ್ನ ಅಭಿಪ್ರಾಯಗಳಿಗೆ ಅವಕಾಶವನ್ನೇ ನೀಡದಿರುವ ಪ್ರಕ್ರಿಯೆ ಶುರುವಾಗಿದೆ; ಅದಕ್ಕೆ ಗಮನಾರ್ಹ ವಿರೋಧವೇನೂ ವ್ಯಕ್ತವಾದಂತಿಲ್ಲ.

ನಮ್ಮ ಸಾಂಸ್ಕೃತಿಕ ಬಹುತ್ವದ ನೂಲುಗಳ ವಸ್ತ್ರ ಯಾವತ್ತೂ ಗಟ್ಟಿ, ಆಕರ್ಷಕ. ನಿಂದನೆ, ವಿಮರ್ಶೆಯು ಸುಧಾರಣೆಯ ಮಾರ್ಗ ಎನ್ನುವ ಸಾಮಾನ್ಯ ಜ್ಞಾನವೂ ಮುಕ್ಕಾಗುತ್ತಿರುವುದು ಸೃಜನಶೀಲ ಅಭಿವ್ಯಕ್ತಿಯ ದಮನದ ಸೂಚನೆ. ಇದು ಹೀಗೆಯೇ ಮುಂದುವರಿದರೆ ಹಣ ಹಂಚಿ ಪಡೆಯುವ 'ಉಘೇ ಉಘೇ' ಎಂಬ ರಿಪೋರ್ಟುಗಳೇ ಮುಂದೆ ವಿಮರ್ಶೆಯಾಗುವ ಅಪಾಯದ ದಿನಗಳು ದೂರವಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಲಿತ ಯುವಕನನ್ನು ವರಿಸಿದ ಕಾರಣಕ್ಕೆ ಮಾನ್ಯಾ ಪಾಟೀಲ ಎನ್ನುವ ಲಿಂಗಾಯತ ಯುವತಿ ಮರ್ಯಾದೆಗೇಡು ಹತ್ಯೆಗೆ ಗುರಿಯಾಗಿರುವುದು ನಾಗರಿಕ ಸಮಾಜವನ್ನು ಬೆಚ್ಚಿಬೀಳಿಸಿದೆ. ಮನೆತನ/ಸಮುದಾಯದ ಮರ್ಯಾದೆ ಕಾಪಾಡುವ ಹೆಸರಿನಲ್ಲಿ ನಡೆಯುತ್ತಲೇ ಇರುವ ಹೆಣ್ಣುಮಕ್ಕಳ ಹತ್ಯೆಗಳು ನಮ್ಮ ಸಾಮಾಜಿಕ ಹಾಗೂ ಕಾನೂನು ವ್ಯವಸ್ಥೆಯ ಲೋಪಗಳಿಗೆ ಕನ್ನಡಿ ಹಿಡಿಯುತ್ತಿವೆ. ಮನುಷ್ಯರನ್ನು ಮನುಷ್ಯರಂತೆ ಕಾಣದಿರುವುದು, ಗಂಡು ಹೆಣ್ಣಿನ ಪ್ರೇಮ ಮತ್ತು ವಿವಾಹವನ್ನು ಸಹಜ ಎಂದು ಒಪ್ಪದಿರುವುದು, ಸಮಾಜವು ರೋಗಗ್ರಸ್ತವಾಗಿರುವುದರ ಲಕ್ಷಣಗಳಾಗಿವೆ. ಈ ಪರಿಸ್ಥಿತಿ ಬದಲಾಗಬೇಕು, ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ಮದುವೆಯಾದವರ ಹಕ್ಕುಗಳು–ಪ್ರಾಣ ರಕ್ಷಣೆಯಾಗಬೇಕು. ಈ ದಿಸೆಯಲ್ಲಿ ಜನರ ಚಿಂತನೆ, ಭಾವನೆ, ವರ್ತನೆಗಳಲ್ಲಿ ಮತ್ತು ಕಾನೂನಿನಲ್ಲಿ ಆಗಬೇಕಿರುವ ಪರಿವರ್ತನೆ ಏನು ಎನ್ನುವುದರ ಬಗ್ಗೆ ಎರಡು ಬರಹಗಳು ಇಲ್ಲಿವೆ

ಇದು ಎಂಥಾ ಜೀವದಾ ಬ್ಯಾಟಿ ಹಾಡೇs ಹಗಲsss

● ವಿನಯಾ ಒಕ್ಕುಂದ

ಮಾತು ಸೋಲುವ, ಪ್ರಜ್ಞೆ ದಿಕ್ಕೆಡುವ ಘಟನೆ ಇನಾಂ ವೀರಾಪುರದಲ್ಲಿ ನಡೆದಿದೆ. ದಲಿತ ಯುವಕನನ್ನು ಪ್ರೀತಿಸಿ ಮದುವೆಯಾದ ಅಪರಾಧಕ್ಕಾಗಿ ಮಾನ್ಯಾ ಎಂಬ ಯುವತಿಯನ್ನು ತಂದೆಯೇ ಕೊಚ್ಚಿ ಹಾಕಿದ್ದಾನೆ; ಮಗಳು ಗರ್ಭಿಣಿ ಎಂಬ ಕನಿಷ್ಠ ಮಮತೆಯೂ ಇಲ್ಲದೆ. ಇದೊಂದು ವಿರಳ ಘಟನೆಯಲ್ಲ. ದಶಕದ ಹಿಂದೆ ಬೆಳಗಾವಿಯಲ್ಲಿ ಪ್ರೇಮವಿವಾಹ ಮಾಡಿಕೊಂಡು ಬದುಕು ನಡೆಸುತ್ತಿದ್ದ ಎಳೆಯರನ್ನು ಹುಡುಗಿಯ ತಂದೆ ಮತ್ತು ಸಂಬಂಧಿಗಳು ಮನೆಗೆ ನುಗ್ಗಿ ಕೊಚ್ಚಿಹಾಕಿದ್ದರು. ತೊಟ್ಟಿಲಲ್ಲಿ ಮಲಗಿದ್ದ ಎಳೆಯ ಕೂಸು ‘ವಿನಂತಿ’ ಅನಾಥವಾದಳು. ಅದು ಆಗಸ್ಟ್ 14ರ ರಾತ್ರಿ. ಇಬ್ಬರೂ ಶ್ರಮಮೂಲದ ಬಡ ಜಾತಿಗಳಿಗೆ ಸಂಬಂಧಪಟ್ಟವರಾಗಿದ್ದರು. ಬಹುಶಃ ಇದು ನಮ್ಮ ರಾಜ್ಯದ ಮೊದಲ ಮರ್ಯಾದೆಗೇಡು ಹತ್ಯೆಯಾಗಿತ್ತು. ಈ ಕ್ರೌರ್ಯ ಕರ್ನಾಟಕಕ್ಕೂ ಕಾಲಿರಿಸಿತೇ ಎಂದು ದಿಗಿಲಾದ ದಿನಗಳವು. ತೀರ ಇತ್ತೀಚೆಗೆ ಗದಗಿನ ಸಮೀಪ ಅಂತರ್‌ಧರ್ಮೀಯ ಮದುವೆಯಾಗಿ, ದಶಕದ ನಂತರ ಮಕ್ಕಳೊಂದಿಗರಾಗಿ ಊರಿಗೆ ಬಂದವರನ್ನು ಹುಡುಗಿಯ ಸಹೋದರ ಕೊಚ್ಚಿಹಾಕಿದ್ದ. ಪ್ರೀತಿಸುವ ಅಧಿಕಾರವನ್ನು ಆಯ್ಕೆಯ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತ, ಸಿನಿಮಾಗಳ ಎಳಸು ಪ್ರೀತಿಯ ಪ್ರದರ್ಶನಕ್ಕೆ ಶಿಳ್ಳೆಹಾಕುವ ಮನೋಭ್ರಾಂತಿಗೆ ಸಮಾಜ ಈಗಾಗಲೇ ತಲುಪಿದೆ. ಪ್ರೀತಿಸುವುದು ಅಕ್ರಮ ಎಂದು ಬಿಂಬಿತವಾಗುತ್ತಿದೆ. 2018ರ ಶಕ್ತಿವಾಹಿನಿ ಮತ್ತು ಭಾರತ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಸಂವಿಧಾನದ ವಿಧಿ 21, 19(1) (ಎ)ಗಳನ್ನು ಉಲ್ಲೇಖಿಸಿ ಪ್ರತಿಯೊಬ್ಬರಿಗೂ ಸಂಗಾತಿಯ ಆಯ್ಕೆಯ ಹಕ್ಕಿದೆ ಎಂದು ಹೇಳಿದೆ. ಆದರೆ, ಇಂದಿಗೂ ಪ್ರೀತಿಸುವುದನ್ನು ಹೆತ್ತವರಿಗೆ, ಸಮಾಜಕ್ಕೆ ಬಗೆವ ದ್ರೋಹ ಎನ್ನಲಾಗುತ್ತಿದೆ.

ಈ ದೌರ್ಜನ್ಯದ ಮೂಲಗಳು ಸ್ಥಳಪುರಾಣಗಳ ಕಥನಗಳಿಗೆ ತಂದು ನಿಲ್ಲಿಸುತ್ತವೆ. ಗ್ರಾಮದೇವತೆಗಳ ಜಾತ್ರೆಗಳ ಸಾಂಪ್ರದಾಯಿಕತೆ ಮತ್ತು ಕಥೆಗಳನ್ನು ಗಮನಿಸಿದರೆ, ಅದು ಆದಿಮ ವಿಲೋಮ ವಿವಾಹ ಮತ್ತು ಅದರಿಂದ ಹೊರಬಂದ/ಹೊರತಂದ ಹೆಣ್ಣುಗಳ ಅನುಕ್ತ ದಾಖಲೆಯಂತಿದೆ. ಹೆಣ್ಣಿನ ಸ್ವಾತಂತ್ರ್ಯವನ್ನು ನಿರ್ಬಂಧಿಸುವುದು ರೂಢಿ ಅಷ್ಟೇ ಅಲ್ಲ, ಧರ್ಮಸಮ್ಮತ. ಪಿತೃವಾಕ್ಯ ಪರಿಪಾಲನೆಗಾಗಿ ತಾಯಿಯ ತಲೆ ಕತ್ತರಿಸಿದ ಪರಶುರಾಮನ ವ್ಯಕ್ತಿತ್ವ ಆಕ್ಷೇಪಾರ್ಹವಲ್ಲ. ಈ ಇಕ್ಕಟ್ಟಿನಿಂದ ಬಿಡುಗಡೆಯ ಎಳೆಯೊಂದು ದಕ್ಕಿದ್ದು 12ನೇ ಶತಮಾನದ ಬಸವಾದಿ ಪ್ರಮಥರ ಸಮಸಮಾಜದ ಕನಸಿನಲ್ಲಿ. ಅದೊಂದು ಪ್ರಾಯೋಗಿಕ ಭೂಮಿಕೆಯೂ ಆಗಿತ್ತು. ಹಾಗಾಗಿಯೇ ಕನ್ನಡದ ಚರಿತ್ರೆಯಲ್ಲದು ಹೆಣ್ಣಿನ ಆತ್ಮಗೌರವದ ಅಧ್ಯಾಯ. ‘ಹಂದೆಯಲ್ಲ ನಾನು, ಹರುಷದ ಗರ್ವವುಳ್ಳ ಹೆಣ್ಣು’ ಎಂದು ಹೇಳಿಕೊಳ್ಳಲು ನೀಲಮ್ಮನಿಗೆ ಸಾಧ್ಯವಾಗುತ್ತದೆ. ಮೋಹಿಸುವ ಅಧಿಕಾರವೇ ಇಲ್ಲದ ಹೆಣ್ಣಿನ ಸ್ಥಿತಿ ಮತ್ತು ಮೋಹದ ವಸ್ತುವಾಗಿ ಗಂಡಾಳಿಕೆಯಲ್ಲಿ ನಲುಗುವ ಅವಳ ಪಡಿಪಾಟಲನ್ನು ಒಟ್ಟಿಗೆ ಕಾಣುವುದು ಗೊಗ್ಗವ್ವೆಗೆ ಸಾಧ್ಯವಾಗುತ್ತದೆ. ಆದರೆ, ಆ ಪ್ರಶ್ನೆಗಳು ಇಂದಿಗೂ ನಿರುತ್ತರವಾಗೇ ಇವೆ. ಅಂದು ಶರಣ ಚಳವಳಿಯನ್ನು ಧ್ವಂಸಗೊಳಿಸಲು ಕಾರಣವಾದ ಚಿಂತನೆಗಳೇ ಇಂದಿಗೂ ವಿಜೃಂಭಿಸುತ್ತಿವೆ. ಸಮಗಾರ ಹರಳಯ್ಯನ ಮಗ, ಬ್ರಾಹ್ಮಣ ಮದುವರಸನ ಮಗಳು ವಿವಾಹವಾಗುವುದು ಯಾಕೆ ತಪ್ಪು? ಅವರು ಲಿಂಗಾಯತರು ಎಂಬ ಸತ್ಯವನ್ನು ಸಾಯಿಸಲಾಯಿತು. ಹರಳಯ್ಯ-ಮದುವರಸರನ್ನು ಎಳೆಹೂಟೆ ಕಟ್ಟಿ ಎಳೆದ ನೆತ್ತರ ನೋವಿನ ಗುರುತುಗೆರೆಗಳು ಇಂದಿಗೂ ನಮ್ಮ ದಾರಿಗಳಲ್ಲಿವೆ.

ಬಂಡವಾಳವಾದ ಮತ್ತು ಕೋಮುವಾದಗಳು ಸಾಂವಿಧಾನಿಕ ತತ್ವಗಳನ್ನು ಹಲ್ಲೆಗೊಳಿಸುತ್ತಿರುವ ಕಾಲವಿದು. ಸಂಕೀರ್ಣ ಜಾತಿ ಸಮಾಜವಾಗಿರುವ ಭಾರತದಲ್ಲಿ ಅದನ್ನು ಅನುಷ್ಠಾನಗೊಳಿಸುವ ಸಲಕರಣೆಯಾಗಿ ಹೆಣ್ಣನ್ನು ಬಳಸಲಾಗುತ್ತಿದೆ. ಜಾತಿ ಧರ್ಮಗಳು ಕೇಂದ್ರೀಕೃತಗೊಳ್ಳುತ್ತಿದ್ದಂತೆಯೇ ಅವು ಹೆಣ್ಣನ್ನು ಅಧೀನಗೊಳಿಸಿಕೊಳ್ಳಲು ಸಕ್ರಿಯವಾಗುತ್ತವೆ. ಅವಳ ಸ್ವಾಯತ್ತೆಯನ್ನು ಅಪರಾಧವೆನ್ನುತ್ತವೆ. ನಮ್ಮ ಸಂವಿಧಾನದ 25ನೇ ವಿಧಿಯು ಜಾತಿ-ಮತಗಳನ್ನು ವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿ ನೋಡಬೇಕು ಎಂದಿದೆ. ಜಾತಿ-ಮತಗಳ ಸಾಂಗತ್ಯಗಳ ಆಯ್ಕೆಯ ಹಕ್ಕನ್ನು ಅಪರಾಧವೆಂದು ಪರಿಗಣಿಸುವ ಆಯುಧಗಳು ಹೆಣ್ಣನ್ನು ಸುಲಭ ಗುರಿಗಳನ್ನಾಗಿಸಿಕೊಳ್ಳುತ್ತಿವೆ. ಹಾಗಾಗಿ, ಮರ್ಯಾದೆಗೇಡು ಹತ್ಯೆಯ ಪ್ರಕರಣಗಳು, ಜಾತ್ಯಂಧತೆಯ ಮತಾಂಧತೆಯ ಪ್ರಕರಣಗಳೂ ಆಗಿವೆ. ಸುಶಿಕ್ಷಿತ ಸಮುದಾಯಗಳೂ ಜಾತಿ ಮತಗಳ ಕೀಳುನಿಷ್ಠೆಗೆ ಒಳಗಾಗುತ್ತಿರುವ ಸಂಕೇತಗಳಾಗಿವೆ.

1987ರ ಆಗಸ್ಟ್‌ನಲ್ಲಿ ಬೆಳಗಾವಿಯ ಬೆಂಡಿಗೇರಿಯಲ್ಲಿ ದಲಿತರಿಗೆ ಮಲ ತಿನ್ನಿಸಿದ ಭೀಕರ ಘಟನೆ ರಾಜ್ಯದಾದ್ಯಂತ ದಲಿತ ಚಳವಳಿ ಜಾಗೃತಗೊಳ್ಳಲು ಕಾರಣವಾಯಿತು. ದಲಿತರ ಆತ್ಮಗೌರವದ ಜೀವ-ಸಾವಿನ ಪ್ರಶ್ನೆಯಾಗಿ ಬೆಳೆಯಿತು. ‘ನಾವಿನ್ನು ನೆಲಗುಡಿಸುವ ಬದಲು ಮೇಲ್ಜಾತಿಯವರ ಕೊಳಕಿನ ಮನಸ್ಸು ಗುಡಿಸಬೇಕಿದೆ’ ಎಂದಿದ್ದರಂತೆ ದೇವನೂರ ಮಹಾದೇವ. ‘ಇಂತಹ ಹೇಯ ಕೃತ್ಯ ಮಾಡಿದವರಿಗೆ ಬಸವಣ್ಣನ ಹೆಸರೆತ್ತುವ ಹಕ್ಕೂ ಇಲ್ಲ’ ಎಂದಿದ್ದರಂತೆ ಚಿದಾನಂದಮೂರ್ತಿಯವರು. ಈಗಲೂ, ನಾಲ್ಕು ದಶಕಗಳ ನಂತರವೂ ಸ್ಥಿತಿ ಹಾಗೇ ಇದೆ. ದಲಿತ ಮಗು ದೇವಾಲಯ ಪ್ರವೇಶಿಸಿದರೆ, ಬಾಯಾರಿದ ಹೆಂಗಸು ಸಾರ್ವಜನಿಕ ನಳ ಮುಟ್ಟಿದರೆ ಮೈಲಿಗೆಯಾಯಿತೆನ್ನುವವರಿಗೂ ಸಮಾನತೆಯ ಹರಿಕಾರ ಬಸವಣ್ಣನಿಗೂ ಏನು ಸಂಬಂಧ? ಅಡುಗೆಯವಳು ದಲಿತಳೆಂದು ಉಣ್ಣದೆ ಹೊರನಿಲ್ಲುವ ಅಂಗನವಾಡಿ ಮಕ್ಕಳ ಚಿತ್ರ ಕಣ್ಣಗಾಯದಂತೆ ಉಳಿದಿದೆ. ಅಂಬೇಡ್ಕರ್, ‘ಜಾತಿಯ ಏಕೈಕ ಲಕ್ಷಣ ವಿವಾಹ ವಿಧಿ. ಅಂತರ್ಜಾತಿ ಸಹಭೋಜನದಿಂದ ಜಾತಿ ನಾಶವಾಗುವುದಿಲ್ಲ. ಅಂತರ್ಜಾತಿ ವಿವಾಹಗಳು ಸಹಜವಾಗಿ ನಡೆಯುವ ಸಮಾಜ ಮಾತ್ರ ಜಾತಿಪ್ರಜ್ಞೆಯಿಂದ ಕಳಚಿಕೊಳ್ಳುತ್ತಿದೆ. ಆದರೆ ಶ್ರೇಷ್ಠತೆಯ ವ್ಯಸನಕ್ಕೊಳಗಾಗಿರುವ ಮೇಲ್ಜಾತಿಗಳು, ಅನುಕರಣೆಯ ಅಂಟುಜಾಡ್ಯಕ್ಕೊಳಗಾಗುತ್ತಿರುವ ನಂತರದ ಜಾತಿಗಳು ಈ ಮನೋವೃತ್ತಿಯ ಭ್ರಮೆಯಿಂದ ಕಳಚಿಕೊಳ್ಳಬೇಕೆಂದರೆ, ಜಾತಿಯ ಕುರಿತು ಇರುವ ಪಾವಿತ್ರ್ಯದ ಭಾವನೆಯನ್ನು ಭಂಗಗೊಳಿಸಬೇಕು’ ಎಂದಿದ್ದರು. ಈ ಪ್ರಕ್ರಿಯೆ ಇನ್ನಾದರೂ ನಡೆಯಬೇಕಿದೆ.

ಸಂವೇದನಾಶೀಲ ಕಾನೂನಿನಷ್ಟೇ ಜರೂರಿರುವುದು, ಜನಸಮುದಾಯವನ್ನು ಸಂವೇದನಾಶೀಲಗೊಳಿಸುವ ಕಾರ್ಯವಿಧಾನಗಳನ್ನು ರೂಪಿಸುವುದರಲ್ಲಿ. ಪ್ರತಿಯೊಂದು ಮತಧರ್ಮದ ಹುಟ್ಟು, ಬೆಳವಣಿಗೆ, ಕಾರಣ, ತಾತ್ವಿಕತೆಗಳು ಪ್ರಾಮಾಣಿಕವಾಗಿ ವೈಭವೀಕರಣವಿಲ್ಲದೆ ಪಠ್ಯಗಳಲ್ಲಿರಬೇಕು. ಶ್ರೇಷ್ಠತೆಯ ವ್ಯಸನ ಕಳೆಯಲು, ಸಾಂವಿಧಾನಿಕ ಮೌಲ್ಯಗಳನ್ನು ಅನುಷ್ಠಾನಗೊಳಿಸುವ ಕಾರ್ಯಯೋಜನೆಗಳು ರೂಪುಗೊಳ್ಳಬೇಕು. ಶಾಲೆ, ಕಾಲೇಜು, ಕಚೇರಿ, ಸಂಘ-ಸಂಸ್ಥೆ, ಕಂಪನಿಗಳು ಸಾಂವಿಧಾನಿಕತೆಯನ್ನು ದಿನಚರಿಯಾಗಿಸಿಕೊಳ್ಳಬೇಕು, ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿದು ನಡೆಯಬೇಕು. ಸರ್ಕಾರ, ಅಂತರ್ಜಾತಿ ಮದುವೆಗಳಿಗೆ ಪ್ರೋತ್ಸಾಹಧನ ಕೊಡುತ್ತಿದೆ. ಜೊತೆಗೆ ಅಂತರ್ಜಾತಿ ವಿವಾಹಿತರಿಗೆ ಕಾನೂನಿನ ರಕ್ಷಣೆ, ನೈತಿಕ ಬೆಂಬಲವನ್ನು ಒದಗಿಸಬೇಕು. ‘ಮನುಷ್ಯರನ್ನು ಕೊಂದು ಉಳಿಸಿಕೊಳ್ಳಬೇಕಾದ ಜಾತಿ-ಧರ್ಮಗಳಿವೆಯೇ’ ಎಂಬ ಪ್ರಶ್ನೆಯನ್ನು ಪ್ರತಿ ಮಗುವಿಗೂ ಮನನಗೊಳಿಸಬೇಕು. ಹೆಣ್ಣುಬಾಳಿಗೆ ಸಂಬಂಧಿಸಿದ ದೌರ್ಜನ್ಯಗಳು ಜಾತಿ-ಧರ್ಮ-ವರ್ಗ ಪ್ರಜ್ಞೆಗಳೊಂದಿಗೆ ಕೂಡಿ ಬೆಳೆದ ರೋಗಾಣುಗಳು- ಎನ್ನುವುದನ್ನು ಮರೆಯದಿರೋಣ.

ಲೇಖಕಿ: ಕನ್ನಡ ಪ್ರಾಧ್ಯಾಪಕಿ

ಬಚಾವಾಗುವ ಕೊಲೆಗಾರರು

2025ರಲ್ಲಿ ಕರ್ನಾಟಕದಲ್ಲಿ ವರದಿಯಾದ ನಾಲ್ಕು ಪ್ರಕರಣಗಳು, ಮೇಲ್ನೋಟಕ್ಕೆ ಸ್ಥಳೀಯ ಕಾರಣಗಳನ್ನು ಮುಂದಿಡುತ್ತವಾದರೂ, ಆಳದಲ್ಲಿವು ಜಾತಿ-ಧರ್ಮಗಳ ಪ್ರತಿಷ್ಠೆಗಾಗಿ ಹೆಣ್ಣನ್ನು ಬಲಿಯಾಗಿಸುತ್ತ ಬಂದ ಹಿಂಸೆಯ ಕೊಂಡಿಗಳಾಗಿವೆ. ಹಿರೇಕ್ಯಾತನಳ್ಳಿಯಲ್ಲಿ ಸೋದರಿಯನ್ನು ಕೆರೆಗೆ ದೂಡಿ ಕೊಲೆ ಮಾಡಿದ ಕಾರಣ, ಅವಳು ಬೇರೆ ಧರ್ಮದ ಯುವಕನನ್ನು ಪ್ರೀತಿಸುತ್ತಿದ್ದಾಳೆನ್ನುವುದು. ಹಾರೋಹಳ್ಳಿಯಲ್ಲಿ ಮಗಳು ಆಕಸ್ಮಿಕವಾಗಿ ಕೆರೆಯಲ್ಲಿ ಮುಳುಗಿದಳೆಂದು ಬಿಂಬಿಸಲು ಪ್ರಯತ್ನಿಸಿದ ತಂದೆಯ ಆಕ್ಷೇಪವಿರುವುದು ಮತ್ತು ಕಲಬುರ್ಗಿಯ ಮೇಳಕುಂದಾದಲ್ಲಿ ಮಗಳ ಕತ್ತುಹಿಸುಕಿ ಕೊಲೆ ಮಾಡಿದ್ದು ಅವಳು ಬೇರೆ ಜಾತಿ ಹುಡುಗನನ್ನು ಪ್ರೀತಿಸುತ್ತಾಳೆನ್ನುವುದೇ. ಸಿಂದಗಿನ ಬೆನಕೊಟಗಿಯಲ್ಲಿ ಮದುವೆಯಾದ ಎರಡು ವರ್ಷಗಳ ನಂತರ, ಮಗುವಿನೊಂದಿಗೆ ಗಂಡನ ಮನೆಯವರಿಂದ ಹತ್ಯೆಗೊಳಗಾದ ಕಾರಣ ಅವಳು ದಲಿತಳು, ಅವರು ಪಂಚಮಸಾಲಿಗಳೂ ಆಗಿರುವುದು.

ಈಗ ಇನಾಂ ವೀರಾಪುರದಲ್ಲಿಯೂ ಅದೇ. ಈ ಎಲ್ಲವೂ ಹೆಣ್ಣಿನ ನಿರ್ಣಯಾಧಿಕಾರವನ್ನು ಮೊಟಕುಗೊಳಿಸುವ, ಭೀತಗೊಳಿಸುವ ಸಾಮಾಜಿಕ ಒಪ್ಪಿತವನ್ನು ಹರಡುವ ಹುನ್ನಾರಗಳು. ಸಾಮಾನ್ಯವಾಗಿ ಮರ್ಯಾದೆಗೇಡು ಹತ್ಯೆಗಳು ವರದಿಯಾಗುವುದೇ ಅಪರೂಪ. ಇಂದಿಗೂ ಆಸ್ಪತ್ರೆಯ ಕಡತಗಳಲ್ಲಿ ಅನಾರೋಗ್ಯದಿಂದಲೋ ಆಕಸ್ಮಿಕವಾಗಿಯೋ ಸತ್ತು ಹೋದ, ಆತ್ಮಹತ್ಯೆ ಮಾಡಿಕೊಂಡ ಯುವತಿಯರಿದ್ದಾರೆ. ಕೊಲೆಗಾರರ ಕೈಗೆ ರಕ್ತ ಅಂಟದ ಕೊಲೆಗಳು ಅನೂಚಾನವಾಗಿ ನಡೆದೇ ಇದೆ. ಕೊಲೆಗಾರರು ಕಣ್ಣೊರೆಸಿಕೊಂಡು ನಿರಪರಾಧಿಗಳಾಗುತ್ತಾರೆ. ಶಾಸ್ತ್ರೋಕ್ತವಾಗಿ ಸಂಸ್ಕಾರ ಮಾಡುತ್ತಾರೆ.

ಪ್ರಮುಖ ಪ್ರಕರಣಗಳು

- ಕಲಬುರಗಿ ತಾಲ್ಲೂಕಿನ ಮೇಳಕುಂದಾ(ಬಿ) ಗ್ರಾಮದಲ್ಲಿ 2025ರ ಆ. 27ರ ತಡರಾತ್ರಿ ಕವಿತಾ (18) ಎನ್ನುವ ಯುವತಿಯ ಮರ್ಯಾದೆಗೇಡು ಹತ್ಯೆ ನಡೆದಿತ್ತು
- ಪ್ರಬಲ ಜಾತಿಯ ಬಾಲಕಿಯನ್ನು ಪ್ರೀತಿಸಿದ್ದಕ್ಕೆ ಪರಿಶಿಷ್ಟ ಜಾತಿಗೆ ಸೇರಿದ ಯುವಕನ ಮೇಲೆ ಹಲ್ಲೆ ನಡೆಸಿ, ಕೊಲೆಗೈದ ಘಟನೆ 2025ರ ಜನವರಿ 7ರಂದು ಕಲಬುರಗಿ ಜಿಲ್ಲೆಯ ಕಮಲನಗರ ತಾಲ್ಲೂಕಿನ ಠಾಣಾಕುಶನೂರ ಠಾಣೆ ವ್ಯಾಪ್ತಿಯಲ್ಲಿ ನಡೆದಿತ್ತು
- ಮಾದಿಗ ಯುವಕನನ್ನು ಪ್ರೀತಿಸಿದ ಬಾಲಕಿ, ಮನೆಯಲ್ಲಿ ಮದುವೆ ವಿಷಯ ಪ್ರಸ್ತಾಪಿಸಿದ್ದಕ್ಕೆ ತಂದೆಯೇ ಮಗಳನ್ನು ಕೊಂದ ಘಟನೆ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ವಡಗಾಂವ್ ಸಮೀಪದ ಬರಗೇನ್ ತಾಂಡಾದಲ್ಲಿ 2025ರ ಫೆ. 7ರಂದು ನಡೆದಿತ್ತು



ಮರ್ಯಾದೆಗಾಗಿ ಜೋಡಿ ಕೊಲೆ

ಪ್ರೇಮವಿವಾಹದಿಂದ ಮನೆತನದ ಮರ್ಯಾದೆ ಹಾಳಾಯಿತು ಎಂದು ಭಾವಿಸಿ, ಆ ಮದುವೆಗೆ ಸಂಬಂಧವೇ ಇಲ್ಲದ ಇಬ್ಬರನ್ನು ಹತ್ಯೆ ಮಾಡಿರುವ ಘಟನೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಡಿ.12ರಂದು ನಡೆದಿತ್ತು. ಜೈಭೀಮ್ ನಗರದ ಪ್ರೇಮಿಗಳಾಗಿದ್ದ ನಂದೀಶ್ ಹಾಗೂ ಸ್ಫೂರ್ತಿ ಡಿ.9ರಂದು ಮನೆಬಿಟ್ಟು ಹೋಗಿ ಮದುವೆಯಾಗಿದ್ದರು.
ಸ್ಫೂರ್ತಿ ಮನೆಬಿಟ್ಟು ಹೋಗಲು ನಂದೀಶನ ಸ್ನೇಹಿತ ಕಿರಣ್ ಸಹಾಯ ಮಾಡಿದ್ದಾನೆ ಎಂದು ಭಾವಿಸಿದ ಸ್ಫೂರ್ತಿಯ ಅಣ್ಣ ಭರತ್, ಕಿರಣ್ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದ್ದ. ಜಗಳ ಬಿಡಿಸಲು ಹೋದ ಮಂಜುನಾಥ್ ಮೇಲೂ ಭರತ್ ಹಲ್ಲೆ ಮಾಡಿದ್ದ. ವೃದ್ಧ ಸ್ಥಳದಲ್ಲಿಯೇ ಸಾವಿಗೀಡಾಗಿದ್ದರು. ಮನೆಬಿಟ್ಟು ಹೋಗಿದ್ದ ನಂದೀಶ್ ಹಾಗೂ ಸ್ಫೂರ್ತಿ ಇಬ್ಬರೂ ಪರಿಶಿಷ್ಟ ಸಮುದಾಯದವರೇ ಆಗಿದ್ದು, ಕುಟುಂಬಗಳ ನಡುವಿನ ವೈಮನಸ್ಯದ ಕಾರಣಕ್ಕೆ ಮನೆತನದ ಮರ್ಯಾದೆ ಹಾಳಾಯಿತು ಎಂದು ಭಾವಿಸಿದ್ದ ಭರತ್ ಮದುವೆಗೆ ವಿರೋಧಿಸಿದ್ದ ಎಂಬುದು ತನಿಖೆಯ ವೇಳೆ ಬಯಲಾಗಿತ್ತು.

ಗಂಭೀರ ಸಾಮಾಜಿಕ ಪಿಡುಗು ಬೇಕಿದೆ ಸಮರ್ಥ ಕಾನೂನು

● ಮೈತ್ರೇಯಿ ಹೆಗಡೆ

ಇಪ್ಪತ್ತಕ್ಕೆ ಕಾಲಿಟ್ಟ ಬಸುರಿ ಮಗಳನ್ನು ಜಾತಿಯ ಹೆಸರಿನಲ್ಲಿ ಕೊಂದ ತಂದೆ ಮತ್ತು ಸಂಬಂಧಿಕರ ಪ್ರಕರಣ ನಡೆದಿದ್ದು ಅಲ್ಲೆಲ್ಲೋ ದೂರದ ಕುಗ್ರಾಮದಲ್ಲಲ್ಲ, ಹುಬ್ಬಳ್ಳಿ- ಧಾರಾವಾಡದಂತಹ ಮಹಾನಗರದ ಮಡಿಲಲ್ಲಿ. ಕೃತಕ ಬುದ್ಧಿಮತ್ತೆಯಂತಹ ತಾಂತ್ರಿಕ ಉನ್ನತಿಯ ಕಾಲಘಟ್ಟದಲ್ಲಿ ಇದು ನಡೆದಿದೆ. 2025ರಲ್ಲಿ ಸಂಸತ್ತಿನಲ್ಲಿ ಕೇಳಿದ ಪ್ರಶ್ನೆಗೆ ಉತ್ತರವಾಗಿ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ನೀಡಿದ ವರದಿಯ ಪ್ರಕಾರ 2020ರಲ್ಲಿ 25, 2021ರಲ್ಲಿ 33 ಮತ್ತು 2022ರಲ್ಲಿ 18 ಮರ್ಯಾದೆಗೇಡು ಹತ್ಯೆಗಳು ಭಾರತದಲ್ಲಿ ನಡೆದಿವೆ. ಆದರೆ, ಕಾನೂನಿನ ಪ್ರಕಾರ, ಈ ವಿಭಾಗದಲ್ಲಿ ಹತ್ಯೆಗಳನ್ನು ದಾಖಲಿಸುವ ವ್ಯವಸ್ಥೆ ಇಲ್ಲದಿರುವುದರಿಂದ, ಈ ಸಂಖ್ಯೆ ನಿಜಸ್ಥಿತಿಗೆ ಗಾವುದಗಳಷ್ಟು ದೂರ ಇದೆ ಎಂದೇ ಹೇಳಬಹುದು. 2012ರ ವಿಶ್ವಸಂಸ್ಥೆಯ ವರದಿ ಪ್ರಕಾರ, ಜಾಗತಿಕವಾಗಿ ಪ್ರತಿ ವರ್ಷವೂ ಸುಮಾರು 5,000 ಮಹಿಳೆಯರು ಸಮುದಾಯಗಳ ಮರ್ಯಾದೆ- ಗೌರವಗಳ ಹೆಸರಿನಲ್ಲಿ ಬಲಿಯಾಗುತ್ತಿದ್ದಾರೆ; ಈ ಸಂಖ್ಯೆಯಲ್ಲಿ ಮೂರನೇ ಒಂದರಷ್ಟು ಮಹಿಳೆಯರು ಭಾರತ ಮತ್ತು ಪಾಕಿಸ್ತಾನಕ್ಕೆ ಸೇರಿದವರಾಗಿದ್ದಾರೆ. ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರ ಮೇಲೆ ಅವರ ಕುಟುಂಬ ಸದಸ್ಯರು, ಹೆತ್ತ ತಂದೆ-ತಾಯಿಯೇ ಹೀನಕೃತ್ಯವನ್ನು ಎಸಗುತ್ತಿದ್ದರೂ ಸರಿಯಾದ ಅಂಕಿ-ಸಂಖ್ಯೆ ನಮ್ಮ ಮುಂದಿಲ್ಲ. ಈ ಬಗ್ಗೆ ಗಟ್ಟಿ ದನಿಯಲ್ಲಿ ಮಾತನಾಡುವವರೂ ಕಡಿಮೆ ಮತ್ತು ಅದಕ್ಕೆ ಪೂರಕವಾದ ನೀತಿನಿಯಮವೂ ಇಲ್ಲ. ಈ ದಿಸೆಯಲ್ಲಿ ಮರ್ಯಾದೆಗೇಡು ಹತ್ಯೆಯನ್ನು ಕಾನೂನಿನ ದೃಷ್ಟಿಯಿಂದ ನೋಡಬೇಕಾಗಿದೆ.

ನಿಖರವಾಗಿ ಹೇಳಬೇಕೆಂದರೆ, ಮರ್ಯಾದೆಗೇಡು ಹತ್ಯೆಯೂ ಕಾನೂನಿನ ದೃಷ್ಟಿಯಲ್ಲಿ ಒಂದು ಹತ್ಯೆ ಮಾತ್ರ. ಎಲ್ಲಾ ಕೊಲೆಗಳಿಗಿರುವಂತೆ ಈ ಕೊಲೆಗೂ ಶಿಕ್ಷೆ ಇದೆ. ಹಾಗಾಗಿ ಕಾನೂನನ್ನು ಸರಿಯಾಗಿ ಜಾರಿಗೆ ತಂದರೆ ಸಾಕು ಎಂಬ ಅಭಿಪ್ರಾಯ ಹಲವರಲ್ಲಿದೆ. ಆದರೆ, ಇಂತಹ ಹತ್ಯೆಗಳು ವೈಯಕ್ತಿಕ ಹಗೆಯಿಂದ ಆಗುವುದಿಲ್ಲ. ಇವು ಪುರುಷ ಪ್ರಧಾನ, ಜಾತಿ ವ್ಯವಸ್ಥೆಯ ವರುಷಗಳ ಪಾಲನೆಯ ವಿಪರೀತದ ಫಲ. ವ್ಯವಸ್ಥಿತವಾಗಿ ಶತಮಾನಗಳಿಂದ ನಮ್ಮನ್ನು ಆಳುತ್ತಾ ಬಂದ ಎರಡು ಹೀನವಾದ ಸಾಮಾಜಿಕ ಪಿಡುಗುಗಳಾದ ಜಾತಿಭೇದ ಮತ್ತು ಲಿಂಗಭೇದದ ಮದುವೆಗೆ ಹುಟ್ಟಿದ ಕೂಸು ಮರ್ಯಾದೆಗೇಡು ಹತ್ಯೆ. ಹಾಗಾಗಿ ಕೇವಲ ಕೊಲೆ ಎಂಬ ನೆಲೆಯಲ್ಲಿ ಈ ಅಪರಾಧವನ್ನು ನೋಡಿದರೆ, ಸಮಸ್ಯೆಯನ್ನು ಸಮಾಜದಿಂದ ತೊಡೆಯಲು ಸಾಧ್ಯವಾಗುವುದಿಲ್ಲ.

ಭಾರತದ ಸಂವಿಧಾನದ ಪ್ರಕಾರ, ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದು ವ್ಯಕ್ತಿಯ ಮೂಲಭೂತ ಹಕ್ಕು. ಅಂತಹ ಹಕ್ಕಿನ ಬುಡಕ್ಕೇ ಕೊಡಲಿ ಏಟು ಹಾಕುವ ಈ ಕೊಲೆಗಳನ್ನು ನ್ಯಾಯಾಲಯಗಳು ಒಂದು ಗಂಭೀರ ಸಾಮಾಜಿಕ ಪಿಡುಗಾಗಿ ಪರಿಗಣಿಸಿವೆ. ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಒಬ್ಬ ಮಹಿಳೆಯ ಅಭಿವ್ಯಕ್ತಿಯ ಹಕ್ಕಿನಲ್ಲಿ ಒಳಗೊಂಡಿದೆ (ಆಶಾ ರಂಜನ್ ಪ್ರಕರಣ (2022). ಒಂದು ಸಮುದಾಯದ ಗೌರವ ಎಂಬ ಹೆಸರಲ್ಲಿ ಆ ಮೂಲಭೂತ ಹಕ್ಕನ್ನು ಮೊಟಕುಗೊಳಿಸಲು ಸಾಧ್ಯವಿಲ್ಲ ಎಂದೇ ಸುಪ್ರೀಂ ಕೋರ್ಟ್ ಹೇಳಿದೆ. ಹಾಗೆಯೇ, ಮರ್ಯಾದೆಗೇಡು ಹತ್ಯೆ ಅಪರೂಪದಲ್ಲಿ ಅಪರೂಪದ ಅಪರಾಧಗಳ ಅಡಿಯಲ್ಲಿ ಬರುತ್ತದೆ ಎಂದು ಭಗವಾನ್ ದಾಸ್ (2011) ಪ್ರಕರಣದಲ್ಲಿ ಹೇಳಿದೆ. 2018ರ ಸುಪ್ರೀಂ ಕೋರ್ಟ್‌ನ ಶಕ್ತಿವಾಹಿನಿ ತೀರ್ಪು ಕೂಡ ಮದುವೆಯ ಆಯ್ಕೆಯ ವಿಚಾರದಲ್ಲಿ ಕುಟುಂಬದ ಕಡೆಯಿಂದ ಮಹಿಳೆಗೆ ಕೊಡುವ ಕಿರುಕುಳ ಆಕೆಯ ಜೀವಿಸುವ ಹಕ್ಕು ಮತ್ತು ಅಭಿವ್ಯಕ್ತಿಯ ಹಕ್ಕಿನ ಉಲ್ಲಂಘನೆ ಆಗಿದೆ ಎಂದೇ ಹೇಳಿದೆ. ಅಂತಹ ಚಟುವಟಿಕೆಗಳು ಕಾನೂನುಬಾಹಿರ ಎಂದು ಘೋಷಿಸಿ, ಮಹಿಳೆಯರ ಹಕ್ಕನ್ನು ಕಾಪಾಡಲು ಕೆಲವು ನಿರ್ದೇಶನಗಳನ್ನೂ ಆ ಪ್ರಕರಣದಲ್ಲಿ ನೀಡಲಾಗಿತ್ತು.

ಆದರೂ ಇಂತಹ ಘಟನೆಗಳು ನಡೆಯುತ್ತಲೇ ಇರುವುದು, ಸಾಮಾಜಿಕವಾಗಿ ಪ್ರಬಲರೇ ತಪ್ಪಿತಸ್ಥರ ಸ್ಥಾನದಲ್ಲಿ ಇರುವ ಇಂತಹ ಹೆಚ್ಚಿನ ಪ್ರಕರಣಗಳು ವರದಿಯೂ ಆಗದಿರುವುದು ಒಂದು ಪ್ರತ್ಯೇಕ ಕಾನೂನಿನ ಅಭಾವದಿಂದಾಗಿ. ಹತ್ಯೆ ಮತ್ತು ಇತರ ದೈಹಿಕ ಹಿಂಸೆ ಅಥವಾ ಬೆದರಿಕೆಗಳಷ್ಟೇ ಅಲ್ಲದೆ, ಕಾನೂನುಬದ್ಧವಾಗಿ ನಡೆಯುವ ವಯಸ್ಕ ಹೆಣ್ಣು-ಗಂಡಿನ ನಡುವಿನ ಮದುವೆಗಳಿಗೆ ಅಡ್ಡಿ ಮಾಡುವ, ಬೆದರಿಸುವ, ಕಿರುಕುಳ ಕೊಡುವ, ಬಹಿಷ್ಕಾರ ಹಾಕುವ ಎಲ್ಲ ರೀತಿಯ ಚಟುವಟಿಕೆಗಳನ್ನು ಅಪರಾಧವಾಗಿ ಘೋಷಿಸಿ, ಶಿಕ್ಷೆ ವಿಧಿಸುವಂತಹ ಕಾನೂನು ಈ ಸಮಸ್ಯೆಗೆ ಪರಿಹಾರವಾಗಬಹುದು. ಬೆಂಕಿ ಹಚ್ಚಿ ಸೊಸೆಯರ ಜೀವ ತೆಗೆಯುವ ಸಾವುಗಳ ಮೂಲ ಹೇಗೆ ವರದಕ್ಷಿಣೆ ಎಂಬ ಸಾಧಾರಣ ರೂಢಿಯೋ, ಹಾಗೆಯೇ ಮರ್ಯಾದೆಗೇಡು ಹತ್ಯೆಯ ಸಾಧಾರಣ ಆದರೆ ಅಪಾಯಕಾರಿ ಮೂಲ ಎಂದರೆ ಮದುವೆಗಳನ್ನು ಅಡ್ಡಿಪಡಿಸುವ, ಬಹಿಷ್ಕಾರ ಹಾಕುವ ಸಾಮುದಾಯಿಕ ನಡೆಗಳು.

ಈ ದಿಸೆಯಲ್ಲಿ 2019ರಲ್ಲಿ ರಾಜಸ್ಥಾನದಲ್ಲಿ ‘ಗೌರವ ಮತ್ತು ಸಂಪ್ರದಾಯದ ಹೆಸರಿನಲ್ಲಿ ವೈವಾಹಿಕ ಸ್ವಾತಂತ್ರ್ಯಕ್ಕೆ ಹಸ್ತಕ್ಷೇಪ ನಿಷೇಧ ಮಸೂದೆ’ ಎಂಬುದನ್ನು ಮೇಲ್ಮನೆ, ಕೆಳಮನೆಗಳೆರಡೂ ಅಂಗೀಕರಿಸಿದ್ದರೂ ರಾಷ್ಟ್ರಪತಿಗಳ ಸಹಿ ಸಿಗದೆ ಅದು ಕಾನೂನಾಗದೆಯೇ ಉಳಿದಿದೆ. ಈ ಮಸೂದೆಯಲ್ಲಿ ಒಂದು ಮದುವೆಯನ್ನು ತಡೆಯುವುದಕ್ಕೆ, ಅಡ್ಡಿಪಡಿಸುವುದಕ್ಕೆ ಸೇರುವ ಸಮುದಾಯದ ಸಭೆಯೂ ಆರು ತಿಂಗಳ ಜೈಲಿನ ಶಿಕ್ಷೆ ವಿಧಿಸಬಹುದಾದ ಅಪರಾಧವಾಗಿದೆ. ಅಷ್ಟೇ ಅಲ್ಲದೆ, ಮದುವೆಗೆ ಅಡ್ಡಿಪಡಿಸುವ, ಇಷ್ಟವಿಲ್ಲದ ಮದುವೆಗೆ ಒತ್ತಡ ಹಾಕುವ ಚಟುವಟಿಕೆಗಳೂ ಶಿಕ್ಷಾರ್ಹವಾದ ಅಪರಾಧವಾಗಿವೆ. ಇಂತಹ ಸಭೆಗಳಲ್ಲಿ ಭಾಗವಹಿಸಿದವರೆಲ್ಲರೂ ತಾವು ಅಪರಾಧ ಮಾಡಿಲ್ಲ ಎಂದು ಸಾಬೀತುಪಡಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ, ಇಂತಹ ಸಭೆಗಳು ನಡೆಯಲಿವೆ ಎಂಬ ಮಾಹಿತಿ ಸಿಕ್ಕಿದರೆ ಅದರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರವನ್ನು ಅಧಿಕಾರಿಗಳಿಗೆ ನೀಡಲಾಗಿದೆ. ಈ ಕರಡಿನಲ್ಲಿ ಹೇಳಿದ ಚಟುವಟಿಕೆಗಳನ್ನು ಜಾಮೀನುರಹಿತ ಅಪರಾಧಗಳನ್ನಾಗಿ ಘೋಷಣೆಯೂ ಮಾಡಲಾಗಿದೆ. ನಮ್ಮಲ್ಲಿಯೂ ಇಂತಹ ಕಾನೂನಿನ ಅಗತ್ಯವಿದೆ.

ತಂತ್ರಜ್ಞಾನ ಬೆಳೆದಂತೆ, ಶಿಕ್ಷಣ ಮತ್ತು ಜ್ಞಾನ ಎಲ್ಲರ ಕೈಗೆಟುಕುತ್ತಾ ಹೋದಂತೆ, ವ್ಯಕ್ತಿಗಳ ಆಯ್ಕೆಯ ವ್ಯಾಪ್ತಿ ಹೆಚ್ಚುತ್ತಾ ಹೋಗುತ್ತದೆ. ಮದುವೆ, ಮನೆ, ಮಕ್ಕಳು ಇತ್ಯಾದಿ ವಿಚಾರಗಳಲ್ಲಿ ಹೆಣ್ಣುಮಕ್ಕಳು ತಮ್ಮದೇ ಆದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ, ಈ ಬೆಳವಣಿಗೆಗಳಿಂದ ಧಕ್ಕೆಯಾಗುವ ಜಾತಿಯ, ಪುರುಷ ಪ್ರಧಾನ ವ್ಯವಸ್ಥೆಯ ಕಾವಲುದಾರರು, ಹಿಂಸೆಗೆ ಕೈಹಚ್ಚುವುದನ್ನು ನಾವು ನಿರೀಕ್ಷಿಸಲೇಬೇಕು. ಅಂತಹ ಸನ್ನಿವೇಶಗಳಿಂದ ಸಮಾಜವನ್ನು ಕಾಪಾಡಲು, ಮಾರುತ್ತರ ನೀಡುವ ವ್ಯವಸ್ಥೆ ನಮಗೆ ಬೇಕಾಗಿದೆ. ಹುಬ್ಬಳ್ಳಿಯಲ್ಲಿ ನಡೆದಂಥ ಪ್ರಕರಣ ಮರುಕಳಿಸದಿರಲು, ಮನೆ-ಮನೆಗಳಲ್ಲಿ ಜಾತಿಯ ಹೆಸರಿನಲ್ಲಿ ನಡೆಯುವ ಕಿರುಕುಳಗಳು ಕೊನೆಯಾಗಬೇಕು. ಹಾಗಾಗಲು ವೈಯಕ್ತಿಕ ನೆಲೆಯಲ್ಲಿ ನಡೆಯುವ ಮಹಿಳೆಯರ ಆಯ್ಕೆಯ ಮೇಲೆ ಆಗುವ ದಬ್ಬಾಳಿಕೆಗಳನ್ನೂ ಶಿಕ್ಷಿಸುವಂತಹ ಶಕ್ತಿಯುತವಾದ ಕಾನೂನೊಂದರ ಅಗತ್ಯ ಹಿಂದೆಂದಿಗಿಂತಲೂ ಈಗ ಇದೆ.

ಲೇಖಕಿ: ಸುಪ್ರೀಂ ಕೋರ್ಟ್ ವಕೀಲೆ

ಸಂಸ್ಕೃತಿ ರಕ್ಷಣೆ ಹೆಸರಲ್ಲಿ ಅನಾಚಾರ

ಮರ್ಯಾದೆಗೇಡು ಹತ್ಯೆ ವರದಕ್ಷಿಣೆ ಪಿಡುಗು, ಅಸ್ಪೃಶ್ಯತೆಯ ರೀತಿ ಆಳವಾಗಿ ಸಮಾಜದಲ್ಲಿ ಬೇರೂರಿರುವ ಕೊಳಕಿನ ರಾಕ್ಷಸರೂಪ. ಆದರೆ ಇದು ಶುರುವಾಗುವುದು ಕೊಲೆಯಿಂದಲ್ಲ ಅಥವಾ ದೈಹಿಕ ಹಿಂಸೆಗಳಿಂದಲ್ಲ; ಒಂದು ಜಾತಿಯ ಜನರು ತಾವೇ ಶ್ರೇಷ್ಠರು ಎಂದು ಯೋಚಿಸುವ ಮತ್ತು ಒಬ್ಬ ಗಂಡಸು ಹೆಣ್ಣಿಗಿಂತ ಒಂದು ಕೈ ಮೇಲೆ ಎಂದು ಯೋಚಿಸುವ ಹಂತದಿಂದ. ಇವು ಸಮಾಜದ ತಳಹದಿಯನ್ನೇ ಕದಡುವ ಕಳೆ ಬೀಜಗಳು. ನಮ್ಮ ನಡುವೆಯೇ ಪರೋಕ್ಷವಾಗಿ ಎಷ್ಟೋ ಸಂಘ ಸಂಸ್ಥೆಗಳು ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ಈ ಪಿಡುಗಿನ ನಾಟ ಮಾಡಲು ಮಣ್ಣು ಹದ ಮಾಡುತ್ತಿವೆ. ಮದುವೆಯಾಗಿ ಎಂಟು ವರ್ಷಗಳಾದರೂ ಮನೆಗೆ ಪ್ರವೇಶವಿಲ್ಲ, ಹಬ್ಬ-ಹರಿದಿನಗಳಲ್ಲಿ ಪಾಲ್ಗೊಳ್ಳಲು ಅವಕಾಶವಿಲ್ಲ, ಮಾತು- ಕಥೆಯಿಲ್ಲದ ಅನಧಿಕೃತ ಸಾಮಾಜಿಕ ಬಹಿಷ್ಕಾರವನ್ನು ನನ್ನಂತೆಯೇ ಅದೆಷ್ಟೂ ಹೆಣ್ಣುಮಕ್ಕಳು ಸಹಜವೆಂಬಂತೆ ಅನುಭವಿಸುತ್ತಿದ್ದಾರೆ.

ನನ್ನ ವಿಚಾರದಲ್ಲಿ ಹೀಗೆಯೇ ಮಾಡಬೇಕು ಎಂಬ ತೀರ್ಪಿತ್ತಿದ್ದು, ಹೆಸರಾಂತ ಮಠದ ಗುರುಗಳು ಮತ್ತು ಈ ಮಠದ ‘ಜಾಗೃತಿ ಕಾರ್ಯಪಡೆ’. ಈ ಕಾರ್ಯಪಡೆಯು ಪಾಲಕರ ಅನುಮತಿ ಇರುವ ಮದುವೆಗಳನ್ನೂ ತಡೆಯುವ, ಜಾತಿಯ ಹೊರಗಿನ ಜನರಿಗೆ ಜಮೀನು ವಿಲೇವಾರಿಗಳನ್ನು ತಡೆಯುವ ಮತ್ತು ಅನೇಕ ಜನರ ವೈಯಕ್ತಿಕ ವಿಚಾರಗಳಲ್ಲಿ ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ತಲೆತೂರಿಸುವ ಒಂದು ಸಂಸ್ಥೆ. ಈ ಕಾರ್ಯಪಡೆಯ ಇರುವಿಕೆ ಸಾರ್ವಜನಿಕರ, ಜನಪ್ರತಿನಿಧಿಗಳ ಅರಿವಿನಲ್ಲಿ ಇರುವ ವಿಚಾರವೇ. ಇಂತಹ ಸಂಸ್ಥೆಗಳು ರಾಜ್ಯದ, ದೇಶದ ಹಲವು ಧಾರ್ಮಿಕ-ಸಾಂಸ್ಕೃತಿಕ ಸಂಘಟನೆಗಳ ನೆರಳಿನಲ್ಲಿ ಕೆಲಸ ಮಾಡುತ್ತಿವೆ. ಮರ್ಯಾದೆಗೇಡು ಹತ್ಯೆ ಶುರುವಾಗುವುದು ಈ ಹಂತದಿಂದ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

03 ಜನವರಿ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಪೂರ್ಣಿಮಾ ಗಂ 15-33 ನಕ್ಷತ್ರ: ಆರ್ದ್ರಾ ಗಂ 17-28 ಯೋಗ: ಬ್ರಹ್ಮ ಗಂ. 9-05 ನಂತರ ಐಂದ್ರ ಗಂ 29-16 ಕರಣ: ಬವ ಗಂ. 15-33 ಧನು ಮಾಸದ 19 ನೇ ದಿನ. ಮಳೆ ನಕ್ಷತ್ರ : ಪೂರ್ವಾಷಾಢ 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 - 10-30 **ಸೂರ್ಯೋದಯ :** 06-58 **ಸೂರ್ಯಾಸ್ತ :** 06-12, **ಮುಸ್ಲಿಂ ದಿನಾಂಕ :** 13 ರಜಬ್, ಅದೃಷ್ಟ ಸಂಖ್ಯೆ : 6, 11

ಮೇಷ: ಉದ್ದೇಶ ನೆರವೇರಿಸಿಕೊಳ್ಳುವುದಕ್ಕೆ ನಡೆಸಿರುವ ಪ್ರಯತ್ನಗಳು ನಿಧಾನವಾಗಿಯಾದರೂ ಸಿದ್ಧಿಸಲಿವೆ. ಉತ್ತಮ ಕಾರ್ಯದಿಂದ ಗೌರವಾನ್ವಿತ ವ್ಯಕ್ತಿಯಾಗುವಿರಿ. ಆಭರಣಗಳ ಖರೀದಿಯಿಂದ ಸಂತೋಷವಾಗುವುದು.

ವೃಷಭ: ಮನೆಯಲ್ಲಿರುವ ಆಂತರಿಕ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ. ಕೆಲಸಗಳಲ್ಲಿನ ಜವಾಬ್ದಾರಿಗಳು ಹೆಚ್ಚಿ ಆರ್ಥಿಕ ಸ್ಥಿತಿಯು ಸುಧಾರಣೆ ಕಾಣಲಿದೆ. ಹೋರಾಟದಿಂದ ಯಶಸ್ಸು ಲಭಿಸಲಿದೆ.

ಮಿಥುನ: ಮನಸ್ಸಿನಲ್ಲಿ ಹಲವು ದಿನಗಳಿಂದ ಇದ್ದ ಹಂಬಲವು ಮಿತ್ರರ ಸಹಾಯದಿಂದ ನೆರವೇರುವುದು. ಎಲ್ಲಾ ವಿಚಾರಗಳಲ್ಲಿಯೂ ಸಾವಧಾನವಾಗಿ ಮುಂದುವರಿಯಿರಿ. ಕಪ್ಪು ಬಣ್ಣ ಅದೃಷ್ಟವನ್ನು ಬದಲಾಯಿಸಲಿದೆ.

ಕರ್ಕಾಟಕ: ಬದುಕಿನಲ್ಲಿ ಹೊಸ ವ್ಯಕ್ತಿಯ ಪ್ರವೇಶವಾಗಲಿದೆ. ಅವರಿಂದ ಸಿಗುವ ಸಹಕಾರ ಜೀವನ ಪರ್ಯಂತ ನೆನಪಿನಲ್ಲಿ ಇಟ್ಟುಕೊಳ್ಳುವಂತೆ ಇರುವುದು. ಸಿಬ್ಬಂದಿ ವರ್ಗದವರು ಸಹಕರಿಸಲಿದ್ದಾರೆ.

ಸಿಂಹ: ಆರ್ಥಿಕತೆಯಲ್ಲಿ ಅಗೌರವವಾಗುವಂಥ ಸನ್ನಿವೇಶ ಎದುರಾಗಿ ಕೊನೆಯ ಕ್ಷಣದಲ್ಲಿ ಹಣಕಾಸಿನ ಹೊಂದಿಕೆಯಾಗುವುದು. ಸಿನಿಮಾ ರಂಗಕ್ಕೆ ಸೇರಿಕೊಳ್ಳುವ ಬಗ್ಗೆ ಯೋಚಿಸುವವರಿಗೆ ಸುದಿನ.

ಕನ್ಯಾ: ಸಲಹೆ ಸೂಚನೆಗಳನ್ನು ಹೆಚ್ಚು ಚರ್ಚಿಸದೆ, ನಿಮ್ಮ ಮೇಲಿನ ನಂಬಿಕೆಯಿಂದಾಗಿ ಮೇಲಧಿಕಾರಿಗಳು ನಿಮ್ಮ ನಿರ್ಧಾರಗಳನ್ನು ಒಪ್ಪಿಕೊಳ್ಳಲಿದ್ದಾರೆ. ಒಂದು ಘಟನೆ ನಿಮ್ಮನ್ನು ಭಾವುಕರನ್ನಾಗಿ ಮಾಡಲಿದೆ.

ತುಲಾ: ನಿಮಗೆ ಎದುರಾಗುವ ಎಲ್ಲಾ ಸವಾಲುಗಳನ್ನು ಬುದ್ಧಿವಂತಿಕೆಯಿಂದ ಎದುರಿಸಿ, ಇನ್ನಷ್ಟು ಮನೋಬಲವನ್ನು ಹೆಚ್ಚಿಸಿಕೊಳ್ಳಿರಿ. ಮಹಾಗಣಪತಿಯನ್ನು ಪೂಜಿಸಿ ಪುಣ್ಯ ಸಂಪಾದನೆ ಮಾಡಿ. ಶುಭ ಸುದ್ದಿ ಕೇಳಿ ಸಂತೋಷವಾಗುವುದು.

ವೃಶ್ಚಿಕ: ಅಧಿಕಾರಿಯ ಸಹಾಯದಿಂದ ಮುಂಬಡ್ತಿ ಅಥವಾ ವರ್ಗಾವಣೆಯಂಥ ಅವಕಾಶವನ್ನು ಪಡೆದುಕೊಳ್ಳುವಿರಿ. ಕೃಷಿಯನ್ನು ಮಾಡುವವರು ಸಂಬಂಧಪಟ್ಟಂಥ ಇಲಾಖೆಯವರಿಂದ ಸಹಾಯವನ್ನು ಪಡೆದುಕೊಳ್ಳಿರಿ.

ಧನು: ಮಕ್ಕಳಿಂದ ಅಹಿತಕರ ಘಟನೆಗಳು ನಡೆದು ಪಾಲಕರಿಗೆ ಭವಿಷ್ಯದ ಬಗ್ಗೆ ಯೋಚನೆಗಳು ಬರಲಿವೆ. ನವವಿವಾಹಿತರಿಗೆ ಸಂತತಿಯ ವಿಚಾರದಲ್ಲಿ ಶುಭ ಸೂಚನೆ ಕಾಣಲಿದೆ. ಆಂತರಿಕ ಸಮಸ್ಯೆ ಸಾಮರಸ್ಯದಿಂದ ಬಗೆಹರಿಯಲಿದೆ.

ಮಕರ: ಜೀವನ ರೂಪಿಸಿಕೊಳ್ಳಲು ನಿರ್ಧರಿಸಿದ ಪ್ರೇಮಿಗಳಿಗೆ ಸಹೋದರರಿಂದ ಅಥವಾ ಕುಟುಂಬ ವರ್ಗದವರಿಂದ ಸ್ಪಂದನೆ ಸಿಗುವ ಅವಕಾಶಗಳಿವೆ. ನಿರುದ್ಯೋಗಿಗಳಿಗೆ ನಿರೀಕ್ಷೆಗೂ ಮೀರಿದ ಕೆಲಸ ಸಿಗುವ ಸಾಧ್ಯತೆ ಇದೆ.

ಕುಂಭ: ಆಫೀಸಿನಲ್ಲಿ ವಿನಯದಿಂದ ವರ್ತಿಸಿ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ ಹಾಗೆಯೇ ಮನೆಯವರ ಮಾತುಗಳಿಗೆ ಸಮಾಧಾನದಿಂದ ಉತ್ತರಿಸಿ. ಎಂಥ ಜವಾಬ್ದಾರಿಗಳನ್ನೂ ನಿಭಾಯಿಸಲು ಸರ್ವಸಿದ್ಧರಾಗಿ.

ಮೀನ: ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದರ ಜೊತೆಯಲ್ಲಿ ಆ ಸಮಾರಂಭದ ಜವಾಬ್ದಾರಿ ಹೊರಬೇಕಾಗುವುದು. ಭೂ ವ್ಯವಹಾರದ ಬಂಡವಾಳದಲ್ಲಿ ಮೋಸಹೋಗುವ ಸ್ಥಿತಿ ಬರಬಹುದು.

ಪದಬಂಧ 6273

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಲೋಭಿ ಇಲ್ಲಿದ್ದಾನೆ (3)
5.ಕಾವು ಇದ್ದಾಗಲೇ ತೋರಿದ ಡೌಲು! (3)
6.ಹಸುವಿನ ಹತ್ತಿರವಿರುವ ಎಳೆಮಗು (4)
9.ಆಡಂಬರ ತೋರುವಾಗಲೇ ಕ್ಷಾಮ ಬಂದಿದೆಯಲ್ಲಾ! (2)
10.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
11.ಬಂಗಾರದ ತೇರು ಇಲ್ಲಿದೆ (5)
12.ಗಣಿಯ ಧಣಿ ಕಲಿಸಿದ ಲೆಕ್ಕ ಶಾಸ್ತ್ರ (3)
13.ಹಾರಾಡಿದಾಗ ಸಿಡಿದದ್ದು ಮಣ್ಣುಕಲೆಸಿದ ನೀರು (2)
14.ಗಣಿಯೊಳಗಿರುವ ಗಟ್ಟಿಗಿತ್ತಿ! (4)
16.ಪ್ರೇಮಿಗಳ ಅಗಲಿಕೆಯ ನೋವು (3)
18.ಬೆದರಿದಾಗ ಹೊರಬಂದಿರುವ ಸ್ವೇದ (3)

ಮೇಲಿಂದ ಕೆಳಕ್ಕೆ

1.ಅತ್ಯಂತ ಸೊಗಸಾದುದು ಮರದಲ್ಲಿದೆ (4)
2.ದಮ್ಮಿನ ರೋಗವಿಲ್ಲಿ ಉಲ್ಟಾ ಕಾಣುತ್ತಿದೆ (3)
3.ಕಡಿವಾಣ ಹಿಡಿದು ಹೀಗೆ ಕಚ್ಚು! (2)
4.ಠರಾವು ಮಂಡಿಸಿದ ಜಾಗ! (2)
7.ಉಚ್ಚ್ರಾಯ ಕಾಲವನ್ನು ಹೀಗೂ ಹೇಳುತ್ತಾರೆ (5)
8.ಗಡಿಯಲ್ಲಿ ತೋರಿದ ಆತುರ (4)
9.ಉತ್ತರ ದಿಕ್ಕಿದು (4)
10.ಹಾದಿಗೊಂದು ಪರ್ಯಾಯ ಪದ (2)
11.ಹರಸುತಲಿದ್ದಾಗ ಕಾಣಿಸಿದ ಪುತ್ರ (2)
13.ಅಂತಃಪುರವನ್ನು ಹೀಗೂ ಕರೆಯುತ್ತಾರೆ (4)
15.ಗುಟುರು ಹಾಕುತ್ತಿರುವ ಗಂಡುಕುರಿ (3)
16. ಜಗತ್ತು ಇಲ್ಲಿ ಕಾಣುತ್ತಿದೆ (2)
17.ಆವಿ ಇಲ್ಲಿ ಕಾಣುತ್ತಿದೆ (2)



6272ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಮಧುಮಾಸ 3.ಅನುಭಾವ
5.ಬಡತನ 7.ರಮಣ
8.ವನಪಾಲಕ 11.ಉದಕ
12.ನವರಂಗ 14.ಸಹಪಂಕ್ತಿ
15.ಪರಿಚಿತ

ಮೇಲಿಂದ ಕೆಳಕ್ಕೆ:

1.ಮನೋಬಲ 2.ಮಾವುತ
4.ವರುಣ 6.ನವೀನ
7.ರಥಿಕ 8.ವರ್ತಕ
9.ಲಶುನ 10.ಅಂಗಜಾತ
11.ಉಲ್ಲಾಸ 13.ವೈಯಾರಿ

ಸುಡೊಕು 6657

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4			2		7		3
6		9	5		7		4	
	3			8		6		
	7			9			3	
	9	3	6		8			4
4				5		8		
7			8		9			
	5							7
	8			4		9		

6656 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	26,146
ಇಂದಿನ ಅಂತ್ಯ:	26,328
ದಿನದ ಗರಿಷ್ಠ:	26,340
	182

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು	
100 ಕ್ಕೆ	₹685
12 ಕ್ಕೆ	₹96
ಮೈಸೂರು: 100 ಕ್ಕೆ	₹706

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹176
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹250-750
ದ್ವಿತಳಿ (ಬಿ.ವಿ)	₹260-933

ಮುದ್ರೆಮನೆ ಕಾಫಿ	
ಎಪಿ	₹26700
ಎಸಿ	₹14560
ಆರ್‌ಪಿ	₹16500
ಆರ್‌ಸಿ	₹9675

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1585 (1580)
ಸೋಯಾ (ರಿಫೈನ್ಡ್)	₹1285 (1280)
ಸೂರ್ಯಕಾಂತಿ (ರಿಫೈನ್ಡ್)	₹1490 (1485)
ಪಾಮೋಲಿನ್	₹1250 (1245)

ಅಡಿಕೆ ಧಾರಣೆ

ಕುಮಟಾ	
ಚಾಲಿ	44589-48699
ಚಿಪ್ಪು	26569-36089
ಕೋಕ	12569-31089
ಫ್ಯಾಕ್ಟರಿ	9099-24829
ಹೊಸಚಾಲಿ	38089-42701
ಪುತ್ತೂರು	
ಕೋಕ	20000-35000
ಹೊಸತು	26000-41500
ಶಿವಮೊಗ್ಗ	
ಬೆಟ್ಟೆ	54299-54299
ಗೊರಬಲು	19001-41299
ರಾಶಿ	41669-58599
ಸರಕು	81799-85199
ಸಿದ್ದಾಪುರ	
ಬಿಳಿಗೋಟು	26100-36699
ಚಾಲಿ	39139-48599
ಕೋಕ	20699-31400
ಹೊಸಚಾಲಿ	36889-40499
ಕೆಂಪುಗೋಟು	31800-35289
ರಾಶಿ	51019-57009
ತಟ್ಟಿಬೆಟ್ಟೆ	36099-56539
ಶಿರಸಿ	
ಬೆಟ್ಟೆ	36099-53699
ಬಿಳಿಗೋಟು	24199-40099
ಚಾಲಿ	46099-49799
ಕೆಂಪುಗೋಟು	20709-36898
ರಾಶಿ	48399-57261
ಯಲ್ಲಾಪುರ	
ಅಪಿ	64675-77175
ಬಿಳಿಗೋಟು	14009-36519
ಕೋಕ	14909-28699
ಹಳೆಚಾಲಿ	35912-49799
ಹೊಸಚಾಲಿ	36319-40399
ಕೆಂಪುಗೋಟು	14909-37979
ರಾಶಿ	53899-63333
ತಟ್ಟಿಬೆಟ್ಟೆ	38210-53799

22 ಪ್ರಸ್ತಾವಕ್ಕೆ ಅನುಮೋದನೆ

ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳ ಆಮದು ಮೇಲಿನ ಅವಲಂಬನೆ ತಗ್ಗಿಸಲು ಕ್ರಮ

ನವದೆಹಲಿ (ಪಿಟಿಐ): 33 ಸಾವಿರ ಜನರಿಗೆ ನೇರ ಉದ್ಯೋಗ ಕಲ್ಪಿಸುವ, ಅಂದಾಜು ₹41 ಸಾವಿರ ಕೋಟಿ ಬಂಡವಾಳ ಹೂಡಿಕೆಯ ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳ ತಯಾರಿಕೆಯ 22 ಹೊಸ ಪ್ರಸ್ತಾವಗಳಿಗೆ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಅನುಮೋದನೆ ನೀಡಿದೆ.

ಅನುಮೋದನೆ ಪಡೆದ ಯೋಜನೆಗಳು ಕರ್ನಾಟಕವೂ ಸೇರಿದಂತೆ ಆಂಧ್ರಪ್ರದೇಶ, ಹರಿಯಾಣ, ಮಧ್ಯಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಜಾರಿಗೆ ಬರಲಿವೆ.

ಟಾಟಾ ಎಲೆಕ್ಟ್ರಾನಿಕ್ಸ್, ಡಿಕ್ಸನ್, ಸ್ಯಾಮ್ಸಂಗ್ ಡಿಸ್‌ಪ್ಲೇ ನೋಯ್ಡಾ ಪ್ರೈವೆಟ್ ಲಿಮಿಟೆಡ್, ಫಾಕ್ಸ್‌ಕಾನ್ (ಯುಜಾನ್ ಟೆಕ್ನಾಲಜಿ ಇಂಡಿಯಾ ಪ್ರೈವೆಟ್ ಲಿಮಿಟೆಡ್), ಹಿಂಡಾಲ್ಕೊ ಇಂಡಸ್ಟ್ರೀಸ್, ಮದರ್‌ಸನ್ ಎಲೆಕ್ಟ್ರಾನಿಕ್ ಕಾಂಪೊನೆಂಟ್ಸ್, ಎಟಿಎಲ್ ಬ್ಯಾಟರಿ ಟೆಕ್ನಾಲಜಿ ಇಂಡಿಯಾ ಸೇರಿದಂತೆ ಹಲವು ಕಂಪನಿಗಳ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದೆ.

'ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳ ತಯಾರಿಕಾ ಯೋಜನೆ (ಇಸಿಎಂಎಸ್)

ಅಡಿಯಲ್ಲಿ ಈ 22 ಹೊಸ ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಗಿದೆ' ಎಂದು ಸಚಿವಾಲಯ ತಿಳಿಸಿದೆ. ಈ ಪ್ರಸ್ತಾವದಡಿ ಕಂಪನಿಗಳು ₹41,863 ಕೋಟಿ ಅಂದಾಜು ಹೂಡಿಕೆ ಮಾಡಲಿದ್ದು, ₹2,58,152 ಕೋಟಿ ಮೌಲ್ಯದ ಸರಕುಗಳನ್ನು ತಯಾರಿಸುವ ಅಂದಾಜು ಮಾಡಲಾಗಿದೆ.

ಈ ಅನುಮೋದನೆಯಿಂದ 33,791 ನೇರ ಉದ್ಯೋಗ ಅವಕಾಶ ಸೃಷ್ಟಿಯಾಗುವ ನಿರೀಕ್ಷೆ ಇದೆ. ಮೊಬೈಲ್ ಫೋನ್‌ಗಳ ತಯಾರಿಕೆ, ಗ್ರಾಹಕ ಬಳಕೆ ಎಲೆಕ್ಟ್ರಾನಿಕ್ಸ್ ವಸ್ತುಗಳು, ದೂರಸಂಪರ್ಕ, ವಾಹನೋದ್ಯಮ ಮತ್ತು ಐ.ಟಿ ಹಾರ್ಡ್‌ವೇರ್ ಸೇರಿ ದಂತೆ 11 ವಿಭಾಗದ ಉತ್ಪನ್ನಗಳ ತಯಾರಿಕೆಯನ್ನು ಈ ಪ್ರಸ್ತಾವ ಒಳಗೊಂಡಿದೆ.

ದೇಶೀಯ ಪೂರೈಕೆ ಸರಪಳಿಯನ್ನು ಬಲಪಡಿಸುವುದು, ಪ್ರಮುಖ ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳ ಆಮದು ಮೇಲಿನ ಅವಲಂಬನೆ ಕಡಿಮೆ ಮಾಡುವುದು ಮತ್ತು ದೇಶದಲ್ಲಿನ ತಯಾರಿಕಾ ಘಟಕಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಈ ಅನುಮೋದನೆಯ ಗುರಿಯಾಗಿದೆ ಎಂದು ತಿಳಿಸಿದೆ.

2025ರ ನವೆಂಬರ್‌ನಲ್ಲಿ ಸರ್ಕಾರವು ಒಟ್ಟು ₹7,172 ಕೋಟಿ ಮೊತ್ತದ ಹೂಡಿಕೆಯ 17 ಪ್ರಸ್ತಾವಗಳಿಗೆ ಒಪ್ಪಿಗೆ ನೀಡಿತ್ತು. ₹65,111 ಕೋಟಿ ಮೌಲ್ಯದ ಸರಕುಗಳ ತಯಾರಿಸುವ ಮತ್ತು 11,808 ನೇರ ಉದ್ಯೋಗ ಸೃಷ್ಟಿಸುವು ದನ್ನು ಒಳಗೊಂಡಿತ್ತು. ಅಕ್ಟೋಬರ್ ನಲ್ಲಿ ₹5,532 ಕೋಟಿ ಮೌಲ್ಯದ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿತ್ತು.

ತಯಾರಿಕಾ ವಲಯದ ಬೆಳವಣಿಗೆ ಇಳಿಕೆ

'ದೇಶದ ತಯಾರಿಕಾ ವಲಯದ ಚಟುವಟಿಕೆ 2025ರ ಡಿಸೆಂಬರ್ ತಿಂಗಳಿನಲ್ಲಿ ಎರಡು ವರ್ಷದ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ' ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷೆ ವರದಿ ಶುಕ್ರವಾರ ತಿಳಿಸಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ನಿರ್ವಹಿಸುವ 'ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ'ವು (ಪಿಎಂಐ) ನವೆಂಬರ್‌ನಲ್ಲಿ 56.6ರಷ್ಟಿತ್ತು. ಆದರೆ, ಡಿಸೆಂಬರ್‌ನಲ್ಲಿ ಸೂಚ್ಯಂಕವು 55ಕ್ಕೆ ಇಳಿದಿದೆ. ಹೊಸ ಕಾರ್ಯಾದೇಶದಲ್ಲಿನ ಮಂದಗತಿಯು ಸೂಚ್ಯಂಕ ಇಳಿಕೆಗೆ ಕಾರಣ ಎಂದು ಹೇಳಿದೆ.

ಈ ಸೂಚ್ಯಂಕವು 50ರ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತ ಎನ್ನಲಾಗುತ್ತದೆ.

ತಯಾರಿಕಾ ವಲಯದ ಬೆಳವಣಿಗೆ ಮಂದಗೊಂಡಿದ್ದರೂ, ಉದ್ಯಮವು 2025ರ ವರ್ಷವನ್ನು ಉತ್ತಮ ಸ್ಥಿತಿಯಲ್ಲಿ ಮುಗಿಸಿದೆ. ಸರಕುಗಳಿಗೆ ಬೇಡಿಕೆ ಮಂದಗೊಂಡಿದ್ದರಿಂದ ತಯಾರಿಕೆಯು 38 ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿಯಿತು. ಉದ್ಯೋಗ ಸೃಷ್ಟಿಯು ಇಳಿಕೆ ಆಯಿತು. ತಯಾರಿಕಾ ವೆಚ್ಚವು ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

ದೇಶದ ಸರಕುಗಳ ತಯಾರಕರು 2026ರಲ್ಲಿ ತಯಾರಿಕೆಯಲ್ಲಿ ಹೆಚ್ಚಳವನ್ನು ನಿರೀಕ್ಷಿಸುತ್ತಿದ್ದಾರೆ. ಆದರೆ ತಯಾರಕರ ಭಾವನೆಯ ಮಟ್ಟವು ಸುಮಾರು ಮೂರೂವರೆ ವರ್ಷಗಳಲ್ಲಿ ಅತ್ಯಂತ ಕಡಿಮೆ ಮಟ್ಟಕ್ಕೆ ಇಳಿದಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ತಂಬಾಕು ಉತ್ಪನ್ನಕ್ಕೆ ಹೆಚ್ಚುವರಿ ಸುಂಕ ರೈತರ ಆದಾಯದ ಮೇಲೆ ಪರಿಣಾಮ

ನವದೆಹಲಿ (ಪಿಟಿಐ): 'ತಂಬಾಕಿನ ಉತ್ಪನ್ನಗಳಿಗೆ ಹೆಚ್ಚುವರಿಯಾಗಿ ಸುಂಕ ವಿಧಿಸುವ ಕ್ರಮವು ರೈತರ ಆದಾಯದ ಮೇಲೆ ಪರಿಣಾಮ ಬೀರಲಿದೆ. ಜೊತೆಗೆ ಮಾರುಕಟ್ಟೆಯಲ್ಲಿ ಮತ್ತಷ್ಟು ಕಳ್ಳಸಾಗಾಣಿಕೆ ಹೆಚ್ಚಳಕ್ಕೆ ಕಾರಣವಾಗಲಿದೆ' ಎಂದು ಅಖಿಲ ಭಾರತ ರೈತ ಸಂಘಗಳ ಒಕ್ಕೂಟ (ಎಫ್‌ಎಐಎಫ್‌ಎ) ಶುಕ್ರವಾರ ಹೇಳಿದೆ.

ಕೇಂದ್ರ ಹಣಕಾಸು ಸಚಿವಾಲಯವು ಫೆಬ್ರುವರಿ 1ರಿಂದ ಸಿಗರೇಟಿನ ಉದ್ದದ ಆಧಾರದ ಮೇಲೆ ಪ್ರತಿ 1 ಸಾವಿರ ಸಿಗರೇಟುಗಳಿಗೆ ಹೆಚ್ಚುವರಿಯಾಗಿ ₹2,050ರಿಂದ ₹8,500ವರೆಗೆ ಸುಂಕ ವಿಧಿಸುವುದಾಗಿ ಅಧಿಸೂಚನೆಯಲ್ಲಿ ತಿಳಿಸಿದೆ.

'ಎಫ್‌ಎಐಎಫ್‌ಎ, ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ಮತ್ತು ಗುಜರಾತ್‌ನಲ್ಲಿನ ಬೆಳೆಗಾರರನ್ನು ಪ್ರತಿನಿಧಿಸುತ್ತದೆ. ಈ ಸುಂಕ ಹೆಚ್ಚಳವು ರೈತರ ಜೀವನೋಪಾಯಕ್ಕೆ ಧಕ್ಕೆ ತರುವ ರೀತಿಯಲ್ಲಿ ತೀವ್ರ ಏರಿಕೆ ಆಗಿದೆ' ಎಂದು ಒಕ್ಕೂಟದ ಅಧ್ಯಕ್ಷ ಮುರಳಿ ಬಾಬು ತಿಳಿಸಿದ್ದಾರೆ.

ಹೆಚ್ಚಿನ ಸುಂಕದಿಂದ ಸಿಗರೇಟ್ ಬಳಕೆ ಕಡಿಮೆ ಆಗಲಿದೆ. ಇದು ದೇಶೀಯವಾಗಿ ತಂಬಾಕು ಉದ್ಯಮದ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದೆ.

ಸೆನ್ಸೆಕ್ಸ್ 573 ಅಂಶ ಏರಿಕೆ

ಮುಂಬೈ (ಪಿಟಿಐ): ವಿದ್ಯುತ್, ಬ್ಯಾಂಕಿಂಗ್ ಮತ್ತು ಲೋಹದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಏಷ್ಯಾದ ಷೇರುಪೇಟೆ ಸೂಚ್ಯಂಕಗಳ ಏರಿಕೆ ಸಹ ದೇಶದ ಷೇರುಪೇಟೆ ಸೂಚ್ಯಂಕಗಳ ಹೆಚ್ಚಳಕ್ಕೆ ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 573 ಅಂಶ ಏರಿಕೆಯಾಗಿ, 85,762ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 182 ಅಂಶ ಹೆಚ್ಚಳವಾಗಿ 26,328ಕ್ಕೆ ಕೊನೆಗೊಂಡಿದೆ.

ಎನ್‌ಟಿಪಿಸಿ, ಟ್ರೆಂಟ್, ಬಜಾಜ್ ಫೈನಾನ್ಸ್, ಪವರ್‌ಗ್ರಿಡ್, ಮಾರುತಿ ಸುಜುಕಿ, ಎಸ್‌ಬಿಐ, ಐಸಿಐಸಿಐ ಬ್ಯಾಂಕ್ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಐಟಿಸಿ, ಕೋಟಕ್ ಮಹೀಂದ್ರ ಬ್ಯಾಂಕ್, ಟೈಟನ್, ಎಕ್ಸಿಸ್ ಬ್ಯಾಂಕ್ ಮತ್ತು ಭಾರ್ತಿ ಏರ್‌ಟೆಲ್‌ನ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,268 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರೆ, ದೇಶೀ ಹೂಡಿಕೆದಾರರು ₹1,525 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.36ರಷ್ಟು ಇಳಿಕೆ ಆಗಿದೆ. ಪ್ರತೀ ಬ್ಯಾರಲ್ ದರವು 60.63 ಡಾಲರ್ ಆಗಿದೆ.

ಟೊಮೆಟೊ ಕೆ.ಜಿಗೆ ₹60

ಪ್ರಜಾವಾಣಿ ವಾರ್ತೆ

ಕೋಲಾರ: ಹೊಸ ವರ್ಷದಲ್ಲಿ ಟೊಮೆಟೊ ಧಾರಣೆ ಏರುಗತಿಯಲ್ಲಿ ಸಾಗಿದೆ. ಕೋಲಾರ ಎಪಿಎಂಸಿ ಮಾರುಕಟ್ಟೆ ಹರಾಜಿನಲ್ಲಿ 15 ಕೆ.ಜಿ.ತೂಕದ ಬಾಕ್ಸ್ ಟೊಮೆಟೊ ₹850ರವರೆಗೆ ಮಾರಾಟವಾಗುತ್ತಿದೆ. ಸ್ಥಳೀಯ ಚಿಲ್ಲರೆ ಮಾರುಕಟ್ಟೆಯಲ್ಲೂ ಕೆ.ಜಿಗೆ ₹60 ದರದಲ್ಲಿ ಮಾರಾಟ ಆಗುತ್ತಿದೆ.

ಇತ್ತೀಚಿನ ತಿಂಗಳಲ್ಲಿ ಒಂದು ಕ್ರೇಟ್ ₹850ಕ್ಕೆ ಮಾರಾಟವಾಗಿರುವುದು ಇದೇ ಮೊದಲು. ಎಪಿಎಂಸಿ ಮಾರುಕಟ್ಟೆಯಲ್ಲಿ ಟೊಮೆಟೊ ಆವಕ ಪ್ರಮಾಣ 8 ಸಾವಿರ ಕ್ವಿಂಟಲ್ (ಸುಮಾರು 54 ಸಾವಿರ ಬಾಕ್ಸ್) ಇತ್ತು.

ಪ್ರಮುಖವಾಗಿ ತಮಿಳುನಾಡಿನಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ. ಅಲ್ಲಿಂದ ವರ್ತಕರು ಬಂದು ಲಾರಿಯಲ್ಲಿ ಟೊಮೆಟೊ ಒಯ್ಯುತ್ತಿದ್ದಾರೆ. ಒಡಿಶಾ, ಜಾರ್ಖಂಡ್, ಪಶ್ಚಿಮ ಬಂಗಾಳ, ಬಿಹಾರದಿಂದಲೂ ಬೇಡಿಕೆ ಬರುತ್ತಿದೆ.

ಕೋಲಾರ ಎಂಪಿಎಂಸಿ ಮಾರುಕಟ್ಟೆಯಲ್ಲಿ ಟೊಮೆಟೊ ಹರಾಜು

ಟೊಮೆಟೊ ಧಾರಣೆ ಮತ್ತೆ ಏರಿಕೆ ಕಾಣುತ್ತಿದೆ. ಜಿಲ್ಲೆಯಲ್ಲಿ ಟೊಮೆಟೊ ಫಸಲು ಕಡಿಮೆ ಇದ್ದರೂ ಹೊರ ಜಿಲ್ಲೆಗಳಿಂದ ಬರುತ್ತಿದ್ದು, ವಹಿವಾಟು ಚೆನ್ನಾಗಿ ನಡೆಯುತ್ತಿದೆ

ಕಿರಣ್, ಎಪಿಎಂಸಿ ಕಾರ್ಯದರ್ಶಿ, ಕೋಲಾರ

ಚಿಟಿಕೆ ಸುದ್ದಿ

ಯುಕೊ ಬ್ಯಾಂಕ್ ವ್ಯವಹಾರ ಹೆಚ್ಚಳ

ಕೋಲ್ಕತ್ತ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಯುಕೋ ಬ್ಯಾಂಕ್‌ನ ಒಟ್ಟು ವ್ಯವಹಾರವು ₹5.54 ಲಕ್ಷ ಕೋಟಿಯಷ್ಟಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ಒಟ್ಟು ವ್ಯವಹಾರ ₹4.89 ಲಕ್ಷ ಕೋಟಿಯಷ್ಟಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 13ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಶುಕ್ರವಾರ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ಸಾಲ ನೀಡಿಕೆಯಲ್ಲಿ ಶೇ 16ರಷ್ಟು ಏರಿಕೆಯಾಗಿದ್ದು, ₹2.43 ಲಕ್ಷ ಕೋಟಿ ಸಾಲ ನೀಡಿದೆ. ಒಟ್ಟು ಠೇವಣಿಯು ₹2.80 ಲಕ್ಷ ಕೋಟಿಯಿಂದ ₹3.10 ಲಕ್ಷ ಕೋಟಿಗೆ ಹೆಚ್ಚಳವಾಗಿದೆ.

ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ (ಸಿಎಎಸ್‌ಎ) ಅನುಪಾತವು ಶೇ 38.41ರಷ್ಟಾಗಿದೆ. ಸಾಲ ಮತ್ತು ಠೇವಣಿ ಅನುಪಾತವು ಶೇ 78.61 ಆಗಿದೆ ಎಂದು ತಿಳಿಸಿದೆ.

ಬಿವೈಡಿ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಚೀನಾದ ವಿದ್ಯುತ್‌ಚಾಲಿತ ವಾಹನ ತಯಾರಿಕಾ ಕಂಪನಿ ಬಿವೈಡಿ, ತನ್ನ ಸೀಲಿಯನ್ 7 ವಾಹನದ ಬೆಲೆಯನ್ನು ಭಾರತದಲ್ಲಿ ಹೆಚ್ಚಳ ಮಾಡಿರುವುದಾಗಿ ಹೇಳಿದೆ.

ಈ ಮಾದರಿಯ ವಾಹನಗಳ ದರವನ್ನು ₹50 ಸಾವಿರ ಹೆಚ್ಚಳ ಮಾಡಿದ್ದು, ಪರಿಷ್ಕೃತ ದರವು ಗುರುವಾರದಿಂದ ಜಾರಿಗೆ ಬಂದಿದೆ ಎಂದು ಬಿವೈಡಿ ಇಂಡಿಯಾ ತಿಳಿಸಿದೆ.

ಬಿವೈಡಿ ಇಂಡಿಯಾ ಸೀಲಿಯನ್ 7 ಬೆಲೆ ಈ ಮೊದಲು ₹48.9 ಲಕ್ಷ (ಎಕ್ಸ್ ಷೋರೂಂ) ದರ ಇತ್ತು. ಅದು ಈಗ ₹49.4 ಲಕ್ಷಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಸೇನೆ ಗುರಿಯಾಗಿಸಿ ದಾಳಿ: ಉಕ್ರೇನ್

ಕೀವ್ (ಪಿಟಿಐ): ರಷ್ಯಾ ಸೇನೆಯನ್ನು ಮಾತ್ರವೇ ಗುರಿಯಾಗಿಸಿ ದಾಳಿ ನಡೆಸಿದ್ದೇವೆ. ನಾಗರಿಕರ ಮೇಲೆ ನಾವು ದಾಳಿ ಮಾಡಿಲ್ಲ ಎಂದು ಉಕ್ರೇನ್ ಶುಕ್ರವಾರ ಸ್ಪಷ್ಟಪಡಿಸಿದೆ.

ರಷ್ಯಾ ವಶಪಡಿಸಿಕೊಂಡಿರುವ, ಉಕ್ರೇನ್‌ನ ಬಂದರು ನಗರಿ ಖೆರ್ಸನ್ ಪ್ರದೇಶದ ಖೋರ್ಲಿ ಎಂಬಲ್ಲಿ ಕೆಫೆ ಮತ್ತು ಹೋಟೆಲ್‌ನಲ್ಲಿ ಹೊಸ ವರ್ಷಾಚರಣೆ ಸಂಭ್ರಮದಲ್ಲಿ ತೊಡಗಿದ್ದವರ ಮೇಲೆ ನಡೆದ ಡ್ರೋನ್ ದಾಳಿಯಲ್ಲಿ 27 ಮಂದಿ ಸಾವಿಗೀಡಾಗಿದ್ದಾರೆ. ಇದು ಉಕ್ರೇನ್ ನಡೆಸಿದ ರಹಸ್ಯ ದಾಳಿ ಎಂದು ರಷ್ಯಾ ಆರೋಪಿಸಿದೆ.

ಎಟರ್ನಲ್ ಸ್ಥಾಪಕ ದೀಪಿಂದರ್ ಗೋಯಲ್ ಹೇಳಿಕೆ

'ಗಿಗ್ ಆರ್ಥಿಕತೆಗೆ ಕಡಿಮೆ ನಿಯಂತ್ರಣ ಅಗತ್ಯ'

ನವದೆಹಲಿ (ಪಿಟಿಐ): 'ದೇಶದ ಗಿಗ್ ಆರ್ಥಿಕತೆಯ ನಿಯಂತ್ರಣಗಳನ್ನು ಕಡಿತಗೊಳಿಸಬೇಕಿದೆ. ಇದು ಹೆಚ್ಚಿನ ಜನರನ್ನು ಸಂಘಟಿತ ವಲಯಕ್ಕೆ ಸೇರ್ಪಡೆ ಮಾಡಲಿದೆ' ಎಂದು ಎಟರ್ನಲ್ ಸ್ಥಾಪಕ ದೀಪಿಂದರ್ ಗೋಯಲ್ ಹೇಳಿದ್ದಾರೆ.

ಗಿಗ್ ಕೆಲಸವು ದೇಶದ ಅತಿದೊಡ್ಡ ಸಂಘಟಿತ ಉದ್ಯೋಗ ಸೃಷ್ಟಿ ಎಂಜಿನ್‌ಗಳಲ್ಲಿ ಒಂದಾಗಿದೆ. ಗಿಗ್ ಕಾರ್ಮಿಕರಿಗೆ ವಿಮೆ, ನ್ಯಾಯಸಮ್ಮತ ಸವಲತ್ತು, ವೇತನವನ್ನು ಒದಗಿಸಲಾಗುತ್ತಿದೆ ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಗಿಗ್‌ಗೆ ಹೆಚ್ಚಿನ ನಿಯಂತ್ರಣ ಅಗತ್ಯವಿಲ್ಲ, ಕಡಿಮೆ ನಿಯಂತ್ರಣ ಇದ್ದರೆ ಸಾಕು. ಇದು ಹೆಚ್ಚಿನ ಜನರನ್ನು ಈ ವಲಯಕ್ಕೆ ತರುತ್ತದೆ. ಅವರು ಸ್ವಲ್ಪ ಹಣ ಗಳಿಸಲು, ತಮ್ಮನ್ನು ತಾವು ಕೌಶಲದಿಂದ ಬೆಳೆಸಿಕೊಳ್ಳಲು ಮತ್ತು ನಂತರ ಸಂಘಟಿತ ಕಾರ್ಯಪಡೆಗೆ ಸೇರಲು ಸಾಧ್ಯವಾಗುತ್ತದೆ ಎಂದು ಗೋಯಲ್ ಹೇಳಿದ್ದಾರೆ.

ಗ್ರಾಹಕರ ಮನೆ ಸುತ್ತಲೂ ನಾವು ಅಂಗಡಿಗಳನ್ನು ಹೊಂದಿದ್ದೇವೆ. ಹೀಗಾಗಿ ಆರ್ಡರ್ ಮಾಡಿದ ಸರಕುಗಳನ್ನು 10 ನಿಮಿಷದಲ್ಲಿ ಪೂರೈಸುತ್ತೇವೆ. ಅಷ್ಟೇ ಹೊರತು ಮನೆ ಬಾಗಿಲಿಗೆ ಸರಕುಗಳನ್ನು ಪೂರೈಸುವ ನಮ್ಮ ಡೆಲಿವರಿ ಪಾಲುದಾರನಿಗೆ ವೇಗವಾಗಿ ವಾಹನ ಚಲಾಯಿಸುವಂತೆ ಹೇಳಿಲ್ಲ ಎಂದರು.

'ನೀವು ಬ್ಲಿಂಕಿಟ್‌ನಲ್ಲಿ ಆರ್ಡರ್ ಮಾಡಿದಾಗ, ಆರ್ಡರ್ ಸ್ವೀಕರಿಸಿ, ಪ್ಯಾಕ್ ಮಾಡಲು 2.5 ನಿಮಿಷ ಆಗುತ್ತದೆ. ಬಳಿಕ 8 ನಿಮಿಷದಲ್ಲಿ ಸರಾಸರಿ 2 ಕಿ.ಮೀ ಗಿಂತ ಕಡಿಮೆ ಪ್ರಯಾಣಿಸುತ್ತಾನೆ. ಅಂದರೆ ಮನೆ ಬಾಗಿಲಿಗೆ ಸರಕುಗಳನ್ನು ಪೂರೈಸುವ ನಮ್ಮ ಡೆಲಿವರಿ ಪಾಲುದಾರನು ಗಂಟೆಗೆ 15 ಕಿ.ಮೀ ವೇಗದಲ್ಲಿ ಸಂಚರಿಸಿದ್ದಾನೆ ಎಂದರ್ಥ. ಗ್ರಾಹಕರಿಗೆ ಭರವಸೆ ನೀಡಿದ ಮೂಲ ಸಮಯ ಎಷ್ಟು ಎಂಬುದನ್ನು ಸೂಚಿಸಲು ನಮ್ಮ ಪಾಲುದಾರರು ತಮ್ಮ ಅಪ್ಲಿಕೇಶನ್‌ನಲ್ಲಿ ಟೈಮರ್ ಅನ್ನು ಸಹ ಹೊಂದಿಲ್ಲ ಎಂದು ಹೇಳಿದ ಅವರು ಕಂಪನಿಯು 10 ನಿಮಿಷದಲ್ಲಿ ಸರಕುಗಳನ್ನು ಗ್ರಾಹಕರಿಗೆ ತಲುಪಿಸುವ ಭರವಸೆಯನ್ನು ಹೇಗೆ ಪೂರೈಸುತ್ತವೆ ಎಂಬುದನ್ನು ವಿವರಿಸಿದ್ದಾರೆ.

ಎಟರ್ನಲ್ ಕಂಪನಿಯು ಜೊಮಾಟೊ ಮತ್ತು ಬ್ಲಿಂಕಿಟ್‌ನ ಮಾಲೀಕತ್ವ ಹೊಂದಿದೆ.

ಕಳೆದ ತಿಂಗಳು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಪತ್ರ ಬರೆದ ಗಿಗ್ ಮತ್ತು ಪ್ಲಾಟ್‌ಫಾರ್ಮ್ ಸೇವೆಗಳ ಕಾರ್ಮಿಕರ ಒಕ್ಕೂಟವು (ಜಿಐಪಿಎಸ್‌ಡಬ್ಲ್ಯುಯು) ಕಾರ್ಮಿಕರ ಸುರಕ್ಷತೆಗೆ ಆದ್ಯತೆ ನೀಡಲು 10ರಿಂದ 20 ನಿಮಿಷದಲ್ಲಿ ಗ್ರಾಹಕರಿಗೆ ಸರಕುಗಳನ್ನು ತಲುಪಿಸುವ ಸೇವೆಯನ್ನು ರದ್ದುಪಡಿಸುವುದು ಸೇರಿ ವಿವಿಧ ಬೇಡಿಕೆ ಈಡೇರಿಸುವಂತೆ ಮನವಿ ಮಾಡಿತ್ತು.

ಪ್ರಸ್ತುತ ಅಂದಾಜಿನ ಪ್ರಕಾರ ದೇಶದಲ್ಲಿ 1.27 ಕೋಟಿ ಗಿಗ್ ಕಾರ್ಮಿಕರು ಇದ್ದಾರೆ. 2029–30ರ ವೇಳೆಗೆ ಈ ಪ್ರಮಾಣ 2.35 ಕೋಟಿಗೆ ಹೆಚ್ಚಳವಾಗಲಿದೆ ಎಂದು ನೀತಿ ಆಯೋಗ ಅಂದಾಜಿಸಿದೆ.

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ 90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ https://bit.ly/40dPCqy

ಅಶ್ಲೀಲ ವಿಷಯ ತೆಗೆಯಲು 'ಎಕ್ಸ್'ಗೆ ಕೇಂದ್ರ ಸೂಚನೆ

ನವದೆಹಲಿ(ಪಿಟಿಐ): ಎಲ್ಲ ಬಗೆಯ ಅಶ್ಲೀಲ ಹಾಗೂ ಕಾನೂನುಬಾಹಿರ ವಿಷಯವಸ್ತುಗಳನ್ನು ವೇದಿಕೆಯಿಂದ ತಕ್ಷಣವೇ ತೆಗೆದು ಹಾಕುವಂತೆ ಸಾಮಾಜಿಕ ಮಾಧ್ಯಮ 'ಎಕ್ಸ್'ಗೆ ಕೇಂದ್ರ ಸರ್ಕಾರ ಶುಕ್ರವಾರ ಸೂಚಿಸಿದೆ.

ವಿಶೇಷವಾಗಿ, ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಆ್ಯಪ್ 'ಗ್ರೋಕ್'ನಿಂದ ರೂಪಿಸಿರುವ ಇಂತಹ ವಿಷಯ ವಸ್ತುಗಳನ್ನು ಕೂಡಲೇ ತೆಗೆದು ಹಾಕಬೇಕು. ಇಲ್ಲದಿದ್ದರೆ ಕಾನೂನು ಪ್ರಕಾರ ಕ್ರಮ ಎದುರಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಈ ಕುರಿತು ಭಾರತದಲ್ಲಿರುವ 'ಎಕ್ಸ್'ನ ಮುಖ್ಯ ಅನುಪಾಲನಾ ಅಧಿಕಾರಿಗೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ನೋಟಿಸ್ ನೀಡಿದೆ.

'ಮಾಹಿತಿ ತಂತ್ರಜ್ಞಾನ ಕಾಯ್ದೆ ನಿಯಮಗಳ ಪಾಲನೆ ಮಾಡುವಲ್ಲಿ ವೇದಿಕೆ ವಿಫಲವಾಗಿದೆ. ನಿಯಮಗಳನ್ನು ಉಲ್ಲಂಘಿಸಿ ರೂಪಿಸಲಾದ ಇಲ್ಲವೇ ಈಗಾಗಲೇ ರೂಪಿಸಿ ಪ್ರಸಾರ ಮಾಡಲಾದ ಎಲ್ಲ ಅಶ್ಲೀಲ ವಿಷಯವಸ್ತುಗಳನ್ನು ಕೂಡಲೇ ವೇದಿಕೆಯಿಂದ ತೆಗೆದು ಹಾಕಬೇಕು ಅಥವಾ ಬಳಕೆದಾರರಿಗೆ ಅವುಗಳು ಸಿಗದಂತೆ ಕ್ರಮ ಕೈಗೊಳ್ಳಬೇಕು. ಇಂತಹ ಕ್ರಮ ಕೈಗೊಂಡಿದ್ದಕ್ಕೆ ಸಂಬಂಧಿಸಿದ ಯಾವುದೇ ಸಾಕ್ಷ್ಯ ನಾಶವಾಗದಂತೆ ನೋಡಿಕೊಳ್ಳಬೇಕು' ಎಂದೂ ಸಚಿವಾಲಯ ಸೂಚಿಸಿದೆ.

'ಭೂಸ್ವಾಧೀನ: ನೀತಿ ಬದಲಿಸುವ ಯೋಜನೆ ಇಲ್ಲ'

ನವದೆಹಲಿ (ಪಿಟಿಐ): ಭೂ ಸ್ವಾಧೀನಕ್ಕೆ ಸಂಬಂಧಿಸಿದ ನೀತಿಯಲ್ಲಿ ಬದಲಾವಣೆ ತರುವ ಯಾವುದೇ ಯೋಜನೆ ಸರ್ಕಾರದ ಮುಂದೆ ಇಲ್ಲ ಎಂದು ಕೇಂದ್ರ ಸಂಪುಟ ಕಾರ್ಯದರ್ಶಿ ಟಿ.ವಿ.ಸೋಮನಾಥನ್ ಶುಕ್ರವಾರ ಹೇಳಿದ್ದಾರೆ.

ಭೂಸ್ವಾಧೀನ ಹಾಗೂ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನೆಗಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಈ ಮಾಹಿತಿ ನೀಡಿದ್ದಾರೆ.

'ಎಲ್ಲ ರಾಜ್ಯ ಸರ್ಕಾರಗಳು ಯೋಜನೆಗಳನ್ನು ಶೀಘ್ರವೇ ಮುಕ್ತಾಯಗೊಳಿಸಲು ಬಯಸಿವೆ. ಈ ನಿಟ್ಟಿನಲ್ಲಿ ಎದುರಾಗಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವುದಕ್ಕೆ ಸಂಬಂಧಿಸಿ ಎಲ್ಲ ಮುಖ್ಯ ಕಾರ್ಯದರ್ಶಿಗಳು ಸಕಾರಾತ್ಮಕವಾಗಿ ಸ್ಪಂದಿಸಿದರು' ಎಂದು ಹೇಳಿದರು.

'ಸಭೆಯಲ್ಲಿ ಪ್ರಸ್ತಾಪಗೊಂಡ ಯೋಜನೆಗಳ ಪೈಕಿ ಶೇ 71ರಷ್ಟು ಯೋಜನೆಗಳು ಭೂ ಸ್ವಾಧೀನ/ಅರಣ್ಯ ಅಥವಾ ಪರಿಸರ ಅನುಮೋದನೆಗೆ ಸಂಬಂಧಿಸಿದ್ದಾಗಿದ್ದವು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮೃತರ ಗುರುತು ಪತ್ತೆ ಕಾರ್ಯ ಚುರುಕು

ಕ್ರಾನ್ಸ್ -ಮೊಂಟಾನ (ಸ್ವಿಟ್ಜರ್ಲೆಂಡ್) (ಎಪಿ): ಇಲ್ಲಿನ ಸ್ವಿಸ್ ಆಲ್ಪ್ಸ್ ರೆಸಾರ್ಟ್ ಪಟ್ಟಣದ ಬಾರ್‌ನಲ್ಲಿ ಹೊಸ ವರ್ಷಾಚರಣೆ ವೇಳೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಮೃತಪಟ್ಟವರ ಗುರುತು ಪತ್ತೆ ಪ್ರಕ್ರಿಯೆಯನ್ನು ತನಿಖಾಧಿಕಾರಿಗಳು ಚುರುಕುಗೊಳಿಸಿದ್ದಾರೆ.

ಬುಧವಾರ ರಾತ್ರಿ ನಡೆದ ದುರಂತದಲ್ಲಿ 40 ಮಂದಿ ಮೃತಪಟ್ಟು, 115 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ ಕೆಲವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚುವ ಆತಂಕ ಇದೆ. 'ಮೃತರ ಗುರುತು ಪತ್ತೆ ಕಾರ್ಯ ವನ್ನು ತ್ವರಿತಗೊಳಿಸಿದ್ದೇವೆ. ಕೆಲವು ಮೃತದೇಹಗಳು ಸಂಪೂರ್ಣವಾಗಿ ಸುಟ್ಟುಹೋಗಿರುವ ಕಾರಣ ಗುರುತು ಪತ್ತೆಗೆ ಹೆಚ್ಚಿನ ದಿನಗಳು ಬೇಕಾಗ ಬಹುದು' ಎಂದು ಪೊಲೀಸರು ಹೇಳಿದ್ದಾರೆ.

'ಉಮರ್, ನಿಮ್ಮ ಬಗ್ಗೆಯೇ ಯೋಚಿಸುತ್ತಿದ್ದೇವೆ'

ಜೆಎನ್‌ಯು ಮಾಜಿ ವಿದ್ಯಾರ್ಥಿಗೆ ನ್ಯೂಯಾರ್ಕ್ ಮೇಯರ್ ಮಮ್ದಾನಿ ಪತ್ರ

ನ್ಯೂಯಾರ್ಕ್ (ಪಿಟಿಐ): 'ಆತ್ಮೀಯ ಉಮರ್, 'ಕಹಿತನವು' ವ್ಯಕ್ತಿಯೊಬ್ಬನ ಅಂತರಾತ್ಮವನ್ನು ಆವರಿಸಿಕೊಳ್ಳದಂತೆ ನೋಡಿಕೊಳ್ಳುವ ಕುರಿತು ನೀವು ಆಡಿದ ಮಾತುಗಳನ್ನು ನಾನು ಪದೇ ಪದೇ ನೆನಪಿಸಿಕೊಳ್ಳುತ್ತೇನೆ. ನಿಮ್ಮ ಪೋಷಕರನ್ನು ಭೇಟಿಯಾದಾಗ ಬಹಳ ಸಂತೋಷವಾಯಿತು. ನಾವೆಲ್ಲರೂ ನಿಮ್ಮ ಬಗ್ಗೆಯೇ ಯೋಚಿಸುತ್ತಿದ್ದೇವೆ'

ಉಮರ್ ಖಾಲಿದ್

ದೆಹಲಿಯಲ್ಲಿ 2020ರ ಫೆಬ್ರುವರಿಯಲ್ಲಿ ನಡೆದಿದ್ದ ಗಲಭೆಗೆ ಪಿತೂರಿ ನಡೆಸಿದ ಆರೋಪದಡಿ ಬಂಧಿತರಾಗಿ ಜೈಲಿನಲ್ಲಿರುವ, ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಅವರಿಗೆ ನ್ಯೂಯಾರ್ಕ್‌ನ 112ನೇ ಮೇಯರ್, ಭಾರತ ಸಂಜಾತ ಜೊಹ್ರಾನ್ ಮಮ್ದಾನಿ ಅವರು ಬರೆದಿರುವ ಪತ್ರದ ಸಾರಾಂಶ ಇದು.

ಯಾರಾದರೂ ಯಾವುದೇ ಆರೋಪಿಗೆ ಬೆಂಬಲ ಸೂಚಿಸಿ ಭಾರತದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಿದರೆ, ದೇಶವು ಅದನ್ನು ಸಹಿಸುವುದಿಲ್ಲ

ಗೌರವ್ ಭಾಟಿಯಾ, ಬಿಜೆಪಿ ರಾಷ್ಟ್ರೀಯ ವಕ್ತಾರ

ಮಮ್ದಾನಿ ಅವರ ಸಹಿ ಇರುವ ಪತ್ರವನ್ನು ಉಮರ್ ಖಾಲಿದ್ ಅವರ ಸಂಗಾತಿ ಬನೊಜ್ಯೋತ್ಸ್ನಾ ಲಾಹಿರಿ ಅವರು 'ಜೈಲು ಪ್ರತ್ಯೇಕಿಸಲು ಪ್ರಯತ್ನಿಸಿದಾಗ ಪದಗಳ ಪಯಣ' ಎಂಬ ಒಕ್ಕಣೆಯೊಂದಿಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಜೈಲು ಡೈರಿ' ಓದಿದ್ದ ಮಮ್ದಾನಿ

2023ರಲ್ಲಿ ಶ್ವೇತಭವನಕ್ಕೆ ನರೇಂದ್ರ ಮೋದಿ ಅವರು ಭೇಟಿ ನೀಡುವ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ 'ಹೌಡಿ ಡೆಮಾಕ್ರಸಿ' ಕಾರ್ಯಕ್ರಮದಲ್ಲಿ, ಜೊಹ್ರಾನ್ ಮಮ್ದಾನಿ ಅವರು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಮುಖಂಡರಾಗಿದ್ದ ಉಮರ್ ಅವರ ಪತ್ರ 'ಜೈಲು ಡೈರಿ'ಯನ್ನು ಓದಿದ್ದರು.

ಉಮರ್ ಅವರ ಪೋಷಕರು ಕಳೆದ ತಿಂಗಳು ನ್ಯೂಯಾರ್ಕ್‌ನಲ್ಲಿ ಮಮ್ದಾನಿ ಅವರನ್ನು ಭೇಟಿಯಾಗಿದ್ದರು. ಈ ವೇಳೆ ಅವರು ಪತ್ರವನ್ನು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮನವಿ: ಖಾಲಿದ್‌ಗೆ ಜಾಮೀನು ನೀಡುವಂತೆ ಒತ್ತಾಯಿಸಿ ಹಾಗೂ ನ್ಯಾಯೋಚಿತ, ಸಕಾಲಿಕ ವಿಚಾರಣೆ ನಡೆಸುವಂತೆ ಆಗ್ರಹಿಸಿ ಅಮೆರಿಕದ ಸಂಸದರ ತಂಡವು, ಅಮೆರಿಕದಲ್ಲಿನ ಭಾರತದ ರಾಯಭಾರಿ ವಿನಯ್ ಕ್ವಾತ್ರಾ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದೆ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ ಬಂಧಿಸಲಾಗಿರುವ ಉಮರ್ ಖಾಲಿದ್ ಅವರು ಐದು ವರ್ಷಗಳಿಂದ ಜಾಮೀನು ಸಿಗದೆ ಜೈಲಿನಲ್ಲಿದ್ದಾರೆ. ಅವರ ವಿಚಾರಣೆಯನ್ನು ಅಂತರರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ ನಡೆಸುವಂತೆ ಮನವಿ ಮಾಡಿದೆ.

ಖಾಲಿದ್ ಅವರ ದೀರ್ಘಾವಧಿ ವಿಚಾರಣೆ ಪೂರ್ವ ಬಂಧನದ ಕುರಿತು ಜಿಮ್ ಮೆಕ್‌ಗವರ್ನ್ ನೇತೃತ್ವದ ಅಮೆರಿಕದ ಎಂಟು ಸಂಸದರು ಕಳವಳ ವ್ಯಕ್ತಪಡಿಸಿದ್ದಾರೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹20000-27700
ಬೆಂಗಳೂರು	₹29000-33000
ತುಮಕೂರು	₹19000-24000

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹1500-2700
ಮಧ್ಯಮ	₹1000-1500
ಸಣ್ಣ	₹200-1000

ಮುಂಬೈ ಧಾರಣೆ (ಶೇಂಗಾ) 02-01-2026	
ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1595 (1590)
ಒಂದು ವಾರದ ಡೆಲಿವರಿ	1590 (1585)
ಪಾಮ್ ವಾರದ ಡೆಲಿವರಿ	1248 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1425 (1425)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,34,000 (1,32,900)
ಬೆಳ್ಳಿ ಕೆ.ಜಿಗೆ	2,34,000 (2,29,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಏಪ್ರಿಲ್ 23, 24ಕ್ಕೆ ಸಿಇಟಿ

ಒಂದನೇ ಪುಟದಿಂದ..

ಬಳಿಕ ಮಾತನಾಡಿದ ಅವರು 'ಅತ್ಯಾಧುನಿಕ ಜಾಲತಾಣ, ಮೊಬೈಲ್ ಅಪ್ಲಿಕೇಷನ್ ಮತ್ತು ಅಭ್ಯರ್ಥಿಗಳಿಗೆ ನೆರವಾಗಲು ಚಾಟ್‌ಬಾಟ್‌ಗಳನ್ನು ರೂಪಿಸಿದ್ದರೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತೊಡಕಾಗುತ್ತಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂದು ಸಿಇಟಿ ಪ್ರಕ್ರಿಯೆಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ಸಚಿತ್ರವಾಗಿ ವಿವರಿಸುವ ಕೈಪಿಡಿಯನ್ನು ರೂಪಿಸಿದ್ದೇವೆ. ಈ 'ಸಿಇಟಿ ದಿಕ್ಸೂಚಿ'ಯನ್ನು ಎಲ್ಲ ಕಾಲೇಜುಗಳಿಗೆ ತಲುಪಿಸಿ, ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತದೆ' ಎಂದರು.

'ಕಾಲೇಜು ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡುತ್ತೇವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದರೆ, ಅದು ಅಂತಿಮ. ಸರ್ಕಾರದಿಂದ ಈ ಸಂಬಂಧ ಆದೇಶ ಬಂದರೆ, ಅದನ್ನು ಪಾಲಿಸುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಿಇಟಿ ವೇಳಾಪಟ್ಟಿ

ಪತ್ರಿಕೆ	ದಿನಾಂಕ	ಸಮಯ
ಭೌತವಿಜ್ಞಾನ	ಏ.23	ಬೆಳಿಗ್ಗೆ 10.30-11.50
ರಾಸಾಯನವಿಜ್ಞಾನ	ಏ.23	ಮಧ್ಯಾಹ್ನ 2.30-3.50
ಗಣಿತ	ಏ.24	ಬೆಳಿಗ್ಗೆ 10.30-11.50
ಜೀವವಿಜ್ಞಾನ	ಏ.24	ಮಧ್ಯಾಹ್ನ 2.30-3.50
ಹೊರನಾಡು/ಗಡಿನಾಡು ಅಭ್ಯರ್ಥಿಗಳಿಗೆ ಕನ್ನಡ	ಏ.22	ಬೆಳಿಗ್ಗೆ 10.30-11.30

ಇತರ ಪರೀಕ್ಷೆಗಳು

ಪರೀಕ್ಷೆ	ದಿನಾಂಕ
ಕ್ರೈಸ್ ವಸತಿ ಶಾಲೆ ಪ್ರವೇಶ ಪರೀಕ್ಷೆ	ಮಾರ್ಚ್ 01
ಪಿಜಿ–ಸಿಇಟಿ (ಎಂಬಿಎ, ಎಂಸಿಎ)	ಮೇ 14
ಪಿಜಿ–ಸಿಇಟಿ (ಎಂ.ಟೆಕ್) ಮತ್ತು ಡಿಸಿಇಟಿ	ಮೇ 23
ಎಂ.ಎಸ್‌ಸಿ ನರ್ಸಿಂಗ್, ಎಂ.ಎಸ್‌ಸಿ–ಎಚ್‌ಎಸ್, ಎಂಪಿಟಿ	ಜುಲೈ 18
ಕೆಎಸ್‌ಇಟಿ	ಅಕ್ಟೋಬರ್ 11
ಎಂ.ಫಾರ್ಮಾ, ಡಿ.ಫಾರ್ಮಾ	ನವೆಂಬರ್ 21

'ವಿದ್ಯಾರ್ಥಿ ಸಂಘಗಳ ಚುನಾವಣೆ: 13ಕ್ಕೆ ಸಭೆ'

'ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸುವ ಕಾರ್ಯಸಾಧ್ಯತೆಯ ಅಧ್ಯಯನಕ್ಕೆ ಕೆಪಿಸಿಸಿಯು ರಚಿಸಲಿರುವ ಸಮಿತಿಯು ಇದೇ 13ಕ್ಕೆ ಮೊದಲ ಸಭೆ ನಡೆಸಲಿದೆ' ಎಂದು ಸಚಿವ ಶರಣ ಪ್ರಕಾಶ ಪಾಟೀಲ ಅವರು ಹೇಳಿದರು.

ಸಮಿತಿಯ ಸಂಚಾಲಕರೂ ಆಗಿರುವ ಅವರು, 'ಚುನಾವಣೆಯ ರೂಪುರೇಷೆ, ಈ ಚುನಾವಣೆಗಳು ರಾಜಕೀಯ ಪಕ್ಷಗಳನ್ನು ಒಳಗೊಳ್ಳಬೇಕೇ ಅಥವಾ ಬೇಡವೇ, ಚುನಾವಣೆಯ ನಡೆಯಬೇಕಾದ ಸ್ವರೂಪ, ಅದರ ಪರಿಣಾಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸುತ್ತೇವೆ. ಸಮಿತಿ ಸಭೆಯಲ್ಲಿ ನಿರ್ಧರಿಸಿದ ವಿಷಯಗಳ ಕುರಿತು ವರದಿ ಮಾಡಿ ಕೆಪಿಸಿಸಿ ಅಧ್ಯಕ್ಷರಿಗೆ ಸಲ್ಲಿಸುತ್ತೇವೆ' ಎಂದರು.

'ಸಿಎಸ್ ಸೀಟುಗಳಿಗೆ ಮಿತಿ'

'ರಾಜ್ಯದಲ್ಲಿ ಒಟ್ಟು 1.53 ಲಕ್ಷ ಎಂಜಿನಿಯರಿಂಗ್ ಸೀಟುಗಳು ಲಭ್ಯವಿದ್ದು, ಕಾಲೇಜುಗಳು 99,000ಕ್ಕೂ ಹೆಚ್ಚು ಸೀಟುಗಳನ್ನು ಕಂಪ್ಯೂಟರ್ ಸೈನ್ಸ್ ಸಂಬಂಧಿತ ಕೋರ್ಸ್‌ಗಳಿಗೆ ಮೀಸಲಿಡುತ್ತಿವೆ. ಎಂಜಿನಿಯರಿಂಗ್‌ನ ಇತರ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಉತ್ತೇಜಿಸುವ ಸಲುವಾಗಿ ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗಳಿಗೆ ಮಿತಿ ನಿಗದಿ ಮಾಡುತ್ತೇವೆ' ಎಂದು ಸಚಿವ ಎಂ.ಸಿ.ಸುಧಾಕರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ವರ್ಷದಿಂದಲೇ ಈ ಮಿತಿಯನ್ನು ಜಾರಿಗೆ ತರಲಾಗುತ್ತದೆ. ಈ ಸಂಬಂದ ಮಾರ್ಗಸೂಚಿಯನ್ನು ರೂಪಿಸಲು ಸಮಿತಿಯೊಂದನ್ನು ರಚಿಸುತ್ತೇವೆ' ಎಂದರು.

ಅಂಗಾಂಗ ಕಸಿ: ಉಚಿತ ಆಸ್ಪತ್ರೆ

ಒಂದನೇ ಪುಟದಿಂದ...

ಇಲ್ಲಿ ಹೃದಯ, ಕಿಡ್ನಿ, ಯಕೃತ್ತು ಸೇರಿ ಎಲ್ಲ ರೀತಿಯ ಅಂಗಗಳ ಕಸಿ ಮಾಡಲಾಗುವುದು. ಬಿಪಿಎಲ್ ಕುಟುಂಬಗಳಿಗೆ ಉಚಿತ ಮತ್ತು ಉಳಿದವರಿಗೆ ಕಡಿಮೆ ವೆಚ್ಚದಲ್ಲಿ ಸೇವೆ ನೀಡಲಾಗುತ್ತದೆ. ಮೊದಲ ಹಂತದಲ್ಲಿ 300 ಹಾಸಿಗೆ ಸೌಲಭ್ಯ ಕಲ್ಪಿಸಲಿದ್ದು, ನಂತರ ಸಾವಿರಕ್ಕೆ ಹೆಚ್ಚಿಸಲಿದ್ದಾರೆ ಎಂದು ಅವರು ವಿವರಿಸಿದರು.

ಅಪಘಾತ ಮತ್ತು ಇತರ ಕಾರಣಗಳಿಂದ ಮೃತಪಟ್ಟವರ ಅಂಗಾಗಗಳನ್ನು ಪಡೆದು ಕಸಿ ಮಾಡಲು ಅನುಕೂಲ ಆಗುವುದರಿಂದ ನಿಮ್ಹಾನ್ಸ್ ಪಕ್ಕದಲ್ಲೇ ಜಮೀನು ನೀಡಲು ತೀರ್ಮಾನಿಸಲಾಗಿದೆ. ಈ ಆಸ್ಪತ್ರೆಗೆ ವೈದ್ಯರೂ ಸೇರಿದಂತೆ ಎಲ್ಲ ಸಿಬ್ಬಂದಿ ನೇಮಕವನ್ನು ಅಜೀಂ ಪ್ರೇಮ್‌ಜಿ ಪ್ರತಿಷ್ಠಾನವೇ ಮಾಡಲಿದೆ. ಸರ್ಕಾರದ ಕಡೆಯಿಂದ ವೈದ್ಯಕೀಯ ಶಿಕ್ಷಣ ಸಚಿವರು, ಅದೇ ಇಲಾಖೆಯ ಕಾರ್ಯದರ್ಶಿ ಮತ್ತು ಹಣಕಾಸು ಇಲಾಖೆ ಕಾರ್ಯದರ್ಶಿ ಪ್ರತಿನಿಧಿಗಳಾಗಿರುತ್ತಾರೆ. ಸದ್ಯವೇ ತಿಳಿವಳಿಕೆ ಪತ್ರಕ್ಕೆ ಸಹಿ ಮಾಡಲಾಗುವುದು ಎಂದು ಶರಣ ಪ್ರಕಾಶ ತಿಳಿಸಿದರು.

ರ‍್ಯಾಗಿಂಗ್: ವಿದ್ಯಾರ್ಥಿಗಳ ಮೇಲೆ ಎಫ್‌ಐಆರ್

ಶಿಮ್ಲಾ(ಪಿಟಿಐ): ಧರ್ಮಶಾಲಾದ ಸರ್ಕಾರಿ ಕಾಲೇಜಿನ 19 ವರ್ಷದ ವಿದ್ಯಾರ್ಥಿನಿ ಮೇಲೆ ರ‍್ಯಾಗಿಂಗ್ ನಡೆಸಿದ ಆರೋಪದಡಿ ಮೂವರು ವಿದ್ಯಾರ್ಥಿನಿಯರು ಹಾಗೂ ಲೈಂಗಿಕ ಕಿರುಕುಳ ನೀಡಿದ ಆರೋಪ ದಡಿಯಲ್ಲಿ ಪ್ರಾಧ್ಯಾಪಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಲುಧಿಯಾನದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಿದ್ಯಾರ್ಥಿನಿ ಡಿಸೆಂಬರ್ 26ರಂದು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು. ಸಂತ್ರಸ್ತೆಯ ತಂದೆ ನೀಡಿದ ದೂರು ಆಧರಿಸಿ, ಗುರುವಾರ ಎಫ್‌ಐಆರ್ ದಾಖಲಿಸಲಾಗಿದೆ.

'ಕಾಲೇಜಿನ ಹಿರಿಯ ವಿದ್ಯಾರ್ಥಿನಿಯರಾದ ಹರ್ಷಿತಾ, ಆಕೃತಿ ಹಾಗೂ ಕೊಮಲಿಕಾ ಸೇರಿಕೊಂಡು 2025ರ ಸೆಪ್ಟೆಂಬರ್ 18ರಂದು ನನ್ನ ಮಗಳ ಮೇಲೆ ಹಲ್ಲೆ ನಡೆಸಿದ್ದರು. ಕಾಲೇಜಿನ ಪ್ರಾಧ್ಯಾಪಕ ಅಶೋಕ್ ಕುಮಾರ್ ಅವರು ತಮ್ಮ ಮಗಳ ಮೇಲೆ ಲೈಂಗಿಕ ಕಿರುಕುಳ ನೀಡಿದ್ದರು. ತೀವ್ರ ಹಲ್ಲೆ ಹಾಗೂ ಕಿರುಕುಳಕ್ಕಾಗಿ ಮಗಳು ಆಸ್ಪತ್ರೆಗೆ ದಾಖಲಾಗಿದ್ದಳು, ಚಿಕಿತ್ಸೆಗೆ ಸ್ಪಂದಿಸದೇ ನಂತರ ಮೃತಪಟ್ಟಿದ್ದಾಳೆ. ಹಲ್ಲೆಯಿಂದ ತೀವ್ರವಾದ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರಿಂದಲೇ ಮಗಳ ಆರೋಗ್ಯವೂ ತೀವ್ರವಾಗಿ ಹದಗೆಟ್ಟಿತು' ಎಂದು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

'ಮಗಳು ಆಸ್ಪತ್ರೆಗೆ ದಾಖಲಾಗಿದ್ದರಿಂದ ಈ ಮೊದಲು ದೂರು ದಾಖಲಿಸಲು ಸಾಧ್ಯವಾಗಿರಲಿಲ್ಲ' ಎಂದು ವಿವರಿಸಿದ್ದಾರೆ.

ಪ್ರಕರಣ ದಾಖಲಾಗಿರುವುದನ್ನು ಕಂಗ್ರಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ರತನ್ ಖಚಿತಪಡಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Wanted

ತಕ್ಷಣ ಬೇಕಾಗಿದ್ದಾರೆ, ಮಾರ್ಕೆಟಿಂಗ್ ಅಲ್ಲ ಕರ್ನಾಟಕದಲ್ಲಿರುವ ಕಂಪನಿಗಳಿಗೆ ಹಳ್ಳಿಗಳಿಂದ ಬರುವ ಯುವಕರಿಗೆ ಯುವತಿಯರಿಗೆ ಸಂಬಳ 20000-35000 (ವಿದ್ಯಾರ್ಹತೆಯಿಲ್ಲದವರಿಗು) ವಸತಿಯೂಟವಿರುತ್ತದೆ. 9916788422

ಭವಿಷ್ಯ
Astrology

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2 ದಿನಗಳಲ್ಲಿ ಪರಿಹಾರ.9886755306

ಪ್ರವಾಸ
Travel

11ದಿನಗಳ ಗುಜರಾತ್ ರನ್‌ಆಫ್ ಕಚ್. 12 ದಿನಗಳ ಮಧ್ಯಪ್ರದೇಶ. 4 ದಿನಗಳ ಪುರಿಜಗನ್ನಾಥ್. 4 ದಿನಗಳ ಉಜ್ಜಯಿನಿ ಓಂಕಾರೇಶ್ವರ. 10ದಿನಗಳ ನೇಪಾಳ ಮುಕ್ತಿನಾಥ್. 8 ದಿನಗಳ ಅಸ್ಸಾಂ,ಮೇಘಾಲಯ ಕಾಜಿರಂಗ ಸಂಪರ್ಕಿಸಿ. ನಂದಿ ಹಾಲಿಡೇಸ್ ಬಸವನಗುಡಿ 9740228186 9035513332

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜನವರಿ 30ಕ್ಕೆ 'ಚೌಕಿದಾರ್' ತೆರೆಗೆ

'ರಥಾವರ' ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ನಿರ್ದೇಶನದ 'ಚೌಕಿದಾರ್' ಸಿನಿಮಾ ಜ.30ರಂದು ತೆರೆಕಾಣಲಿದೆ. ನಟ ಧ್ರುವ ಸರ್ಜಾ ಬಿಡುಗಡೆ ದಿನಾಂಕವನ್ನು ಇತ್ತೀಚೆಗೆ ಅನಾವರಣ ಗೊಳಿಸಿದರು.

ಪೃಥ್ವಿ ಅಂಬಾರ್ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾದಲ್ಲಿ ಧನ್ಯಾ ರಾಮ್‌ಕುಮಾರ್, ಚೈತ್ರಾ ನಾಯಕಿಯರಾಗಿದ್ದಾರೆ. ಅಪ್ಪ–ಮಗನ ಬಾಂಧವ್ಯದ ಕುರಿತ ಕಥೆ ಚಿತ್ರದಲ್ಲಿದ್ದು, ನಾಯಕನ ತಂದೆಯಾಗಿ ಸಾಯಿಕುಮಾರ್ ಬಣ್ಣಹಚ್ಚಿದ್ದಾರೆ. ಫ್ಯಾಮಿಲಿ ಡ್ರಾಮಾ ಜಾನರ್‌ನ ಚಿತ್ರದಲ್ಲಿ ಶ್ವೇತಾ, ಸುಧಾರಾಣಿ, ಧರ್ಮ, 'ಬಿಗ್‌ಬಾಸ್' ಖ್ಯಾತಿಯ ಗಿಲ್ಲಿ ನಟ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ವಿ.ಎಸ್.ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಕಲ್ಲಹಳ್ಳಿ ಚಂದ್ರಶೇಖರ್ ಸಿನಿಮಾ ನಿರ್ಮಾಣ ಮಾಡಿದ್ದಾರೆ. ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಸಿದ್ದು ಕಂಚನಹಳ್ಳಿ ಛಾಯಾಚಿತ್ರಗ್ರಹಣ, ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಪ್ರೇಮಿಗಳ ದಿನಕ್ಕೆ ಸೀತಾ ಪಯಣ

ಅರ್ಜುನ್ ಸರ್ಜಾ ನಿರ್ದೇಶಿಸಿ, ಪ್ರಮುಖ ಪಾತ್ರವೊಂದರಲ್ಲಿ ನಟಿಸಿರುವ 'ಸೀತಾ ಪಯಣ' ಚಿತ್ರ ಫೆ.14ರಂದು ತೆರೆಗೆ ಬರಲಿದೆ. ತಮ್ಮ ಪುತ್ರಿ ಐಶ್ವರ್ಯಾಗಾಗಿ ಸರ್ಜಾ ಈ ಚಿತ್ರವನ್ನು ನಿರ್ದೇಶಿಸಿ, ನಿರ್ಮಿಸಿದ್ದಾರೆ. ಧ್ರುವ ಸರ್ಜಾ ಕೂಡ ಈ ಚಿತ್ರದ ವಿಶೇಷ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

ಉಪೇಂದ್ರ ಅಣ್ಣನ ಮಗ ನಿರಂಜನ್‌ಗೆ ಐಶ್ವರ್ಯಾ ಜೋಡಿಯಾಗಿದ್ದಾರೆ. ಸರ್ಜಾ ಈ ಹಿಂದೆ 'ಜೈ ಹಿಂದ್' ಮತ್ತು 'ಅಭಿಮನ್ಯು', 'ಪ್ರೇಮಬರಹ' ಸಿನಿಮಾಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದರು.

'ಶೀರ್ಷಿಕೆಯೇ ಸೂಚಿಸುವಂತೆ ಇದೊಂದು ಪಯಣದ ಕುರಿತಾದ ಚಿತ್ರವಾಗಿದ್ದು, ಅಭಿ ಮತ್ತು ಸೀತಾ ಎಂಬ ಹದಿಹರೆಯದವರ ಭಾವನಾತ್ಮಕ ಪಯಣವಿದೆ' ಎಂದಿದೆ ಚಿತ್ರತಂಡ.

ಪ್ರಕಾಶ್ ರಾಜ್, ಸತ್ಯರಾಜ್ ಮುಂತಾದವರು ನಟಿಸಿದ್ದಾರೆ. ಅನೂಪ್ ರುಬೆನ್ಸ್ ಸಂಗೀತ, ಬಾಲಮುರುಗನ್ ಛಾಯಾಚಿತ್ರಗ್ರಹಣವಿದೆ. 'ದೃಶ್ಯಂ' ಸಿನಿಮಾ ಖ್ಯಾತಿಯ ಸಂಕಲನಕಾರ ಆಯೂಬ್ ಖಾನ್ ಈ ಚಿತ್ರಕ್ಕೆ ಸಂಕಲನದ ಜವಾಬ್ದಾರಿ ಹೊತ್ತಿದ್ದಾರೆ. ಕನ್ನಡ, ತೆಲುಗು ಸೇರಿದಂತೆ ಐದು ಭಾಷೆಗಳಲ್ಲಿ ಚಿತ್ರ ತೆರೆ ಕಾಣಲಿದೆ.

ಐಶ್ವರ್ಯಾ, ನಿರಂಜನ್



ವಿಜಯರಾಘವೇಂದ್ರ, ಪ್ರಿಯಾ

'ಶ್ರೀಮತಿ ಸಿಂಧೂರ' ಚಿತ್ರೀಕರಣ ಪೂರ್ಣ

ವಿಜಯ ರಾಘವೇಂದ್ರ ನಾಯಕರಾಗಿ ನಟಿಸಿರುವ 'ಶ್ರೀಮತಿ ಸಿಂಧೂರ' ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿತು. ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಅನಂತರಾಜ್ ಆರ್. ನಿರ್ದೇಶಿಸಿದ್ದಾರೆ.

ಕೌಟುಂಬಿಕ ಕಥಾಹಂದರದ ಜೊತೆಗೆ ದೈವಭಕ್ತಿ ಅಂಶಗಳನ್ನು ಸಿನಿಮಾ ಒಳಗೊಂಡಿದೆ ಎಂದಿದೆ ಚಿತ್ರತಂಡ. ಪ್ರಿಯಾ ಚಿತ್ರದ ನಾಯಕಿ. ರೇಷ್ಮಾ ವಿ.ಗೌಡ, ಪ್ರಸನ್ನ ಬಾಗೀನ, ಗಣೇಶ್ ರಾವ್ ಕೇಸರ್‌ಕರ್, ಮಾನಸಿ ಸುಧೀರ್, ಮನೋಜ್, ರಿತೇಶ್, ಸ್ನೇಹ ಜಾಧವ್, ಮೈಸೂರು ರಮಾನಂದ್, ರೋಹಿತ್, ಅನುಪಮ, ನವನೀತ ಸೇರಿದಂತೆ ಹಲವು ಕಲಾವಿದರು ನಟಿಸಿದ್ದಾರೆ. 6.4 ಅಡಿ ಎತ್ತರವಿರುವ ದೇಹದಾರ್ಢ್ಯಪಟು ಬೀದರ್‌ನ ಮಾರುತಿ ಸಿನಿಮಾದಲ್ಲಿ ಹನುಮಂತನಾಗಿ ಕಾಣಿಸಿಕೊಳ್ಳಲಿದ್ದಾರೆ.

ಸಿನಿಮಾದಲ್ಲಿ ಕವಿರಾಜ್, ಕೆ.ಕಲ್ಯಾಣ್ ಮತ್ತು ನಿರ್ದೇಶಕರ ಸಾಹಿತ್ಯದ ಹಾಡಿಗೆ ರಾಜೇಶ್ ರಾಮನಾಥ್ ಸಂಗೀತ ಸಂಯೋಜಿಸಿದ್ದಾರೆ. ಪಿ.ಕೆ.ಎಚ್. ದಾಸ್ ಛಾಯಾಚಿತ್ರಗ್ರಹಣ, ಫೈವ್‌ಸ್ಟಾರ್ ಗಣೇಶ್ ನೃತ್ಯ ನಿರ್ದೇಶನ ಚಿತ್ರಕ್ಕಿದೆ. ಮೂಡಿಗೆರೆ, ಸಕಲೇಶಪುರ, ಕುಂದಾಪುರದಲ್ಲಿ ಒಂದೇ ಹಂತದಲ್ಲಿ ಶೂಟಿಂಗ್ ನಡೆಸಲಾಗಿದೆ. ಸದ್ಯ ಚಿತ್ರವು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಡಿ.ಎನ್.ನಾಗೀರೆಡ್ಡಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಫೆಬ್ರುವರಿಯಲ್ಲಿ 'ಆಪರೇಶನ್ ಡಿ'

ಬಹುತೇಕ ಹೊಸಬರಿಂದಲೇ ಕೂಡಿರುವ 'ಆಪರೇಶನ್ ಡಿ' ಚಿತ್ರ ಫೆಬ್ರುವರಿಯಲ್ಲಿ ತೆರೆಗೆ ಬರಲಿದೆ. ತಿರುಮಲೇಶ್ ವಿ ನಿರ್ದೇಶನದ ಚಿತ್ರಕ್ಕೆ ಅದ್ವಿತ ಫಿಲ್ಮ್ ಫ್ಯಾಕ್ಟರಿ ಬಂಡವಾಳ ಹೂಡಿದೆ.

'ಸಸ್ಪೆನ್ಸ್, ಥ್ರಿಲ್ಲರ್ ಹಾಗೂ ಮರ್ಡರ್ ಮಿಸ್ಟರಿ ಕಥೆ ಆಧರಿಸಿದ ಚಿತ್ರ. ಬಹುತೇಕ ರಂಗಭೂಮಿ ಕಲಾವಿದರೆ ಇದರಲ್ಲಿ ಅಭಿನಯಿಸಿದ್ದಾರೆ. ಫೆಬ್ರುವರಿ ಮೊದಲ ವಾರದಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕ.

ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ವೇದಿಕ ಹಾಗೂ ಸಂತೋಷ್ ಆರ್ಮುಗಮ್ ಸಂಗೀತ ನಿರ್ದೇಶನವಿದೆ. ಕಾರ್ತಿಕ್ ಪ್ರಸಾದ್ ಛಾಯಾಚಿತ್ರಗ್ರಹಣ, ವಿಕ್ರಮ್ ಶ್ರೀಧರ್ ಸಂಕಲನವಿದೆ. ರುದ್ರೇಶ್ ಬೂದನೂರು, ಸುಹಾಸ್ ಆತ್ರೇಯ, ವಿನೋದ್ ದೇವ್, ಸ್ನೇಹ ಭಟ್, ಇಂಚರ ಭರತ್ ರಾಜ್ ಮುಂತಾದವರು ನಟಿಸಿದ್ದಾರೆ.

ಚಿತ್ರದ ಪೋಸ್ಟರ್

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ದೆಹಲಿ: ಮಂಗಗಳ ಓಡಿಸಲು ಲಂಗೂರಗಳ ಧ್ವನಿ ಮಿಮಿಕ್ರಿ!

ನವದೆಹಲಿ(ಪಿಟಿಐ): ವಿಧಾನಸಭೆ ಆವರಣ ಪ್ರವೇಶಿಸಿ, ತೊಂದರೆ ನೀಡುತ್ತಿರುವ ಮಂಗಗಳನ್ನು ನಿಯಂತ್ರಿಸಲು ದೆಹಲಿ ಸರ್ಕಾರ ಮುಂದಾಗಿದೆ.

ಇದಕ್ಕಾಗಿ, ಲಂಗೂರ್‌ಗಳ (ಉದ್ದನೆ ಬಾಲದ ಏಷ್ಯನ್ ಮರದ ಕೋತಿ/ಮುಸುವ) ಧ್ವನಿಯನ್ನು ಅನುಕರಣೆ ಮಾಡುವವರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವುದು ಹಾಗೂ ಲಂಗೂರಗಳ ಕಟೌಟ್ ಅಳವಡಿಕೆಗೆ ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಇದಕ್ಕಾಗಿ ಪಿಡಬ್ಲ್ಯುಡಿ ಈಗಾಗಲೇ ಟೆಂಡರ್ ಆಹ್ವಾನಿಸಿದೆ. ತಜ್ಞರು ಲಂಗೂರ್‌ಗಳನ್ನು ಕೂಡ ಸ್ಥಳಕ್ಕೆ ತಂದು, ಅವುಗಳಿಂದ ಮಂಗಗಳನ್ನು ಬೆದರಿಸಲಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿಧಾನಸಭೆ ಸಂಕೀರ್ಣದಲ್ಲಿ ಗಣನೀಯ ಸಂಖ್ಯೆಯಲ್ಲಿ ಮಂಗಗಳ ಓಡಾಡವಿದ್ದು ತಂತಿಗಳು, ಡಿಶ್ ಆ್ಯಂಟೆನಾಗಳನ್ನು ನಾಶ ಮಾಡುತ್ತಿವೆ. ಶಾಸಕರು, ಸಿಬ್ಬಂದಿ ಹಾಗೂ ಸಂದರ್ಶಕರಿಗೆ ಬೆದರಿಕೆ ಎನಿಸಿವೆ. ಮಂಗಗಳಿಗೆ ಯಾವುದೇ ರೀತಿಯ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಲಂಗೂರುಗಳ ಧ್ವನಿಯನ್ನು ಅನುಕರಿಸಿ, ಅವುಗಳನ್ನು ಓಡಿಸಲು ನಿರ್ಧರಿಸಲಾಗಿದೆ ಎಂದೂ ತಿಳಿಸಿದ್ದಾರೆ.

'ಲಂಗೂರಗಳಂತೆ ಕೂಗುವವರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿತ್ತು. ಗುತ್ತಿಗೆ ಅವಧಿ ಮುಗಿದಿರುವ ಕಾರಣ ಅವರ ನೇಮಕಕ್ಕೆ ಈಗ ಹೊಸದಾಗಿ ಟೆಂಡರ್ ಕರೆಯಲಾಗಿದೆ' ಎಂದು ತಿಳಿಸಿದ್ದಾರೆ.

'ಈ ಉದ್ದೇಶಕ್ಕೆ ನೇಮಕ-ವಾಗುವವರನ್ನು ಎಲ್ಲ ಕೆಲಸದ ದಿನಗಳು ಹಾಗೂ ಶನಿವಾರಗಳಂದು ನಿಯೋಜನೆ ಮಾಡಲಾಗುತ್ತದೆ. ಒಂದು ಪಾಳಿ ಅವಧಿ 8 ಗಂಟೆ ಇರಲಿದೆ' ಎಂದಿದ್ದಾರೆ.

2017ರಲ್ಲಿ, ಸರ್ಕಾರಿ ಶಾಲೆಗಳ ಅತಿಥಿ ಶಿಕ್ಷಕರ ಕುರಿತು ಚರ್ಚೆ ನಡೆಯುತ್ತಿದ್ದಾಗ, ಮಂಗಗಳು ಸದನ ಪ್ರವೇಶಿಸಿ, ಕಲಾಪಕ್ಕೆ ಅಡ್ಡಿಯನ್ನುಂಟು ಮಾಡಿದ್ದವು ಎಂದೂ ಹೇಳಿದ್ದಾರೆ.

'ನೆರೆಯ ದುಷ್ಟ ದೇಶಕ್ಕೆ ತಕ್ಕ ಪಾಠ'

ಸುಮಧುರ ಬಾಂಧವ್ಯ ಹೊಂದಿರುವವರ ನೆರವಿಗೂ ಸಿದ್ಧ: ಸಚಿವ ಎಸ್. ಜೈಶಂಕರ್

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: 'ದುಷ್ಟ ನೆರೆಹೊರೆಯವರ ವಿಷಯದಲ್ಲಿ ಭಾರತಕ್ಕೆ ತನ್ನನ್ನು ಸಮರ್ಥಿಸಿಕೊಳ್ಳುವ ಹಕ್ಕು ಇದೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಶುಕ್ರವಾರ ಇಲ್ಲಿ ಹೇಳಿದರು.

ಐಐಟಿ ಮದ್ರಾಸ್ ವಿದ್ಯಾರ್ಥಿಗಳ ಜೊತೆಗಿನ ಸಂವಾದದಲ್ಲಿ ಮಾತನಾಡಿದ ಅವರು, 'ಭಯೋತ್ಪಾದಕರಿಗೆ ಆಶ್ರಯ ನೀಡುವುದು, ವಿಧ್ವಂಸಕ ಚಟುವಟಿಕೆಗಳಿಗೆ ಬೆಂಬಲ ನೀಡುವುದನ್ನು ಮುಂದುವರಿಸುತ್ತಿರುವ ಪಕ್ಕದ ದುಷ್ಟ ರಾಷ್ಟ್ರವು, ಭಾರತವು ತನ್ನೊಂದಿಗೆ ನೀರನ್ನು ಹಂಚಿಕೊಳ್ಳುತ್ತದೆ ಎಂಬುದನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ' ಎಂದರು.

> **ಭಾರತದ ಉದ್ದೇಶವನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದನ್ನು ತಪ್ಪಿಸಲು ಇತರ ದೇಶಗಳೊಂದಿಗೆ ಸಂವಹನ ನಡೆಸುವುದು ಮುಖ್ಯ**
> **ಎಸ್. ಜೈಶಂಕರ್,** ವಿದೇಶಾಂಗ ಸಚಿವ

'ಉದ್ದೇಶಪೂರ್ವಕವಾಗಿ ಮತ್ತು ಪಶ್ಚಾತ್ತಾಪವಿಲ್ಲದೆ ನಿರಂತರವಾಗಿ ಭಾರತದೊಳಗೆ ಭಯೋತ್ಪಾದನಾ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಿರುವ ನೆರೆಯ ದುಷ್ಟ ದೇಶಕ್ಕೆ ತಕ್ಕ ಪಾಠವನ್ನು ಕಲಿಸಲಾಗುವುದು' ಎಂದು ಇದೇ ಸಂದರ್ಭ ಖಡಕ್ ಎಚ್ಚರಿಕೆ ನೀಡಿದರು.

'ನಮ್ಮ ಜೊತೆ ಸುಮಧುರ ಬಾಂಧವ್ಯ ಹೊಂದಿರುವ ನೆರೆಹೊರೆಯ ರಾಷ್ಟ್ರಗಳಲ್ಲಿ ನಾವು ಹೂಡಿಕೆ ಮಾಡುತ್ತೇವೆ. ಅವರಿಗೆ ಸಂಕಷ್ಟ ಎದುರಾದಾಗ ಸಹಾಯವನ್ನೂ ಮಾಡುತ್ತೇವೆ. ಅವಶ್ಯವಿದ್ದುದನ್ನು ಅವರೊಂದಿಗೆ ಹಂಚಿಕೊಳ್ಳುತ್ತೇವೆ' ಎಂದರು.

'ಕೋವಿಡ್ ಸಂದರ್ಭದಲ್ಲಿ ಲಸಿಕೆಗಳು, ಉಕ್ರೇನ್ ಸಂಘರ್ಷದ ವೇಳೆ ಇಂಧನ, ಆಹಾರ ಪದಾರ್ಥಗಳ ನೆರವು, ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಶ್ರೀಲಂಕಾಗೆ ನಾಲ್ಕು ಬಿಲಿಯನ್ ಡಾಲರ್ ನೆರವು ನೀಡಿದ್ದೇವೆ' ಎಂದರು.

'ನಮ್ಮ ನೆರೆಹೊರೆಯವರಲ್ಲಿ ಬಹುತೇಕರು ಭಾರತವು ಬೆಳೆದರೆ, ನಾವೂ ಬೆಳೆಯಬಹುದು ಎಂದುಕೊಂಡಿದ್ದಾರೆ. ಸಮಸ್ಯೆ ಪರಿಹರಿಸುವುದೇ ಭಾರತದ ಇಂದಿನ ವಿದೇಶಾಂಗ ನೀತಿಯಾಗಿದೆ' ಎಂದು ತಿಳಿಸಿದರು.

'ಏನು ಬೇಕಾದರೂ ಮಾಡುತ್ತೇವೆ'

'ಭಯೋತ್ಪಾದನೆ ಬೆಂಬಲಿಸುವುದನ್ನು ನಿಲ್ಲಿಸದ ಹೊರತು, ಪಾಕಿಸ್ತಾನಕ್ಕೆ ಉತ್ತಮ ನೆರೆಹೊರೆಯ ಲಾಭ ಸಿಗುವುದಿಲ್ಲ. ನಮ್ಮ ರಕ್ಷಣೆಗಾಗಿ ನಾವು ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ಹೇಳಲು ಯಾರೊಬ್ಬರಿಗೂ ಸಾಧ್ಯವಿಲ್ಲ. ನಮ್ಮನ್ನು ರಕ್ಷಿಸಿಕೊಳ್ಳಲು ನಾವು ಏನು ಬೇಕಾದರೂ ಮಾಡುತ್ತೇವೆ' ಎಂದು ಜೈಶಂಕರ್ ಹೇಳಿದರು.

ಪಾಕ್‌ನಿಂದ ದಾರಿ ತಪ್ಪಿಸುವ ಚಿತ್ರಗಳ ಪ್ರಸಾರ: ಸೇನೆ

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರದ' ವೇಳೆ ಪಂಜಾಬ್‌ನಲ್ಲಿ ಭಾರತೀಯ ಸೇನಾ ಸೌಲಭ್ಯಗಳ ಮೇಲೆ ದಾಳಿ ನಡೆಸಲಾಗಿದೆ ಎಂಬ ದಾರಿತಪ್ಪಿಸುವ ಚಿತ್ರಗಳನ್ನು ಕೆಲ ಪಾಕಿಸ್ತಾನಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರ ಮಾಡುತ್ತಿದ್ದಾರೆ ಎಂದು ಭಾರತೀಯ ಸೇನೆಯ ಅಧಿಕಾರಿಗಳು ಹೇಳಿದ್ದಾರೆ.

ಪರಿಶೀಲನೆ ನಡೆಸದ ಉಪಗ್ರಹ ಚಿತ್ರಗಳನ್ನು ಪ್ರಸಾರ ಮಾಡುವ ಮೂಲಕ ತಮ್ಮ ವಿಫಲವಾದ ನಿರೂಪಣೆಯನ್ನು ಮತ್ತೆ ಪ್ರಚಾರ ಪಡಿಸುವ ಉದ್ದೇಶ ಇದರ ಹಿಂದೆ ವ್ಯಕ್ತವಾಗಿದೆ. ಈ ಚಿತ್ರಗಳಲ್ಲಿ ತೋರಿಸಿರುವ ಸ್ಥಳಗಳಲ್ಲಿ ಯಾವುದೇ ರೀತಿಯ ವಿನಾಶ ಅಥವಾ ಹಾನಿ ಆಗಿಲ್ಲ ಎಂಬುದು ಸ್ವತಂತ್ರ ಪರಿಶೀಲನೆಯಿಂದ ಗೊತ್ತಾಗಿದೆ ಎಂದು ಅವರು ತಿಳಿಸಿದ್ದಾರೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ಕಳೆದ ವರ್ಷದ ಮೇ 7ರಂದು 'ಆಪರೇಷನ್ ಸಿಂಧೂರ' ಪ್ರಾರಂಭಿಸಿ, 4 ದಿನ ಸಂಘರ್ಷ ನಡೆಸಿತ್ತು.

'ಕೆಲ ಪಾಕಿಸ್ತಾನಿಯರು ಹತಾಶ ಪ್ರಯತ್ನದ ಭಾಗವಾಗಿ ತಪ್ಪು ಮಾಹಿತಿ ಅಭಿಯಾನ ನಡೆಸುತ್ತಿದ್ದಾರೆ. ಅವರ ಮಾಹಿತಿ ಬೆಂಬಲಿಸಲು ಯಾವುದೇ ವಿಶ್ವಾಸಾರ್ಹ ಪುರಾವೆಗಳಿಲ್ಲ. ಏಳು ತಿಂಗಳ ಬಳಿಕ ಹಠಾತ್ತನೆ ಈ ಚಿತ್ರಗಳು ಹೊರಬಂದಿವೆ. ಆದರೆ ಅವುಗಳ ನಿಖರ ಕಾಲಾವಧಿಯ ಪರಿಶೀಲನೆ ಆಗಿಲ್ಲ. ಉಪಗ್ರಹ ಮೂಲದ ವಿವರಗಳನ್ನು ತಿಳಿಸಲಾಗಿಲ್ಲ. ಅವು ದೃಢೀಕೃತ ಚಿತ್ರಗಳೂ ಅಲ್ಲ' ಎಂದು ಸೇನಾ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

EXECUTIVE / SENIOR EXECUTIVE ELECTRICAL MAINTENANCE

No. of Positions : 3
Work Location : Belur Plant (Dharwad) and Kumbalagodu Plant (Bangalore)
Education : Diploma (Electrical) or ITI (electrical)
Experience : -10+ years of proven experience in a similar role, preferably in the media industry.

- In Depth knowledge of Siemens, Lenze drives & Mitsubishi PLC.
- Problem solving- Identifying & resolving machine problem issues efficiently & effectively.
- Spares and service co-ordination for other TPML plants related to Hiline machinery & utilities
- Plan daily maintenance activities and monitor their execution
- Effective Implementation of Preventive Maintenance / Predictive Maintenance Systems.
- Minimize equipment downtime, monitor & take corrective actions to ensure maintenance targets.

Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಹರಿಯಾಣ: ಲಿಂಗಾನುಪಾತ ಹೆಚ್ಚಳ

ಚಂಡೀಗಢ(ಪಿಟಿಐ): ಹರಿಯಾಣ ರಾಜ್ಯದಲ್ಲಿ ಲಿಂಗಾನುಪಾತದಲ್ಲಿ ಗಮನಾರ್ಹ ಸುಧಾರಣೆ ಕಂಡಿದ್ದು, 2025ರಲ್ಲಿ ಈ ಪ್ರಮಾಣ 923ಕ್ಕೆ ಏರಿಕೆಯಾಗಿದೆ. ಇದು ಕಳೆದ ಐದು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಹೆಚ್ಚಿನ ಏರಿಕೆ ಕಂಡಿದೆ.

2024ರಲ್ಲಿ ಲಿಂಗಾನುಪಾತ ಪ್ರಮಾಣ 1000 ಪುರುಷರಿಗೆ 910 ಮಹಿಳೆಯರಿದ್ದರು. 2025ರಲ್ಲಿ ಮಹಿಳೆಯರ ಪ್ರಮಾಣ 1000 ಪುರುಷರಿಗೆ 923ಕ್ಕೆ ಏರಿದೆ. ಒಂದು ವರ್ಷದಲ್ಲಿ ಅನುಪಾತದ ಪ್ರಮಾಣದಲ್ಲಿ 13 ಅಂಶಗಳಷ್ಟು ಜಿಗಿತಕಂಡಿದೆ. ಪ್ರಸವಪೂರ್ವ ಲಿಂಗ ಪತ್ತೆ ಮತ್ತು ಅಕ್ರಮ ಗರ್ಭಪಾತಗಳ ತಡೆಗಾಗಿ ಸರ್ಕಾರ ಕೈಗೊಂಡ ಕ್ರಮಗಳು, ಅನುಪಾತ ಹೆಚ್ಚಳಕ್ಕೆ ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ.

2025 ರಲ್ಲಿ 5,19,691 ಜನನ ಪ್ರಮಾಣ ದಾಖಲಾಗಿದೆ. ಇದರಲ್ಲಿ 2,70,281 ಬಾಲಕರು ಮತ್ತು 2,49,410 ಬಾಲಕಿಯರು ಜನಿಸಿದ್ದಾರೆ. 2024 ರಲ್ಲಿ 5,16,402 ಜನನ ಪ್ರಮಾಣ ದಾಖಲಾಗಿದೆ. ಇದರಲ್ಲಿ 2,46,048 ಬಾಲಕಿಯರು ಜನಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಪೌರತ್ವ ಪರೀಕ್ಷೆಗೆ ಹೊಸ ತಂತ್ರ: ವಿಡಿಯೊ ಸಂಚಲನ

ಪ್ರಜಾವಾಣಿ ವಾರ್ತೆ

ಲಖನೌ: ಬಾಂಗ್ಲಾ ನುಸುಳುಕೋರರನ್ನು ಪತ್ತೆ ಮಾಡಲು ಉತ್ತರ ಪ್ರದೇಶ ಪೊಲೀಸರು ಮೊಬೈಲ್ ಸ್ಕ್ಯಾನರ್ ಬಳಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಗಾಜಿಯಾಬಾದ್‌ನ ಕೊಳೆಗೇರಿಯೊಂದರಲ್ಲಿ ಪರಿಶೀಲನೆ ನಡೆಸಿದ ಪೊಲೀಸರು, ಶಂಕಿತ ಬಾಂಗ್ಲಾ ವಲಸಿಗರನ್ನು ಮೊಬೈಲ್ ಸ್ಕ್ಯಾನರ್ ಮೂಲಕ ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಿರುವ ದೃಶ್ಯಗಳು ವಿಡಿಯೊದಲ್ಲಿವೆ.

ಕೆಲವು ವ್ಯಕ್ತಿಗಳ ಬೆನ್ನ ಹಿಂದೆ ನಿಂತು, ಮೊಬೈಲ್‌ನಲ್ಲಿ ಅವರ ದೇಹವನ್ನು ಸ್ಕ್ಯಾನ್ ಮಾಡುತ್ತಾ, 'ನೀವು ಬಾಂಗ್ಲಾದೇಶದವರಲ್ಲವೇ ಎಂದು ಪ್ರಶ್ನಿಸುತ್ತಾರೆ. ಸುಳ್ಳು ಹೇಳಿದರೆ ಮೊಬೈಲ್ ನಲ್ಲಿರುವ ತಂತ್ರಾಂಶ ತಕ್ಷಣವೇ ಅದನ್ನು ಪತ್ತೆ ಹಚ್ಚುತ್ತದೆ, ಸತ್ಯ ಹೇಳಿ ಎಂದು ಬೆದರಿಸಿದ್ದಾರೆ.

ಭಾರತೀಯರು ಎಂದು ಹೇಳಿದವರಿಗೂ, ಮೊಬೈಲ್‌ನಲ್ಲಿ ಬಾಂಗ್ಲಾದೇಶೀಯರು ಎಂದು ತೋರಿಸುತ್ತಿದೆ, ಸತ್ಯ ಹೇಳಿ ಎಂದು ಹೆದರಿಸಿ, ಮತ್ತೆ ಮತ್ತೆ ಪರಿಶೀಲನೆಗೆ ಒಳಪಡಿಸಲಾಗಿದೆ.

ಮೊಬೈಲ್ ಮೂಲಕ ಪೊಲೀಸರು ನಡೆಸುತ್ತಿರುವ 'ಪೌರತ್ವ ಪರೀಕ್ಷೆ'ಯು ಸಾಮಾಜಿಕ ಜಾಲತಾಣದಲ್ಲಿ ಟೀಕೆಗೆ ಒಳಗಾಗಿದೆ.

ಮೊಬೈಲ್ ಮೂಲಕ ವ್ಯಕ್ತಿಯ ದೇಹವನ್ನು ಸ್ಕ್ಯಾನ್ ಮಾಡಿ, ನುಸುಳುಕೋರರನ್ನು, ಪೌರತ್ವನ್ನು ಪತ್ತೆ ಹಚ್ಚಲು ಸಾಧ್ಯವೇ ಎಂದು ಸಾಕಷ್ಟು ಜನರು ಪ್ರಶ್ನಿಸಿದ್ದಾರೆ.

'ವಾಸ್ತವದಲ್ಲಿ ಇದು ಪೌರತ್ವ ಪರೀಕ್ಷೆ ಅಲ್ಲ. ನುಸುಳುಕೋರು ಸುಲಭವಾಗಿ ಸತ್ಯ ಹೇಳುವುದಿಲ್ಲ. ಅಕ್ರಮ ವಲಸಿಗರನ್ನು ಪತ್ತೆ ಹಚ್ಚಲು ಪೊಲೀಸರು ಬಳಸಿದ ತಂತ್ರ ಇದು' ಎಂದು ಗಾಜಿಯಾಬಾದ್ ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಅಂತಹ ಸಾಧಕಿಯರಲ್ಲಿ ನೀವೂ ಒಬ್ಬರಾಗಿದ್ದರೆ ನಿಮ್ಮ ಅಥವಾ ನಿಮಗೆ ತಿಳಿದಿರುವ ಸಾಧಕಿಯರ ನಾಮನಿರ್ದೇಶನ ಕಳುಹಿಸಲು QR ಕೋಡ್ ಸ್ಕ್ಯಾನ್ ಮಾಡಿ.
Follow us on:

ಪ್ರಜಾವಾಣಿ
ಸಾಧಕಿಯರು

ಅವಳ ಸಾಧನೆ ಸಂಭ್ರಮಿಸೋಣ
ನಮ್ಮ ಜಗವ ಬೆಳಗೋಣ

ಅವಳು ನಮ್ಮ ಸಮಾಜದ ಚಾಲಕ ಶಕ್ತಿ. ಶಿಕ್ಷಣತಜ್ಞೆಯಾಗಿ, ಸಮಾಜ ಪರಿವರ್ತನೆಯ ಹರಿಕಾರಳಾಗಿ, ಆವಿಷ್ಕಾರಗಳ ಮುಂದಾಳಾಗಿ, ನ್ಯಾಯಪರ ಹೋರಾಟಗಾರ್ತಿಯಾಗಿ, ನಮ್ಮ ಭವಿಷ್ಯದ ಪೋಷಕಿಯಾಗಿ ಅವಳ ಪಾತ್ರದ ಹಿರಿಮೆಗೆ ಎಲ್ಲೆಯೇ ಇಲ್ಲ.

ಸುತ್ತಲ ಸಮಾಜದ ಪರಿವರ್ತನೆಗೆ ಕಾರಣರಾದ ಹತ್ತು
ಅಸಾಮಾನ್ಯ ಸಾಧಕಿಯರ ಯಶೋಗಾಥೆಗಳನ್ನು ನಾವು ಪ್ರಸ್ತುತಪಡಿಸುತ್ತೇವೆ.

ಪ್ರವೇಶಾತಿಗೆ ಕೊನೆಯ ದಿನಾಂಕ 05th January 2026.

ಪ್ರಜಾವಾಣಿ
ಸಾಧಕಿಯರು 2026

ಕಣಕ್ಕೆ ರಾಹುಲ್: ಅಜೇಯ ಓಟದತ್ತ ಚಿತ್ತ

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ • ಕರ್ನಾಟಕಕ್ಕೆ ತ್ರಿಪುರ ಸವಾಲು ಇಂದು • ಪಡಿಕ್ಕಲ್ ಮೇಲೆ ಕಣ್ಣು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸತತ ನಾಲ್ಕು ಗೆಲುವುಗಳಿಂದ ತುಂಬು ಆತ್ಮವಿಶ್ವಾಸದಲ್ಲಿರುವ ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಅಜೇಯ ಓಟ ಮುಂದುವರಿಸುವತ್ತ ಚಿತ್ತ ನೆಟ್ಟಿದೆ. ಶನಿವಾರ ವಿಜಯ್ ಹಜಾರೆ ಟ್ರೋಫಿ ಎ ಗುಂಪಿನ ಪಂದ್ಯದಲ್ಲಿ ತ್ರಿಪುರ ತಂಡವನ್ನು ಎದುರಿಸಲಿದೆ. ಭಾರತ ತಂಡದ ಆಟಗಾರ ಕೆ.ಎಲ್. ರಾಹುಲ್ ಇಲ್ಲಿ ಕಣಕ್ಕಿಳಿಯಲಿರುವುದು ಕರ್ನಾಟಕ ಬಳಗದ ಉತ್ಸಾಹ ಇಮ್ಮಡಿಸಿದೆ.

ಗುಂಪು ಹಂತದಲ್ಲಿ ಕರ್ನಾಟಕ ತಂಡವು ಇನ್ನೂ ಮೂರು ಪಂದ್ಯಗಳಲ್ಲಿ ಆಡಬೇಕಿದೆ. ಆ ಪಂದ್ಯಗಳಲ್ಲಿ ತ್ರಿಪುರ, ರಾಜಸ್ಥಾನ ಮತ್ತು ಮಧ್ಯಪ್ರದೇಶ ತಂಡಗಳನ್ನು ಎದುರಿಸಲಿದೆ. ಗುಂಪಿನಲ್ಲಿ ತಲಾ 16 ಅಂಕ ಗಳಿಸಿರುವ ಮಧ್ಯಪ್ರದೇಶ ಮತ್ತು ಕರ್ನಾಟಕ ತಂಡಗಳು ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನದಲ್ಲಿವೆ. ನೆಟ್ ರನ್‌ರೇಟ್‌ನಲ್ಲಿ ಮಧ್ಯಪ್ರದೇಶ ತುಸು ಮುಂದಿದೆ.

ಆದರೆ ಅಂತಿಮ ಹನ್ನೊಂದರ ಬಳಗದಲ್ಲಿ ರಾಹುಲ್ ಅವರಿಗೆ ಯಾರು ಸ್ಥಾನ ಬಿಟ್ಟುಕೊಡುವರು ಎಂಬ ಕುತೂಹಲ ಈಗ ಗರಿಗೆದರಿದೆ. ಬಹುತೇಕ ವಿಕೆಟ್‌ಕೀಪರ್ ಬ್ಯಾಟರ್ ಕೆ.ಎಲ್. ಶ್ರೀಜಿತ್ ಅವರಿಗೆ ವಿಶ್ರಾಂತಿ ನೀಡುವ ಸಾಧ್ಯತೆ ಇದೆ. ರಾಹುಲ್ ಕೀಪಿಂಗ್ ಹೊಣೆ ನಿಭಾಯಿಸುವುದರ ಜೊತೆಗೆ ನಾಲ್ಕು ಅಥವಾ ಐದನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಬಹುದು.

ಆರಂಭಿಕ ಜೋಡಿ ಮಯಂಕ್ ಮತ್ತು ದೇವದತ್ತ ಪಡಿಕ್ಕಲ್ ಅವರು ಅಮೋಘ ಲಯದಲ್ಲಿದ್ದಾರೆ. ದೇವದತ್ತ ಮೂರು ಶತಕ ಗಳಿಸಿದ್ದಾರೆ. ನಾಯಕ ಮಯಂಕ್ ಮತ್ತು ಅನುಭವಿ ಕರುಣ್ ನಾಯರ್ ತಲಾ ಒಂದು ಶತಕ ಗಳಿಸಿದ್ದಾರೆ. ಮುಂಬರುವ ನ್ಯೂಜಿಲೆಂಡ್ ಎದುರಿನ ಏಕದಿನ ಸರಣಿಯಲ್ಲಿ ಆಡುವ ಭಾರತ ತಂಡದ ಆಯ್ಕೆ ಸಮಿತಿಯ ಗಮನ ಸೆಳೆಯುವಷ್ಟು ರನ್‌ಗಳನ್ನು ದೇವದತ್ತ ಪೇರಿಸಿದ್ದಾರೆ. ಅದರಿಂದಾಗಿ ಅವರಿಗೆ ಅವಕಾಶ ಸಿಗುವ ನಿರೀಕ್ಷೆ ಇದೆ. ಇನ್ನೊಂದೆಡೆ ಸ್ಮರಣ್ ರವಿಚಂದ್ರನ್, ಅಭಿನವ್ ಮನೋಹರ್ ಮತ್ತು ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರು ತಂಡದ ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದಾರೆ.

ಬೌಲಿಂಗ್‌ನಲ್ಲಿ ಕರ್ನಾಟಕ ತಂಡವು ಸ್ಥಿರ ಪ್ರದರ್ಶನ ನೀಡಬೇಕಿದೆ. ಬೌಲರ್‌ಗಳು ವಿಕೆಟ್ ಗಳಿಸುತ್ತಿದ್ದರೂ ರನ್‌ಗಳನ್ನು ಬಿಟ್ಟುಕೊಡುತ್ತಿದ್ದಾರೆ. ಈ ವಿಷಯದಲ್ಲಿ ನಿಯಂತ್ರಣ ಸಾಧಿಸಬೇಕಿದೆ.

ಆದರೆ ಮಣಿಶಂಕರ್ ಮುರಾಸಿಂಗ್ ನಾಯಕತ್ವದ ತ್ರಿಪುರ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಆಡಿರುವ ನಾಲ್ಕು ಪಂದ್ಯಗಳಲ್ಲಿ ಎರಡರಲ್ಲಿ ಗೆಲುವು ಸಾಧಿಸಿದೆ. 8 ಅಂಕ ಗಳಿಸಿದೆ. ಉತ್ತಮ ತಂಡವೇ ಆಗಿರುವ ರಾಜಸ್ಥಾನ ಮತ್ತು ಪುದುಚೇರಿ ಎದುರು ಜಯ ಸಾಧಿಸಿರುವ ತ್ರಿಪುರ ಆಟಗಾರರು ಭರ್ತಿ ಆತ್ಮವಿಶ್ವಾಸದಲ್ಲಿದ್ದಾರೆ. ತಂಡದ ಆರಂಭಿಕ ಬ್ಯಾಟರ್ ತೇಜಸ್ವಿ ಜೈಸ್ವಾಲ್, ಉದಿಯನ್ ಬೋಸ್ ಮತ್ತು ಶ್ರೀದಾಮ್ ಪೌಲ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಆಲ್‌ರೌಂಡರ್ ವಿಜಯಶಂಕರ್ ಬೌಲಿಂಗ್‌ನಲ್ಲಿ ಮಿಂಚಿದ್ದಾರೆ. ಆದರೆ ಬ್ಯಾಟಿಂಗ್‌ನಲ್ಲಿ ಲಯಕ್ಕೆ ಮರಳುವ ಪ್ರಯತ್ನದಲ್ಲಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9

ಕರ್ನಾಟಕದ ತಂಡದ ಮಯಂಕ್ ಅಗರವಾಲ್, ದೇವದತ್ತ ಪಡಿಕ್ಕಲ್, ಕೆ.ಎಲ್. ರಾಹುಲ್

ಸಾಯಿ ಸುದರ್ಶನ್‌ಗೆ ಪಕ್ಕೆಲುಬಿನ ಗಾಯ

ನವದೆಹಲಿ (ಪಿಟಿಐ): ಭಾರತ ಟೆಸ್ಟ್ ತಂಡದ ಯುವ ಬ್ಯಾಟರ್ ಸಾಯಿ ಸುದರ್ಶನ್ ಅವರು ಮಧ್ಯಪ್ರದೇಶ ವಿರುದ್ಧ ವಿಜಯ್ ಹಜಾರೆ ಟ್ರೋಫಿ ಪಂದ್ಯದ ವೇಳೆ ಪಕ್ಕೆಲುಬಿಗೆ ಗಾಯಗೊಂಡಿದ್ದಾರೆ. ಅವರು ಚೇತರಿಸಿಕೊಳ್ಳಲು ತಿಂಗಳಿಗೂ ಹೆಚ್ಚು ಸಮಯ ಹಿಡಿಯಬಹುದು ಎಂದು ಬಿಸಿಸಿಐ ಮೂಲವೊಂದು ಶುಕ್ರವಾರ ತಿಳಿಸಿದೆ.

ಅಹಮದಾಬಾದಿನಲ್ಲಿ ಡಿಸೆಂಬರ್ 26ರಂದು ಮಧ್ಯಪ್ರದೇಶ ವಿರುದ್ಧ ತಮಿಳುನಾಡು ತಂಡಕ್ಕೆ ಆಡುವಾಗ ಪಕ್ಕೆಲುಬಿನ ಬಲಭಾಗದ ಮೂಳೆಗೆ ಏಟು ಆಗಿದೆ. 24 ವರ್ಷ ವಯಸ್ಸಿನ ಆಟಗಾರ, ಸೀಮಿತ ಓವರುಗಳ ಮಾದರಿಯಲ್ಲಿ ಆಡುವ ಭಾರತ ತಂಡದ ಭಾಗವಾಗಿಲ್ಲ.

ತಮಿಳುನಾಡು ತಂಡ ಆಡಬೇಕಿರುವ ಉಳಿದ ರಣಜಿ ಟ್ರೋಫಿ ಪಂದ್ಯಗಳನ್ನು ಅವರು ಕಳೆದುಕೊಳ್ಳಲಿದ್ದಾರೆ. ಸುದರ್ಶನ್ ಅವರು 29ರಂದು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಸ್ಕ್ಯಾನ್‌ಗೆ ಒಳಗಾಗಿದ್ದರು.

ಭಾರತ ಮಹಿಳಾ ಹಾಕಿ ತಂಡಕ್ಕೆ ಡಚ್ ತರಬೇತುದಾರ

ಶ್ಯೂರ್ಡ್ ಮರಾಯ್ನೆ ಮರುನೇಮಕ

ನವದೆಹಲಿ (ಪಿಟಿಐ): ನೆದರ್ಲೆಂಡ್ಸ್‌ನ ಶ್ಯೂರ್ಡ್ ಮರಾಯ್ನೆ ಅವರು ಭಾರತ ಮಹಿಳಾ ಹಾಕಿ ತಂಡದ ಮುಖ್ಯ ಕೋಚ್ ಆಗಿ ಶುಕ್ರವಾರ ಮರುನೇಮಕಗೊಂಡಿದ್ದಾರೆ.

51 ವರ್ಷ ವಯಸ್ಸಿನ ಮರಾಯ್ನೆ ಅವರು ಹರೇಂದ್ರ ಸಿಂಗ್ ಅವರಿಂದ ತೆರವಾದ ಸ್ಥಾನವನ್ನು ತುಂಬಲಿದ್ದಾರೆ. ಅವರು ಇದೇ 14ರಂದು ಭಾರತಕ್ಕೆ ಆಗಮಿಸಲಿದ್ದಾರೆ. ಬೆಂಗಳೂರಿನ 'ಸಾಯ್' ಕೇಂದ್ರದಲ್ಲಿ 19ರಿಂದ ಆರಂಭವಾಗಲಿರುವ ರಾಷ್ಟ್ರೀಯ ತರಬೇತಿ ಶಿಬಿರದ ವೇಳೆ ತಂಡವನ್ನು ಕೂಡಿಕೊಳ್ಳಲಿದ್ದಾರೆ.

'ಭಾರತ ಮಹಿಳಾ ತಂಡದ ಕೋಚ್ ಆಗಿ ಮರಳುತ್ತಿರುವ ಬಗ್ಗೆ ಹೆಮ್ಮೆ ಇದೆ. ಹೊಸ ಶಕ್ತಿ ಹಾಗೂ ಸ್ಪಷ್ಟ ಗುರಿಯೊಂದಿಗೆ ತಂಡದ ಬೆಳವಣಿಗೆಗೆ ಶ್ರಮಿಸುವೆ. ಜಾಗತಿಕ ಮಟ್ಟದ ಟೂರ್ನಿಗಳಲ್ಲಿ ಸಂಪೂರ್ಣ ಸಾಮರ್ಥ್ಯದೊಂದಿಗೆ ಕಣಕ್ಕಿಳಿಯುವಂತೆ ತಂಡವನ್ನು ಸಜ್ಜುಗೊಳಿಸುವ ಯೋಜನೆ ಇದೆ' ಎಂದಿದ್ದಾರೆ.

ಮರಾಯ್ನೆ ಅವರು 2017ರಿಂದ 2021ರ ಅವಧಿಯಲ್ಲಿ ಭಾರತ ಮಹಿಳಾ ತಂಡದ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು. ಅವರ ಮಾರ್ಗದರ್ಶನದ ತಂಡವು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದು ಐತಿಹಾಸಿಕ ಸಾಧನೆ ಮಾಡಿತ್ತು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೊದಲ ಬಾರಿಗೆ ಎಂಟನೇ ಸ್ಥಾನ ಪಡೆದಿತ್ತು.

ಅರ್ಜೆಂಟೀನಾದ ಮತೀಯಾಸ್ ವೀಲಾ ಅವರು ವಿಶ್ಲೇಷಣಾತ್ಮಕ (ಅನಾಲಿಟಿಕಲ್) ಕೋಚ್ ಆಗಿ ಹಾಗೂ ದಕ್ಷಿಣ ಆಫ್ರಿಕಾದ ವೇಯ್ನ್ ಲೊಂಬಾರ್ಡ್ ಅವರು ವೈಜ್ಞಾನಿಕ ಸಲಹೆಗಾರ ಮತ್ತು 'ಅಥ್ಲೆಟಿಕ್ ಪರ್ಫಾಮೆನ್ಸ್' ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.

ಶ್ಯೂರ್ಡ್ ಮರಾಯ್ನೆ

2024ರ ಏಪ್ರಿಲ್‌ನಿಂದ ಕೋಚ್ ಆಗಿದ್ದ ಹರೇಂದ್ರ ಅವರು ವೈಯಕ್ತಿಕ ಕಾರಣಗಳನ್ನು ಉಲ್ಲೇಖಿಸಿ, ಡಿಸೆಂಬರ್‌ನಲ್ಲಿ ಕೋಚ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಹರೇಂದ್ರ ಅವರು ಕೋಚ್ ಆಗಿದ್ದ ಅವಧಿಯಲ್ಲಿ ಭಾರತ ತಂಡವು ಕಳಪೆ ಪ್ರದರ್ಶನ ತೋರಿತ್ತು. 2025ರಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್ ಎಲೀಟ್ ಟೂರ್ನಿಯಲ್ಲಿ 16 ಪಂದ್ಯಗಳ ಪೈಕಿ ಕೇವಲ ಎರಡು ಪಂದ್ಯಗಳಲ್ಲಷ್ಟೇ ಗೆಲುವು ಸಾಧಿಸಿತ್ತು. ಹೀಗಾಗಿ, ನೇಷನ್ಸ್ ಕಪ್ ಟೂರ್ನಿಗೆ ಹಿಂಬಡ್ತಿ ಪಡೆದಿತ್ತು. ಅವರ ಕೋಚಿಂಗ್ ವೈಖರಿ ಬಗ್ಗೆಯೂ ಆರೋಪಗಳು ಕೇಳಿಬಂದಿದ್ದವು.

ಮುಂದಿದೆ ಹಲವು ಸವಾಲು: ಹೈದರಾಬಾದ್‌ನಲ್ಲಿ ಮಾರ್ಚ್ 8ರಿಂದ 14ರ ವರೆಗೆ ನಡೆಯಲಿರುವ ವಿಶ್ವಕಪ್ ಕ್ವಾಲಿಫೈಯರ್ಸ್ ಪಂದ್ಯಗಳು ಮರಾಯ್ನೆ ಅವರ ಮುಂದಿರುವ ಮೊದಲ ಸವಾಲು.

ತಂಡದ ಹಾಲಿ ಆಟಗಾರ್ತಿಯರ ವಿಶ್ವಾಸ ಗಳಿಸಿ, ಅವರಿಂದ ಉತ್ತಮ ಆಟವನ್ನು ಹೊರತೆಗೆಯುವ ಸವಾಲು ಮರಾಯ್ನೆ ಅವರ ಮುಂದಿದೆ.

ಕೊನೆಯ ಟೆಸ್ಟ್ ಆಡಲಿರುವ ಉಸ್ಮಾನ್ ಖ್ವಾಜಾ

ಸಿಡ್ನಿ (ರಾಯಿಟರ್ಸ್): ಈಗಾಗಲೇ ಆ್ಯಷಸ್ ಸರಣಿ ಗೆದ್ದಿರುವ ಆಸ್ಟ್ರೇಲಿಯಾ ತಂಡವು ಐದನೇ ಹಾಗೂ ಅಂತಿಮ ಟೆಸ್ಟ್‌ನಲ್ಲಿ ಆರಂಭ ಆಟಗಾರ ಉಸ್ಮಾನ್ ಖ್ವಾಜಾ ಅವರಿಗೆ ಬೀಳ್ಕೊಡುಗೆ ನೀಡಲಿದೆ. ಸಿಡ್ನಿಯಲ್ಲಿ ಭಾನುವಾರ ಆರಂಭವಾಗುವ ಈ ಪಂದ್ಯ ಎಡಗೈ ಆಟಗಾರನಿಗೆ 88ನೇ ಹಾಗೂ ಅಂತಿಮ ಟೆಸ್ಟ್ ಆಗಲಿದೆ.

ಆಸ್ಟ್ರೇಲಿಯಾ ಸರಣಿಯ ಮೊದಲ ಮೂರು ಟೆಸ್ಟ್ ಪಂದ್ಯಗಳಲ್ಲಿ ಜಯ ಗಳಿಸಿತ್ತು. ಮೆಲ್ಬರ್ನ್‌ನಲ್ಲಿ ನಡೆದ ನಾಲ್ಕನೇ ಟೆಸ್ಟ್ ಪಂದ್ಯವನ್ನು ಇಂಗ್ಲೆಂಡ್ ಎರಡು ದಿನಗಳ ಒಳಗೆ ಜಯಿಸಿತ್ತು. ಆಸ್ಟ್ರೇಲಿಯಾ ಸರಣಿಯಲ್ಲಿ 3–1 ಮುನ್ನಡೆ ಪಡೆದಿದೆ.

ಸಿಡ್ನಿಯ ಪಂದ್ಯ ತಮ್ಮ ಪಾಲಿನ ಕೊನೆಯ ಅಂತರರಾಷ್ಟ್ರೀಯ ಪಂದ್ಯವಾಗಿರಲಿದೆ ಎಂದು ಪಾಕಿಸ್ತಾನ ಸಂಜಾತ ಬ್ಯಾಟರ್ ಶುಕ್ರವಾರ ತಿಳಿಸಿದ್ದಾರೆ. 2011ರಲ್ಲಿ ಇದೇ ತಂಡದ ವಿರುದ್ಧ ಇದೇ ಮೈದಾನದಲ್ಲಿ ಅವರು ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು.

'ಕೊನೆಯ ಬಾರಿ ಕ್ರೀಡಾಂಗಣಕ್ಕೆ ಕೃತಜ್ಞತೆ ಮತ್ತು ನಿರಾಳಭಾವದೊಡನೆ ಇಳಿಯಲಿದ್ದೇನೆ. ಸಲಾಂ ಹೇಳುವೆ' ಎಂದಿದ್ದಾರೆ 39 ವರ್ಷ ವಯಸ್ಸಿನ ಖ್ವಾಜಾ.

ನ್ಯೂಜಿಲೆಂಡ್ ಎದುರಿನ ಸರಣಿಗೆ ತಂಡ ಆಯ್ಕೆ ಇಂದು

ಪಂತ್, ಸಿರಾಜ್‌ಗೆ ಸಿಗುವುದೇ ಅವಕಾಶ?

ನವದೆಹಲಿ (ಪಿಟಿಐ): ಇದೇ ತಿಂಗಳು ನ್ಯೂಜಿಲೆಂಡ್ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದ 15 ಆಟಗಾರರನ್ನು ಶನಿವಾರ ಆಯ್ಕೆ ಮಾಡುವ ಸಾಧ್ಯತೆ ಇದೆ. ಈ ತಂಡದಲ್ಲಿ ವಿಕೆಟ್‌ಕೀಪರ್ ರಿಷಭ್ ಪಂತ್ ಮತ್ತು ವೇಗಿ ಮೊಹಮ್ಮದ್ ಸಿರಾಜ್ ಅವರು ಅವಕಾಶ ಪಡೆಯುವರೇ ಎಂಬ ಕುತೂಹಲ ಗರಿಗೆದರಿದೆ. ವಡೋದರಾದಲ್ಲಿ ಜನವರಿ 11ರಂದು ಸರಣಿ ಆರಂಭವಾಗಲಿದೆ.

ಕೆಲವು ವಾರಗಳ ಹಿಂದೆ ನಡೆದಿದ್ದ ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಭಾರತ ತಂಡವು ಜಯಿಸಿತ್ತು. ಆ ಹಿನ್ನೆಲೆಯಲ್ಲಿ ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿಯು ಎರಡು ಅಂಶಗಳನ್ನು ಇಲ್ಲಿ ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಮೊದಲನೇಯದಾಗಿ ಪಂತ್ ಅವರಿಗೆ ಎರಡನೇ ವಿಕೆಟ್‌ಕೀಪರ್ ಸ್ಥಾನ ನೀಡುವರೇ ಎಂಬ ಪ್ರಶ್ನೆ. ಮೊದಲ ವಿಕೆಟ್‌ಕೀಪರ್ ಸ್ಥಾನದಲ್ಲಿ ಇಶಾನ್ ಕಿಶನ್ ಅವರು ಆಡುವುದು ಬಹುತೇಕ ಖಚಿತವಾಗಿದೆ. ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಪಂತ್ ಅವರು ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸುತ್ತಿದ್ದಾರೆ. ಆದರೆ ಜಾರ್ಖಂಡ್ ತಂಡದ ಇಶಾನ್ ಮತ್ತು ಉತ್ತರಪ್ರದೇಶದ ವಿಕೆಟ್‌ಕೀಪರ್ ಧ್ರುವ ಜುರೇಲ್ ಅವರು ಭರ್ಜರಿ ಶತಕ ಸಿಡಿಸಿದ್ದಾರೆ.

ರಿಷಭ್ ಪಂತ್

ಸಿರಾಜ್

ಆರಂಭಿಕ ಬ್ಯಾಟರ್ ಆಗಿ ಆಡುವ ವಿಕೆಟ್‌ಕೀಪರ್‌ಗಳನ್ನು ಆಯ್ಕೆ ಮಾಡುವತ್ತ ಅಜಿತ್ ಆಗರಕರ್ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರಿಗೆ ಹೆಚ್ಚು ಒಲವು ಇದೆ ಎನ್ನಲಾಗಿದೆ.

ಆದರೆ ನೈಜ ಸಂಗತಿ ಏನೆಂದರೆ; ಗಂಭೀರ್ ಮುಖ್ಯ ಕೋಚ್ ಆಗಿ ಬಂದ ನಂತರ ಪಂತ್ ಭಾರತ ತಂಡದಲ್ಲಿ (ಜುಲೈ 2024ರಿಂದ ಡಿಸೆಂಬರ್ 2025) ಕೇವಲ ಒಂದು ಏಕದಿನ ಪಂದ್ಯವನ್ನು ಮಾತ್ರ ಆಡಿದ್ದಾರೆ. ಅಲ್ಲದೇ ಕಳೆದ ಎಂಟು ವರ್ಷಗಳಲ್ಲಿ ಪಂತ್ ಅವರು 31 ಏಕದಿನ ಪಂದ್ಯಗಳನ್ನು ಆಡಿದ್ದಾರೆ. 35ಕ್ಕಿಂತಲೂ ಕಡಿಮೆ ಸರಾಸರಿ ಅವರದ್ದಾಗಿದೆ.

ಗುವಾಹಟಿಯಲ್ಲಿ ಈಚೆಗೆ ದಕ್ಷಿಣ ಆಫ್ರಿಕಾ ಎದುರು ನಡೆದಿದ್ದ ಟೆಸ್ಟ್‌ನಲ್ಲಿಯೂ ಅವರ ಆಟವು ಮುಖ್ಯ ಕೋಚ್ ಅಥವಾ ಆಯ್ಕೆ ಸಮಿತಿಯ ಒಲವು ಗಳಿಸುವಲ್ಲಿ ಸಫಲವಾಗಿರಲಿಲ್ಲ. ಆದರೆ ಅವರಿಗೆ ಮರಳಿ ಅರಳುವ ಒಂದು ಅವಕಾಶವನ್ನು ನೀಡದೇ ಆಯ್ಕೆಯಿಂದ ವಂಚಿತರನ್ನಾಗಿಸುವುದು ಉಚಿತವೇ?

ಎರಡನೇಯ ಸಂಗತಿ; ಮೂರು ಪಂದ್ಯಗಳ ಈ ಸರಣಿಗೆ ವೇಗದ ಬೌಲರ್‌ಗಳ ಆಯ್ಕೆಯದ್ದಾಗಿದೆ. ಮುಂಬರುವ ಟಿ20 ವಿಶ್ವಕಪ್ ಟೂರ್ನಿಯ ಹಿನ್ನೆಲೆಯಲ್ಲಿ ಜಸ್‌ಪ್ರೀತ್ ಬೂಮ್ರಾ ಮತ್ತು ಹಾರ್ದಿಕ್ ಪಾಂಡ್ಯ ಅವರಿಗೆ ಈ ಸರಣಿಯಿಂದ ವಿಶ್ರಾಂತಿ ನೀಡುವ ಸಾಧ್ಯತೆ ಇದೆ. ದಕ್ಷಿಣ ಆಫ್ರಿಕಾ ಸರಣಿಯಲ್ಲಿ ಆಡಿದ್ದ ಹರ್ಷಿತ್ ರಾಣಾ ಮತ್ತು ಅರ್ಷದೀಪ್ ಸಿಂಗ್ ಅವರಿಗೂ ಬಿಡುವು ನೀಡುವ ಸಾಧ್ಯತೆ ಇದೆ. ಅದರಿಂದಾಗಿ ಮೊಹಮ್ಮದ್ ಸಿರಾಜ್ ಅವರಿಗೆ ಅವಕಾಶ ಸಿಗುವುದೇ?

ಹೈದರಾಬಾದಿನ ಸಿರಾಜ್ ಅವರು ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಮೊದಲ ನಾಲ್ಕು ಸುತ್ತುಗಳಲ್ಲಿ ಆಡಿಲ್ಲ. ಅವರು ಈ ಹಿಂದೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಸರಣಿಯಲ್ಲಿ ಆಡಿದ್ದರಿಂದ ದಕ್ಷಿಣ ಆಫ್ರಿಕಾ ಎದುರಿನ ಸರಣಿಗೆ ಪರಿಗಣಿಸಿರಲಿಲ್ಲ.

ಹೋದ ವರ್ಷ ಚಾಂಪಿಯನ್ಸ್ ಟ್ರೋಫಿಯಲ್ಲಿಯೂ ಅವರು ಆಡಿರಲಿಲ್ಲ. ಆದ್ದರಿಂದ ಈ ಸರಣಿಯಲ್ಲಿಯೂ ಅವಕಾಶ ಸಿಗದಿದ್ದರೆ ಫಿಫ್ಟಿ–50 ಮಾದರಿಯಿಂದ ಪೂರ್ಣಪ್ರಮಾಣದಲ್ಲಿ ಸಿರಾಜ್ ಅವರನ್ನು ಹೊರಹಾಕಿದಂತೆಯೇ ಎಂಬ ಪ್ರಶ್ನೆ ಕಾಡಲಿದೆ. ಬಂಗಾಳ ತಂಡದಲ್ಲಿ ಆಡುತ್ತಿರುವ ಮೊಹಮ್ಮದ್ ಶಮಿ ಅವರನ್ನು ಪರಿಗಣಿಸುವರೇ ಎಂಬ ಕುತೂಹಲವೂ ಇದೆ.

ಬ್ಯಾಸ್ಕೆಟ್‌ಬಾಲ್: ಜೈನ್ ವಿ.ವಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ತಂಡವು ಶುಕ್ರವಾರ ಮುಕ್ತಾಯಗೊಂಡ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕ್ರೈಸ್ಟ್ ವಿಶ್ವವಿದ್ಯಾಲಯ ಕೇಂದ್ರೀಯ ಕ್ಯಾಂಪಸ್‌ನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಜೈನ್ ವಿ.ವಿ ತಂಡವು 87–66ರಿಂದ ಚೆನ್ನೈನ ಎಸ್‌ಆರ್‌ಎಂ ವಿಶ್ವವಿದ್ಯಾಲಯ ತಂಡವನ್ನು ಸುಲಭವಾಗಿ ಮಣಿಸಿತು.

ಅದರೊಂದಿಗೆ, ಈ ತಿಂಗಳ ಕೊನೆಯಲ್ಲಿ ನಡೆಯಲಿರುವ 'ಖೇಲೊ ಇಂಡಿಯಾ' ಅಖಿಲ ಭಾರತ ಅಂತರ ವಿವಿ ಬ್ಯಾಸ್ಕೆಟ್ ಬಾಲ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದುಕೊಂಡಿತು.

ಪ್ರಶಸ್ತಿ ಗೆದ್ದ ಜೈನ್ ವಿಶ್ವವಿದ್ಯಾಲಯ ತಂಡ (ನಿಂತವರು) ಎಡದಿಂದ; ಸಹನಾ, ಅಂಜು, ಲೋಕೇಶ್ (ಕೋಚ್), ಶಂಕರ್ ಯು.ವಿ. (ಕ್ರೀಡಾ ನಿರ್ದೇಶಕ, ಜೈನ್ ವಿ.ವಿ), ಪುನೀತ್ ಸುರೇಶ್ (ಮುಖ್ಯ ಕೋಚ್), ಆಶ್ಮಿತಾ, ನೇತ್ರಾ. (ಕುಳಿತವರು) ಆಧ್ಯಾ ಗೌಡ, ಧರಾ, ಸಿಯಾ, ನವೊಮಿ, ಸುಷ್ಮಿತಾ, ಖುಷಿ ಹಾಗೂ ಮೋನಾ

ಗೆಲುವಿನಲ್ಲಿ ಮಿಂಚಿದ ಕಶ್ವಿ, ಯಾಶಿಕಾ

ಬೆಂಗಳೂರು: ಕಶ್ವಿ ಕಂಡಿಕೊಪ್ಪ ಹಾಗೂ ಯಾಶಿಕಾ ಕೆ. ಗೌಡ ಅವರ ಆಲ್‌ರೌಂಡ್ ಆಟದ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 15 ವರ್ಷದೊಳಗಿನ ಬಾಲಕಿಯರ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 134 ರನ್‌ಗಳಿಂದ ಉತ್ತರ ಪ್ರದೇಶ ತಂಡವನ್ನು ಸುಲಭವಾಗಿ ಮಣಿಸಿತು.

ಕೋಲ್ಕತ್ತದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕರ್ನಾಟಕ ತಂಡವು 35 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 299 ರನ್ ಗಳಿಸಿತು. ಕಶ್ವಿ 79 ಎಸೆತಗಳಲ್ಲಿ ಅಜೇಯ 142 ರನ್ ಬಾರಿಸಿದರು. ಯಾಶಿಕಾ (87 ರನ್; 72ಎ; 4x13, 6x1) ಅರ್ಧಶತಕ ಗಳಿಸಿದರು. ಕಠಿಣ ಗುರಿ ಬೆನ್ನಟ್ಟಿದ ಉತ್ತರ ಪ್ರದೇಶ ತಂಡವು 35 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 165 ರನ್ ಗಳಿಸಿ ಹೋರಾಟ ಮುಗಿಸಿತು.

ಇಂದಿನಿಂದ ಪುರುಷರ ಎಚ್‌ಐಎಲ್ ಟೂರ್ನಿ

ಚೆನ್ನೈ (ಪಿಟಿಐ): ಶನಿವಾರ ಇಲ್ಲಿ ನಡೆಯಲಿರುವ ಪುರುಷರ ಹಾಕಿ ಇಂಡಿಯಾ ಲೀಗ್‌ನ (ಎಚ್‌ಐಎಲ್) ಉದ್ಘಾಟನಾ ಪಂದ್ಯದಲ್ಲಿ ತಮಿಳುನಾಡು ಡ್ರಾಗನ್ಸ್ ತಂಡವು ಹೈದರಾಬಾದ್ ತೂಫಾನ್ಸ್ ತಂಡವನ್ನು ಎದುರಿಸಲಿದೆ.

ಲೀಗ್‌ನ ಎರಡನೇ ಆವೃತ್ತಿಯ ಪಂದ್ಯಗಳು ಚೆನ್ನೈ, ರಾಂಚಿ ಮತ್ತು ಭುವನೇಶ್ವರ ನಗರಗಳಲ್ಲಿ ನಡೆಯಲಿದೆ. ಇದೇ 26ರಂದು ಫೈನಲ್ ಪಂದ್ಯ ನಡೆಯಲಿದೆ.

ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್

ಗುಜರಾತ್ ಮೊತ್ತ ಬೆಳೆಸಿದ ದವೆ

ಬೆಂಗಳೂರು: ಶತಕವೀರ ಮಾನಸ್ ಎಂ.ದವೆ (184, 245ಎ) ಅವರು ಕೊನೆಯ ವಿಕೆಟ್‌ಗೆ ಶತಕದ ಜೊತೆಯಾಟವಾಡಿ ಗುಜರಾತ್‌ನ ಮೊದಲ ಇನಿಂಗ್ಸ್ ಮೊತ್ತವನ್ನು 451 ರನ್‌ಗಳಿಗೆ ಬೆಳೆಸಿದರು. ಕೂಚ್‌ಬಿಹಾರ್ ಟ್ರೋಫಿ ಎಲೀಟ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕ ಹೋರಾಟ ತೋರಿದ್ದು ಎರಡನೇ ದಿನದಾಟ ಮುಗಿದಾಗ 3 ವಿಕೆಟ್‌ಗೆ 160 ರನ್ ಗಳಿಸಿದೆ.

ವಲ್ಸಾಡ್‌ನ ಸರ್ದಾರ್ ಪಟೇಲ್ ಕ್ರೀಡಾಂಗಣದಲ್ಲಿ 9 ವಿಕೆಟ್‌ಗೆ 348 ರನ್‌ಗಳೊಡನೆ ಶುಕ್ರವಾರ ಎರಡನೇ ದಿನದಾಟ ಮುಂದುವರಿಸಿದ ಗುಜರಾತ್ ಆ ಮೊತ್ತಕ್ಕೆ 103 ರನ್ ಸೇರಿಸಿ ಕರ್ನಾಟಕ ಬೌಲರ್‌ಗಳನ್ನು ಹತಾಶಗೊಳಿಸಿತು. ದವೆ (ಗುರುವಾರ ಔಟಾಗದೇ 100) ಕೊನೆಯ ವಿಕೆಟ್‌ಗೆ 218 ಎಸೆತಗಳಲ್ಲಿ 147 ರನ್ ಸೇರಿಸಿ ಕೊನೆಯವರಾಗಿ ನಿರ್ಗಮಿಸಿದರು. ಕೊನೆಯ ಆಟಗಾರ ದೈವಿಕ್ ಶಾ ಅಜೇಯ 13 ರನ್ ಮಾತ್ರ ಗಳಿಸಿದ್ದರೂ, 78 ಎಸೆತಗಳನ್ನು ಆಡಿ ಮಾನಸ್‌ಗೆ ಬೆಂಬಲ ನೀಡಿದರು.

ಧ್ರುವ್ ಕೃಷ್ಣನ್ (82, 124ಎ, 4x13, 6x1) ಮತ್ತು ಆದೇಶ್ ಡಿ ಅರಸ್ ಜೋಡಿ ಮೊದಲ ವಿಕೆಟ್‌ಗೆ 125 (278 ಎಸೆತ) ರನ್ ಸೇರಿಸಿ ಕರ್ನಾಟಕಕ್ಕೆ ಉತ್ತಮ ಆರಂಭ ಹಾಕಿಕೊಟ್ಟರು. ಆದರೆ ನಂತರ 14 ರನ್‌ಗಳ ಅಂತರದಲ್ಲಿ ಮೂವರು ಬ್ಯಾಟರ್‌ಗಳನ್ನು ಕಳೆದುಕೊಂಡಿತು. ನಾಯಕ–ವಿಕೆಟ್ ಕೀಪರ್ ಅನ್ವಯ್ ದ್ರಾವಿಡ್ (ಔಟಾಗದೇ 9) ಮತ್ತು ವರುಣ್ ಪಟೇಲ್ (ಔಟಾಗದೇ 11) ಕುಸಿತ ತಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗುಜರಾತ್: 117.4 ಓವರುಗಳಲ್ಲಿ 451 (ಮಲಯ್ ವಿ. ಶಾ 78, ಮೌಲ್ಯರಾಜಸಿನ್ಹ ಛಾವ್ಡಾ 41, ಮಾನಸ್ ಎಂ.ದವೆ 184, ಕಾವ್ಯ ಪಿ.ಪಟೇಲ್ 43; ವೈಭವ್ ಶರ್ಮಾ 55ಕ್ಕೆ2, ಈಶ ಪುತ್ತಿಗೆ 56ಕ್ಕೆ2, ಧ್ಯಾನ್ ಎಂ.ಹಿರೇಮಠ 98ಕ್ಕೆ2, ರತನ್ ಬಿ.ಆರ್. 120ಕ್ಕೆ4); ಕರ್ನಾಟಕ: 60 ಓವರುಗಳಲ್ಲಿ 3 ವಿಕೆಟ್‌ಗೆ 160 (ಧ್ರುವ್ ಕೃಷ್ಣನ್ 82, ಆದೇಶ್ ಡಿ.ಅರಸ್ 39; ರುದ್ರ ಪಟೇಲ್ 45ಕ್ಕೆ2).

ಕೆಬಿಎ ನೂತನ ಅಧ್ಯಕ್ಷ ಕುಮಾರ ಬಂಗಾರಪ್ಪ ಆಶಯ

ರಾಜ್ಯದಲ್ಲಿ ಬ್ಯಾಡ್ಮಿಂಟನ್ ಅಭಿವೃದ್ಧಿಗೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದ ಎಲ್ಲೆಡೆಯೂ ಬ್ಯಾಡ್ಮಿಂಟನ್ ಕ್ರೀಡೆಯನ್ನು ಬೆಳೆಸುವುದು ನಮ್ಮ ಗುರಿ. ಅದಕ್ಕೆ ತಕ್ಕ ಮೂಲ ಸೌಲಭ್ಯಗಳು ಮತ್ತು ತರಬೇತಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಆದ್ಯತೆ ನೀಡುತ್ತೇವೆ'–

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ನೂತನ ಅಧ್ಯಕ್ಷ ಕುಮಾರ ಬಂಗಾರಪ್ಪ ಅವರ ನುಡಿಗಳು ಇವು.

'31 ಜಿಲ್ಲಾ ಸಂಸ್ಥೆಗಳ ಪೈಕಿ 20 ಮಾತ್ರ ಸಕ್ರಿಯವಾಗಿವೆ. 9-10 ಜಿಲ್ಲಾ ಸಂಸ್ಥೆಗಳಲ್ಲಿ ಆಡಳಿತ ಸಮಿತಿಗಳು ಇಲ್ಲ. ಅವುಗಳನ್ನೂ ಸರಿಪಡಿಸಲಾಗುವುದು. ಕೆಬಿಎ ಮತ್ತು ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ನಡುವಣ ಇರುವ ಕಾನೂನು ಸಂಘರ್ಷವನ್ನು ಮಾತುಕತೆ ಮೂಲಕ ಪರಿಹರಿಸಿಕೊಳ್ಳುತ್ತೇವೆ. ಬಿಎಐ ಅಧ್ಯಕ್ಷರೊಂದಿಗೆ ಚರ್ಚಿಸುತ್ತೇನೆ' ಎಂದು ಅವರು ಹೇಳಿದರು.

'ಕರ್ನಾಟಕದಲ್ಲಿ ಬ್ಯಾಡ್ಮಿಂಟನ್ ಕ್ರೀಡೆಗೆ ಭವ್ಯವಾದ ಪರಂಪರೆ ಇದೆ. ಪ್ರಕಾಶ್ ಪಡುಕೋಣೆ ಅವರಂತಹ ದಿಗ್ಗಜರು ನಮ್ಮ ಹೆಮ್ಮೆ. ಪುಲ್ಲೇಲ ಗೋಪಿಚಂದ್, ಪಿ.ವಿ. ಸಿಂಧು, ಲಕ್ಷ್ಯ ಸೇನ್, ಸೈನಾ ನೆಹ್ವಾಲ್ ಅವರಂತಹ ಖ್ಯಾತನಾಮರೂ ಇಲ್ಲಿ ಹಲವು ಕಾಲ ಅಭ್ಯಾಸ ಮಾಡಿದ್ದಾರೆ. ತರಬೇತಿ ಪಡೆದಿದ್ದಾರೆ. ಆ ಘನತೆಯನ್ನು ಮರುಸ್ಥಾಪಿಸುವುದು ನಮ್ಮ ಧ್ಯೇಯವಾಗಿದೆ. ರಾಜ್ಯದ ಎಲ್ಲೆಡೆಯೂ ಬಹಳಷ್ಟು ಪ್ರತಿಭಾನ್ವಿತರು ಇದ್ದಾರೆ. ಆದ್ದರಿಂದ ಬೆಂಗಳೂರು ಅಷ್ಟೇ ಅಲ್ಲ, ಹೊರಗಿನ ಜಿಲ್ಲೆಗಳಲ್ಲಿ ಇರುವ ಆಸಕ್ತರಿಗೆ ಉತ್ತಮ ಅವಕಾಶ ಒದಗಿಸಿಕೊಡಬೇಕಿದೆ. ಪ್ರಥಮವಾಗಿ ಎಲ್ಲ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಬೇಕಿದೆ' ಎಂದರು.



ಕುಮಾರ ಬಂಗಾರಪ್ಪ

'ಜಿಲ್ಲೆ, ತಾಲ್ಲೂಕು ಕೇಂದ್ರಗಳಲ್ಲಿ ಸುಸಜ್ಜಿತ ಬ್ಯಾಡ್ಮಿಂಟನ್ ಕೋರ್ಟ್‌ಗಳನ್ನು ಸಿದ್ಧಗೊಳಿಸುತ್ತೇವೆ. ನುರಿತ ತರಬೇತುದಾರರನ್ನು ನಿಯೋಜಿಸುವುದು. ಫಿಟ್‌ನೆಸ್ ಅಥವಾ ಆರೋಗ್ಯ ನಿರ್ವಹಣೆಗಾಗಿ ಬ್ಯಾಡ್ಮಿಂಟನ್ ಆಡುವವರು ಎಲ್ಲೆಡೆಯೂ ಬಹಳಷ್ಟು ಜನರಿದ್ದಾರೆ. ಅಂತಹವರಲ್ಲಿಯೂ ಉನ್ನತ ಸಾಧನೆ ಮಾಡುವ ಸಾಮರ್ಥ್ಯ ಇರುವವರು ಇರುತ್ತಾರೆ. ಅಂತಹವರನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ಆಗಬೇಕಿದೆ. ಆದ್ದರಿಂದ ಪ್ರತಿಭಾಶೋಧ ವ್ಯವಸ್ಥೆಗೆ ಒತ್ತು ನೀಡುತ್ತೇವೆ' ಎಂದರು.

'ಕ್ರಿಕೆಟ್ ಸಂಸ್ಥೆಯ ಮಾದರಿಯಲ್ಲಿ ಆಟಗಾರರ ಫಿಟ್‌ನೆಸ್, ಗಾಯದ ನಿರ್ವಹಣೆಗೆ ಸುಸಜ್ಜಿತ ಕೇಂದ್ರ ಆರಂಭಿಸುವುದು. ಆಟಗಾರರ ಚಿಕಿತ್ಸೆ ಮತ್ತು ಆರೈಕೆಗಾಗಿ ಪ್ರಮುಖ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಂಡು ನೆರವು ಒದಗಿಸಲಾಗುವುದು. ಅಲ್ಲದೇ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಸೇರಿದಂತೆ ಇನ್ನಿತರ ಕ್ರೀಡಾ ಸಂಸ್ಥೆಗಳೊಂದಿಗೆ ಉತ್ತಮ ಬಾಂಧವ್ಯ ವೃದ್ಧಿಸಿಕೊಂಡು ಆಟಗಾರರಿಗೆ ಅನುಕೂಲ ಕಲ್ಪಿಸುವುದಾಗಿದೆ' ಎಂದು ಕುಮಾರ ಬಂಗಾರಪ್ಪ ಹೇಳಿದರು.

ಸಂಸ್ಥೆ ಕಾರ್ಯದರ್ಶಿ ವಿ.ಮುರಳೀಧರ್, ಖಜಾಂಚಿ ಜಿ.ಎಂ. ನಿಶ್ಚಿತಾ, ಜಂಟಿ ಕಾರ್ಯದರ್ಶಿ ಅನೂಪ್ ಶ್ರೀಧರ್, ಆಡಳಿತ ಸಮಿತಿ ಸದಸ್ಯರಾದ ಎನ್.ಸಿ. ಶ್ರೀಧರ್, ಡಿ. ಗುರುಪ್ರಸಾದ್, ನಿಶಾಂತ್ ಹಿರೇಮಠ, ಬಿ.ಆರ್. ಹರೀಶಕುಮಾರ್ ಹಾಜರಿದ್ದರು.

ಕುಸ್ತಿ ಲೀಗ್: ಇಂದು ಹರಾಜು ಪ್ರಕ್ರಿಯೆ

ನವದೆಹಲಿ (ಪಿಟಿಐ): ಪ್ರೊ ಕುಸ್ತಿ ಲೀಗ್‌ನ ಹರಾಜು ಪ್ರಕ್ರಿಯೆ ಶನಿವಾರ ನಡೆಯಲಿದೆ. ಆರು ಫ್ರಾಂಚೈಸಿಗಳ ಪರ್ಸ್‌ನಲ್ಲಿ ತಲಾ ₹2 ಕೋಟಿ ಹಣವಿದೆ. ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಅಮನ್ ಸೆಹ್ರಾವತ್ ಸೇರಿ 250ಕ್ಕೂ ಅಧಿಕ ಕುಸ್ತಿಪಟುಗಳು ಹರಾಜಿಗೆ ನೋಂದಾಯಿಸಿಕೊಂಡಿದ್ದಾರೆ.



ಅಮನ್

ಫ್ರಾಂಚೈಸಿಗಳು ಕನಿಷ್ಠ 9 ಗರಿಷ್ಠ 13 ಕುಸ್ತಿಪಟುಗಳನ್ನು ಖರೀದಿಸಬೇಕಿದೆ. ಅದರಲ್ಲಿ ಕನಿಷ್ಠ ನಾಲ್ಕು ಮಂದಿ (ಇಬ್ಬರು ಪುರುಷರು, ಇಬ್ಬರು ಮಹಿಳೆಯರು) ವಿದೇಶಿಪಟುಗಳಾಗಿರಬೇಕು. ಅಮನ್ ₹18 ಲಕ್ಷ ಮೂಲಬೆಲೆ ಹೊಂದಿದ್ದು, ಹೆಚ್ಚಿನ ಮೌಲ್ಯ ಪಡೆದಿರುವ ಭಾರತದ ಕುಸ್ತಿಪಟುವೆನಿಸಿದ್ದಾರೆ. ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತ ದೀಪಕ್ ಪೂನಿಯಾ ಅವರಿಗೆ ₹10 ಲಕ್ಷ ಮೂಲಬೆಲೆ ನಿಗದಿಯಾಗಿದೆ.

ವಿಶ್ವ ಟೇಬಲ್ ಟೆನಿಸ್ ಯೂತ್ ಕಂಟೆಂಡರ್: ಕರ್ನಾಟಕದ ತನಿಷ್ಕಾಗೆ ಗೆಲುವು

ದಿವ್ಯಾಂಶಿ, ಸಿಂಡ್ರೆಲಾ ಶುಭಾರಂಭ

ವಡೋದರ (ಪಿಟಿಐ): ಹಾಲಿ ಚಾಂಪಿಯನ್ ದಿವ್ಯಾಂಶಿ ಭೌಮಿಕ್, ಸಿಂಡ್ರೆಲಾ ದಾಸ್ ಹಾಗೂ ಕರ್ನಾಟಕದ ತನಿಷ್ಕಾ ಕಾಲಭೈರವ ಅವರು ಅವರು ಶುಕ್ರವಾರ ಆರಂಭಗೊಂಡ ವಿಶ್ವ ಟೇಬಲ್ ಟೆನಿಸ್ (ಯುಟಿಟಿ) ಯೂತ್ ಕಂಟೆಂಡರ್‌ನ 17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಶುಭಾರಂಭ ಮಾಡಿದರು.

ಕಳೆದ ಆವೃತ್ತಿಯಲ್ಲಿ 15 ಮತ್ತು 17 ವರ್ಷದೊಳಗಿನ ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದ ದಿವ್ಯಾಂಶಿ ಅವರು ಗುಂಪು 1ರ ಪಂದ್ಯದಲ್ಲಿ 11-4, 11-1, 11-2ರಿಂದ ಸ್ವದೇಶದ ನೀರ್ಝಾ ಕಾಮತ್ ಅವರನ್ನು ಮಣಿಸಿ ಅಭಿಮಾನ ಆರಂಭಿಸಿದರು. ಸಿಂಡ್ರೆಲಾ ಅವರು ಗುಂಪು 3ರ ಪಂದ್ಯದಲ್ಲಿ 11-6, 11-6, 11-2ರಿಂದ ತಾನಿಯಾ ಕರ್ಮಾಕರ್ ಅವರನ್ನು ಸೋಲಿಸಿದರು.

ಕರ್ನಾಟಕದ ಉದಯೋನ್ಮುಖ ತಾರೆ ತನಿಷ್ಕಾ (ಗುಂಪು 9) 11–5, 11–3, 11–1ರಿಂದ ಸ್ವದೇಶದ ಪ್ರೀತಿಕಾ ಪ್ರಭು ಅವರನ್ನು ಹಿಮ್ಮೆಟ್ಟಿಸಿದರು.

ದಿವ್ಯಾಂಶಿ ಭೌಮಿಕ್

ಜಪಾನಿನ ಆಟಗಾರ್ತಿ ಮಿಕು ಮಾತ್ಸುಶಿಮಾ 11-3, 11-4, 11-2ರಿಂದ ಸ್ವರಾ ಕರ್ಮಾಕರ್ ವಿರುದ್ಧ ಗೆಲುವು ಸಾಧಿಸಿದರು. ತನ್ನ ಎರಡನೇ ಪಂದ್ಯದಲ್ಲಿ 11-6, 11-3, 11-8ರಿಂದ ಅನ್ವಿ ಗುಪ್ತಾ ಅವರನ್ನು ಮಣಿಸಿ ನಾಕೌಟ್ ಹಂತಕ್ಕೆ ಹತ್ತಿರವಾದರು.

17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ರಿತ್ವಿಕ್ ಗುಪ್ತಾ ಗುಂಪು ಹಂತದ ಎರಡೂ ಪಂದ್ಯಗಳನ್ನು ಗೆದ್ದರು. ಮೊದಲ ಪಂದ್ಯದಲ್ಲಿ ರಿತ್ವಿಕ್ 11-9, 11-5, 11-5ರಿಂದ ಧ್ರುವ ಮಲಿಕಾರ್ಜುನನ್ ವಿರುದ್ಧ; ಎರಡನೇ ಪಂದ್ಯದಲ್ಲಿ 13-11, 11-6, 11-7ರಿಂದ ಶ್ರೇಯಸ್ ಮಂಕೇಶ್ವರ ವಿರುದ್ಧ ಗೆಲುವು ಸಾಧಿಸಿದರು.

ಸ್ಥಳೀಯ ಭರವಸೆಯ ಆಟಗಾರ ವೇದ್ ಪಾಂಚಾಲ್ ಗುಂಪು ಹಂತದ ಮೂರೂ ಪಂದ್ಯಗಳನ್ನು ಗೆದ್ದರು. ತನ್ನ ಮೊದಲ ಪಂದ್ಯದಲ್ಲಿ 11-9, 11-7, 11-7ರಿಂದ ಆರವ್ ಸಿಂಗ್ವಿ ಎದುರು; ಎರಡನೇ ಪಂದ್ಯದಲ್ಲಿ 11-9, 11-8, 9-11, 9-11, 11-6ರಿಂದ ಆರವ್ ರಾಠಿ ಎದುರು; ಮೂರನೇ ಪಂದ್ಯದಲ್ಲಿ 12-10, 11-6, 11-7 ನಿತಿನ್ ವೀರರಾಘವನ್ ಎದುರು ಜಯ ಗಳಿಸಿದರು.